ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸಿಎಂ ಫಡ್ನವಿಸ್‌ಗೆ ಪಿಎಂ ಶುಭಾಶಯ

ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ದೇವೇಂದ್ರ ಫಡ್ನವಿಸ್ ಅವರಿಗೆ ಪ್ರಧಾನಿ ಮೋದಿ ಶುಭಕೋರಿದರು. ಗುರುವಾರ ಶಿವಸೇನಾ ನಾಯಕ ಏಕನಾಥ ಶಿಂಧೆ ಮತ್ತು ಎನ್‌ಸಿಪಿಯ ಅಜಿತ್ ಪವಾರ್ ಉಪಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು. ಫಡ್ನವಿಸ್ ಸಂಪುಟಕ್ಕೆ ಸೇರಲಿರುವ ಇತರ ಸಚಿವರು ವಿಧಾನಸಭೆಯ ಚಳಿಗಾಲದ ಅಧಿವೇಶನಕ್ಕೂ ಪೂರ್ವದಲ್ಲಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಯಿದೆ.

ಪುಟ ತೆರೆದಂತೆ...

ಇಲ್ಲಿ ಜೇನು ಕೂಡ ಕೃಷಿ ದಿನಗೂಲಿ
ಶಿಶಿರ ಕಾಲ
ಶಿಶಿರ್ ಹೆಗಡೆ
ಸಂ.ಪುಟ | 6

ಬೇಟೆಗಾರನೊಬ್ಬನ ಪರಿಸರ ಕಾಳಜಿ!
ಶಶಾಂಕಣ
ಶಶಿಧರ ಹಾಲಾಡಿ
ಸಂ.ಗಮ | 7

ದಾರಿದೀಪೋಕ್ತಿ

ಈ ಜಗತ್ತಿನಲ್ಲಿ ಪರಿಪೂರ್ಣರಾದ ವ್ಯಕ್ತಿಗಳು ಹುಡುಕಿದರೂ ಸಿಗುವುದಿಲ್ಲ. ನಾವು ಪೂಜಿಸುವ ದೇವರಲ್ಲೂ ತಪ್ಪುಗಳನ್ನು, ಓರೆ-ಕೋರೆಗಳನ್ನು ಹುಡುಕಬಹುದು. ಈ ಕಾರಣದಿಂದ ಪರಸ್ಪರರನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ. ಬೇರೆಯವರ ಜಾಗದಲ್ಲಿ ನಾವು ನಿಂತು ನೋಡಿದಾಗ ಮಾತ್ರ ಅವರ ಪರಿಸ್ಥಿತಿ ತಿಳಿದೀತು. ಅದೇ ವ್ಯಕ್ತಿಯನ್ನು ತಿಳಿಯುವ ಸುಲಭ, ಸರಳ ಮಾರ್ಗ.

ವಕ್ರತುಂಡೋಕ್ತಿ

ಕೆಲವರು ಜೀವನ ನಿರ್ವಹಣೆಗೆ ಫರ್ನಿಚರ್ ಮಾರುತ್ತಾರೆ, ಇನ್ನು ಕೆಲವರು ತಮ್ಮ ಮನೆ ಫರ್ನಿಚರ್ ಮಾರುತ್ತಾರೆ.

ಬೆಳಗಾವಿ ಅಧಿವೇಶನಕ್ಕೆ ಪ್ರತಿಭಟನೆಯ ಬಿಸಿ

ವಿವರಪುಟ → 4

ವಿಶ್ವ ಚೆಸ್ ಚಾಂಪಿಯನ್‌ಶಿಪ್ 9ರಲ್ಲಿ 7 ಪಂದ್ಯ ಡ್ರಾ

ವಿವರಪುಟ → 12

ಜೆಡಿಎಸ್-ಬಿಜೆಪಿ ವಿರುದ್ಧ ಮುಗಿಬಿದ್ದ ಕೈ ಪಡೆ | ಒಗ್ಗಟ್ಟಿನ ಮಂತ್ರ ಪಠಣ, ಮೈತ್ರಿ ಆರೋಪಗಳಿಗೆ ತಿರುಗೇಟು

ಡಾ.ರಾಜ್‌ಕುಮಾರ್ ಅವರಿಗೆ ಅಭಿಮಾನಿಗಳು ದೇವರು; ನಮಗೆ ಮತದಾರರೇ ದೇವರು: ಸಿದ್ದರಾಮಯ್ಯ

ಸರಕಾರದ ಶಕ್ತಿ ನೂರೆಂಟು; 5 ಗ್ಯಾರಂಟಿ ಪರ್ಮನೆಂಟು, 2028ರಲ್ಲೂ ಅಧಿಕಾರಕ್ಕೆ 100 ಪರ್ಸೆಂಟು: ಡಿಕೆಶಿ

ಗೌಡರ ಕೋಟೆಯಲ್ಲಿ ಕೈಪಡೆ ಘರ್ಜನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು/ಹಾಸನ: ಜೆಡಿಎಸ್ ಭದ್ರಕೋಟೆ ಹಾಸನದಲ್ಲಿಯೇ ಕಾಂಗ್ರೆಸ್ ನಾಯಕರು ಭರ್ಜರಿ ಜನಕಲ್ಯಾಣ ಸಮಾವೇಶ ನಡೆಸುವ ಮೂಲಕ ಬಿಜೆಪಿ-ಜೆಡಿಎಸ್‌ನ ಸರಣಿ ಆರೋಪಗಳಿಗೆ ಸಡ್ಡು ಹೊಡೆದಿದ್ದಾರೆ.

ಹಾಸನದಲ್ಲಿ ಸ್ವಾಭಿಮಾನಿ ಸಂಘಟನೆಗಳ ಒಕ್ಕೂಟ ಹಾಗೂ ಕಾಂಗ್ರೆಸ್ ಪಕ್ಷದ ವತಿಯಿಂದ ಗುರುವಾರ ಆಯೋಜಿಸಲಾಗಿದ್ದ ಜನಕಲ್ಯಾಣ ಸಮಾವೇಶ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಶಕ್ತಿ ಪ್ರದರ್ಶನಕ್ಕೆ ವೇದಿಕೆಯಾದರೂ, ಕಾಂಗ್ರೆಸ್ ನಾಯಕರು ಈ ಸಮಾವೇಶದ ಮೂಲಕ ಹಾಸನದ ಲ್ಲಿಯೂ ತಮ್ಮ ಸಂಘಟನೆಯ ಬಲವನ್ನು ಹೆಚ್ಚಿಸಿಕೊಂಡಿದ್ದೇವೆ ಎನ್ನುವ ಸ್ಪಷ್ಟ ಸಂದೇಶ ರವಾನಿಸುವಲ್ಲಿ ಯಶಸ್ವಿಯಾಗಿದೆ.

ಆರಂಭದಲ್ಲಿ 'ಸ್ವಾಭಿಮಾನಿ' ಸಮಾವೇಶವಾಗಿ ಆಯೋಜನೆಯಾಗಿದ್ದರೂ, ಬಳಿಕ ಪಕ್ಷದ ಚಿಹ್ನೆಯಲ್ಲಿ ಸಮಾವೇಶ ನಡೆಸಲು ತೀರ್ಮಾನಿಸಿದ್ದರಿಂದ ಜನಕಲ್ಯಾಣ ಸಮಾವೇಶವಾಗಿ ಮಾರ್ಪಟ್ಟಿತ್ತು. ಆದರೂ, ಇಡೀ ಕಾರ್ಯಕ್ರಮ ಸಿದ್ದರಾಮಯ್ಯ ಸುತ್ತಲೇ ಕೇಂದ್ರೀಕೃತವಾಗಿತ್ತು ಎನ್ನುವುದು ಸ್ಪಷ್ಟ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಬಹುತೇಕ ಕಾಂಗ್ರೆಸಿಗರು, ಬಿಜೆಪಿಗಿಂತ ಹೆಚ್ಚಾಗಿ ದೇವೇಗೌಡರು ಹಾಗೂ ಜೆಡಿಎಸ್ ಅನ್ನೇ ಟಾರ್ಗೆಟ್ ಮಾಡಿದ್ದು ಸ್ಪಷ್ಟವಾಗಿತ್ತು.

ಆರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರಲ್ಲಿ ಸಮಾವೇಶ ನಡೆಸಲು ಕೆಲವರ ವಿರೋಧವಿದೆ ಎನ್ನುವ ಮಾತುಗಳು ಕೇಳಿಬಂದಿದ್ದವು. ಆದರೆ ಗುರುವಾರ ನಡೆದ ಸಮಾವೇಶದಲ್ಲಿ ಕಾಂಗ್ರೆಸ್ ನಾಯಕರು ಒಗ್ಗಟ್ಟಿನ ಮಂತ್ರ ಪಠಿಸಿದರು. ಸಮಾವೇಶದಲ್ಲಿ ಸಚಿವರಾದ ಕೆ.ಜೆ.ಜಾರ್ಜ್, ಕೆ.ಎನ್.ರಾಜಣ್ಣ, ಚೆಲುವರಾಯಸ್ವಾಮಿ, ಡಾ.ಜಿ.ಪರಮೇಶ್ವರ, ಪ್ರಿಯಾಂಕ್ ಖರ್ಗೆ, ವೆಂಕಟೇಶ್, ಎಚ್.ಸಿ.ಮಹದೇವಪ್ಪ, ಶಿವರಾಜ್ ತಂಗಡಗಿ, ಕೆ.ಎಚ್.ಮುನಿಯಪ್ಪ, ಲಕ್ಷ್ಮಿ ಹೆಬ್ಬಾಳ್ಕರ್, ಭೈರತಿ ಸುರೇಶ್, ಎಚ್.ಕೆ.ಪಾಟೀಲ್ ಸೇರಿದಂತೆ ಸಂಪುಟ ಸಹೋದ್ಯೋಗಿಗಳು, ಶಾಸಕರು, ಕೆಪಿಸಿಸಿ ಕಾರ್ಯಾಧ್ಯಕ್ಷರು ಸೇರಿದಂತೆ ಅನೇಕರು ಭಾಗವಹಿಸಿದ್ದರು.

ವಿವರಪುಟ → 5

- ಜನಕಲ್ಯಾಣ ಸಮಾವೇಶಕ್ಕೆ ತೆರಳುವಾಗ ಸಚಿವ ಮುನಿಯಪ್ಪ ಕಾರು ಅಪಘಾತ, ಅಪಾಯದಿಂದ ಪಾರು
- ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಎರಡು ಲಕ್ಷಕ್ಕೂ ಹೆಚ್ಚು ಮಂದಿ ಸಮಾವೇಶದಲ್ಲಿ ಭಾಗಿ
- ಸಿಎಂ, ಡಿಸಿಎಂಗೆ ನೇಗಿಲು ಉಡುಗೊರೆಯಾಗಿ ನೀಡಿದ ಕೆಪಿಸಿಸಿ ಕಿಸಾನ್ ಘಟಕ
- ಸಂಸತ್ ನಡೆಯುತ್ತಿರುವುದರಿಂದ ಹೈಕಮಾಂಡ್ ಪರವಾಗಿ ಉಸ್ತುವಾರಿ ರಂದೀಪ್ ಸಿಂಗ್ ಸುರ್ಜೇವಾಲ ಭಾಗಿ
- ದೇವೇಗೌಡರ ಭದ್ರಕೋಟೆಯಲ್ಲಿಯೇ ಬಿಜೆಪಿ-ಜೆಡಿಎಸ್ ವಿರುದ್ಧ ವಾಗ್ದಾಳಿ ನಡೆಸಿದ ಕೈ ನಾಯಕರು

- ಹಾಸನದ ನೂರಾರು ತಾಯಂದಿರ ಸ್ವಾಭಿಮಾನ ಕಾಪಾಡಲು ಈ ಸಮಾವೇಶ ಆಯೋಜನೆ
- ಚುನಾವಣೆ ಸಮಯದಲ್ಲಿ ಚನ್ನಪಟ್ಟಣಕ್ಕೆ ಬಂದು ಕಣ್ಣೀರು ಹಾಕುವ ಕುಮಾರಸ್ವಾಮಿ ಅವರೇ ನಿಮ್ಮ ಸಾಕ್ಷಿ ಗುಡ್ಡೆ ಏನು?
- ನಿಮ್ಮ ಕುಟುಂಬದ ಮಾಜಿ ಸಂಸದರ ಸಾಕ್ಷಿ ಗುಡ್ಡೆ ಮಾತಾಡಲ್ಲ; ಆ ಬಗ್ಗೆ ಮಾತನಾಡಲು ನನಗೆ ಅಸಹ್ಯವಾಗುತ್ತದೆ
- ನಮ್ಮ ಪಕ್ಷದಲ್ಲಿದೆ ಒಗ್ಗಟ್ಟು, ಬಿಜೆಪಿಯಲ್ಲಿದೆ ಬಿಕ್ಕಟ್ಟು. ನಾವು ವಚನಪಾಲಕರು, ನೀವು ವಚನಭ್ರಷ್ಟರು

ಹಾಸನದಲ್ಲಿ ಗುರುವಾರ ನಡೆದ ಜನಕಲ್ಯಾಣ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ, ಡಿ ಸಿಎಂ ಡಿ.ಕೆ.ಶಿವಕುಮಾರ್ ಅವರು ಮಾತನಾಡಿದರು.

- ಜನರು ಕುಮಾರಸ್ವಾಮಿ ಅವರಿಗೆ ಸಿಎಂ ಆಗಲು ಬಹುಮತವನ್ನೇ ನೀಡಿಲ್ಲ
- ಗ್ಯಾರಂಟಿ ಯೋಜನೆಗಳನ್ನು ಅವಮಾನಿಸುವ ಮೂಲಕ ಬಿಜೆಪಿ-ಜೆಡಿಎಸ್ ನಾಡದ್ರೋಹಿಗಳಾಗಿದ್ದಾರೆ
- ಹಾಸನದ ಹೆಣ್ಣು ಮಕ್ಕಳು ಕಣ್ಣೀರಲ್ಲಿ ಕೈತೊಳೆಯಲು ಕಾರಣ ಯಾರು?
- ರಾಜ್ಯದ ಜನರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಬಿಜೆಪಿ ಸಂಸದರು, ಎಚ್‌ಡಿಕೆ ಪ್ರಶ್ನಿಸುತ್ತಿಲ್ಲವೇಕೆ?

ದೇವೇಗೌಡ ಒಕ್ಕಲಿಗರನ್ನು ಬೆಳೆಯಲು ಬಿಡಲ್ಲ: ಸಿಎಂ

ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಗೌಡರು ರಾಜಕೀಯವಾಗಿ ಒಕ್ಕಲಿಗ ನಾಯಕರನ್ನು ನಿರಂತರವಾಗಿ ಮುಗಿಸುತ್ತಿದ್ದಾರೆ. ಬಚ್ಚೇಗೌಡರು, ವೈ.ಕೆ.ರಾಮಯ್ಯ, ಬೈರೇಗೌಡರು, ಕೃಷ್ಣಪ್ಪ, ಚಲುವರಾಯಸ್ವಾಮಿ ಸೇರಿ ಎಷ್ಟು ಮಂದಿ ಒಕ್ಕಲಿಗ ನಾಯಕರನ್ನು ದೇವೇಗೌಡರು ರಾಜಕೀಯವಾಗಿ ಮುಗಿಸಿದರು? ಒಕ್ಕಲಿಗ ನಾಯಕರಾಗಿದ್ದ ಕೃಷ್ಣಪ್ಪ ಅವರು 'ಈ ಪಾಪದ ಹೊರೆಯನ್ನು ಹೊರಬೇಕಾಗುತ್ತದೆ' ಎಂದು ದೇವೇಗೌಡರಿಗೆ ಹೇಳಿದ್ದರು. ಈಗ ಒಕ್ಕಲಿಗ ನಾಯಕ ಕೃಷ್ಣಪ್ಪ ಅವರ ಮಾತು ನಿಜವಾಗಿದೆ ಎಂದು ವಾಗ್ದಾಳಿ ನಡೆಸಿದರು.

ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಇರುವವರೆಗೂ ನಿಮ್ಮ ಗ್ಯಾರಂಟಿ ಯೋಜನೆಗಳನ್ನು ಕಸಿಯುವಂತಹ ಮಗ ಹುಟ್ಟುವುದಿಲ್ಲ. ನಾವು ಸಂವಿಧಾನದ ರಕ್ಷಣೆ ಮಾಡಿ, ರಾಜ್ಯದ ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರ ರಕ್ಷಣೆ ಮಾಡುತ್ತೇವೆ.

- ರಂದೀಪ್ ಸಿಂಗ್ ಸುರ್ಜೇವಾಲ,
ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಪ್ರೋಬಾ-3 ನೌಕೆ: ಉಡ್ಡಯನ ಯಶಸ್ವಿ

ಶ್ರೀಹರಿಕೋಟಾ: ಪ್ರೋಬಾ-3 ಯೋಜನೆಯ ಎರಡು ಬಾಹ್ಯಾಕಾಶ ನೌಕೆಗಳನ್ನು ಹೊತ್ತ ಇಸ್ರೋದ ಪಿಎಸ್‌ಎಲ್‌ವಿ ರಾಕೆಟ್ ಗುರುವಾರ ನಭಕ್ಕೆ ಚಿಮ್ಮಿತು. ಐರೋಪ್ಯ ಬಾಹ್ಯಾಕಾಶ ಸಂಸ್ಥೆಯ ಸಹಯೋಗದಲ್ಲಿ ಈ ಉಡ್ಡಯನ ನಡೆದಿದೆ.

ನೆಟ್ಟಾರು ಕೊಲೆ: ಎನ್‌ಐಎ ದಾಳಿ

ಮಡಿಕೇರಿ: ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳ ಕೊಡಗಿನ ಸೋಮವಾರಪೇಟೆ ಹಾಗೂ ಸುಂಟಿಕೊಪ್ಪದಲ್ಲಿ ಗುರುವಾರ ನಸುಕಿನಲ್ಲಿ ಪರಿಶೀಲನೆ ನಡೆಸಿದ್ದು, ಇಬ್ಬರನ್ನು ವಶಕ್ಕೆ ತೆಗೆದುಕೊಂಡಿದೆ ಎಂದು ಮೂಲಗಳು ತಿಳಿಸಿವೆ.

ಕ್ರೀಡಾ ಸಾಧಕರಿಗಿದ್ದ 2% ಮೀಸಲಿಗೆ ತಡೆ

ಬೆಂಗಳೂರು: ರಾಜ್ಯ ಸಿವಿಲ್ ಸೇವೆಯಲ್ಲಿನ ನೇರ ನೇಮಕದಲ್ಲಿ ಕ್ರೀಡಾ ಸಾಧಕರಿಗೆ ನೀಡಲಾಗುತ್ತಿದ್ದ ಶೇ.2ರಷ್ಟು ಮೀಸಲಿಗೆ ರಾಜ್ಯ ಸರಕಾರ ತಾತ್ಕಾಲಿಕ ತಡೆ ನೀಡಿದೆ. ನಾಗರಿಕ ಸೇವಾ-1977ರ ನಿಯಮಕ್ಕೆ ತಿದ್ದುಪಡಿ ಮಾಡಿ ಪುನರ್ ಪರಿಶೀಲಿಸಲು ಈ ಕ್ರಮ ಕೈಗೊಳ್ಳಲಾಗಿದೆ.

ಸಿಎಂ ಮೇಲ್ಮನವಿ ನೋಟಿಸ್ ಜಾರಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದ ರಾಜ್ಯಪಾಲರ ಕ್ರಮ ಎತ್ತಿ ಹಿಡಿದಿದ್ದ ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿ ಕುರಿತಂತೆ ರಾಜ್ಯಪಾಲರ ಕಚೇರಿ, ರಾಜ್ಯ ಸರಕಾರ ಮತ್ತು ದೂರುದಾರ ಸ್ನೇಹಮಯಿ ಕೃಷ್ಣ ಮತ್ತಿತರರಿಗೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ.

ಸಮಾಜ ಕಲ್ಯಾಣ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಸಂವಿಧಾನ ಶಿಲ್ಪಿ, ಭಾರತರತ್ನ, **ಬಾಬಾ ಸಾಹೇಬ ಡಾ. ಬಿ.ಆರ್. ಅಂಬೇಡ್ಕರ್** ಅವರ

68ನೇ ಮಹಾಪರಿನಿರ್ವಾಣ ದಿನ

ದಿನಾಂಕ: ಡಿಸೆಂಬರ್ 6, 2024, ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ
ಸ್ಥಳ: ವಿಧಾನಸೌಧದ ಮುಂಭಾಗ [ಪೂರ್ವ ದ್ವಾರ], ಬೆಂಗಳೂರು
ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮತ್ತು ಗೌರವ ಸಮರ್ಪಣೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಡಾ. ಹೆಚ್.ಸಿ. ಮಹದೇವಪ್ಪ
ಮಾನ್ಯ ಸಮಾಜ ಕಲ್ಯಾಣ ಸಚಿವರು

ಇಲಾಖೆಯ ಕಾರ್ಯಕ್ರಮಗಳ ಕುರಿತಾಗಿ ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪನವರು ಅಧಿಕಾರಿಗಳೊಂದಿಗೆ ಚರ್ಚಿಸುತ್ತಿರುವುದು

"ವಿದ್ಯಾವಂತರಾಗಿ, ಸಂಘಟಿತರಾಗಿ ಮತ್ತು ಉತ್ತೇಜಿತರಾಗಿರಿ....!"
-ಡಾ. ಬಿ.ಆರ್. ಅಂಬೇಡ್ಕರ್

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು; ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಸರ್ವರಿಗೂ ಆದರದ ಸುಸ್ವಾಗತ

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

ಸಮಾಚಾರ ಸಣ್ಣದಲ್ಲ

ಕಂಬಳ ಆಯೋಜನೆ ಇಲ್ಲ ಹೈಕೋರ್ಟ್‌ಗೆ ವಿವರಣೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ನಿಸರ್ಗಧಾಮ ಪಿಲಿಕುಳದಲ್ಲಿ ಡಿಸೆಂಬರ್ ತಿಂಗಳಲ್ಲಿ ಕಂಬಳ ಸ್ಪರ್ಧೆ ಆಯೋಜನೆ ಮಾಡುವುದಿಲ್ಲ ಎಂದು ರಾಜ್ಯ ಸರಕಾರ ಹೈಕೋರ್ಟ್‌ಗೆ ಮಾಹಿತಿ ನೀಡಿದೆ.ದಕ್ಷಿಣ ಕನ್ನಡ ಜಿಲ್ಲೆಯ ಪಿಲಿಕುಳದಲ್ಲಿ ನಡೆಯಲಿರುವ ಕಂಬಳ ಸ್ಪರ್ಧೆಯನ್ನು ಪ್ರಾಣಿ ಸಂಗ್ರಹಾಲಯದ ಸಮೀಪ ನಡೆಸಲಾಗುತ್ತಿರುವುದರಿಂದ ಅಲ್ಲಿನ ಪ್ರಾಣಿಗಳಿಗೆ ಸಮಸ್ಯೆಯಾಗುತ್ತದೆ ಎಂದು ಆಕ್ಷೇಪಿಸಿ ಪ್ರಾಣಿದಯಾ ಸಂಘಟನೆ ಯಾದ ಪೇಟಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ಯನ್ನು ಮುಖ್ಯ ನ್ಯಾಯ ಮೂರ್ತಿ ಎನ್.ವಿ. ಅಂಜಾರಿಯಾ ಮತ್ತು ನ್ಯಾಯ ಮೂರ್ತಿ ಕೆ.ವಿ.ಅರವಿಂದ್ ಅವರ ವಿಭಾಗೀಯ ಪೀಠ ನಡೆಸಿತು. ವಿಚಾರಣೆಯ ವೇಳೆ ಸರಕಾರದ ವಕೀಲೆ ನೀಲೋಫರ್ ಅಕ್ಬರ್ ಕಂಬಳ ಆಯೋಜಿಸುವುದರಿಂದ ನಿಸರ್ಗಧಾಮದಲ್ಲಿನ ಪ್ರಾಣಿಸಂಕುಲಕ್ಕೆ ಸಮಸ್ಯೆಯಾಗಲಿದೆಯೇ ಎಂಬುದನ್ನು ಅರಿಯಲು ತಜ್ಞರ ಸಮಿತಿ ರಚಿಸಲಾಗಿದೆ. ಸಮಿತಿಯ ವರದಿ ನೀಡಿಲ್ಲ. ಹೀಗಾಗಿ, ಡಿಸೆಂಬರ್‌ನಲ್ಲಿ ಪಿಲಿಕುಳದಲ್ಲಿ ಸ್ಪರ್ಧೆ ಆಯೋಜಿಸುವುದಿಲ್ಲ ಎಂದರು. ಇದನ್ನು ದಾಖಲಿಸಿಕೊಂಡ ನ್ಯಾಯಾಲಯ ವಿಚಾರಣೆ ಯನ್ನು ಜನವರಿ 10ಕ್ಕೆ ಮುಂದೂಡಿತು. ಪೇಟಾ ಪ್ರತಿನಿಧಿಸಿದ್ದ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ ಅವರು ತಜ್ಞರ ಸಮಿತಿಯ ವರದಿ ಬರುವವರೆಗೆ ಕಾಯಬಹುದು ಎಂದರು. ಕಂಬಳ ಸಮಿತಿ ಪ್ರತಿನಿಧಿಸಿದ್ದ ವಕೀಲ ವಿನೋದ್ ಕುಮಾರ್ ಹಾಜರಿದ್ದರು.

ವಿರಾಮ
ಪ್ರತಿ ಭಾನುವಾರ

ಕರ್ನಾಟಕ- ತಮಿಳುನಾಡಿನಲ್ಲಿ ಎನ್‌ಐಎ ಕಾರ್ಯಾಚರಣೆ

ನೆಟ್ಟಾರು ಕೊಲೆ ಪ್ರಕರಣ 16 ಕಡೆ ಎನ್‌ಐಎ ದಾಳಿ

ಬೆಂಗಳೂರು: ಬಿಜೆಪಿ ಯುವಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಗುರುವಾರ ಕರ್ನಾಟಕ ಮತ್ತು ತಮಿಳು ನಾಡು ಸೇರಿ 16 ಸ್ಥಳಗಳಲ್ಲಿ ಏಕಕಾಲದಲ್ಲಿ ದಾಳಿ ನಡೆಸಿದೆ.

ಕರ್ನಾಟಕದ ಬೆಂಗಳೂರು ನಗರ, ಕೊಡಗು ಜಿಲ್ಲೆ, ಕೇರಳದ ಎರ್ನಾಕುಲಂ ಮತ್ತು ತಮಿಳುನಾಡಿನ ಚೆನ್ನೈ ಸೇರಿದಂತೆ 16 ಕಡೆ ದಾಳಿ ದಾಳಿ ನಡೆಸಲಾಗಿದೆ. ಹತ್ಯೆ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಆರು ಆರೋಪಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಎನ್‌ಐಎ ಈ ದಾಳಿ ನಡೆಸಿದೆ ಎಂದು ಮೂಲಗಳು ಬಹಿರಂಗಪಡಿಸಿವೆ. ಆರೋಪಿಗಳು ವಿದೇಶಗಳಲ್ಲಿ ನೆಲೆಸಿದ್ದು, ಅಲ್ಲಿಂದ ಅವರು ತಮ್ಮ ಕಾರ್ಯಾಚರಣೆ ನಡೆಸುತ್ತಿದ್ದಾರೆ ಎಂದು ಎನ್‌ಐಎ ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ಆರೋಪಿ ಹಂತಕರು ದಕ್ಷಿಣ ಭಾರತದ ವಿವಿಧ ನಗರಗಳ ಸ್ಥಳೀಯರೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ ಎಂಬುದು ದೃಢಪಟ್ಟಿದೆ. ಈ ನಿಟ್ಟಿನಲ್ಲಿ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿದ ಎನ್‌ಐಎ, ಶಂಕಿತ ಹಂತಕರೊಂದಿಗೆ ನಿರಂತರ ಸಂಪರ್ಕದಲ್ಲಿರುವ ಶಂಕಿತ ವ್ಯಕ್ತಿಗಳ ನಿವಾಸ ಮತ್ತು ಆಸ್ತಿಗಳ ಮೇಲೆ ದಾಳಿ ನಡೆಸಿದೆ.

ಏನಿದು ಪ್ರಕರಣ?: ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಳಾರೆಯಲ್ಲಿ ಬಿಜೆಪಿ ಯುವಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಅವರನ್ನು ಜುಲೈ 26, 2022 ರಂದು ರಾತ್ರಿ ದ್ವಿಚಕ್ರವಾಹನದಲ್ಲಿ ಬಂದ ದುಷ್ಕರ್ಮಿಗಳು ಕೊಂದು ಹಾಕಿದ್ದರು. ಯುವಕನೊಬ್ಬನ ಸಾವಿಗೆ ಪ್ರತೀಕಾರ ತೀರಿಸಿಕೊಳ್ಳಲು ದುಷ್ಕರ್ಮಿಗಳು ಪ್ರವೀಣ್‌ನನ್ನು ಗುರಿಯಾಗಿಸಿಕೊಂಡು ಕೊಲೆ ಮಾಡಿರುವುದಾಗಿ ತನಿಖೆಯಿಂದ ತಿಳಿದು ಬಂದಿದೆ. ಪ್ರಕರಣದ ತನಿಖೆಗೆ ಆರಂಭದಲ್ಲಿ ಪೊಲೀಸ್ ಇಲಾಖೆ ವಿಶೇಷ ತಂಡಗಳನ್ನು ರಚಿಸಿತ್ತು. ಬಳಿಕ ತನಿಖೆಯನ್ನು ಎನ್‌ಐಎಗೆ ವಹಿಸಲಾಗಿತ್ತು. ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಎನ್‌ಐಎ 20 ಆರೋಪಿಗಳ ವಿರುದ್ಧ ಬೆಂಗಳೂರಿನ ವಿಶೇಷ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿತ್ತು. 14 ಮಂದಿಯನ್ನು ಬಂಧಿಸಿದ್ದು, ತಲೆಮರೆಸಿಕೊಂಡಿರುವ ಆರು ಮಂದಿಗಾಗಿ ಶೋಧ ನಡೆಸಿದ್ದಾರೆ. ಎನ್‌ಐಎ 240 ಸಾಕ್ಷಿಗಳ ಹೇಳಿಕೆ ಸೇರಿದಂತೆ 1,500 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿತ್ತು.

ಆರೋಪಿ ಬಿಡುಗಡೆ: 6 ಮಂದಿ ಅಮಾನತು

ಬೆಂಗಳೂರು: ಕೊಲೆ ಪ್ರಕರಣದಲ್ಲಿ ಆರೋಪಿಯನ್ನ ಕೈಬಿಟ್ಟ ಆರೋಪದಡಿ ರಾಮಮೂರ್ತಿನಗರ ನಗರ ಠಾಣೆಯ ಇನ್‌ಸ್ಪೆಕ್ಟರ್ ಸೇರಿದಂತೆ ಆರು ಮಂದಿಯನ್ನು ಅಮಾನತುಗೊಳಿಸಿ ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ಆದೇಶ ಹೊರಡಿಸಿದ್ದಾರೆ.

ಇನ್‌ಸ್ಪೆಕ್ಟರ್ ಮುತ್ತುರಾಜು, ಪಿಎಸ್‌ಐ ಉಮೇಶ್, ಎಎಸ್‌ಐಗಳಾದ ಮಹೇಶ್ ಹಾಗೂ ಫೈರೋಜ್ ಖಾನ್ ಹೆಡ್ ಕಾನ್‌ಸ್ಟೆಬಲ್‌ಗಳಾದ ಮಹೇಶ್ ಹಾಗೂ ಬಸವರಾಜ್ ಅವರನ್ನು ಅಮಾನತು ಮಾಡಲಾಗಿದೆ. ಇನ್‌ಸ್ಪೆಕ್ಟರ್ ಹಾಗೂ ಮತ್ತಿತರ ಸಿಬ್ಬಂದಿ ವಿರುದ್ಧ ಗಂಭೀರ ಆರೋಪಗಳು ಕೇಳಿಬಂದಿದ್ದವು. ಕೊಲೆ ಪ್ರಕರಣವೊಂದರಲ್ಲಿ ಆರೋಪಿಯನ್ನು ಬಂಧಿಸದೇ ಕೈಬಿಟ್ಟಿರುವುದು, ಪೊಲೀಸರ ಮೇಲೆ ಹಲ್ಲೆ ಮಾಡಿದ ಆರೋಪಿಯನ್ನು ಹಣ ಪಡೆದು ಬಿಟ್ಟಿದ್ದರು.

ರಾಜ್ಯ ಸರಕಾರದ ಪರ ಹೈಕೋರ್ಟ್‌ನಲ್ಲಿ ಹಿರಿಯ ವಕೀಲ ಕಪಿಲ್ ಸಿಬಲ್ ವಾದ

ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಅನುಮತಿ ನೀಡಲು ರಾಜ್ಯಪಾಲರಿಗೆ ಅಧಿಕಾರ ಇಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿಯವರ ವಿರುದ್ಧ ತನಿಖೆಗೆ ಅನುಮತಿಸಲು ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆ ಸೆಕ್ಷನ್ 17ಎ ಅಡಿ ರಾಜ್ಯಪಾಲರಿಗೆ ಅಧಿಕಾರವಿಲ್ಲ ಎಂದು ಹೈಕೋರ್ಟ್‌ನ ವಿಭಾಗೀಯ ಪೀಠದ ಮುಂದೆ ರಾಜ್ಯ ಸರಕಾರ ವಾದ ಮಂಡಿಸಿದೆ.

ಮುಡಾ ಪ್ರಕರಣ ಸಂಬಂಧ ತನಿಖೆ ನಡೆಸಲು ರಾಜ್ಯಪಾಲರು ಅನುಮತಿಸಿರುವುದನ್ನು ಎತ್ತಿಹಿಡಿದಿದ್ದ ಏಕಸದಸ್ಯ ಪೀಠದ ಆದೇಶದ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ಸೇರಿದಂತೆ ಭೂ ಮಾಲೀಕ ಜೆ.ದೇವರಾಜು ಸಲ್ಲಿಸಿರುವ ಮೇಲ್ಮನವಿ ಹಾಗೂ ಮುಡಾ ಪ್ರಕರಣ ಸಿಬಿಐ ತನಿಖೆಗೆ ವಹಿಸಬೇಕು ಎಂದು ಕೋರಿರುವುದಕ್ಕೆ ಆಕ್ಷೇಪಿಸಿ ಸಲ್ಲಿಸಿರುವ ಮೇಲ್ಮನವಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಎನ್ ವಿ ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರ ವಿಭಾಗೀಯ ಪೀಠ ಗುರುವಾರ ನಡೆಸಿತು. ರಾಜ್ಯಪಾಲರು ಸೇರಿ ಎಲ್ಲಾ ಪ್ರತಿವಾದಿಗಳಿಗೆ ಈ ಪ್ರಕರಣಗಳಲ್ಲಿ ನೋಟಿಸ್ ಜಾರಿ ಮಾಡಲಾಯಿತು.

ರಾಜ್ಯಪಾಲರ ವ್ಯಾಪ್ತಿ ಪ್ರಶ್ನೆ: ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಮುಡಾ ಪ್ರಕರಣದಲ್ಲಿ ಕೇಳಿಬಂದಿರುವ ಆರೋಪಗಳ ಹಿನ್ನೆಲೆಯಲ್ಲಿ ತನಿಖೆಗೆ ಅನುಮತಿ ನೀಡಿದ್ದ ರಾಜ್ಯಪಾಲರ ಅಧಿಕಾರ ವ್ಯಾಪ್ತಿಯನ್ನು ರಾಜ್ಯ ಸರಕಾರವು ಪ್ರಮುಖವಾಗಿ ಪ್ರಶ್ನಿಸಿದೆ. ರಾಜ್ಯ ಸರಕಾರವನ್ನು ಪ್ರತಿನಿಧಿಸಿರುವ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಈ ಪ್ರಕರಣದಲ್ಲಿ ತನಿಖೆಗೆ ಅನುಮತಿಸುವ ಸಕ್ಷಮ ಪ್ರಾಧಿಕಾರದ ವಿಚಾರವು ಮಹತ್ವದ ಸಾಂವಿಧಾನಿಕ ವಿಚಾರವಾಗಿದೆ. ಇದು ಯಾವುದೇ ಪಕ್ಷದ ಮುಖ್ಯಮಂತ್ರಿ, ಮಂತ್ರಿಗೆ ಸಂಬಂಧಿಸಿದ್ದಲ್ಲ, ಈ ರೀತಿ ಮುಖ್ಯಮಂತ್ರಿ, ಸಚಿವರ ವಿರುದ್ಧ ತನಿಖೆಗೆ ಅನುಮತಿಸುತ್ತಾ ಹೋದರೆ ಅರಾಜಕತೆ ಸೃಷ್ಟಿಯಾಗಲಿದೆ. ಇದು ನಮ್ಮ ದೇಶದ ರಾಜ್ಯಾಡಳಿತಕ್ಕೆ ಸಂಬಂಧಿಸಿದ್ದಾಗಿದೆ. ಇಲ್ಲಿ ಬಹುಮುಖ್ಯವಾದ ಸಾಂವಿಧಾನಿಕ ವಿಚಾರಗಳು ಅಡಕವಾಗಿವೆ. ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆ ಸೆಕ್ಷನ್ 17ಎ ಅಡಿ ಮುಖ್ಯಮಂತ್ರಿಯ ವಿರುದ್ಧ ತನಿಖೆಗೆ ಅನುಮತಿಸಲು ರಾಜ್ಯಪಾಲರಿಗೆ ವ್ಯಾಪ್ತಿಯೇ ಇಲ್ಲ ಎಂದು ವಾದ ಮಂಡಿಸಿದರು.

ಹಿರಿಯ ವಕೀಲರಾದ ಡಾ. ಅಭಿಷೇಕ ಮನುಸಿಂಘ್ವಿ ಮತ್ತು ಪ್ರೊ. ರವಿವರ್ಮ ಕುಮಾರ್ (ಮುಖ್ಯಮಂತ್ರಿ ಪ್ರತಿನಿಧಿಸಿರುವವರು), ಕಪಿಲ್ ಸಿಬಲ್ ಮತ್ತು ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ (ರಾಜ್ಯ ಸರಕಾರ ಪ್ರತಿನಿಧಿಸಿರುವವರು), ಕೆ ಜಿ ರಾಘವನ್ ಮತ್ತು ಮಣೀಂದರ್ ಸಿಂಗ್ (ದೂರುದಾರ ಸ್ನೇಹಮಯಿ ಕೃಷ್ಣ ಪ್ರತಿನಿಧಿಸಿರುವವರು), ದುಷ್ಯಂತ್ ದವೆ (ಜೆ.ದೇವರಾಜು ಪ್ರತಿನಿಧಿಸಿರುವವರು) ಅವರ ವಾದ-ಪ್ರತಿವಾದ ನ್ಯಾಯಾಲಯ ಆಲಿಸಿತು. ಆನಂತರ ಸಿಎಂ ಸಿದ್ದರಾಮಯ್ಯ ಮತ್ತು ಜೆ.ದೇವರಾಜು ಅವರು ಸಲ್ಲಿಸಿರುವ ಪ್ರತ್ಯೇಕ ಮೇಲ್ಮನವಿಗಳಲ್ಲಿ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಮತ್ತು ದೂರುದಾರರಾದ ಟಿ.ಜೆ.ಅಬ್ರಹಾಂ, ಸ್ನೇಹಮಯಿ ಕೃಷ್ಣ ಮತ್ತು ಎಸ್‌ಪಿ ಪ್ರದೀಪ್ ಕುಮಾರ್ ಅವರಿಗೆ ನೋಟಿಸ್ ಜಾರಿ ಮಾಡಿದೆ.

ಮುಡಾ ಪ್ರಕರಣದಲ್ಲಿ ವಿವಾದದ ಕೇಂದ್ರವಾಗಿರುವ ಕೆಸರೆ ಗ್ರಾಮದಲ್ಲಿನ ಜಾಮೀನಿನ ಮಾಲೀಕ ಜೆ.ದೇವರಾಜು ಪ್ರತಿನಿಧಿಸಿರುವ ಹಿರಿಯ ವಕೀಲ ದುಷ್ಯಂತ್ ದವೆ ಅವರು ಮುಡಾ ಪ್ರಕರಣವನ್ನು ಸಿಬಿಐ ತನಿಖೆಗೆ ಕೋರಿರುವ ಅರ್ಜಿಯಲ್ಲಿ ನೋಟಿಸ್ ಜಾರಿಯಾಗಿದ್ದು, ಪ್ರಕರಣದ ತನಿಖೆ ನಡೆಸುತ್ತಿರುವ ಲೋಕಾಯುಕ್ತರಿಗೆ ತನಿಖಾ ವರದಿ ಸಲ್ಲಿಸುವಂತೆ ಏಕಸದಸ್ಯ ಪೀಠ ಆದೇಶಿಸಿದೆ. ಈ ಪ್ರಕರಣದ ವಿಚಾರಣೆಯು ಡಿ. 10ಕ್ಕೆ ಏಕಸದಸ್ಯ ಪೀಠದ ಮುಂದೆ ವಿಚಾರಣೆಗೆ ಬರಲಿದೆ. ಇದರಲ್ಲಿ ನಮಗೆ ರಕ್ಷಣೆ ನೀಡಬೇಕು. ರಾಜಕೀಯ ಕೆಸರೆರಚಾಟದಲ್ಲಿ 80 ವರ್ಷ ದೇವರಾಜು ಅವರನ್ನು ಸಿಲುಕಿಸಲಾಗಿದ್ದು, ನಮ್ಮ ವಾದ ಆಲಿಸದೇ ಏಕಸದಸ್ಯ ಪೀಠವು ದೇವರಾಜು ಅವರನ್ನು ಏಕಸದಸ್ಯ ಪೀಠವು ಕ್ರಿಮಿನಲ್ ಪ್ರಕರಣ ಎದುರಿಸಲು ಆದೇಶಿಸಿದೆ. ಪೀಠ ತನ್ನ ಆದೇಶದಲ್ಲಿ ಗಂಭೀರ ಅಭಿಪ್ರಾಯ ವ್ಯಕ್ತಪಡಿಸಿದೆ. ಇದು ದೇವರಾಜು ಹಕ್ಕಿಗೆ ಧಕ್ಕೆ ಮಾಡಿದೆ. ಈ ನೆಲೆಯಲ್ಲಿ ರಕ್ಷಣೆಗೆ ಒದಗಿಸಬೇಕು ಎಂದು ಕೋರಿದರು.

ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ಅರ್ಜಿಯಲ್ಲಿ ನೋಟಿಸ್ ಆಗಿರುವು ದನ್ನು ಪ್ರಶ್ನಿಸಿ ಜೆ.ದೇವರಾಜು ಸಲ್ಲಿಸಿರುವ ಮತ್ತೊಂದು ಮೇಲ್ಮನವಿಯಲ್ಲಿ ಸ್ನೇಹಮಯಿ ಕೃಷ್ಣ, ಕೇಂದ್ರ ಗೃಹ ಇಲಾಖೆ, ಸಿಬಿಐ, ಲೋಕಾ ಯುಕ್ತ, ರಾಜ್ಯ ಪೊಲೀಸ್ ಮಹಾನಿರ್ದೇಶಕರು, ಸಿಎಂ ಸಿದ್ದರಾಮಯ್ಯ, ಅವರ ಪತ್ನಿ ಬಿ.ಎಂ. ಪಾರ್ವತಿ, ಸಹೋದರ ಬಿ.ಎಂ.ಮಲ್ಲಿಕಾರ್ಜುನ ಸ್ವಾಮಿ ಅವರಿಗೆ ನ್ಯಾಯಾಲಯ ನೋಟಿಸ್ ಜಾರಿ ಮಾಡಿದೆ. ವಿಚಾರಣೆಯನ್ನು ಜನವರಿ 25ಕ್ಕೆ ಮುಂದೂಡಿದೆ.

ಸಿಎಂ ಪರ ವಾದ

- ಏಕಸದಸ್ಯ ಪೀಠದ ಆದೇಶದಲ್ಲಿನ ಲೋಪ ತೋರಿಸುತ್ತೇನೆ. 17 ಎ ನಿಯಮ ಸಂಪೂರ್ಣವಾಗಿ ರಾಜ್ಯಪಾಲರು ಉಲ್ಲಂಘಿಸಿದ್ದಾರೆ.
- ಪೊಲೀಸ್ ಅಧಿಕಾರಿ ಮೂಲಕವೇ ಅನುಮತಿ ಕೋರಬೇಕು. ಆದರೆ ಹೈಕೋರ್ಟ್ ಏಕಸದಸ್ಯ ಪೀಠ ಇದನ್ನು ನಿರ್ಲಕ್ಷಿಸಿದೆ. ರಾಜ್ಯಪಾಲರು ಕ್ಯಾಬಿನೆಟ್‌ನ ಸಲಹೆ ಸೂಚನೆ ಪಾಲಿಸಬೇಕು. ಈ ಬಗ್ಗೆ ಸುಪ್ರೀಂಕೋರ್ಟ್ ತೀರ್ಪು ಸ್ಪಷ್ಟವಾಗಿದೆ.
- ಹೈಕೋರ್ಟ್ ರಾಜ್ಯಪಾಲರ ಅನುಮತಿ ಎತ್ತಿಹಿಡಿದಿದೆ. ಮುಖ್ಯಮಂತ್ರಿ ಪರವಾಗಿಯೇ ಸಚಿವ ಸಂಪುಟ ಇರುತ್ತದೆಂದು ತೀರ್ಪು ನೀಡಿದೆ.
- ಹೈಕೋರ್ಟ್ ಏಕಸದಸ್ಯ ಪೀಠದ ಈ ತೀರ್ಪು ಪ್ರಶ್ನಿಸಿದ್ದೇವೆ. ಹೀಗಾಗಿ ಸಿಬಿಐ ತನಿಖೆ ಕೋರಿರುವ ಅರ್ಜಿ ವಿಚಾರಣೆ ಮುಂದೂಡಬೇಕು. ಏಕಸದಸ್ಯ ಪೀಠದಲ್ಲಿರುವ ಡಿ.10 ರ ವಿಚಾರಣೆ ಮುಂದೂಡಬೇಕು.

ತೆಲುಗು ಚಲನಚಿತ್ರದ ವಿರುದ್ಧ ಸಿನಿಮಾಪ್ರಿಯರ ಬೇಸರ

ಪುಷ್ಪ 2 ಅಬ್ಬರ: ಟಿಕೆಟ್ ದರ ಹೆಚ್ಚಳ

ಬೆಂಗಳೂರು: ಅಲ್ಲು ಅರ್ಜುನ್ ಅಭಿನಯದ ಪುಷ್ಪ 2 ವಿಶ್ವಾದ್ಯಂತ ತೆರೆಗೆ ಬಂದಿದೆ. ಬಹು ನಿರೀಕ್ಷೆ ಮೂಡಿಸಿದ್ದ ಈ ಚಿತ್ರವನ್ನು ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾತರರಾಗಿದ್ದರು. ಹಾಗಾಗಿ ಸಿನಿಮಾ ಬಿಡುಗಡೆಗೂ ಮೊದಲೇ ಮುಂಗಡ ಬುಕ್ಕಿಂಗ್ ಆರಂಭವಾಗಿತ್ತು. ಇದರಿಂದ ಬರೋಬ್ಬರಿ 120 ಇಪ್ಪತ್ತು ಕೋಟಿ ರು. ನಿರ್ಮಾಪಕರಿಗೆ ಸಂದಾಯವಾಗಿದೆ. ರಾಜ್ಯದಲ್ಲಿ ಪುಷ್ಪ 2 ಚಿತ್ರವನ್ನು ಮಧ್ಯರಾತ್ರಿ 12 ಹಾಗೂ ಮುಂಜಾನೆ 3.45ಕ್ಕೆ ಪ್ರದರ್ಶನ ಆರಂಭಿಸಲು ನಿರ್ಧರಿಸಲಾಗಿತ್ತು. ಆದರೆ ಕರ್ನಾಟಕ ಸಿನಿಮಾ ರೆಗ್ಯುಲೇಷನ್ ಆಕ್ಟ್ ಅನ್ವಯ ಬೆಳಗ್ಗೆ 6.30ರ ಒಳಗೆ ಸಿನಿಮಾ ಪ್ರದರ್ಶನ ಮಾಡುವಂತಿಲ್ಲ. ಹೀಗಾಗಿ ಮುಂಜಾನೆ ಆರು ಗಂಟೆಗೆ ಮೊದಲು ಚಿತ್ರ ಪ್ರದರ್ಶನ ಮಾಡದಂತೆ ಜಿಲ್ಲಾಧಿಕಾರಿಗಳು ನಿರ್ಬಂಧ ವಿಧಿಸಿದ್ದರು. ಇದು ಚಿತ್ರಕ್ಕೆ ಹಿನ್ನಡೆಯಾಗಿದೆ.

ಈ ಕುರಿತಂತೆ ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘ ಜಿಲ್ಲಾಧಿಕಾರಿಗಳಿಗೆ ದೂರು ನೀಡಿತ್ತು. ಚಲನಚಿತ್ರ ಪ್ರದರ್ಶನ ನಿಯಮದ ಪ್ರಕಾರ ರಾಜ್ಯದ ಚಿತ್ರಮಂದಿರಗಳಲ್ಲಿ ಮುಂಜಾನೆ ಆರು ಗಂಟೆಯ ಒಳಗೆ ಯಾವುದೇ ಚಿತ್ರಮಂದಿರಗಳಲ್ಲಿ ಚಿತ್ರಗಳನ್ನು ಪ್ರದರ್ಶನ ಮಾಡುವಂತಿಲ್ಲ. ರಾಜ್ಯ ಸರಕಾರದ ಆದೇಶವಿದ್ದರೂ ಕರ್ನಾಟಕದ ಕೆಲವು ಚಿತ್ರಮಂದಿರಗಳಲ್ಲಿ ಅವಧಿಗೂ ಮುನ್ನ ಚಿತ್ರ ಪ್ರದರ್ಶನಗೊಳ್ಳುತ್ತಿರುವುದು ಕಾನೂನುಬಾಹಿರ ವಾಗಿದೆ. ಅಲ್ಲದೆ ಮನಸೋಇಚ್ಛೆ ಟಿಕೆಟ್ ದರ ಏರಿಸಿರುವ ಚಿತ್ರಮಂದಿರಗಳ ವಿರುದ್ಧವೂ ಕ್ರಮ ಕೈಗೊಳ್ಳುವಂತೆಯೂ ದೂರಿನಲ್ಲಿ ತಿಳಿಸಲಾಗಿತ್ತು.

ಟಿಕೆಟ್ ದರ ಹೆಚ್ಚಳ: ಪುಷ್ಪ 2 ಚಿತ್ರದ ದರವನ್ನು ಮನಬಂದಂತೆ ಏರಿಸಲಾಗಿದೆ. ಮೊದಲ ದಿನ ಐನೂರರಿಂದ ಸಾವಿರದ ಐನೂರು ರು.ವರೆಗೆ ಟಿಕೆಟ್ ದರ ಹೆಚ್ಚಿಸಲಾಗಿತ್ತು. ಗಾಂಧಿ ನಗರದ ಕೆಲವು ಚಿತ್ರಮಂದಿರಗಳಲ್ಲಿ ಸಿಲ್ವರ್ ಕ್ಲಾಸ್‌ಗೆ ಎಂಟುನೂರು ರು. ಗೋಲ್ಡ್ ಕ್ಲಾಸ್‌ಗೆ ಸಾವಿರ ರು. ಟಿಕೆಟ್ ದರವಿತ್ತು. ಟಿಕೆಟ್ ದರ ಹೆಚ್ಚಳದಿಂದ ಸಿನಿಪ್ರಿಯರು ಕೂಡ ಮುನಿದಿದ್ದರು. ಏಕಾ ಏಕಿ ಹೀಗೆ ದರ ಹೆಚ್ಚಳ ಮಾಡಿದರೆ ಸಿನಿಮಾ ನೋಡುವುದು ಹೇಗೆಂದು ಬೇಸರ ವ್ಯಕ್ತಪಡಿಸಿದ್ದರು. ಪುಷ್ಪ 2 ರಾಜ್ಯದ ಬಹುತೇಕ ಚಿತ್ರಮಂದಿರಗಳನ್ನು ಆವರಿಸಿಕೊಂಡಿದ್ದು, ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಅವಕಾಶವೆಲ್ಲಿ ಎಂದು ಕನ್ನಡದ ನಿರ್ಮಾಪಕರು, ನಿರ್ದೇಶಕರ ಪ್ರಶ್ನೆಯಾಗಿದೆ. ವಿತರಕರ ವಿರುದ್ಧ ಬೇಸರ ವ್ಯಕ್ತಪಡಿಸಿದ್ದಾರೆ.

ಮುಡಾ ಪ್ರಕರಣ: ಜ.20ಕ್ಕೆ ಮುಂದೂಡಿಕೆ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದ ರಾಜ್ಯಪಾಲರ ಕ್ರಮ ಎತ್ತಿ ಹಿಡಿದಿದ್ದ ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿ ಕುರಿತಂತೆ ರಾಜ್ಯಪಾಲರ ಕಚೇರಿ, ರಾಜ್ಯ ಸರಕಾರ ಮತ್ತು ದೂರುದಾರ ಸ್ನೇಹಮಹಿ ಕೃಷ್ಣ ಮತ್ತಿತರರಿಗೆ ಹೈಕೋರ್ಟ್ ನೋಟಿಸ್ ಜಾರಿಮಾಡಿದೆ.

ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾ. ಕೆ.ವಿ.ಅರವಿಂದ್ ಅವರಿದ್ದ ಪೀಠ ಈ ಆದೇಶ ನೀಡಿ ವಿಚಾರಣೆಯನ್ನು ಜನವರಿ 20 ಕ್ಕೆ ಮುಂದೂಡಿದೆ.

ರಾಜ್ಯ ಸರಕಾರದ ಪರ ಹಿರಿಯ ವಕೀಲ ಕಪಿಲ್ ಸಿಬಲ್ ಹಾಗೂ ಮುಖ್ಯಮಂತ್ರಿ ಪರ ವಾದ ಮಂಡಿಸಿದ ಅಭಿಷೇಕ್ ಮನು ಸಿಂಘ್ವಿ ವಾದ ಆಲಿಸಿದ ಪೀಠ, ಏಕಸದಸ್ಯ ಪೀಠದ ಆದೇಶಕ್ಕೆ ತಡೆ ನೀಡಲು ಸಾಧ್ಯವಿಲ್ಲ. ಸಿಬಿಐ ತನಿಖೆ ಕೋರಿರುವ ಅರ್ಜಿಯಲ್ಲಿ ಮಧ್ಯ ಪ್ರವೇಶಿಸಲು ಸಾಧ್ಯವಿಲ್ಲ. ನೀವು ಏಕಸದಸ್ಯ ಪೀಠಕ್ಕೆ ಮನವಿ ಸಲ್ಲಿಸಬಹುದು ಎಂದು ಅಭಿಪ್ರಾಯಪಟ್ಟಿತು.

ಟಾಕ್ಸಿಕ್ ಚಿತ್ರತಂಡಕ್ಕೆ ರಿಲೀಫ್

ಬೆಂಗಳೂರು: ಪೂರ್ವ ವಿಭಾಗದ ಸಂಚಾರಿ ಪೊಲೀಸರು ವಿಶೇಷ ಕಾರ್ಯಾಚರಣೆ ಕೈಗೊಂಡು ನಿಯಮಗಳನ್ನು ಉಲ್ಲಂಘಿಸಿದ ಚಾಲಕರು ಹಾಗೂ ಸವಾರರ ವಿರುದ್ಧ 300ಕ್ಕಿಂತಲೂ ಹೆಚ್ಚು ಪ್ರಕರಣಗಳನ್ನು ದಾಖಲಿಸಿ 1.67 ಲಕ್ಷ ರು. ದಂಡ ಸಂಗ್ರಹಿಸಿದ್ದಾರೆ.

ಈ ವ್ಯಾಪ್ತಿಗಳಲ್ಲಿ ಹೆಲೆಟ್ ಧರಿಸದೇ ಚಾಲನೆ, ಸಿಗ್ನಲ್ ಜಂಪಿಂಗ್, ಪ್ರವೇಶ ನಿಷಿದ್ಧ , ಚಾಲನೆ ವೇಳೆ ಮೊಬೈಲ್ ಬಳಕೆ, ತಪ್ಪು ವಾಹನ ನಿಲುಗಡೆ, ಪಾದಚಾರಿ ಮಾರ್ಗದಲ್ಲಿ ವಾಹನ ಚಲಾವಣೆ ಮತ್ತು ತ್ರಿಬಲ್ ರೈಡಿಂಗ್ ಮಾಡುವ ವಾಹನ ಸವಾರರು ಮತ್ತು ಚಾಲಕರ ವಿರುದ್ಧ ಒಟ್ಟು 334 ಪ್ರಕರಣ ದಾಖಲಿಸಲಾಗಿದೆ.

ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡುವಂತೆ ಹಾಗೂ ಸಂಚಾರಿ ನಿಯಮಗಳ ಮಹತ್ವದ ಬಗ್ಗೆ ಅರಿವು ಮೂಡಿಸಿ ಮುಂದಿನ ದಿನಗಳಲ್ಲಿಯೂ ಸಹ ವಿಶೇಷ ಕಾರ್ಯಾಚರಣೆ ಮುಂದುವರಿಸಲಾಗುವುದು ಎಂದು ಸಂಚಾರಿ ಪೊಲೀಸರು ಎಚ್ಚರಿಸಿದ್ದಾರೆ. ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆಗಳಿಗೆ ಕಡಿವಾಣ ಹಾಕುವ ದೃಷ್ಟಿಯಿಂದ ಸಂಚಾರಿ ಪೊಲೀಸರು ವಿಶೇಷ ಕಾರ್ಯಾಚರಣೆ ಕೈಗೊಂಡು 1413 ಪ್ರಕರಣಗಳನ್ನು ದಾಖಲಿಸಿ 6.88 ಲಕ್ಷ ರು. ದಂಡ ಸಂಗ್ರಹಿಸಿದ್ದಾರೆ. ಅರ್ಜಿದಾರರ ವಾದ ಆಲಿಸಿದ ಕೋರ್ಟ್ ಇದು ಟಾಕ್ಸಿಕ್ 1, 2, 3 ತೆಗೆಯೋಕೆ ಶಾಶ್ವತ ಸೆಟ್ ಹಾಕಿದ್ದೀರಾ ಎಂದು ಪ್ರಶ್ನಿಸಿ ಎಫ್‌ಆರ್‌ಗೆ ತಡೆ ನೀಡಿ ವಿಚಾರಣೆ ಮುಂದೂಡಿದೆ.

ಶಿವಕುಮಾರ ಸ್ವಾಮೀಜಿ ಪುತ್ಥಳಿ ವಿರೂಪ: ಬಂಧನ

ಬೆಂಗಳೂರು: ಗಿರಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ವೀರಭದ್ರ ನಗರದ ಬಸ್‌ನಿಲ್ದಾಣ ಬಳಿ ಪ್ರತಿಷ್ಠಾಪಿಸಲಾಗಿದ್ದ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ಅವರ ಪುತ್ಥಳಿಯನ್ನು ವಿರೂಪಗೊಳಿಸಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಬ್ಯಾಡರಹಳ್ಳಿಯ ನಿವಾಸಿ ಶಿವ ಕುಮಾರ್ ಅಲಿಯಾಸ್ ರಾಜ್ ವಿಷ್ಣು (34) ಬಂಧಿತ ಆರೋಪಿ. ಜಯ ಜರ್ನಾಟಕ ಜನಪರ ವೇದಿಕೆ ಸಂಘಟನೆಯು ಐದು ವರ್ಷಗಳ ಹಿಂದೆ ವೀರಭದ್ರನಗರ ಬಸ್ ನಿಲ್ದಾಣ ಬಳಿ ಶಿವಕುಮಾರ ಸ್ವಾಮೀಜಿ ಅವರ ಪುತ್ಥಳಿಯನ್ನು ಅನಾವರಣಗೊಳಿಸಿತ್ತು. ಪುತ್ಥಳಿ ನಿರ್ವಹಣೆಯನ್ನು ಸಂಘಟನೆ ಮಾಡುತ್ತಿತ್ತು. ಕಳೆದ ನ.30 ರಂದು ದ್ವಿಚಕ್ರವಾಹನದಲ್ಲಿ ಅಪರಿತ ವ್ಯಕ್ತಿ ಬಂದು ಪುತ್ಥಳಿ ವಿರೂಪಗೊಳಿಸಿದ್ದ. ಈ ಸಂಬಂಧ ಸಂಘಟನೆ ಅಧ್ಯಕ್ಷ ಪರಮೇಶ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿ ಬಂಧಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಪತ್ನಿ ಕೊಂದು ತಲೆಮರೆಸಿಕೊಂಡಿದ್ದವ ಸೆರೆ

ಆನೇಕಲ್: ಸರ್ಜಾಪುರದಲ್ಲಿ ಇತ್ತೀಚಿಗೆ ನಡೆದಿದ್ದ ಅಪರಿಚಿತ ಮಹಿಳೆ ಕೊಲೆ ಪ್ರಕರಣ ಬೇಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದು ಆಕೆಯ ಪತಿಯನ್ನು ಬಂಧಿಸಿದ್ದಾರೆ. ಬಿಹಾರ ಮೂಲದ ಮಹಮದ್ ನಸೀಮ್(39) ಪತ್ನಿಯನ್ನು ಕೊಂದು ತಲೆಮರೆಸಿಕೊಂಡಿದ್ದ. ಪತ್ನಿಯ ಶೀಲ ಶಂಕಿಸಿ ಪದೇಪದೇ ಹಲ್ಲೆ ನಡೆಸುತ್ತಿದ್ದ ನಸೀಮ್ ನ. 11ರಂದು ಹೆಂಡತಿಯ ಜತೆ ಜಗಳ ಮಾಡಿ ಗಲಾಟೆ ವಿಕೋಪಕ್ಕೆ ತಿರುಗಿದಾಗ ಉಸಿರುಗಟ್ಟಿಸಿ, ಹಗ್ಗದಿಂದ ಕೈ ಕಾಲು ಕಟ್ಟಿ ಪತ್ನಿಯನ್ನು ಕೊಂದು ವಿವಸ್ತ್ರಗೊಳಿಸಿ ಚರಂಡಿಗೆ ಎಸೆದು ತಲೆಮರೆಸಿಕೊಂಡಿದ್ದ. ಶವ ಕೊಳೆತು ದುರ್ವಾಸನೆ ಬಂದಾಗ ದಾರಿಹೋಕರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಸರ್ಜಾಪುರ ಪೊಲೀಸರು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

ಚಾಲಕರಹಿತ ಮೆಟ್ರೊ ರೈಲು ಸಂಚಾರ ಜನವರಿಯಲ್ಲಿ ಶುರು

ಬೆಂಗಳೂರು: ನಮ್ಮ ಮೆಟ್ರೋದ ಚಾಲಕ ರಹಿತ ಮೆಟ್ರೋ ರೈಲು ಜನವರಿಯಿಂದ ಆರ್.ವಿ.ರೋಡ್ ಹಾಗೂ ಬೊಮ್ಮಸಂದ್ರ ಮಾರ್ಗದಲ್ಲಿ ಸಂಚಾರ ನಡೆಸಲಿದೆ ಎಂದು ಮೆಟ್ರೋ ಮೂಲಗಳು ತಿಳಿಸಿದೆ.

ಇನ್ಫೋಸಿಸ್ ಸೇರಿದಂತೆ ಸಾವಿರಾರು ಐಟಿ ಬಿಟಿ ಕಂಪನಿಗಳಿಗೆ ಈ ಮಾರ್ಗವು ಸಂಪರ್ಕ ಕಲ್ಪಿಸಲಿದ್ದು, ಚಾಲಕ ರಹಿತ ಮೆಟ್ರೋ ಮಾರ್ಗ 19.15ಕಿ.ಮೀ ಇದೆ. ಈ ಮಾರ್ಗದಲ್ಲಿ 16 ನಿಲ್ದಾಣಗಳಿದ್ದು, ಬೋಗಿಗಳಲ್ಲಿ 24 ಸಿಸಿಟಿವಿ ಅಳವಡಿಸಲಾಗಿದೆ. ಮುಂಭಾಗದಲ್ಲಿ 2 ಸಿಸಿಟಿವಿ ಇರಲಿದ್ದು, ಪ್ರಯಾಣದ ಸಂಪೂರ್ಣ ದೃಶ್ಯ ಸೆರೆ ಹಿಡಿಯಲಿದೆ. ಈ ಮೆಟ್ರೋ ಎತ್ತರಿಸಿದ ಮಾರ್ಗದಲ್ಲಿ ಸಂಚರಿಸ ಲಿದ್ದು, ರಸ್ತೆ, ಮೇಲ್ಸೇತುವೆ ಅದರ ಮೇಲ್ಭಾಗದಲ್ಲಿ ಈ ಮೆಟ್ರೋ ಸಂಚರಿಸುವ ನಿಲ್ದಾಣ ಇರಲಿದೆ.

ಮಾದಾವರ ಹಾಗೂ ನಾಗಸಂದ್ರ ಮಾರ್ಗದ ಮೆಟ್ರೋದಲ್ಲಿ ಪ್ರಯಾಣಿಕರ ಸಂಖ್ಯೆ ನಿರಾಶಾದಾಯಕವಾಗಿದ್ದು, ಹಸಿರು ಮಾರ್ಗದ ಮಾದಾವರ ಟು ಸಿಲ್ಕ್ ಇನ್‌ಸ್ಟಿಟ್ಯೂಟ್ ಮಾರ್ಗದಲ್ಲಿ ಬರುವ ನಾಗಸಂದ್ರ ಟು ಮಾದಾವರ ಮೆಟ್ರೋದಲ್ಲಿ ಪ್ರಯಾಣಿಕರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿಲ್ಲ. ಮಂಜುನಾಥನಗರ, ಚಿಕ್ಕಬಿದರಕಲ್ಲು ಮತ್ತು ಮಾದಾವರ ಮೂರು ನಿಲ್ದಾಣಗಳಿದ್ದು, ಈ ಮಾರ್ಗ 3.14-ಕಿಮೀ ದೂರ ಹೊಂದಿದೆ. ಈ ಮಾರ್ಗದಲ್ಲಿ ಮೆಟ್ರೋ ಆರಂಭವಾಗಿ ಮೂರು ವಾರಗಳಾಗಿವೆ. ಆದರೂ ಪ್ರಯಾಣಿಕರ ಸಂಖ್ಯೆ ಮಾತ್ರ ಹೆಚ್ಚುತ್ತಿಲ್ಲ.

45 ಸಾವಿರ ಪ್ರಯಾಣಿಕರ ನಿರೀಕ್ಷಿಸಿದ್ದ ನಮ್ಮ ಮೆಟ್ರೋ: ಪ್ರತಿನಿತ್ಯ ಈ ಮೂರು ಮೆಟ್ರೋ ಸ್ಟೇಷನ್‌ಗಳಿಂದ ನಮ್ಮ ಮೆಟ್ರೋ 40 ರಿಂದ 45 ಸಾವಿರ ಪ್ರಯಾಣಿಕರನ್ನು ನಿರೀಕ್ಷಿಸಿದ್ದು, ನವೆಂಬರ್ 7 ರಿಂದ 30ರ ವರೆಗೆ ಮೂರು ಸ್ಟೇಷನ್‌ಗಳಲ್ಲಿ ಪ್ರಯಾಣ ಮಾಡಿದವರ ಸರಾಸರಿ ಸಂಖ್ಯೆ 8 ರಿಂದ 11 ಸಾವಿರವಷ್ಟೇ. ಮಾದಾವರ ಮೆಟ್ರೋದಿಂದ 4 ರಿಂದ 7 ಸಾವಿರ ಪ್ರಯಾಣಿಕರು ಮಾತ್ರ ಸಂಚಾರ ಮಾಡಿದ್ದಾರೆ. ಪ್ರಯಾಣಿಕರ ಸಂಖ್ಯೆ ಹೆಚ್ಚಿಸಲು ನಮ್ಮ ಮೆಟ್ರೋವು ಹಲವು ರೀತಿಯಲ್ಲಿ ಕ್ರಮಕ್ಕೆಗೊಳ್ಳುತ್ತಿದೆ.

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ
ಸಿ.ಮಿಸ್.ನಂ.675/2024

ಅರ್ಜಿದಾರರು: ಶ್ರೀಮತಿ ಬಸಮ್ಮ ಕೋಂ ಲೇಟ್ ಪುಟ್ಟಮಾರೇಗೌಡ ವಯಸ್ಸು 65 ವರ್ಷ ವಾಸ: ಕೊಟ್ಟಗಾಳು ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಹಾಲಿ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ 2. ಗ್ರಾಮ ಲೆಕ್ಕಾಧಿಕಾರಿಗಳು, ಕೊಟ್ಟಗಾಳು ವೃತ್ತ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಅತ್ತೆ, 2 ರಿಂದ 5ನೇ ಅರ್ಜಿದಾರರ ತಾಯಿಯವರಾದ ಹೊನ್ನಮ್ಮ ಕೋಂ ಲೇಟ್ ಚಿಕ್ಕೇಗೌಡ ರವರು, ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಕೊಟ್ಟಗಾಳು ಗ್ರಾಮದಲ್ಲಿ ದಿನಾಂಕ 26.06.2016 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ: 28/01/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2024ರ ನವಂಬರ್ 25ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ದೇವುರಾವ್ ಜಾಧವ್
ವಕೀಲರು
ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ: 25/11/2024

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ ರಾಮನಗರ
ಸಿ.ಮಿಸ್.ನಂ. 12/2024

ಅರ್ಜಿದಾರರು: 1. ಗುರುಸ್ವಾಮಿ ಬಿನ್ ಲೇಟ್ ರೇವಣ್ಣ ವಯಸ್ಸು 50 ವರ್ಷ 2. ಮಂಜುಳ ಕೋಂ ಲೇಟ್ ಶಂಕರ್ ವಿಭೂತಿಕೆರೆ ಗ್ರಾಮ, ಅಂಜನಪುರ ಅಂಚೆ ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ

ವಿರುದ್ಧ

ಎದುರುದಾರರು: ತಹಶೀಲ್ದಾರ್ ರವರು, ರಾಮನಗರ ರಾಮನಗರ ತಾಲ್ಲೂಕು,

ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರ 1ನೇ ಅರ್ಜಿದಾರರ ತಾಯಿಯವರಾದ ಹಾಗೂ 2ನೇ ಅರ್ಜಿದಾರರ ಅತ್ತೆಯವರಾದ ಶ್ರೀಮತಿ ಬಸಮ್ಮ ಕೋಂ ಲೇಟ್ ರೇವಣ್ಣ ರವರು, ದಿನಾಂಕ 21/12/2024 ರಂದು ವಿಭೂತಿಕೆರೆ ಗ್ರಾಮ, ಕೈಲಾಂಚ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ಇಲ್ಲಿ ನಿಧನರಾಗಿರುತ್ತಾರೆಂದು, ಈ ಸಂಬಂಧ ಅರ್ಜಿದಾರರು ತಮ್ಮ ತಾಯಿಯವರ ಮರಣ ಸಮರ್ಥನಾ ಪ್ರಮಾಣ ಪತ್ರವನ್ನು ಕೋರಿ ನ್ಯಾಯಾಲಯದಲ್ಲಿ ಈ ಸರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯು ದಿನಾಂಕ 30/12/2024 ರಂದು ಬೆಳಿಗ್ಗೆ 11.00 ಗಂಟೆಗೆ ವಿಚಾರಣೆಗೆ ಇದ್ದು, ಅಂದು ಯಾರಾದರೂ ತಕರಾರು ಸಲ್ಲಿಸುವವರು ಹಾಗೂ ಆಸಕ್ತಿಯುಳ್ಳವರು ಇದ್ದರೆ ಮಾನ್ಯ ಘನ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಸುವುದು, ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯುವುದು.

ನ್ಯಾಯಾಲಯದ ಆದೇಶ ಹಾಗೂ ಅಪ್ಪಣೆ ಮೇರೆಗೆ ದಿನಾಂಕ: 03/12/02024 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಬರೆಯಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಮನಗರ

ಅರ್ಜಿದಾರರ ಪರ ವಕೀಲರು
ಚೇತನ್ ಎಸ್.ಎಲ್.ಬಿ.ಎ.ಎಲ್.ಎಲ್.ಬಿ
ವಕೀಲರು, ಕನಕಪುರ
ಸ್ಥಳ : ರಾಮನಗರ
ದಿನಾಂಕ: 03/12/2024

बैंक ऑफ़ बड़ौदा
Bank of Baroda

ವೈಟ್‌ಫೀಲ್ಡ್ ಮುಖ್ಯ ರಸ್ತೆ ಶಾಖೆ
ನಂ. 274, ಮೊದಲ ಮಹಡಿ, ವೈಟ್‌ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು 560066 ದೂರವಾಣಿ ಸಂಖ್ಯೆ: 080-28451915/28452286
ಇ-ಮೇಲ್: vjwhit@bankofbaroda.co.in

ಲಾಕರ್ ಓಪನ್ ನೋಟಿಸ್

ಈ ಕೆಳಗಿನ **ಬ್ಯಾಂಕ್ ಆಫ್ ಬರೋಡಾ, ವೈಟ್‌ಫೀಲ್ಡ್ ಮುಖ್ಯ ರಸ್ತೆ ಶಾಖೆ, ಬೆಂಗಳೂರಿನಲ್ಲಿ** ಬಾಡಿಗೆಗೆ ಲಾಕರ್‌ಗಳನ್ನು ತೆಗೆದುಕೊಂಡಿರುವ ಮತ್ತು ಒಪ್ಪಂದದ ಉಲ್ಲಂಘನೆ ಮಾಡಿದ ನಮ್ಮ ಮೌಲ್ಯಯುತ ಗ್ರಾಹಕರ ಗಮನಕ್ಕೆ ಈ ಪ್ರಕಟಣೆ ನೀಡಲಾಗಿದೆ. ಆರ್‌ಬಿಐ/ಬ್ಯಾಂಕ್‌ನ ಮಾರ್ಗಸೂಚಿಗಳ ಪ್ರಕಾರ ಲಾಕರ್ ಬಾಡಿಗೆ ಪಡೆದಿರುವವರ ದಾಖಲಾದ ವಿಳಾಸಗಳಲ್ಲಿ ಕಳುಹಿಸಲಾದ ನೋಟೀಸ್‌ಗಳನ್ನು ನಮೂದಿಸಿದ ವ್ಯಕ್ತಿ/ವ್ಯಕ್ತಿ/ಗಳ ವಿಳಾಸಗಳು ಕಂಡುಬಂದಿಲ್ಲ ಅಥವಾ ಕೈಬಿಡಲಾಗಿದೆ ಎಂದು ತಲುಪದೇ ಹಿಂದಿರುಗಿದೆ. ಲಾಕರ್ ಹೋಲ್ಡರ್‌ಗಳನ್ನು ಅವರು ಪ್ರಸ್ತುತ ಇರುವಲ್ಲಿ ಖುದ್ದಾಗಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಹೀಗಾಗಿ ಯಾವುದೇ ಪರ್ಯಾಯವಿಲ್ಲದೆ, ಶಾಖೆಯನ್ನು ಸಂಪರ್ಕಿಸಲು ಮತ್ತು 15 ದಿನಗಳ ಅವಧಿಯಲ್ಲಿ ಬ್ಯಾಂಕ್‌ನ ಬಾಕಿಗಳನ್ನು ಪಾವತಿಸಲು ಕೆಳಗೆ ಹೆಸರಿಸಲಾದ ವ್ಯಕ್ತಿಗೆ ಸೂಚನೆಯನ್ನು ನೀಡಲಾಗುತ್ತಿದೆ. ವಿಫಲವಾದರೆ ಬಾಡಿಗೆ ಪಡೆದವರ ವೆಚ್ಚದಲ್ಲೇ, ಜಾಗ್ರತೆ ಮತ್ತು ಜವಾಬ್ದಾರಿಯಿಂದ ಲಾಕರ್ ಅನ್ನು ಮುರಿಯಲು ಬ್ಯಾಂಕ್ ಮುಂದುವರಿಯುತ್ತದೆ ಹಾಗೂ ಬಾಕಿ ಉಳಿದಿರುವ ಬಾಡಿಗೆ ವೆಚ್ಚ ಮತ್ತು ಇತರ ಶುಲ್ಕಗಳ ಮರುಪಡೆಯುವಿಕೆಗೆ ಬ್ಯಾಂಕ್ ತನ್ನ ಹಕ್ಕನ್ನು ಚಲಾಯಿಸುತ್ತದೆ.

ಶಾಖೆ: ವೈಟ್‌ಫೀಲ್ಡ್ ಮುಖ್ಯ ರಸ್ತೆ ಶಾಖೆ,

ಲಾಕರ್ ಹೊಂದಿರುವವರ ಹೆಸರು	ಲಾಕರ್ ಸಂಖ್ಯೆ	ಬಾಕಿಯಿರುವ ಮೊತ್ತ	ಬ್ರೇಕ್ ಓಪನ್ ದಿನಾಂಕ ಮತ್ತು ಸಮಯ
ರಾಮನ್ನೈ ಆರ್ ಪಟೇಲ್ 59 ಬಿ, 1ನೇ ಕ್ರಾಸ್, 3ನೇ ಮುಖ್ಯ ರಸ್ತೆ, ಪ್ರಶಾಂತ್ ಎಕ್ಸಟೆನ್ಷನ್, ಹೋಪೆಟಾರ್ಮ್ ವೈಟ್‌ಫೀಲ್ಡ್ ಹತ್ತಿರ, ಬೆಂಗಳೂರು 560066.	8951AX0009 (Old No OA75S0009)	ರೂ. 13,688.00	20.12.2024 ಮಧ್ಯಾಹ್ನ 3.00
ಪ್ರಿಯಾ ಲಕ್ಷ್ಮಿ ಆನಂದ್ 184/2 ವೈಟ್‌ಫೀಲ್ಡ್ ಮುಖ್ಯ ರಸ್ತೆ, ವರ್ತೂರು, ಕೋಡಿ ವೈಟ್‌ಫೀಲ್ಡ್, ಬೆಂಗಳೂರು-560066.	8951DX0038 (Old No OD40SN0238)	ರೂ. 22,538.00	20.12.2024 ಮಧ್ಯಾಹ್ನ 3.00

ದಿನಾಂಕ: 05.12.2024
ಸ್ಥಳ: ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

ಫಾರ್ಮ್ ನಂ. INC- 26

(ಕಂಪನಿಗಳ ನಿಯಮ 30 (ಸಂಘಟನೆ) ನಿಯಮಗಳ ಅನುಸಾರ 2014) ಕಂಪನಿಗಳ ನೋಂದಾಯಿತ ಕಚೇರಿಯನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಬದಲಾಯಿಸಲು ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಿಸಲಾಗುವುದು ಆಗ್ನೇಯ ವಲಯದ ಗೌರವಾನ್ವಿತ ಪ್ರಾದೇಶಿಕ ನಿರ್ದೇಶಕರ ಮುಂದೆ ಕಂಪನಿಗಳ ಕಾಯಿದೆ 2013 ರ ಸೆಕ್ಷನ್ 13 ರ ಉಪ-ವಿಭಾಗ 4ರ ವಿಷಯದಲ್ಲಿ ಮತ್ತು ಕಂಪನಿಗಳ (ಸಂಘಟನೆ) ನಿಯಮಗಳು 2014ರ ನಿಯಮ 30ರ ಉಪ-ವಿಭಾಗ (5) ನೆ ಷರತ್ತು (ಎ) ಮತ್ತು ಎನ್ವಾಕ್ ಎನ್ವಿರೋನ್‌ಮೆಂಟಲ್ ಟೆಕ್ನೋಲಾಜಿ ಪ್ರೈವೇಟ್ ಲಿಮಿಟೆಡ್
(CIN: U72200KA2008PTC045465)

ವಿಷಯದಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ನಂ.1132, 1ನೇ ಬ್ಲಾಕ್, 6ನೇ 'ಎ' ಮೈನ್, 4ನೇ ಕ್ರಾಸ್, ಬಿ.ಟಿ.ಎಮ್. 4ನೇ ಹಂತ, ಬೆಂಗಳೂರು, ಕರ್ನಾಟಕ, ಭಾರತ, 560076, ಮನವಿದಾರರು ಇವರ ವಿಷಯದಲ್ಲಿ

ನವೆಂಬರ್ 30, 2024,ರಂದು ನಡೆದ ವಿಶೇಷ ಮಹಾಸಭೆಯಲ್ಲಿ ಅನುಮೋದಿಸಲ್ಪಟ್ಟ ವಿಶೇಷ ನಿರ್ಣಯದ ಪ್ರಕಾರ ಕಂಪೆನಿಯ ನೋಂದಾಯಿತ ಕಛೇರಿಯನ್ನು " ಕರ್ನಾಟಕ ರಾಜ್ಯ" ದಿಂದ " ಮಹಾರಾಷ್ಟ್ರ ರಾಜ್ಯ" ಕ್ಕೆ ಬದಲಾಯಿಸಲು ಅನುವಾಗುವಂತೆ, ಕಂಪನಿಯ ಮೆಮೊರಾಂಡಮ್ ಆಫ್ ಅಸೋಸಿಯೇಷನ್ ಮಾರ್ಪಾಡಿಗೆ ದೃಢೀಕರಣ ಕೋರಿ 2013ರ ಕಂಪನಿಯ ಕಾಯಿದೆಯ ಕಲಂ 13ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸುವ ಪ್ರಸ್ತಾವನೆ ಹೊಂದಿರುವುದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

ಕಂಪನಿಯ ನೋಂದಾಯಿತ ಕಛೇರಿಯ ಪ್ರಸ್ತಾವಿತ ಬದಲಾವಣೆಯಿಂದ ಯಾವುದೇ ವ್ಯಕ್ತಿಯ ಆಸಕ್ತಿಗೆ ಪರಿಣಾಮ ಬೀರಬಹುದಾದರೇ, ಅಂತಹ ವ್ಯಕ್ತಿಯು ತಮ್ಮ ಆಕ್ಷೇಪಣೆಯನ್ನು MCA-21 ಪೋರ್ಟಲ್‌ನಲ್ಲಿ (www.mca.gov.in) ಹೂಡಿಕೆದಾರರ ದೂರು ನಮೂನೆಯನ್ನು ಸಲ್ಲಿಸುವುದರ ಮೂಲಕ ಅಥವಾ ತಮ್ಮ ಆಕ್ಷೇಪಣೆ ಮತ್ತು ಅದನ್ನು ಬೆಂಬಲಿಸುವ ಅಫಿಡವಿಟ್ ಪ್ರತಿಯನ್ನು ಪ್ರಾದೇಶಿಕ ನಿರ್ದೇಶಕ, ಆಗ್ನೇಯ ವಲಯ, 3ನೇ ಮಹಡಿ, ಕಾರ್ಪೋರೇಟ್ ಭವನ, ಬಂಡ್ಲಗುಡ, ನಾಗೋಲ್, ತಟ್ಟಿಅನ್ನಾರಂ ಗ್ರಾಮ, ಹಯಾತ್ ನಗರ ಮಂಡಲ್, ರಂಗಾರೆಡ್ಡಿ ಜಿಲ್ಲೆ, ಹೈದರಾಬಾದ್ -500068, ತೆಲಂಗಾಣ. ಇವರಿಗೆ ಲಿಖಿತರೂಪದಲ್ಲಿ ಈ ಪ್ರಕಟಣೆಯ ಹದಿನಾಲ್ಕು ದಿನಗಳ ಒಳಗೆ ನೀಡಬೇಕಾಗಿ ಮತ್ತು ಅದರ ಜೊತೆಗೆ ಒಂದು ಪ್ರತಿಯನ್ನು ಕಂಪನಿಯ ನೋಂದಾಯಿತ ಕಚೇರಿಗೆ ಕೆಳಗೆ ನಮೂದಿಸಿದ ವಿಳಾಸಕ್ಕೆ ತಲುಪಿಸುವುದು.

ಅರ್ಜಿದಾರರ ನೋಂದಾಯಿತ ಕಚೇರಿಯ ವಿಳಾಸ: ನಂ.1132, 1ನೇ ಬ್ಲಾಕ್, 6ನೇ 'ಎ' ಮೈನ್, 4ನೇ ಕ್ರಾಸ್, ಬಿ.ಟಿ.ಎಮ್. 4ನೇ ಹಂತ, ಬೆಂಗಳೂರು, ಕರ್ನಾಟಕ-560076, ಭಾರತ.

ಎನ್ವಾಕ್ ಎನ್ವಿರೋನ್‌ಮೆಂಟಲ್ ಟೆಕ್ನೋಲಾಜಿ ಪ್ರೈವೇಟ್ ಲಿಮಿಟೆಡ್
(ಅರ್ಜಿದಾರ) ಪರವಾಗಿ

ಸಹಿ/- ವಿನೋದ್ ಸಹದೇವ್ ಅಬ್ರೇಕರ್
ನಿರ್ದೇಶಕರು : DIN: 09513362

ದಿನಾಂಕ: 05-12-2024
ಸ್ಥಳ : ಬೆಂಗಳೂರು

AFFIDAVIT

I, Mahaveer.B.V S/o late Veenjaraj major in age R/at : Near Kengal Siddeshwara Temple, Arasikere, Hassan -573103 I Submit that I am the owner of the property bearing S R No.560 Flat No.50 measuring 1200 sqft Situated at : Kotagondapalli village, Hosur Taluk, Krishnagiri Dist ,said Sale Deed was registered in office of Kelamangala Sub rigister office, Hosur Taluk Document No: 1739/1943 Deed date :17-09-1943 the said document was in my custody but the said original document was lost on date : 02-06-2024 when I was in Arasikere KSRTC Bus Stop I was lost the original document , with best efforts I could not able to trace the same, I am swearing this affidavit to produce the same before concerned Police, authorities to lodge the complaint vide PO No 1363112/2024 for seeking necessary relief.

Sworn to before me
S/d -**Muniswamy**
Advocate and Notary
Anekal Town. Mobile-9448610452

ಸಲ್ಮಾನ್ ಖಾನ್ ವಿರುದ್ಧ ದುಷ್ಕೃತ್ಯಕ್ಕೆ ಶಸ್ತ್ರಾಸ್ತ್ರ ಸಂಗ್ರಹ ಆರೋಪ, ನ್ಯಾಯಾಲಯಕ್ಕೆ ಹಾಜರು

ಡಿ.9ರವರೆಗೆ ಶಂಕಿತ ಉಗ್ರ ಎನ್‌ಐಎ ವಶಕ್ಕೆ

ಬೆಂಗಳೂರು: ಭಯೋತ್ಪಾದಕ ಕೃತ್ಯವೆಸಗಲು ಶಸ್ತ್ರಾಸ್ತ್ರ ಸಂಗ್ರಹಣೆ ಆರೋಪ ಸಂಬಂಧ ನಿಷೇಧಿತ ಲಷ್ಕರ್-ಎ-ತೋಯ್ಬಾ ಉಗ್ರ ಸಂಘಟನೆಯ ಶಂಕಿತ ಉಗ್ರನನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ)ದ ಅಧಿಕಾರಿಗಳು ಗುರುವಾರ ನ್ಯಾಯಾಲಯಕ್ಕೆ ಹಾಜರುಪಡಿಸಿ ಡಿ.9ರವರೆಗೆ ತಮ್ಮ ಕಸ್ಟಡಿಗೆ ಪಡೆದು ವಿಚಾರಣೆ ಆರಂಭಿಸಿದ್ದಾರೆ.

ಆಫ್ರಿಕಾ ಖಂಡದ ರುವಾಂಡಾ ದೇಶದಿಂದ ಎನ್‌ಐಎ ಹಾಗೂ ಜಾಗತಿಕ ತನಿಖಾ ಸಂಸ್ಥೆಗಳ ನೆರವಿನಿಂದ ನವೆಂಬರ್ 27ರಂದು ಸಲ್ಮಾನ್ ಖಾನ್ ಎಂಬಾತನನ್ನು ವಶಕ್ಕೆ ಪಡೆದುಕೊಳ್ಳಲಾಗಿತ್ತು. ಕಾನೂನು ಪ್ರಕ್ರಿಯೆ ಪೂರ್ಣಗೊಂಡ ಬಳಿಕ ನಗರದ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿ ಎನ್‌ಐಎ ವಶಕ್ಕೆ ಪಡೆದುಕೊಂಡಿದೆ.

ಸಲ್ಮಾನ್ ಖಾನ್ ವಿರುದ್ಧದ ಆರೋಪಗಳೇನು?: ನಗರದ ನಾಗೇನಹಳ್ಳಿ ಚರ್ಚ್ ಸಮೀಪ ವಾಸವಾಗಿದ್ದ ಸಲ್ಮಾನ್ ಖಾನ್ ಲಷ್ಕರ್-ಎ-ತೊಯ್ಬಾದ ಸದಸ್ಯನಾಗಿದ್ದ. ಜತೆಗೆ, ಬೆಂಗಳೂರಲ್ಲಿ ಭಯೋತ್ಪಾದಕ ಚಟುವಟಿಕೆಗಳಿಗೆ ಶಸ್ತ್ರಾಸ್ತ್ರ, ಮದ್ದುಗುಂಡುಗಳು ಮತ್ತು ಸ್ಫೋಟಕಗಳನ್ನು ಒದಗಿಸುವಲ್ಲಿ ತೊಡಗಿದ್ದ ಎಂಬ ಆರೋಪವಿದೆ. ಪೋಕ್ಸೋ ಪ್ರಕರಣವೊಂದರಲ್ಲಿ ಶಿಕ್ಷೆಗೆ ಗುರಿಯಾಗಿದ್ದ ಸಲ್ಮಾನ್ 2018ರಿಂದ 2022ರವರೆಗೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ. ಜೈಲಿನಲ್ಲಿ ಸಲ್ಮಾನ್‌ಗೆ ಭಯೋತ್ಪಾದಕ ಪ್ರಕರಣಗಳ ಆರೋಪಿ ಟಿ.ನಾಸೀರ್ ಪರಿಚಯವಾಗಿತ್ತು. ಬಳಿಕ ಸಲ್ಮಾನ್ ಸೇರಿದಂತೆ ಕೆಲ ಸಹ ಕೈದಿಗಳ ಬ್ರೈನ್‌ವಾಶ್ ಮಾಡಿದ್ದ ನಾಸೀರ್, ಭಯೋತ್ಪಾದನೆಯೆಡೆಗೆ ಸೆಳೆದಿದ್ದ. ಶಿಕ್ಷೆ ಮುಗಿಸಿ ಹೊರಬಂದ ಬಳಿಕ ಸಲ್ಮಾನ್, ಟಿ.ನಾಸೀರ್ ಅಣತಿಯಂತೆ ಸಹಚರರ ಸಹಾಯದಿಂದ ಬೆಂಗಳೂರಿನಲ್ಲಿ ಉಗ್ರ ಕೃತ್ಯಗಳನ್ನು ಸಂಘಟಿಸಲು ಶಸ್ತ್ರಾಸ್ತ್ರ, ಸ್ಫೋಟಕಗಳ ಸಂಗ್ರಹಣೆಯಲ್ಲಿ ತೊಡಗಿದ್ದ ಎಂದು ಕಳೆದ ವರ್ಷ ಜುಲೈ ತಿಂಗಳಲ್ಲಿ ಬೆಂಗಳೂರಿನ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಂತರ ಎನ್‌ಐಎ ಅಧಿಕಾರಿಗಳು ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡಿದ್ದರು.



ರುವಾಂಡಾ ದೇಶದಲ್ಲಿ ಸೆರೆ: ಪ್ರಕರಣ ದಾಖಲಾಗುತ್ತಿದ್ದಂತೆ ಪರಾರಿಯಾಗಿದ್ದ ಸಲ್ಮಾನ್ ಪತ್ತೆಗಾಗಿ ರೆಡ್ ಕಾರ್ನರ್ ನೋಟಿಸ್ ಜಾರಿಗೊಳಿಸುವಂತೆ ಎನ್‌ಐಎ ಅಧಿಕಾರಿಗಳು ಸಿಬಿಐಗೆ ಮನವಿ ಸಲ್ಲಿಸಿದ್ದರು. ಅದರನ್ವಯ ಜಾಗತಿಕ ತನಿಖಾ ಸಂಸ್ಥೆಗಳ ಮೂಲಕ ಆರೋಪಿಯ ಪತ್ತೆಗೆ ಅನುಕೂಲವಾಗುವಂತೆ ರೆಡ್ ಕಾರ್ನರ್ ನೋಟಿಸ್ ಜಾರಿಗೊಳಿಸುವಂತೆ ಕಳೆದ ಆಗಸ್ಟ್‌ನಲ್ಲಿ ಸಿಬಿಐ ಅಧಿಕಾರಿಗಳು ಇಂಟರ್‌ಪೋಲ್‌ಗೆ ಶಿಫಾರಸು ಮಾಡಿದ್ದರು. ರುವಾಂಡಾದಲ್ಲಿದ್ದ ಆರೋಪಿಯನ್ನ ಕಿಗಾಲಿಯಿಯ ಇಂಟರ್‌ಪೋಲ್ ಅಧಿಕಾರಿಗಳ ನೆರವಿನೊಂದಿಗೆ ಬಂಧಿಸಲಾಗಿದೆ. ಎನ್‌ಐಎ ಅಧಿಕಾರಿಗಳ ಭದ್ರತೆಯೊಂದಿಗೆ ನವೆಂಬರ್ 28ರಂದು ಆರೋಪಿಯನ್ನು ರವಾಂಡದಿಂದ ಭಾರತಕ್ಕೆ ಕರೆತರಲಾಗಿದೆ ಎಂದು ಸಿಬಿಐ ಪ್ರಕಟಣೆ ತಿಳಿಸಿತ್ತು.

ಸಮಾಚಾರ ಸಣ್ಣದಲ್ಲ

ಪುಸ್ತಕ ಬಹುಮಾನಕ್ಕೆ ಆಸಕ್ತರಿಂದ ಆಹ್ವಾನ

ಬೆಂಗಳೂರು: ಕರ್ನಾಟಕ ಬಯಲಾಟ ಅಕಾಡೆಮಿಯು ಬಯಲಾಟ ಕಲಾಪ್ರಕಾರಗಳಾದ (ಸಣ್ಣಾಟ, ದೊಡ್ಡಾಟ, ಕೃಷ್ಣ ಪಾರಿಜಾತ, ತೊಗಲುಗೊಂಬೆ) ಕಲಾಪ್ರಕಾರಗಳಿಗೆ ಸಂಬಂಧಿಸಿದಂತೆ 2022 ಹಾಗೂ 2023ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಆಯ್ಕೆ ಮಾಡಲು ಲೇಖಕರು ಮತ್ತು ಪ್ರಕಾಶರಿಂದ ಅರ್ಜಿ ಆಹ್ವಾನಿಸಿದೆ. ಆಯ್ಕೆಯಾದ ಪುಸ್ತಕಕ್ಕೆ 25,000 ರು.ಗಳ ಬಹುಮಾನವನ್ನು ನೀಡಲಾಗುವುದು. ಬಯಲಾಟದ ವಿವಿಧ ಬಗ್ಗೆ ಸಂಗೀತ, ಅಭಿನಯ, ಸಂಶೋಧನಾ, ವಿಮರ್ಶೆ, ಜೀವನಚರಿತ್ರೆ, ಪ್ರಸಂಗ ಪುಸ್ತಕ ಇತ್ಯಾದಿ ಪ್ರಕಾರಗಳನ್ನು ಒಳಗೊಂಡ ಪುಸ್ತಕಗಳನ್ನು ಬಹುಮಾನಕ್ಕಾಗಿ ಆಹ್ವಾನಿಸಿದೆ. ಪುಸ್ತಕ ಬಹುಮಾನಕ್ಕೆ ಸಲ್ಲಿಸುವ ಪುಸ್ತಕವನ್ನು ಪಠ್ಯಕ್ಕಾಗಿ ಸಿದ್ಧಪಡಿಸಿರಬಾರದು ಹಾಗೂ ಸಂಪಾದಿತ ಕೃತಿ ಅಥವಾ ಅಭಿನಂದನಾ ಕೃತಿಯಾಗಿರಬಾರದು, ಸ್ವರಚಿತವಾಗಿರಬೇಕು. ಪ್ರಥಮ ಮುದ್ರಣ ಆವೃತ್ತಿಯಾಗಿರಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ 08354235070 ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದೆ.

ಸೈನ್ಸ್ ಇನ್ ಆಕ್ಷನ್ ಬಗ್ಗೆ 3 ದಿನ ಪ್ರದರ್ಶನ

ಬೆಂಗಳೂರು: ಬೆಂಗಳೂರಿನ ಜವಾಹರಲಾಲ್ ನೆಹರು ತಾರಾಲಯದ ಆವರಣದಲ್ಲಿ ಡಿ.6ರಿಂದ 8ರವರೆಗೆ ಸೈನ್ಸ್ ಇನ್ ಆಕ್ಷನ್ ಕುರಿತು ಮೂರು ದಿನಗಳ ಪ್ರದರ್ಶನ ಆಯೋಜಿಸಲಾಗಿದೆ. ಈ ಪ್ರದರ್ಶನದಲ್ಲಿ ಹಲವು ಶಾಲೆಗಳು ತಮ್ಮ ಮಾದರಿಗಳನ್ನು ಪ್ರದರ್ಶಿಸಲಿದ್ದಾರೆ. ಪ್ರದರ್ಶನದಲ್ಲಿ ವರ್ಣರಂಜಿತ ವಿದ್ಯುದ್ವಿಭಜನೆ, ವಿಸ್ಕಸ್ ಫಿಂಗರಿಂಗ್, ಭೂಕಂಪಗಳು ಮತ್ತು ಅನುರಣನ ಮತ್ತು ಸಂವಹನ ಕೋಶಗಳು ಸೇರಿದಂತೆ ವಿವಿಧ ಪ್ರೌಢಶಾಲೆಗಳ ಅತ್ಯುತ್ತಮ 25 ಪ್ರದರ್ಶನಗಳನ್ನು ಪ್ರದರ್ಶನಕ್ಕಾಗಿ ಆಯ್ಕೆ ಮಾಡಿದೆ. ಈ ಪ್ರದರ್ಶನವನ್ನು ಬೆಂಗಳೂರಿನ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯದ ನಿರ್ದೇಶಕರಾದ ಕೆ.ಸಾಜೂ ಭಾಸ್ಕರನ್ ಅವರು ಶುಕ್ರವಾರ ಬೆಳಗ್ಗೆ 9.30ಕ್ಕೆ ಉದ್ಘಾಟಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಡಿ.ಉಮಾಪತಿಗೆ ಪತ್ರಿಕೋದ್ಯಮ ಪ್ರಶಸ್ತಿ

ಬೆಂಗಳೂರು: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪ್ರಸಕ್ತ ವರ್ಷದಿಂದ ಪ್ರಾರಂಭಿಸಿರುವ ವಡ್ಡರ್ಸೆ ರಘುರಾಮಶೆಟ್ಟಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ ಪ್ರಶಸ್ತಿಗೆ ಪತ್ರಕರ್ತ ಡಿ.ಉಮಾಪತಿ ಅವರನ್ನು ಆಯ್ಕೆ ಮಾಡಿ ಸರಕಾರ ಆದೇಶ ಹೊರಡಿಸಿದೆ ಎಂದು ಇಲಾಖೆಯ ಆಯುಕ್ತ ಹೇಮಂತ್ ಎಂ.ನಿಂಬಾಳ್ಕರ್ ತಿಳಿಸಿದ್ದಾರೆ. ಪತ್ರಿಕೋದ್ಯಮದಲ್ಲಿ ಸಾಮಾಜಿಕ ನ್ಯಾಯ ಕುರಿತು ವರದಿ, ವಿಶೇಷ ಲೇಖನಗಳ ಪ್ರಕಟಣೆಯನ್ನು ಗುರುತಿಸಿ, ಗೌರವಿಸುವ ಉದ್ದೇಶದಿಂದ ಮುಖ್ಯಮಂತ್ರಿಯವರು 2024ರ ಆಯವ್ಯಯದಲ್ಲಿ ಹಿರಿಯ ಪತ್ರಕರ್ತ ವಡ್ಡರ್ಸೆ ರಘುರಾಮಶೆಟ್ಟಿ ಅವರ ಹೆಸರಿನಲ್ಲಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ ಪ್ರಶಸ್ತಿ ಘೋಷಿಸಿದ್ದರು. ನ್ಯಾ. ಅಶೋಕ ಹಿಂಚಿಗೇರಿ ಅವರ ಅಧ್ಯಕ್ಷತೆಯಲ್ಲಿ ರಚನೆಯಾಗಿದ್ದ ಪ್ರಶಸ್ತಿ ಆಯ್ಕೆ ಸಮಿತಿಯು ಒಮ್ಮತದಿಂದ ಹಿರಿಯ ಪತ್ರಕರ್ತ ಡಿ.ಉಮಾಪತಿಯವರನ್ನು ವಡ್ಡರ್ಸೆ ರಘುರಾಮಶೆಟ್ಟಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ ಪ್ರಶಸ್ತಿಗೆ ಆಯ್ಕೆ ಮಾಡಿತ್ತು. ಪ್ರಶಸ್ತಿಯು 2 ಲಕ್ಷ ರು.ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

ಕಲಾವೈಭವ ಪ್ರದರ್ಶನ, ಮಾರಾಟ 14, 15ರಂದು

ಬೆಂಗಳೂರು: ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಿಲ್ಲಾ ಕೈಗಾರಿಕಾ ಕೇಂದ್ರದ ಸಹಯೋಗದೊಂದಿಗೆ 'ಕಲಾ ವೈಭವ' ಎಂಬ ಎರಡು ದಿನಗಳ ಪ್ರದರ್ಶನ ಮತ್ತು ಮಾರಾಟವನ್ನು ಆಯೋಜಿಸಿದೆ. ಡಿ.14, 15ರಂದು ಬನಶಂಕರಿ ಮೂರನೇ ಹಂತದಲ್ಲಿರುವ ಶ್ರೀಹರಿ ಕಲ್ಯಾಣ ಮಂಟಪದಲ್ಲಿ ಪ್ರದರ್ಶನವನ್ನು ಆಯೋಜಿಸಲಾಗಿದೆ. ಮಹಿಳಾ ಗುಂಪುಗಳಿಂದ ರಚಿಸಲಾದ ವಿಶಿಷ್ಟ ಮತ್ತು ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಪ್ರದರ್ಶಿಸಲಿದೆ. ಈ ವಸ್ತು ಪ್ರದರ್ಶನವು ವಿಶೇಷವಾಗಿ ಮಹಿಳೆಯರ ಸೃಜನಶೀಲತೆ, ಕೌಶಲ್ಯತೆ ಮತ್ತು ಉದ್ಯಮಶೀಲತೆಯ ಮನೋಭಾವವನ್ನು ಗುರುತಿಸಿ, ಅವರ ವಸ್ತು-ಕೆಲಸವನ್ನು ಬೆಂಬಲಿಸುವ ಮತ್ತು ಉತ್ತೇಜಿಸುವ ವೇದಿಕೆಯಾಗಿದೆ. ಕಲಾವೈಭವ - ಮಹಿಳಾ ಗುಂಪುಗಳಿಂದ ರಚಿಸಲಾದ ಅನನ್ಯ ಮತ್ತು ಉತ್ತಮ-ಗುಣಮಟ್ಟದ ಉತ್ಪನ್ನಗಳನ್ನು ಪ್ರದರ್ಶಿಸುವ ವಿಶೇಷ ಪ್ರದರ್ಶನ ಮತ್ತು ಮಾರಾಟ ಈ ಪ್ರದರ್ಶನದ ವಿಶೇಷತೆಯಾಗಿದೆ. ಕಲಾವೈಭವನಲ್ಲಿ - ಕೈಯಿಂದ ಮಾಡಿದ ಕರಕುಶಲ ವಸ್ತುಗಳು, ಜವಳಿಗಳು, ಸಾವಯವ ವಸ್ತುಗಳು, ಕಲಾತ್ಮಕ ರಚನೆಗಳು ಮತ್ತು ಗೃಹಾಲಂಕಾರಗಳು ಸೇರಿದಂತೆ ವಿವಿಧ ಶ್ರೇಣಿಯ ಉತ್ಪನ್ನಗಳ ಪ್ರದರ್ಶನವಿರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

{ ರಮೇಶ ಜಾರಕಿಹೊಳಿ } ಶಾಸಕ

ಹುಡುಗಾಟದ ಬುದ್ಧಿಯುಳ್ಳ ಮತ್ತು ಚಿಕ್ಕ ವಯಸ್ಸಿನ ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸೂಕ್ತವಲ್ಲ. ಅವರು ಅಧ್ಯಕ್ಷ ಸ್ಥಾನ ಬಿಟ್ಟುಕೊಡಬೇಕು. ಹೋರಾಟದ ಮೂಲಕ ಯಡಿಯೂರಪ್ಪ ರಾಜಕೀಯದಲ್ಲಿ ದೊಡ್ಡ ಸ್ಥಾನಕ್ಕೇರಿದ್ದಾರೆ. ಆದರೆ, ಯಡಿಯೂರಪ್ಪ ಅವರ ಪುತ್ರ ಎಂಬ ಕಾರಣಕ್ಕೆ ವಿಜಯೇಂದ್ರ ಅಧ್ಯಕ್ಷರಾಗಿದ್ದಾರೆ. ಅವರಿಂದ ಯಡಿಯೂರಪ್ಪ ಅವರ ಹೋರಾಟ ಮತ್ತು ತ್ಯಾಗವೂ ಮಂಕಾಗುತ್ತದೆ.



ನಾವ್ಯಾರೂ ರಾಜಕೀಯದಲ್ಲಿ ಇರುವುದೇ ಬೇಡವೇ?: ಡಾ.ಪರಮೇಶ್ವರ ಅಸಮಾಧಾನ

ಅಧಿಕಾರ ಹಂಚಿಕೆ ಸೂತ್ರ ಹೇಳಿಕೆಗೆ ಪರಂ ಗರಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿರುವ 'ಒಪ್ಪಂದ ರಾಜಕೀಯ'ದ ಹೇಳಿಕೆಗೆ ಪಕ್ಷದ ಹಲವು ನಾಯಕರು ಒಳಗೊಳಗೆ ಅಸಮಾಧಾನ ಹೊರಹಾಕಿದ್ದಾರೆ. ಆದರೆ ಒಪ್ಪಂದವಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಡಾ.ಜಿ.ಪರಮೇಶ್ವರ ಬಹಿರಂಗವಾಗಿಯೇ ಅಸಮಾಧಾನ ಹೊರಹಾಕಿರುವುದು ಹೊಸ ವಿವಾದಕ್ಕೆ ನಾಂದಿಹಾಡಿದೆ.

ಹಾಸನ ಜನಕಲ್ಯಾಣ ಸಮಾವೇಶಕ್ಕೆ ತೆರಳುವ ಮೊದಲು ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಡಾ.ಜಿ. ಪರಮೇಶ್ವರ, ರಾಜ್ಯದಲ್ಲಿ ಅಧಿಕಾರ ಹಂಚಿಕೆ ಬಗ್ಗೆ ಒಪ್ಪಂದವಾಗಿರುವ ವಿಚಾರ ನನಗೆ ಗೊತ್ತಿಲ್ಲ. ಒಪ್ಪಂದ ಆಗಿದೆ ಎನ್ನುವುದಾದರೆ ನಾವೆಲ್ಲ ಯಾಕಿರಬೇಕು? ಅವರಿಬ್ಬರೇ ರಾಜಕಾರಣ ನಡೆಸಲಿ. ಬೇರೆಯವರು ಇರುವುದೇ ಬೇಡವೇ? ಆ ರೀತಿ ಒಪ್ಪಂದ ಆಗಿರಲು ಸಾಧ್ಯವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಹುದ್ದೆಯ ಒಪ್ಪಂದದ ಬಗ್ಗೆ ದೆಹಲಿ ಮತ್ತು ರಾಜ್ಯದಲ್ಲಿ ಇಬ್ಬರು, ಮೂವರನ್ನು ಕೇಳಿದ್ದೇನೆ. ಒಪ್ಪಂದವಾಗಿದೆ ಎನ್ನುವ ಬಗ್ಗೆ ಯಾರೂ ಹೇಳಿಲ್ಲ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಯಾವ ಅರ್ಥದಲ್ಲಿ ಹೇಳಿದ್ದಾರೋ ನನಗೆ ಗೊತ್ತಿಲ್ಲ. ಅಂತಹ ಒಪ್ಪಂದ ಆಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದಾರೆ. ಈ ರೀತಿಯ ಒಪ್ಪಂದವಾಗಿರಲು ಸಾಧ್ಯವಿಲ್ಲ. ಹೈಕಮಾಂಡ್ ಅಂತಿಮವಾಗಿ ಏನು ತೀರ್ಮಾನ ಮಾಡುತ್ತದೆಯೋ ಅದಕ್ಕೆ ನಾವು ಬದ್ಧವಾಗಿರುತ್ತೇವೆ. ನಾವ್ಯಾರೂ ಕೂಡ ಹೈಕಮಾಂಡ್ ಬಿಟ್ಟು ಹೋದವರಲ್ಲ. ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆಯೋ ಅದನ್ನು ಒಪ್ಪಿಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು.

ಪ್ರತಿಪಕ್ಷದ ಆರೋಪಗಳಿಗೆ ರಾಜಕೀಯ ಉತ್ತರ: ನಾವು ರಾಜ್ಯದ ಜನತೆಗೆ ಚುನಾವಣೆಯ ಸಂದರ್ಭದಲ್ಲಿ ರಾಜಕೀಯವಾಗಿ ಏನೆಲ್ಲ ಮಾತನಾಡಿದ್ದೇವೆ, ಅದೆಲ್ಲವನ್ನು ನಾವು ಜನಗಳಿಗೆ ಹೇಳಬೇಕು. ಸರಕಾರದ ಕಾರ್ಯಕ್ರಮಗಳಲ್ಲಿ ಅನೇಕ ರಾಜಕೀಯ ವಿಚಾರಗಳನ್ನು ಪ್ರಸ್ತಾಪ ಮಾಡಲು ಆಗುವುದಿಲ್ಲ. ಅದಕ್ಕಾಗಿ ಸಮಾವೇಶದಲ್ಲಿ ರಾಜಕೀಯ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇವೆ. ಜನಗಳಿಗೆ ಸತ್ಯಾಂಶ ಗೊತ್ತಾಗಬೇಕು. ಅನೇಕ ವಿಚಾರದಲ್ಲಿ ಪ್ರತಿಪಕ್ಷದವರು ಮಾಡುವ ಆಪಾದನೆಗಳಿಗೆ ರಾಜಕೀಯವಾಗಿ ಉತ್ತರ ಕೊಡುತ್ತೇವೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದ ಸಮಾವೇಶವಾಗಿರುವುದರಿಂದ ಯಾವುದೇ ಬಣ ಇಲ್ಲ. ಬಿಜೆಪಿಯಲ್ಲಿ ಮೂರು ಬಣ ಮಾಡಿಕೊಂಡಿದ್ದರಲ್ಲ. ಆ ರೀತಿ ನಮ್ಮ ಪಕ್ಷದಲ್ಲಿ ಬಣ ಇಲ್ಲ. ನಾವೆಲ್ಲ ಒಟ್ಟಿಗಿದ್ದೇವೆ, ಒಟ್ಟಾಗಿ ಆಡಳಿತ ಮಾಡುತ್ತಿದ್ದೇವೆ. ಬಿಜೆಪಿ ಮತ್ತು ಜೆಡಿಎಸ್‌ನವರು ನಮ್ಮನ್ನು ಜನಸಮುದಾಯದಿಂದ ಬೇರ್ಪಡಿಸಲು ಪ್ರಯತ್ನ ಮಾಡಬಹುದು. ಅದು ಸಾಧ್ಯವಾಗುವುದಿಲ್ಲ ಎಂದರು.

ಸಿದ್ದರಾಮಯ್ಯ ಶಕ್ತಿಹೀನರಲ್ಲ. ಅವರಿಗೆ ಈಗಿರುವ ಶಕ್ತಿ ತುಂಬಿ ತುಳುಕುತ್ತಿದೆ. ಹೀಗಾಗಿ ಅವರಿಗೆ ಶಕ್ತಿ ತುಂಬುವ ಸಲುವಾಗಿ ಸಮಾವೇಶ ನಡೆಯುತ್ತಿದೆ ಎಂಬುದು ಅವಾಸ್ತವಿಕ. ಕಾಂಗ್ರೆಸ್‌ನಲ್ಲಿ ಅಧಿಕಾರ ಕೊಡುವುದು ಅಥವಾ ತೆಗೆದುಕೊಳ್ಳುವುದು ಹೈಕಮಾಂಡ್ ನಿರ್ಧಾರಕ್ಕೆ ಬಿಟ್ಟ ವಿಚಾರ. ನಮ್ಮ ಅನಿಸಿಕೆ ಪ್ರಕಾರ, ಇನ್ನೂ 15 ವರ್ಷ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಬೇಕು.

-ಕೆ.ಎನ್. ರಾಜಣ್ಣ, ಸಚಿವ

ನನಗೆ ಯಾರೂ ವೈರಿಗಳಿಲ್ಲ

ರಾಜಕೀಯದಲ್ಲಿ ನನಗೆ ಯಾರೂ ವೈರಿಗಳಿಲ್ಲ. ಎಲ್ಲರೂ ನನ್ನ ಸ್ನೇಹಿತರೇ. ನನಗೆ ಯಾರ ಜತೆಯೂ ಭಿನ್ನಾಭಿಪ್ರಾಯವಿಲ್ಲ. ಪಕ್ಷದಲ್ಲಿ ನಾವು ಜತೆಗೂಡಿ ಕೆಲಸ ಮಾಡಿದ್ದು, ಮುಂದೆಯೂ ಜತೆಯಲ್ಲೇ ಸಾಗುತ್ತೇವೆ. ಜತೆಗೂಡಿ ಯಶಸ್ಸು ಕಾಣುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು. ಅಧಿಕಾರ ಹಂಚಿಕೆ ಒಪ್ಪಂದ ವಿಚಾರಕ್ಕೆ ಸಂಬಂಧಿಸಿದಂತೆ ಸಚಿವ ಜಿ.ಪರಮೇಶ್ವರ ಅಸಮಾಧಾನದ ಬಗ್ಗೆ ಪ್ರತಿಕ್ರಿಯಿಸಿ, ನಾನು ನಿಮ್ಮ ಮುಂದೆ ಏನೂ ಮಾತನಾಡಿಲ್ಲ. ಪರಮೇಶ್ವರ ಹಾಗೂ ಇತರರೊಂದಿಗೂ ಮಾತನಾಡಿಲ್ಲ. ನಾನು ವಾಹಿನಿಯೊಂದರಲ್ಲಿ ನನ್ನದೇ ಆದ ವಿಚಾರ ಪ್ರಸ್ತಾಪ ಮಾಡಿದ್ದೆ. ನಾವು ಏನು ಮಾತನಾಡಿಕೊಂಡಿದ್ದೇವೆ ಎಂದು ನಿಮ್ಮ ಮುಂದೆ ಹೇಳಲು ಸಾಧ್ಯವೇ? ಈ ವಿಚಾರವಾಗಿ ಮುಖ್ಯಮಂತ್ರಿಗಳು ಯಾವುದೇ ಚರ್ಚೆ ಇಲ್ಲ ಎಂದು ಹೇಳಿದ್ದು, ನಾನು ಚರ್ಚೆ ಮಾಡುವುದಿಲ್ಲ ಎಂದು ಒಪ್ಪಿಕೊಂಡಿದ್ದೇನೆ. ಮುಖ್ಯಮಂತ್ರಿಗಳ ಮಾತನ್ನು ನಾನು ಒಪ್ಪುತ್ತೇನೆ. ಸದ್ಯಕ್ಕೆ ಅಧಿಕಾರ ಹಸ್ತಾಂತರದ ಪ್ರಸ್ತಾಪವಿಲ್ಲ. ಯಾವುದೇ ಸಮಸ್ಯೆ ಇಲ್ಲದೇ ನಮ್ಮ ಸರಕಾರದ ಅಧಿಕಾರ ಅವಧಿ ಪೂರ್ಣಗೊಳಿಸುತ್ತೇವೆ ಎಂದು ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

ಬೆಂಗಳೂರು ವಿವಿ ಇತಿಹಾಸ ಕುರಿತ ಪುಸ್ತಕ ಬಿಡುಗಡೆ

ಬೆಂಗಳೂರು ವಿಶ್ವವಿದ್ಯಾಲಯ ಇತಿಹಾಸವುಳ್ಳ ಪುಸ್ತಕವನ್ನು ಸಚಿವ ಎಂ.ಸಿ.ಸುಧಾಕರ್ ಅವರು ಬಿಡುಗಡೆ ಮಾಡಿದರು. ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ, ಕುಲಪತಿ ಎಸ್.ಎಂ.ಡಾ.ಜಯಕರ, ಕುಲಸಚಿವ ಶೇಕ್ ಲತೀಫ್, ಕುಲಸಚಿವ (ಮೌಲ್ಯಮಾಪನ) ಪ್ರೊ.ಶ್ರೀನಿವಾಸ್, ಪ್ರಸಾರಾಂಗದ ನಿರ್ದೇಶಕ ಡಾ.ನಾಗಭೂಷಣ.ಸಿ, ಬೆಂಗಳೂರು ನಗರ ವಿವಿ ಕುಲಪತಿ ಪ್ರೊ.ಲಿಂಗರಾಜು ಗಾಂಧಿ ಹಾಜರಿದ್ದರು.

ಬೆಂಗಳೂರು: ಅವಿಭಜಿತ ಬೆಂಗಳೂರು ವಿಶ್ವವಿದ್ಯಾಲಯದ 165 ವರ್ಷಗಳ ಗಮನಾರ್ಹ ಪಯಣದ ಅಪರೂಪ ಮತ್ತು ಒಳನೋಟವುಳ್ಳ ಪ್ರಬಂಧ ಸಂಕಲನ 'ಬೆಂಗಳೂರು ವಿಶ್ವವಿದ್ಯಾಲಯದ ಒಡಿಸ್ಸಿ: 1858 ರಿಂದ 2024' ಎಂಬ ಪುಸ್ತಕವನ್ನು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರು ಬಿಡುಗಡೆ ಮಾಡಿದರು.

ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿಗಳ ಸಚಿವಾಲಯದಲ್ಲಿ ಎರಡು ದಶಕಗಳಿಗೂ ಹೆಚ್ಚು ಕಾಲ ಕೆಲಸ ಮಾಡಿದ ಪದ್ಮಾ. ವಿ ಈ ಪುಸ್ತಕವನ್ನು ಸಂಪಾದಿಸಿ ರಚಿಸಿದ್ದಾರೆ. ಬೆಂಗಳೂರು ವಿವಿ 1858 ರಲ್ಲಿ ಒಂದು ಸಣ್ಣ ಶಾಲೆಯಾಗಿ ಆರಂಭವಾಗಿ ಇಂದು ವಿಶ್ವಮಟ್ಟದ ವಿಶ್ವವಿದ್ಯಾಲಯವಾಗಿ ನಿರ್ಮಾಣವಾಗಿ ಹೆಮ್ಮೆಯಿಂದ ತನ್ನ ಸುವರ್ಣ ಮಹೋತ್ಸವ ಆಚರಿಸುತ್ತಿದೆ. ಕುಲಪತಿಗಳ ಕಾರ್ಯದರ್ಶಿ ದೃಷ್ಟಿಕೋನದಿಂದ ಓದುಗರು ವಿಶ್ವವಿದ್ಯಾಲಯದ ಸವಾಲು, ಸಾಧನೆಗಳ ಬಗ್ಗೆ ಅರಿತುಕೊಳ್ಳಬಹುದಾಗಿದೆ.

ವಿಶ್ವವಿದ್ಯಾನಿಲಯದ ಶ್ರೀಮಂತ ಇತಿಹಾಸ ದಾಖಲಿಸುವಲ್ಲಿ ಮತ್ತು ಭವಿಷ್ಯದ ಪೀಳಿಗೆಗೆ ಅದರ ಪರಂಪರೆ ಸಂರಕ್ಷಿಸುವಲ್ಲಿ ಪದ್ಮ ವಿ ಅವರು ನೀಡಿದ ಅಮೂಲ್ಯ ಕೊಡುಗೆ ಗುರುತಿಸಿ ಸಚಿವ ಡಾ.ಎಂ.ಸಿ.ಸುಧಾಕರ್ ಅವರು ಪುಸ್ತಕವನ್ನು ಬಹಳ ಮೆಚ್ಚುಗೆಯೊಂದಿಗೆ ಸ್ವೀಕರಿಸಿದರು.

ರಾಜ್ಯ ಸರಕಾರದ ವತಿಯಿಂದ ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಮಂಗಳವಾರ ವಿಶ್ವ ಅಂಗವಿಕಲರ ದಿನ ಆಚರಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್, ಮಹಿಳಾ ಸಚಿವರು ಹಾಗೂ ಮಕ್ಕಳ ಕಲ್ಯಾಣ, ಅಂಗವಿಕಲರ ಕಲ್ಯಾಣ ಇಲಾಖೆ ಹಾಗೂ ಇತರ ಗಣ್ಯರು ಸಮಾರಂಭದಲ್ಲಿ ಭಾಗವಹಿಸಿದ್ದರು. ಈ ವೇಳೆ ವಿಶೇಷಚೇತನರ ಸಮುದಾಯ ಕ್ಷೇತ್ರದಲ್ಲಿ ಅನುಕರಣೀಯ ಸೇವೆಯನ್ನು ಪರಿಗಣಿಸಿ, ಪ್ರೇರಣಾ ರಿಸೋರ್ಸ್ ಸೆಂಟರ್‌ನ ಮೇಘನಾ ಜೋಯಿಸ್ ಅವರಿಗೆ ರಾಜ್ಯ ಪ್ರಶಸ್ತಿಯನ್ನು ನೀಡಲಾಯಿತು.

8, 9ರಂದು ಬಸ್ ಸಂಚಾರದಲ್ಲಿ ವ್ಯತ್ಯಯ?

ಬೆಂಗಳೂರು: ವೇತನ ಹೆಚ್ಚಳ, ವೇತನ ಹಿಂಬಾಕಿ ಪಾವತಿ ಸೇರಿ ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ನೌಕರರು ಡಿ.9 ರಂದು ಬೆಳಗಾವಿ ಚಲೋ ನಡೆಸಲಿದ್ದಾರೆ.

ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನೇತೃತ್ವದಲ್ಲಿ ಸಾರಿಗೆ ನೌಕರರು ವಿಧಾನ ಮಂಡಲ ಅಧಿವೇಶನ ಆರಂಭವಾಗುವ ಡಿಸೆಂಬರ್ 9ರಂದು ಬೆಳಗಾವಿಯಲ್ಲಿ ಪ್ರತಿಭಟನೆ ಕೈಗೊಂಡಿದ್ದು, ಡಿ.8ರ ಭಾನುವಾರದಿಂದಲೇ ನೌಕರರ ಬೆಳಗಾವಿಗೆ ತೆರಳುವ ಸಾಧ್ಯತೆ ಇದೆ. ಹೀಗಾಗಿ ಭಾನುವಾರ ಮತ್ತು ಸೋಮವಾರ ರಾಜ್ಯದಲ್ಲಿ ಬಸ್ ಸೇವೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ. ಹೀಗಾಗಿ ಬಸ್ ಸೇವೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ನೋಡಿಕೊಳ್ಳಲು ಡಿಸೆಂಬರ್ 9ರಂದು ರಜೆ ತೆಗೆದುಕೊಳ್ಳದೇ ಕರ್ತವ್ಯಕ್ಕೆ ಹಾಜರಾಗುವಂತೆ ನೌಕರರಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿಗಮಗಳು ಸೂಚನೆ ನೀಡಿವೆ. ಅನಿವಾರ್ಯ ಕಾರಣ ಹೊರತುಪಡಿಸಿ ಭಾನುವಾರ ಮತ್ತು ಸೋಮವಾರ ರಜೆ ತೆಗೆದುಕೊಳ್ಳದೆ ಕಾರ್ಯನಿರ್ವಹಿಸಲು ನೌಕರರಿಗೆ ಸೂಚಿಸಲಾಗಿದೆ. ಅನುಮತಿ ಪಡೆಯದೆ ರಜೆ ಪಡೆದು ಕರ್ತವ್ಯಕ್ಕೆ ಗೈರುಹಾಜರಾಗುವ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಸಾರಿಗೆ ನಿಗಮಗಳು ಎಚ್ಚರಿಕೆ ನೀಡಿವೆ.

ಹೈಕೋರ್ಟ್‌ಗೆ ಮಾಹಿತಿ ಸಲ್ಲಿಸಿದ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ

ನಗರದ ಎಲ್ಲ ಕೆರೆಗಳ ಒತ್ತುವರಿ ತೆರವು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ವ್ಯಾಪ್ತಿಯಲ್ಲಿ ಸದ್ಯ ಜೀವಂತವಾಗಿ ಉಳಿದಿರುವ 183 ಕೆರೆಗಳ ಪೈಕಿ 122 ಕೆರೆಗಳು ಖಾಸಗಿಯವರಿಂದ ಒತ್ತುವರಿಯಾಗಿವೆ ಎಂದು ರಾಜ್ಯ ಸರಕಾರ ಹೈಕೋರ್ಟ್‌ಗೆ ಹೇಳಿದೆ.

ಬೆಂಗಳೂರಿನ ಕೆರೆಗಳು ಮತ್ತು ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸಿ ಅವುಗಳನ್ನು ರಕ್ಷಿಸಲು ಸರಕಾರಕ್ಕೆ ಅಗತ್ಯ ನಿರ್ದೇಶನಗಳನ್ನು ನೀಡಬೇಕೆಂದು 2014ರಲ್ಲಿ ಸಲ್ಲಿಕೆಯಾಗಿರುವ ವಿವಿಧ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರಿದ್ದ ವಿಭಾಗೀಯ ನ್ಯಾಯಪೀಠಕ್ಕೆ ಸರಕಾರ ಈ ಮಾಹಿತಿ ನೀಡಿದೆ. ವಿಚಾರಣೆ ವೇಳೆ ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಈ ಮಾಹಿತಿ ನ್ಯಾಯಾಲಯಕ್ಕೆ ಸಲ್ಲಿಸಿದರು. ಇದು ಅಂದಾಜು ಲೆಕ್ಕಾಚಾರವಾಗಿದ್ದು, ಖಚಿತ ಮಾಹಿತಿ ಸಂಗ್ರಹಿಸಲಾಗುತ್ತಿದೆ.

ಒತ್ತುವರಿ ತೆರವಿಗೆ ಕಠಿಣ ಕ್ರಮ:

ಒತ್ತುವರಿದಾರರಿಗೆ ನೋಟಿಸ್ ಕೊಟ್ಟು, ತೆರವು ಕ್ರಮ ಕೈಗೊಳ್ಳಲಾಗುತ್ತಿದೆ. ಎಲ್ಲಾ ಬಗೆಯ ಒತ್ತುವರಿ ತೆರವುಗೊಳಿಸಲು ಸರಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಇದಕ್ಕಾಗಿ ಕಾಲಾವಕಾಶಬೇಕು. ಆದರೆ, ಉಳಿದಿರುವ ಕೆರೆಗಳ ಸಂರಕ್ಷಣೆ ಮತ್ತು ನಿರ್ವಹಣೆಯೂ ಸರಕಾರದ ಆದ್ಯತೆಯಾಗಿದೆ. ಈ ನಿಟ್ಟಿನಲ್ಲಿ ಖಾಸಗಿಯವರಿಗೆ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ. ಆದರೆ, ಯಾವುದೇ ಕಾರಣಕ್ಕೂ ಕೆರೆಗಳ ಮಾಲಿಕತ್ವ ಖಾಸಗಿಯವರಿಗೆ ಬಿಟ್ಟುಕೊಡುವುದಿಲ್ಲ ಎಂದು ಭರವಸೆ ನೀಡಿದರು. ಅರ್ಜಿದಾರರ ಮನವಿಯಂತೆ ಕೆರೆಗಳ ಒತ್ತುವರಿಗೆ ಸಂಬಂಧಿಸಿದ ಸಮಗ್ರ ಮಾಹಿತಿಯ ಜೊತೆಗೆ ಒತ್ತುವರಿ ತೆರವಿಗೆ ಕೈಗೊಂಡ ಕ್ರಮಗಳನ್ನು ನ್ಯಾಯಾಲಯ ಮತ್ತು ಅರ್ಜಿದಾರರಿಗೆ ಸಲ್ಲಿಸುವಂತೆ ಸೂಚಿಸಿದ ನ್ಯಾಯಪೀಠ ವಿಚಾರಣೆ ಡಿ.13ಕ್ಕೆ ಮುಂದೂಡಿತು.

122 ಕೆರೆಗಳು ಒತ್ತುವರಿ

ಅಂದಾಜಿನ ಪ್ರಕಾರ ಬಿಬಿಎಂಪಿಯಲ್ಲಿ ಸದ್ಯ 183 ಕೆರೆಗಳಿದ್ದು, ಅವುಗಳ ವಿಸ್ತೀರ್ಣ 5,094 ಎಕರೆ ಇದೆ. ಇದರಲ್ಲಿ ಖಾಸಗಿಯವರಿಂದ 122 ಕೆರೆಗಳಲ್ಲಿ ಒತ್ತುವರಿಯಾಗಿದ್ದು, ಅದರ ವಿಸ್ತೀರ್ಣ 235 ಎಕರೆ ಇದೆ. ಇದಲ್ಲದೆ ರಸ್ತೆ, ಸರಕಾರಿ ಕಟ್ಟಡ, ಸ್ಮಶಾನ, ಧಾರ್ಮಿಕ ಸ್ಥಳಗಳು, ಸಾರ್ವಜನಿಕ ಕಟ್ಟಡಗಳು, ಅಘೋಷಿತ ಸ್ಲಂ, ರೈಲ್ವೆ ಹಳಿ ಇತ್ಯಾದಿ ರೂಪದಲ್ಲಿ ಕೆರೆಗಳ ಒತ್ತುವರಿಯಾಗಿದೆ ಎಂದರು. ಖಾಸಗಿಯವರಿಂದ ಒತ್ತುವರಿಯಾಗಿರುವ 122 ಕೆರೆಗಳ ಪೈಕಿ 88 ಕೆರೆಗಳಲ್ಲಿ ಕಟ್ಟಡ, 44 ಕೆರೆಗಳು ಧಾರ್ಮಿಕ ಕಟ್ಟಡ, 58 ಕೆರೆಗಳಲ್ಲಿ ಖಾಲಿ ಜಾಗ, ರಸ್ತೆಗಾಗಿ 7 ಕೆರೆ, ಅಘೋಷಿತ ಸ್ಲಂಗಳಿಗಾಗಿ 9 ಕೆರೆಗಳ ಒತ್ತುವರಿಯಾಗಿದೆ. 183 ಕೆರೆಗಳ ಪೈಕಿ ಒತ್ತುವರಿಯಾಗಿರುವ 122 ಕೆರೆಗಳ ಸರ್ವೆ ನಡೆಸಿ ನಕಾಶೆಗಳನ್ನು ಕಂದಾಯ ಇಲಾಖೆಗೆ ನೀಡಲಾಗಿದೆ.

ಜಲಮಂಡಳಿ ಅಧ್ಯಕ್ಷರಿಂದ ಕಾವೇರಿ ಸಂಪರ್ಕ ಅಭಿಯಾನದ ಸ್ಥಳಗಳಿಗೆ ಭೇಟಿ, ಪರಿಶೀಲನೆ

110 ಹಳ್ಳಿಗಳಿಗೆ ಸಮರ್ಪಕ ನೀರು ಒದಗಿಸಲು ಸಜ್ಜು

ಬೆಂಗಳೂರು: 110 ಹಳ್ಳಿಗಳ ವ್ಯಾಪ್ತಿಯಲ್ಲಿ ಮನೆ ಬಾಗಿಲಿಗೆ ತೆರಳಿ ಕುಡಿಯುವ ನೀರಿನ ಸಂಪರ್ಕದ ಬಗ್ಗೆ ಮಾಹಿತಿ ನೀಡುವಂತೆ ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಸೂಚನೆ ನೀಡಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿರ್ದೇಶನದಂತೆ ಪೂರ್ವ ವಲಯದ ಚಳ್ಳಗೇರೆ, ಚನ್ನಸಂದ್ರ ಭಾಗದಲ್ಲಿ ಜಲಮಂಡಳಿ ವತಿಯಿಂದ ಆಯೋಜಿಸಲಾದ ಕಾವೇರಿ ಸಂಪರ್ಕ ಅಭಿಯಾನದ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಜಲಮಂಡಳಿಯು ನಗರದ 110 ಹಳ್ಳಿಗಳಿಗೆ ಸಮರ್ಪಕ ನೀರು ಒದಗಿಸಲು ಸಜ್ಜಾಗಿದ್ದು, ಈಗಾಗಲೇ ಹೆಚ್ಚುವರಿ ನೀರು ನಗರಕ್ಕೆ ಸರಬರಾಜಾಗುತ್ತಿದೆ. ಇದನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಜನರು ಸಂಪರ್ಕ ಪಡೆದುಕೊಳ್ಳುವುದು ಅವಶ್ಯವಾಗಿದ್ದು, ಇದರಿಂದ ಬೇಸಿಗೆ ಸಮಯದಲ್ಲಿ ಕೊಳವೆ ಬಾವಿಗಳಲ್ಲಿ ನೀರಿನ ಕೊರತೆಯಂತಹ ಸಮಸ್ಯೆಗಳು ಮತ್ತೊಮ್ಮೆ ಮರುಕಳಿಸದೇ ಇರಲು ಜನರು ಕುಡಿಯುವ ನೀರಿನ ಸಂಪರ್ಕವನ್ನು ಪಡೆದುಕೊಳ್ಳಬೇಕು. 110 ಹಳ್ಳಿಗಳ ವ್ಯಾಪ್ತಿಯ ಎಲ್ಲ ವಲಯಗಳಲ್ಲೂ ಮನೆ ಮನೆಗೂ ಕಾವೇರಿ ನೀರು - ಕುಡಿಯುವ ನೀರು ಸಂಪರ್ಕ ಅಭಿಯಾನ ಪ್ರಾರಂಭಿಸಲಾಗಿದೆ. ಜನರು ಆನ್‌ಲೈನ್ ಮೂಲಕ ಅಥವಾ ಅಭಿಯಾನ ನಡೆಯುತ್ತಿರುವ ಸ್ಥಳಗಳಿಗೆ ಭೇಟಿ ನೀಡಿ ಅರ್ಜಿಗಳನ್ನು ಸಲ್ಲಿಸಬಹುದು ಎಂದರು.

ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಅವರು ಚಳ್ಳಗೇರೆ, ಚನ್ನಸಂದ್ರ ಭಾಗದಲ್ಲಿ ಜಲಮಂಡಳಿ ವತಿಯಿಂದ ಆಯೋಜಿಸಲಾದ ಕಾವೇರಿ ಸಂಪರ್ಕ ಅಭಿಯಾನದ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮುಂದಿನ ದಿನಗಳಲ್ಲಿ ಜಲಮಂಡಳಿಯ ವತಿಯಿಂದ ಕಾವೇರಿ ಕುಡಿಯುವ ನೀರು ಸಂಪರ್ಕ ಅಭಿಯಾನದ ಭಿತ್ತಿಪತ್ರ, ಅರ್ಜಿ ಹಾಗೂ ಶೇವಣಿ ಶುಲ್ಕದ ವಿವರಗಳನ್ನು ಒಳಗೊಂಡಿರುವ ಮಾಹಿತಿಯನ್ನು ಮನೆ ಬಾಗಿಲಿಗೆ ನೀಡಲು ನಿರ್ಧರಿಸಲಾಗಿದೆ. ನಮ್ಮ ಮಂಡಳಿಯ ನೌಕರರು ಮನೆ ಬಾಗಿಲಿಗೆ ತೆರಳಿ ಇವುಗಳನ್ನು ನೀಡಿ ಅಭಿಯಾನ ನಡೆಯುತ್ತಿರುವ ಸ್ಥಳ, ದಿನಾಂಕ ಹಾಗೂ ಸಮಯದ ಬಗ್ಗೆ ಮಾಹಿತಿ ನೀಡುವಂತೆ ಸೂಚನೆ ನೀಡಲಾಗಿದೆ. ಇದರ ಸದುಪಯೋಗವನ್ನು ಜನರು ಪಡೆದುಕೊಳ್ಳುವುದು ಅಗತ್ಯವಾಗಿದೆ.

- ಡಾ.ರಾಮ್ ಪ್ರಸಾತ್ ಮನೋಹರ್ ಬೆಂಗಳೂರು ಜಲಮಂಡಳಿ ಅಧ್ಯಕ್ಷ

ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕರ್ನಾಟಕ ಸರಕಾರದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಕಸಾಪ ಅಧ್ಯಕ್ಷ ನಾಡೋಜ.ಡಾ.ಮಹೇಶ್ ಜೋಶಿ ಅವರು ಆಹ್ವಾನಿಸಿದರು.

ಕ್ರೀಡಾ ಸಾಧಕರ ಮೀಸಲಿಗೆ ತಡೆ

ಬೆಂಗಳೂರು: ಮಹತ್ವದ ಬೆಳವಣಿಗೆಯೊಂದರಲ್ಲಿ ಕ್ರೀಡಾ ಸಾಧಕರಿಗೆ ಸರಕಾರಿ ನೇಮಕದಲ್ಲಿದ್ದ ಶೇ.2ರಷ್ಟು ಮೀಸಲಾತಿಗೆ ರಾಜ್ಯ ಸರಕಾರ ತಾತ್ಕಾಲಿಕ ತಡೆ ನೀಡಿ ಆದೇಶ ಹೊರಡಿಸಿದೆ.

ರಾಜ್ಯ ಸಿವಿಲ್ ಸೇವೆಯಲ್ಲಿನ ನೇರ ನೇಮಕಾತಿಯಲ್ಲಿ ಶೇ. 2ರಷ್ಟು ಮೀಸಲಾತಿ ನೀಡಲಾಗುತ್ತಿತ್ತು. ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ ನಿಯಮ) 1977ರ ನಿಯಮಕ್ಕೆ ತಿದ್ದುಪಡಿ ಮಾಡಿ ಪುನರ್ ಪರಿಶೀಲಿಸಲು ಈ ಕ್ರಮಕೈಗೊಳ್ಳಲಾಗಿದೆ. ಸೆಪ್ಟೆಂಬರ್‌ನಲ್ಲಿ ಕ್ರೀಡಾ ಸಾಧಕರಿಗೆ ಶೇ.2ರ ಮೀಸಲು ನೀಡಿ ರಾಜ್ಯ ಸರ್ಕಾರ ಅನುಸೂಚನೆ ಹೊರಡಿಸಿತ್ತು. ಈಗ ತಾತ್ಕಾಲಿಕ ತಡೆ ನೀಡಿ ಸುತ್ತೋಲೆ ಹೊರಡಿಸಿದೆ.

ರಾಜ್ಯ ಸಿವಿಲ್ ಸೇವೆಯಲ್ಲಿನ ನೇರ ನೇಮಕದಲ್ಲಿ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗದಿಂದಲೂ ಎಲ್ಲ ಇಲಾಖೆಗಳ ಮಂಜೂರಾದ ವೃಂದ ಬಲದಲ್ಲಿ ಶೇ. 2 ರಷ್ಟು ಹುದ್ದೆಗಳನ್ನು ಕ್ರೀಡಾ ಸಾಧಕರಿಗೆ ಅಧಿಸೂಚನೆ ಹೊರಡಿಸಿತ್ತು.

ತಾತ್ಕಾಲಿಕ ತಡೆಯೇಕೆ?: ಇತ್ತೀಚಿಗೆ ನಡೆದ ರಾಜ್ಯ ಒಲಿಂಪಿಯಾಡ್ ಕಾರ್ಯಕ್ರಮದಲ್ಲಿ ಕ್ರೀಡಾ ಸಾಧಕರಿಗೆ ನೀಡಲಾಗಿರುವ ಮೀಸಲಿನ ಪ್ರಮಾಣವನ್ನು ಹೆಚ್ಚಿಸಬೇಕು ಹಾಗೂ ಕೆಲವೊಂದಷ್ಟು ಕ್ರೀಡೆಗಳನ್ನು ಮೀಸಲು ವ್ಯಾಪ್ತಿಗೆ ಸೇರಿಸಬೇಕು ಎನ್ನುವ ಬೇಡಿಕೆಯನ್ನು ಮುಖ್ಯಮಂತ್ರಿಗಳ ಮುಂದಿಡಲಾಗಿತ್ತು. ಪ್ರಮುಖವಾಗಿ ಅಂಡರ್ 19, ಜೂನಿಯರ್ ಲೆವೆಲ್ ಸೇರಿದಂತೆ ವಿವಿಧ ಹಂತದಲ್ಲಿ ಭಾಗವಹಿಸಿರುವವರಿಗೂ ಅವಕಾಶ ಸಿಗಬೇಕು ಎನ್ನುವ ಬೇಡಿಕೆಗಳು ಕೇಳಿಬಂದಿತ್ತು. ಆದ್ದರಿಂದ ಈ ಎಲ್ಲವನ್ನು ಪರಿಶೀಲಿಸಿ ಕ್ರಮವಹಿಸಲು ಅಧಿಸೂಚನೆ ಹಿಂಪಡೆಯಲು ತೀರ್ಮಾನಿಸಲಾಗಿದೆ. ಶೀಘ್ರದಲ್ಲಿಯೇ ಈ ಬಗ್ಗೆ ಪುನರ್‌ಪರಿಶೀಲನೆ ನಡೆಸಿ ಅಗತ್ಯ ಕ್ರಮವಹಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತೃತೀಯ ಸಂಸ್ಥಾಪನಾ ದಿನಾಚರಣೆ ಇಂದು

ಬೆಂಗಳೂರು: ಬೆಂಗಳೂರು ನಗರ ವಿವಿಯ ಮಲ್ಲೇಶ್ವರದ ವಿಶ್ವವಿದ್ಯಾನಿಲಯದ ಮಹಿಳಾ ಮಹಾ ವಿದ್ಯಾಲಯದಲ್ಲಿ ಡಿ.6 ರಂದು ಬೆಳಗ್ಗೆ 11.00 ಗಂಟೆಗೆ ತೃತೀಯ ಸಂಸ್ಥಾಪನಾ ದಿನಾಚರಣೆಯನ್ನು ಹೊರಾಂಗಣ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದ ಮುಖ್ಯಅತಿಥಿಯಾಗಿ ಶಾಸಕ ಡಾ. ಸಿ.ಎನ್. ಅಶ್ವತ್ಥ ನಾರಾಯಣ್ ಆಗಮಿಸಲಿದ್ದು, ನಗರ ವಿವಿಯ ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಂಗಳೂರು ನಗರ ವಿವಿ ಹಿರಿಯ ವ್ಯವಸ್ಥಾಪಕ ಮತ್ತು ಸಿಂಡಿಕೇಟ್ ಸದಸ್ಯೆ ಆಯಿಷಾ ಪರ್ಜಾನಾ ಯುಟಿ, ಲೇಖಕಿ ಮಾಲಾ ಮೇರಿ ಮಾರ್ಟಿನಾ, ನಗರ ವಿವಿ ಕುಲಸಚಿವ ಟಿ.ಜವರೇಗೌಡ, ಕುಲಸಚಿವ(ಮೌ) ಡಾ. ಆನಂದಕುಮಾರ್ ಸಿ.ಎಸ್ ಗೌರವ ಅತಿಥಿಯಾಗಿ ಆಗಮಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬಿಬಿಎಂಪಿಗೆ ಸ್ಮಾರ್ಟ್ ನಿಲ್ದಾಣ ಹಸ್ತಾಂತರ

ಬೆಂಗಳೂರು: ಶಿಲ್ಪಾ ಫೌಂಡೇಷನ್ ಸೇಪಿಯನ್ಸ್ ಸಂಸ್ಥೆಯು ಸಿಎಸ್‌ಆರ್ ನಿಧಿಯಡಿ ಕೋರಮಂಗಲದ ಆಡುಗೋಡಿ ರಸ್ತೆಯಲ್ಲಿ ನಿರ್ಮಿಸಿದ ಸುಸಜ್ಜಿತ ಸ್ಮಾರ್ಟ್ ಬಸ್ ನಿಲ್ದಾಣವನ್ನು ಸಾರ್ವಜನಿಕರ ಬಳಕೆಗಾಗಿ ಮಂಜುನಾಥ ರೆಡ್ಡಿ ಬಿಬಿಎಂಪಿಗೆ ಹಸ್ತಾಂತರಿಸಿದರು.

ಸೇಪಿಯನ್ಸ್ ಸಂಸ್ಥೆಯ ಮುಖ್ಯಸ್ಥ ಸುಶೀಲ್ ಮಹ್ಲಾ ಮಾತನಾಡಿ, ಶಿಲ್ಪಾ ಫೌಂಡೇಶನ್, ಬಹುರಾಷ್ಟ್ರೀಯ ಕಂಪನಿಯಾದ ಸೇಪಿಯನ್ಸ್ ಟೆಕ್ನಾಲಜೀಸ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಸಹಭಾಗಿತ್ವದಲ್ಲಿ ನಗರದ ಸಾರಿಗೆ ವ್ಯವಸ್ಥೆಯಲ್ಲಿ ಪರಿವರ್ತನೆ ತರಲು ಹಾಗೂ ಸಾರ್ವಜನಿಕರಿಗೆ ಅನುಕೂಲಕರ ಮತ್ತು ಹೊಸ ಅನುಭವ ನೀಡುವ ನಗರದ ಪ್ರಮುಖ 3 ಪ್ರದೇಶಗಳಲ್ಲಿ ಸುಸಜ್ಜಿತ ಮತ್ತು ಅತ್ಯಾಧುನಿಕವಾದ ಸ್ಮಾರ್ಟ್ ಬಸ್ ನಿಲ್ದಾಣಗಳನ್ನು ನಿರ್ಮಿಸಿದೆ. ಈ ಯೋಜನೆ ಸಾರ್ವಜನಿಕರಿಗೆ ಹೆಚ್ಚು ಉಪಯುಕ್ತ ಹಾಗೂ ಪ್ರಯಾಣಿಕ ಸ್ನೇಹಿ ಬಸ್ ನಿಲ್ದಾಣವನ್ನು ಬಳಕೆಗೆ ತಂದಿದೆ. ಈ ಯೋಜನೆಯನ್ನು ಬ್ರಾಂಡ್ ಬೆಂಗಳೂರು ಅಡಿಯಲ್ಲಿ ಜಾರಿಗೆ ತರಲಾಗಿದೆ. ಇದಕ್ಕೂ ಮುನ್ನ ನೃಪತುಂಗ ರಸ್ತೆಯ ಹಾಗೂ ಕಾಡುಬೀಸನಹಳ್ಳಿಯಲ್ಲಿ ಸ್ಮಾರ್ಟ್ ನಿಲ್ದಾಣ ನಿರ್ಮಿಸಿ ಬಿಬಿಎಂಪಿಗೆ ಹಸ್ತಾಂತರಿಸಲಾಗಿತ್ತು. ನಗರದಲ್ಲಿ ಅನಿಯಮಿತ ಬಸ್ ನಿಲ್ದಾಣಗಳಿದ್ದರೂ ಪ್ರಯಾಣಿಕ ಸ್ನೇಹಿ ಹಾಗೂ ಅತ್ಯಾಧುನಿಕ ಶೈಲಿಯ ಗುಣಮಟ್ಟದ ನಿಲ್ದಾಣ ಕಲ್ಪಿಸುವುದು ಸ್ಮಾರ್ಟ್ ನಿಲ್ದಾಣದ ಉದ್ದೇಶವಾಗಿದೆ ಎಂದು ತಿಳಿಸಿದರು.

ಸ್ಮಾರ್ಟ್ ಬಸ್ ನಿಲ್ದಾಣದಲ್ಲಿ ಯಾವುದೇ ಸಂದರ್ಭದಲ್ಲಿ ಮಹಿಳೆಯರಿಗೆ 24/7 ಸ್ಯಾನಿಟರಿ ಪ್ಯಾಡ್‌ಗಳು ದೊರೆಯಲಿವೆ. ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಪ್ಯಾಡ್‌ಗಳನ್ನು ಸ್ವೀಕರಿಸಬಹುದು. ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಅಥವಾ ಸಾರ್ವಜನಿಕರಿಗೆ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಚಾರ್ಜಿಂಗ್ ಮಾಡಲು ಚಾರ್ಜಿಂಗ್ ಪಾಯಿಂಟ್‌ಗಳು ಇರಲಿವೆ. ದಿನದ 24 ಗಂಟೆ ಕಾರ್ಯರೂಪದಲ್ಲಿರುತ್ತವೆ.

-ಸುಶೀಲ್ ಮಹ್ಲಾ ಸೇಪಿಯನ್ಸ್ ಸಂಸ್ಥೆಯ ಮುಖ್ಯಸ್ಥ

ಸಮಾಚಾರ ಸಣ್ಣದಲ್ಲ

ಪ್ರೀತಿ ನಿರಾಕರಣೆ: ಇಬ್ಬರ ಕೊಲೆ

ನಿಪ್ಪಾಣಿ: ತನ್ನ ಪ್ರೀತಿ ನಿರಾಕರಣೆ ಮಾಡಿದ್ದಕ್ಕೆ ಸಿಟ್ಟಿಗೆದ್ದ ಯುವಕ ಪ್ರೀತಿಸಿದ ಯುವತಿಯ ತಾಯಿ ಹಾಗೂ ಆಕೆಯ ತಮ್ಮನನ್ನು ಹತ್ಯೆ ಮಾಡಿರುವ ಘಟನೆ ನಿಪ್ಪಾಣಿ ತಾಲೂಕಿನಲ್ಲಿ ನಡೆದಿದೆ. ಮಂಗಲಾ ನಾಯಕ್ (45), ಪ್ರಜ್ವಲ್ ನಾಯಕ್ (18) ಮೃತ ದುರ್ದೈವಿಗಳು. ಅಕ್ಕೋಳದ ತೋಟದ ಮನೆಯಲ್ಲಿ ಕೃತ್ಯ ನಡೆದಿದ್ದು, ರವಿ ಹಾಗೂ ಆತನ ಸ್ನೇಹಿತ ಲೋಕೇಶ್ ಸೇರಿ ರಾಡ್‌ನಿಂದ ಕೊಲೆ ಮಾಡಿರುವುದು ಬೆಳಕಿಗೆ ಬಂದಿದೆ. ಮೂಲತಃ ಚಂದಗಡದ ಆರೋಪಿ ರವಿ ಕೂಲಿ ಕೆಲಸ ಮಾಡುತ್ತಿದ್ದ. ಕಳೆದ ನಾಲ್ಕು ವರ್ಷಗಳಿಂದ ಮಂಗಲಾರ ಅಪ್ರಾಪ್ತ ವಯಸ್ಸಿನ ಮಗಳ ಜತೆ ಸಂಪರ್ಕ ಇಟ್ಟುಕೊಂಡಿದ್ದ. ಇಬ್ಬರ ಪ್ರೀತಿಯನ್ನು ಮನೆಯವರು ವಿರೋಧಿಸಿದ್ದರು. ಇದರಿಂದ ಆಕ್ರೋಶಗೊಂಡ ರವಿ ತನ್ನ ಸಹಚರರ ಜತೆ ಮಂಗಲಾ ಮತ್ತು ಆಕೆಯ ಮಗನನ್ನು ಕೊಲೆಮಾಡಿದ್ದಾನೆ. ಕೊಲೆ ನಡೆದ ಕೆಲ ಗಂಟೆಗಳಲ್ಲೇ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಬಾಲಕಿಯನ್ನೂ ವಶಕ್ಕೆ ತೆಗೆದುಕೊಳ್ಳಲಾಗಿದೆ. ನಿಪ್ಪಾಣಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿರಾಮ
ಪ್ರತಿ ಭಾನುವಾರ

ಸುವರ್ಣಸೌಧದಲ್ಲಿ ನಡೆಯಲಿರುವ ವಿಧಾನಮಂಡಲದ ಚಳಿಗಾಲದ ಅಧಿವೇಶನ | ಪಂಚಮಸಾಲಿ ಸೇರಿದಂತೆ 55 ಸಂಘಟನೆಗಳಿಂದ ಪ್ರತಿಭಟನೆಗೆ ನೋಂದಣಿ

ಬೆಳಗಾವಿ ಅಧಿವೇಶನಕ್ಕೆ ಪ್ರತಿಭಟನೆಯ ಬಿಸಿ

ವಿನಾಯಕ ಮಠಪತಿ, ಬೆಳಗಾವಿ



ಡಿಸೆಂಬರ್ 9 ರಿಂದ ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯಲಿರುವ ಚಳಿಗಾಲ ಅಧಿವೇಶನ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಹಲವಾರು ಸಂಘಟನೆಗಳು ತಮ್ಮ ಬೇಡಿಕೆಗಳ ಈಡೇರಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಲು ಸಜ್ಜಾಗಿವೆ. ಈಗಾಗಲೇ 55 ಕ್ಕೂ ಅಧಿಕ ಸಂಘಟನೆಗಳು ಪ್ರತಿಭಟನೆಗೆ ನೋಂದಾಯಿಸಿಕೊಂಡಿದ್ದು, ಈ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ.

ಸಹಸ್ರಾರು ಹೋರಾಟಗಾರರು: ಬೆಳಗಾವಿ ಅಧಿವೇಶನ ಎಂದರೆ ಸದಾಕಾಲವೂ ಪ್ರತಿಭಟನೆಗಳಿಂದ ತುಂಬಿ ತುಳುಕುತ್ತದೆ ಎಂಬ ಮಾತಿದೆ. ರಾಜ್ಯದ ನಾನಾ ಭಾಗಗಳಿಂದ ಜನ ತಮ್ಮ ಸಮಸ್ಯೆ ಪರಿಹಾರಕ್ಕಾಗಿ ಸರಕಾರದ ಗಮನಸೆಳೆಯಲು ಬೆಳಗಾವಿಗೆ ಆಗಮಿಸುತ್ತಾರೆ. ಈ ಬಾರಿ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ, ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ರೈತ ಸಂಘಟನೆಗಳು ಬೃಹತ್ ಪ್ರತಿಭಟನೆಗೆ ಕರೆ ನೀಡಿದ್ದು ಸಾವಿರಾರು ಸಂಖ್ಯೆಯಲ್ಲಿ ಪ್ರತಿಭಟನಕಾರರು ಸರಕಾರಕ್ಕೆ ಎಚ್ಚರಿಕೆ ನೀಡಲು ಬೆಳಗಾವಿಗೆ ಬರಲಿದ್ದಾರೆ.

ಪ್ರತಿಭಟನೆ ಕಾವು ತಗ್ಗಿಸಲು ಸರಕಾರದ ಕ್ರಮ: ಕಳೆದ ಒಂದು ವರ್ಷದಿಂದ ಪ್ರತಿಭಟನೆಗಳ ಕಾವು ಕಡಿಮೆ ಮಾಡಲು ಸರಕಾರ ಮುಂದಾಗಿದೆ. ಅಧಿವೇಶನಕ್ಕೆ ಮೊದಲೇ ಸಂಘಟನೆಗಳ ಮುಖಂಡರ ಜೊತೆ ಮಾತುಕತೆ ನಡೆಸಿ ಸಮಸ್ಯೆ ಪರಿಹರಿಸುವ ಭರವಸೆ ನೀಡಲಾಗುತ್ತಿದೆ. ಇದರಿಂದ ಪ್ರತಿಭಟನಾಕಾರರ ಸಮಯದ ಜೊತೆಗೆ ಭದ್ರತೆ ದೃಷ್ಟಿಯಿಂದಲೂ ಬಹು ಉಪಯೋಗವಾಗಿದೆ.

ದಿನಕ್ಕೆ 15ಕ್ಕೂ ಅಧಿಕ ಸಂಘಟನೆಗಳು ಪ್ರತಿಭಟನೆ ನಡೆಸುತ್ತಿದ್ದ ಹಿನ್ನೆಲೆಯಲ್ಲಿ ಸಚಿವರು ಹಾಗೂ ಶಾಸಕರು ಕಲಾಪಗಳಿಗೆ ಗೈರುಹಾಜರಾಗಿ ಪ್ರತಿಭಟನಾನಿರತರ ಭೇಟಿಗೆ ಬರಬೇಕಾದ ಅನಿವಾರ್ಯತೆ ಇತ್ತು. ಆದರೆ ಕಳೆದ ವರ್ಷದಿಂದ ಸರಕಾರ ಪ್ರತಿಭಟನೆಗಳ ಸ್ವರೂಪದಲ್ಲಿ ಸಾಕಷ್ಟು ಬದಲಾವಣೆ ತಂದಿದೆ.

ಬೆಳಗಾವಿ ಸೇರಿದಂತೆ ದಾವಣಗೆರೆ, ಹುಬ್ಬಳ್ಳಿ ಧಾರವಾಡ, ಬಾಗಲಕೋಟೆ, ವಿಜಯಪುರ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಟ್ರ್ಯಾಕ್ಟರ್ ಮೂಲಕ ಬೆಳಗಾವಿ ಸುವರ್ಣಸೌಧ ಮುತ್ತಿಗೆ ಹಾಕಲು ಕೂಡಲಸಂಗಮ ಬಸವ ಜಯಮೃತ್ಯುಂಜಯ ಶ್ರೀಗಳು ಕರೆ ನೀಡಿದ್ದಾರೆ. ಆದರೆ ಅಧಿವೇಶನ ಸಂದರ್ಭದಲ್ಲಿ ಟ್ರ್ಯಾಕ್ಟರ್ ಚಳವಳಿ ನಡೆದರೆ ಸಾರ್ವಜನಿಕರಿಗೆ ತೊಂದರೆ ಉಂಟಾಗುವ ಸಾಧ್ಯತೆ ಇದೆ. ಪಂಚಮಸಾಲಿ ಹೋರಾಟಕ್ಕೆ ಮುಂಚಿತವಾಗಿ ಸರಕಾರ ಮೀಸಲಾತಿ ವಿಚಾರವಾಗಿ ಕ್ರಮ ಕೈಗೊಳ್ಳುತ್ತದೆಯಾ ಎಂಬುದನ್ನು ಕಾದು ನೋಡಬೇಕು.

ಗಡಿಯಲ್ಲಿ ಎಂಇಎಸ್ ಪುಂಡಾಟ: ಚಳಿಗಾಲ ಅಧಿವೇಶನ ಸಂದರ್ಭದಲ್ಲಿ ''ಮಹಾಮೇಳಾವ್'' ಹೆಸರಿನಲ್ಲಿ ಎಂಇಎಸ್ (ಮಹಾರಾಷ್ಟ್ರ ಏಕೀಕರಣ ಸಮಿತಿ) ಪುಂಡಾಟ ಮೆರೆಯಲು ಮತ್ತೊಮ್ಮೆ ಸಿದ್ಧತೆ ನಡೆಸಿದೆ. ಕಳೆದ ವರ್ಷದಿಂದ ಮಹಾಮೇಳಾವ್ ಗೆ ಬೆಳಗಾವಿ ಜಿಲ್ಲಾಡಳಿತ ಅವಕಾಶ ನೀಡಿಲ್ಲ. ಈ ಬಾರಿಯೂ ಮೇಳಾವ್‌ಗೆ ಅನುಮತಿ ನಿರಾಕರಿಸಲಾಗಿದೆ. ನಾವು ಮಹಾಮೇಳಾವ್ ಮಾಡುತ್ತೇವೆ ಎಂದು ಎಂಇಎಸ್ ಸವಾಲು ಎಸೆದಿದೆ. ಒಂದುವೇಳೆ ಬೆಳಗಾವಿಯಲ್ಲಿ ಮಹಾಮೇಳಾವ್ ನಡೆಸಲು ಅವಕಾಶ ನೀಡದಿದ್ದರೆ ಕರ್ನಾಟಕ - ಮಹಾರಾಷ್ಟ್ರ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತೇವೆ. ಕರ್ನಾಟಕದಿಂದ ಬರುವ ವಾಹನಗಳನ್ನು ಮಹಾರಾಷ್ಟ್ರ ಪ್ರವೇಶಿಸದಂತೆ ತಡೆಯುತ್ತೇವೆ ಎಂದು ಶಿವಸೇನೆ ಉದ್ಧವ್ ಠಾಕ್ರೆ ಬಣ ಕೊಲ್ಹಾಪುರ ಜಿಲ್ಲಾಧಿಕಾರಿ ಸಂಜಯ್ ಶಿಂಧೆ ಅವರಿಗೆ ಮನವಿ ಸಲ್ಲಿಸಿದೆ. ಇನ್ನು ರಾಜ್ಯದ ಪೊಲೀಸರ ಮಹಾರಾಷ್ಟ್ರ ಗಡಿಯಿಂದ ರಾಜ್ಯಕ್ಕೆ ಪ್ರತಿಭಟನಾಕಾರರು ಪ್ರವೇಶಿಸದಂತೆ ಕಟ್ಟೆಚ್ಚರ ವಹಿಸಿದ್ದಾರೆ.

> ಈಗಾಗಲೇ 55 ಸಂಘಟನೆಗಳು ಪ್ರತಿಭಟನೆಗೆ ಅವಕಾಶ ಕೇಳಿ ಮನವಿ ಸಲ್ಲಿಸಿದ್ದು ಜಿಲ್ಲಾಧಿಕಾರಿ ಸೇರಿದಂತೆ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆಸಿ ಪ್ರತಿಭಟನೆಗೆ ದಿನಾಂಕ ನಿಗದಿಪಡಿಸಲಾಗುತ್ತದೆ. ಈಗಾಗಲೇ ಪ್ರತಿಭಟನೆಗೆ ಸ್ಥಳ ನಿಯೋಜನೆ ಮಾಡಲಾಗಿದ್ದು ಸೂಕ್ತ ಭದ್ರತೆ ಒದಗಿಸಲಾಗುತ್ತದೆ.
>
> **ಯಡಾ ಮಾರ್ಟಿನ್ ಮಾರ್ಬನ್ಯಾಂಗ್,** ಬೆಳಗಾವಿ ನಗರ ಪೊಲೀಸ್ ಆಯುಕ್ತ

ಟ್ರ್ಯಾಕ್ಟರ್ ರ‍್ಯಾಲಿಗೆ ಮುಂದಾದ ಪಂಚಮಸಾಲಿಗಳು

ಕಳೆದ ಮೂರು ವರ್ಷಗಳಿಂದ ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿ ಬೇಡಿಕೆ ವಿಚಾರವಾಗಿ ಸಾಕಷ್ಟು ಪ್ರತಿಭಟನೆಗಳು ನಡೆದಿವೆ. ಸಾವಿರಾರು ಸಂಖ್ಯೆಯಲ್ಲಿ ಹೋರಾಟಗಾರು ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ಸರಕಾರದ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ. ಈ ಬಾರಿಯೂ ಟ್ರ್ಯಾಕ್ಟರ್ ಚಳಿವಳಿ ಮೂಲಕ ಉಗ್ರ ಹೋರಾಟಕ್ಕೆ ಪಂಚಮಸಾಲಿ ಸಮುದಾಯ ಕರೆನೀಡಿದ್ದು ಸರಕಾರಕ್ಕೆ ತಲೆನೋವಾಗಿ ಪರಿಣಮಿಸಿದೆ.

ಕರ್ನಾಟಕ ಮದ್ಯಪಾನಪ್ರಿಯರ ಹೋರಾಟ ಸಂಘದ ವತಿಯಿಂದ ಈ ಬಾರಿಯೂ ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲು ತಯಾರಿ ನಡೆದಿದೆ. ತಮ್ಮ ವಿಶಿಷ್ಟ ಬೇಡಿಕೆಗಳ ಮೂಲಕ ಗಮನಸೆಳೆಯುವ ಹೋರಾಟಗಾರರು ಈ ಬಾರಿಯೂ ಸರ್ಕಾರಕ್ಕೆ ತಮ್ಮ ಸಮಸ್ಯೆ ಹೇಳಿಕೊಳ್ಳಲಿದ್ದಾರೆ. ಈಗಾಗಲೇ ಸಂಘಟನೆ ಪ್ರಮುಖರು ಪ್ರತಿಭಟನೆಗೆ ಅವಕಾಶ ಕೋರಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದು, ರಾಜ್ಯದ ವಿವಿಧ ಭಾಗಗಳಿಂದ ಮದ್ಯಪಾನ ಪ್ರಿಯರು ಭಾಗವಹಿಸಲಿದ್ದಾರೆ.

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಚಾಮರಾಜನಗರ ವಿಭಾಗ, ಚಾಮರಾಜನಗರ–571313
ದೂರವಾಣಿ/ಫ್ಯಾಕ್ಸ್ ಸಂಖ್ಯೆ: 08226–222027
Email-eecnr@kpwd.gov.in/ pwdeechngr@gmail.com
ಸಂಖ್ಯೆ/ಕಾ.ಪಾ.ಅ/ಚಾ.ವಿ.ಚಾ/ಟೆಂಡರ್/2024–25 ದಿನಾಂಕ:04.12.2024
(ಎರಡು ಲಕೋಟೆ) ಅಲ್ಪಾವಧಿ ಟೆಂಡರ್
ಅಧಿಸೂಚನೆ ಸಂಖ್ಯೆ 16/2024–25 ದಿನಾಂಕ:04.12.2024 (2ನೇ ಕರೆ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆ ಂಡರ್‌ಗಳನ್ನು KW-4 (ಸ್ಟಾಂಡರ್ ಟೆಂಡರ್ ಡಾಂಕುಮೆಂಟ್) ಹಾಗೂ KTTP Act 1999 and KTTP rule 2000 ರಲ್ಲಿ (ಸಿವಿಲ್) ಗುತ್ತಿಗೆದಾರರುಗಳಿಂದ ಇ–ಪ್ರಕ್ಯೂರ್‌ಮೆಂಟ್ ಮೂಲಕ, ಲೆ.ಶಿ: 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ ಅಡಿಯಲ್ಲಿ ಗರಿಷ್ಠ ಅಂದಾಜು ಮೊತ್ತ ರೂ 230.00 ಲಕ್ಷಗಳ 1 ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಡೌನ್ ಲೋಡ್ ಮಾಡಬಹುದಾದ ದಿನಾಂಕ 04.12.2024 ರಿಂದ 12.12.2024 ಸಂಜೆ 16.00 ಗಂಟೆವರೆಗೆ, ಟೆಂಡರ್ ಪೂರ್ವಭಾವಿ ಸಭೆ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿಯ ಸಭಾಂಗಣದಲ್ಲಿ ದಿನಾಂಕ 09.12.2024 ರಂದು ಬೆಳಿಗ್ಗೆ 11.00 ಗಂಟೆಗೆ, ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ 12.12.2024 ಸಂಜೆ 16.00 ಗಂಟೆಯವರಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ 13.12.2024 ಸಂಜೆ 16.00 ಗಂಟೆಯ ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 16.12.2024 ಹಾಗೂ ಇನ್ನೂ ಮುಂದೆ ಈ ನೋಟಿಫಿಕೇಷನ್‌ಗೆ ಸಂಬಂಧ ಪಟ್ಟ ಬದಲಾವಣೆಗಳನ್ನು ಇ – ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಹೆಚ್ಚಿನ ಮಾಹಿತಿ/ವಿರಗಳನ್ನು https://www.Kppp.karnataka.gov.in ಜಾಲದಲ್ಲಿ ಹಾಗೂ ಕೆಳಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಪಡೆಯಬಹುದಾಗಿದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ವಿಭಾಗ
ಚಾಮರಾಜನಗರ ಚಾಮರಾಜನಗರ.
ಸಂ:ವಾಸಾಸಂಇ:ಚಾನಗರ:456:2024–25

ಚಿಕ್ಕಮಗಳೂರಿನ ದೇಗುಲಕ್ಕೆ ದಲಿತ ಯುವಕರ ಪ್ರವೇಶ ಹಿನ್ನೆಲೆ

ಗ್ರಾಮಸ್ಥರಿಂದ ಪೂಜೆ ಸ್ಥಗಿತ ಅಧಿಕಾರಿಗಳ ಸಂಧಾನ ಯತ್ನ

ಚಿಕ್ಕಮಗಳೂರು: ದಲಿತ ಯುವಕರು ದೇವಸ್ಥಾನ ಪ್ರವೇಶಿಸಿದ ಕಾರಣಕ್ಕೆ ಗ್ರಾಮಸ್ಥರು ದೇವಾಲಯದಲ್ಲಿ ಪೂಜೆ ಸಲ್ಲಿಸದೆ ಹಿಂದಿರುಗಿದ ಘಟನೆ ಚಿಕ್ಕಮಗಳೂರು ತಾಲೂಕಿನ ಬೆಳವಾಡಿ ಸಮೀಪದ ನರಸೀಪುರ ಗ್ರಾಮದಲ್ಲಿ ನಡೆದಿದೆ.

ಘಟನೆ ಹಿನ್ನೆಲೆಯಲ್ಲಿ ಸ್ಥಳಕ್ಕೆ ತಹಸೀಲ್ದಾರ್ ಡಾ.ಸುಮಂತ್, ರಾಜಸ್ವ ನಿರೀಕ್ಷಕರು ಭೇಟಿನೀಡಿ ತಿರುಮಲೇಶ್ವರ ದೇವಸ್ಥಾನಕ್ಕೆ ಬೀಗ ಹಾಕಿದ್ದಾರೆ. ನರಸೀಪುರ ಗ್ರಾಮದಲ್ಲಿ 200 ಕುರುಬ ಸಮುದಾಯದ ಕುಟುಂಬಗಳು ವಾಸವಾಗಿದ್ದರೆ, ಪರಿಶಿಷ್ಟ ಜಾತಿ ಸಮುದಾಯದ 13ರಿಂದ 15 ಕುಟುಂಬದವರು ಮಾತ್ರ ವಾಸಿಸುತ್ತಿದ್ದಾರೆ. ತಿರುಮಲೇಶ್ವರ ದೇವಸ್ಥಾನಕ್ಕೆ ಹಿಂದಿನಿಂದಲೂ ಪರಿಶಿಷ್ಟ ಜಾತಿಯವರು ಪ್ರವೇಶಿಸುತ್ತಿರಲಿಲ್ಲ ಎನ್ನಲಾಗಿದೆ.

ದೇಗುಲ ಪ್ರವೇಶ: ತಹಸೀಲ್ದಾರ್‌ಗೆ ಮನವಿ

ಆದರೆ ಇಬ್ಬರು ದಲಿತ ಯುವಕರು ದೇವಸ್ಥಾನ ಪ್ರವೇಶಿಸುವುದಾಗಿ ತಹಸೀಲ್ದಾರ್ ಡಾ.ಸುಮಂತ್‌ಗೆ ಮನವಿ ಸಲ್ಲಿಸಿದ್ದರು. ಇದಕ್ಕೆ ತಮ್ಮ ಅಭ್ಯಂತರವಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆನ್ನಲಾಗಿದೆ. ಮಂಗಳವಾರ ಪೂಜೆ ನಡೆಯುತ್ತಿದ್ದ ವೇಳೆ ಯುವಕರು ದೇವಸ್ಥಾನದೊಳಗೆ ಪ್ರವೇಶಿಸಿದ್ದಾರೆ. ಈ ವೇಳೆ ಕುರುಬ ಸಮುದಾಯದವರು ಪೂಜೆ ಸಲ್ಲಿಸದೆ ಹಿಂದಿರುಗಿದ್ದಾರೆ. ದೇವಸ್ಥಾನ 2012ರಲ್ಲಿ ಮುಜರಾಯಿ ಇಲಾಖೆಗೆ ಸೇರಿದ್ದು, ಹಿಂದಿನಿಂದಲೂ ಪೂಜೆ ಸಲ್ಲಿಸುತ್ತಿದ್ದ ಕುರುಬರು ಪೂಜೆ ಸ್ಥಗಿತಗೊಳಿಸಿ ಮನೆಗೆ ತೆರಳಿದ್ದಾರೆ. ಇದರ ಬೆನ್ನಲ್ಲೇ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಂಧಾನ ಸಭೆ ಏರ್ಪಡಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಹೆಬ್ಬಾವು ಸೆರೆಹಿಡಿದ ಸ್ನೇಕ್ ಹರೀಶ್

ಭತ್ತದ ಗದ್ದೆಯಲ್ಲಿ ಭಾರಿ ಗಾತ್ರದ ಹೆಬ್ಬಾವು ಪತ್ತೆ

ರಾಮನಗರ: ತಾಲೂಕಿನ ಪಾಲಾಭೋವಿ ದೊಡ್ಡಿಯ ಅರ್ಕಾವತಿ ನದಿಯ ದಂಡೆ ಬಳಿ ಇರುವ ಚಂದ್ರೇಗೌಡ ಎಂಬುವರ ಭತ್ತದ ಗದ್ದೆಯಲ್ಲಿ ಭಾರಿ ಗಾತ್ರದ ಹೆಬ್ಬಾವು ಪತ್ತೆಯಾಗಿದೆ.

ಗುರುವಾರ ಬೆಳಿಗ್ಗೆ ಭತ್ತದ ಕೊಯ್ಲು ಮಾಡುವಾಗ ಕಾರ್ಮಿಕರು ಗದ್ದೆಯಲ್ಲಿ ಮಲಗಿದ್ದ ಹೆಬ್ಬಾವು ಗಮನಿಸಿದ್ದಾರೆ. ಕೂಡಲೇ ಮಾಲೀಕ ಚಂದ್ರೇಗೌಡ ಅವರು ವಲಯ ಅರಣ್ಯಾಧಿಕಾರಿ ಮೊಹಮ್ಮದ್ ಮನ್ಸೂರ್ ಅವರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಅರಣ್ಯ ಇಲಾಖೆ ಸಿಬ್ಬಂದಿ ವರದರಾಜು ಜೊತೆಗೆ ಸ್ಥಳೀಯ ಉರಗ ರಕ್ಷಕ ಸ್ನೇಕ್ ಹರೀಶ್ ಅವರು ಸ್ಥಳಕ್ಕೆ ಆಗಮಿಸಿ ಭತ್ತದ ಗದ್ದೆಯಲ್ಲಿ ಇದ್ದ ಹೆಬ್ಬಾವನ್ನು ರಕ್ಷಿಸಿದ್ದಾರೆ. ಹೆಬ್ಬಾವನ್ನು ಹಿಡಿದು ಚೀಲಕ್ಕೆ ತುಂಬಿಸಿ ಬೈಕ್‌ನಲ್ಲಿ ಕಾಡಿಗೆ ಬಿಡಲಾಯಿತು.

ಹೆಬ್ಬಾವು ಪತ್ತೆಯಾದ ಗದ್ದೆಯು ಅರ್ಕಾವತಿ ನದಿ ಪಕ್ಕದಲ್ಲೇ ಇದೆ. ಅನತಿ ದೂರದಲ್ಲೇ ರಾಮದೇವರ ಬೆಟ್ಟದ ಅರಣ್ಯವಿದೆ. ಹೆಬ್ಬಾವು ರಾತ್ರಿ ಆಹಾರ ಅರಸಿ ಕಾಡಿನಿಂದ ನದಿ ಹಾಗೂ ರಸ್ತೆ ದಾಟಿಕೊಂಡು ಬಂದಿರುವ ಸಾಧ್ಯತೆ ಇದ್ದು, ಗದ್ದೆಯಲ್ಲಿ ಬೀಡುಬಿಟ್ಟಿದೆ ಎಂದು ತಿಳಿಸಿದರು.

ರಾಮನಗರದ ಪಾಲಾಭೋವಿದೊಡ್ಡಿಯ ಗದ್ದೆಯಲ್ಲಿ ಪತ್ತೆಯಾದ ಹೆಬ್ಬಾವು.

ಜೈಲಿನ ಅಧೀಕ್ಷಕ ಅಮಾನತು

ಮಂಗಳೂರು: ಜಿಲ್ಲಾ ಕಾರಾಗೃಹಕ್ಕೆ ಪೊಲೀಸ್ ಕಮಿಷನರ್ ನೇತೃತ್ವದ ಪೊಲೀಸರು ದಾಳಿ ನಡೆಸಿದ ಸಂದರ್ಭ ಮಾದಕ ದ್ರವ್ಯಗಳು, ಮೊಬೈಲ್‌ಗಳ ಸಹಿತ ಜೈಲಿನೊಳಗೆ ನಿಷೇಧಿತ ವಸ್ತುಗಳು ಪತ್ತೆಯಾದ ಹಿನ್ನೆಲೆಯಲ್ಲಿ ಕರ್ತವ್ಯ ಲೋಪವೆಸಗಿದ ಜೈಲು ಅಧೀಕ್ಷಕ ಬಿಟಿಬಿ ಬಳೇಶಪ್ಪರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದೆ. ಮೈಸೂರು ಕೇಂದ್ರ ಕಾರಾಗೃಹದ ಸಹಾಯಕ ಅಧೀಕ್ಷಕ ಕೆ.ಎನ್. ಮೋಹನ್ ಕುಮಾರ್‌ರನ್ನು ಮಂಗಳೂರು ಕಾರಾಗೃಹದ ಅಧೀಕ್ಷಕರಾಗಿ ಪ್ರಭಾರ ವಹಿಸಲಾಗಿದೆ ಎಂದು ಕಾರಾಗೃಹ ಮತ್ತು ಸುಧಾರಣಾ ಸೇವೆಯ ಮಹಾನಿರ್ದೇಶಕ ದೇವಜ್ಯೋತಿ ರೇ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು–570006.
ಆಡಳಿತ ವಿಭಾಗ
ಸಂ: ಕರಾಮುವಿ/ಆವಿ/ಜಿಲ್–5/ಲೇಸಾವಿ/23/2024–25/02 ದಿ:03.12.2024
ರಿ–ಟೆಂಡರ್ ಪ್ರಕಟಣೆ (ಅಲ್ಪಾವಧಿ) CALL - 3
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ **ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ಸರಬರಾಜು ಮಾಡುವ ಬಗ್ಗೆ** ಆಸಕ್ತ ಸಂಸ್ಥೆಯವರಿಂದ ಒಂದು ವರ್ಷದ ಅವಧಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸ್ಪರ್ಧಾತ್ಮಕ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳನ್ನು ವಿ.ವಿ ನಿಲಯದ ವೆಬ್‌ಸೈಟ್ **www.ksoumysuru.ac.in** ಹಾಗೂ **https://kppp.karnataka.gov.in** ಅನ್ನು ನೋಡುವುದು. ಇ.ಎಂ.ಡಿ ಮೊತ್ತ **ರೂ.1,60,000/–** ಗಳನ್ನು ಹಾಗೂ ಇ–ಟೆಂಡರ್ ಪ್ರೊಸೆಸಿಂಗ್ ಹಣವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಾವತಿಸುವುದು.
ಸಹಿ/– ಕುಲಸಚಿವ
DIPR/DDMYS-910/KSMCA-617/2024-25

ಕರ್ನಾಟಕ ಗೃಹ ಮಂಡಳಿ
Karnataka Housing Board Building Communities
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009
ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)
Notification No.KHB/CE/Education Dept/FGC/KHB/2024-25/SE0206 Date: 04.12.2024
ಕರ್ನಾಟಕ ಗೃಹ ಮಂಡಳಿಯು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ರಾಯಚೂರು ಜಿಲ್ಲೆ, ಸಿಂಧನೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ಕಾಮಗಾರಿಯ ಅಂದಾಜು ಪಟ್ಟಿ ಮತ್ತು ನಕ್ಷೆಗಳನ್ನು ಸಿದ್ಧಪಡಿಸಲು ವಾಸ್ತುಶಿಲ್ಪಿ ಸಂಸ್ಥೆ (AEF) ನೇಮಕಾತಿಗಾಗಿ KPP Portal ಮೂಲಕ ಟೆಂಡರ್‌ಗಳನ್ನು ಕರೆಯಲಾಗಿದೆ.
ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 18.12.2024 ಸಂಜೆ 4.00 ಗಂಟೆಯವರೆಗೆ
ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511/ 080–22100077 website: **https://kppp.karnataka.gov.in**
ಸಹಿ/– ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/3630/ಆಕಾರ್/2024–25

ಕರ್ನಾಟಕ ಸರ್ಕಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ,
ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು–560024.
ಇ–ಮೇಲ್: commissionerahvs@gmail.com ಫೋನ್: 080–23412767
ಸಂಖ್ಯೆ: ಆಪಸಂ/ವಿಎಂಎಸ್/ವಿವ–31/ಕು.ಮೇ.ಜಂ.ಔ/ಟೆಂಡರ್/2024–25 ದಿನಾಂಕ : 05.12.2024
ಟೆಂಡರ್ ನೋಟಿಫಿಕೇಷನ್
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)
2024–25 ನೇ ಸಾಲಿನ ಕೇಂದ್ರ ಪುರಸ್ಕೃತ ಕಾರ್ಯಕ್ರಮವಾದ ಆಸ್ಕಾಡ್ ಯೋಜನೆ ಹಾಗೂ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪಶುವೈದ್ಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ದೈನಂದಿನ ಉಪಯೋಗಕ್ಕಾಗಿ ಕುರಿ ಮತ್ತು ಮೇಕೆಗಳಿಗೆ ಅವಶ್ಯವಿರುವ ಜಂತುನಾಶಕ ಔಷಧಿಗಳನ್ನು ಪೂರೈಸುವ ಸಂಬಂಧ KPP Portal ನಲ್ಲಿ ಒಂದು ವರ್ಷದ ಅವಧಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗದಿಪಡಿಸಿದ ಮೊತ್ತ ರೂ. 891.35 ಲಕ್ಷಗಳು. ಪೂರ್ಣ ಟೆಂಡರ್ ದಾಖಲೆಯನ್ನು https://kppp.karnataka.gov.in ಅಂತರ್ಜಾಲ ವಿಳಾಸದಲ್ಲಿ ದಿನಾಂಕ : 05.12.2024 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು KPP Portal ನಲ್ಲಿ ದಿನಾಂಕ : 05.12.2024 ರಿಂದ 06.01.2025 ರವರೆಗೆ 17.30 ಗಂಟೆಯೊಳಗೆ ಅವಶ್ಯ ದಾಖಲಾತಿಗಳನ್ನು ಅಪ್ಲೋಡ್ ಮಾಡಬಹುದಾಗಿದೆ.
ಹೆಚ್ಚಿನ ವಿವರಗಳಿಗಾಗಿ KPP Portal ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/– ಉಪ ನಿರ್ದೇಶಕರು, ಪಶುವೈದ್ಯಕೀಯ ಔಷಧಿ ಭಂಡಾರ, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
DIPR/CP/3747/Zen/2024-25

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಕಚೇರಿ, ಕರ್ನಾಟಕ ಜಲಸಾರಿಗೆ ಮಂಡಳಿ ಬೈತ್‌ಖೋಲ್, ಕಾರವಾರ
ಕ್ರ.ಸಂ.ಕಜಮಂ–01/ಕಾಮಗಾರಿ–IV/2023–24 ದಿನಾಂಕ: 02.12.2024
ಟೆಂಡರು ಪ್ರಕಟಣೆ (3ನೇ ಕರೆ)
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (ದ್ವಿ–ಲಕೋಟೆ ಪದ್ಧತಿ)
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಯನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, **https://kppp.karnataka.gov.in/kppp** ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
ಕಾಮಗಾರಿಯ ಹೆಸರು: (1) Design, Detailed Engineering, Manufacturing, Supply, Installation, Testing and Commissioning of Visitor Management System Cum Attendance System with Visitor Management Systein along with all security entry exit accessories in Karwar and Old Mangalore Port- **(IDD/2024-25/SE0031),** ಟೆಂಡರ್‌ನ ವೆಚ್ಚ **ರೂ. 2,24,92,340.00** (GST ಹೊರತು ಪಡಿಸಿ), ಇ.ಎಂ.ಡಿ: **ರೂ. 3,37,500.00**, ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ಸಮಯ: **18-12-2024 @ 17.30 hours,** ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **23-12-2024 @17.30 hours**
ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿ ಹಾಗೂ ಸಾಮಾನ್ಯ ವಿಚಾರಣೆಗಾಗಿ ಈ ಕಛೇರಿಯ **ದೂರವಾಣಿ ಸಂ.: 08382 221035/ 221494** ಕ್ಕೆ ಕಛೇರಿ ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ಬಂದರು ಇಂಜಿನೀಯರ್
ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ
DIPR/KWR/KSMCA/584/24-25 Dt: 04.12.2024

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ, ಇಲಾಖೆ, ವಿಭಾಗ, ರಾಯಚೂರು
ದೂರವಾಣಿ ಸಂಖ್ಯೆ : 08532–225778
THESE WORKS ARE GENARAL, SC & ST CONTRACTORS
ಲೋಇ/ರಾವಿ/ತಾಂಶಾ–4/ಟೆಂಪ್ರ/2024–25/3811 ದಿನಾಂಕ:29–11–2024
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1, 2, 3 & 4)
1) ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ: ಲೋಇ/ರಾವಿ/ತಾಂಶಾ–4/ಟೆಂಪ್ರ/2024–25/3811 ದಿನಾಂಕಃ 29–11–2024 2) ಕಾಮಗಾರಿ ಹೆಸರು : ರಾಯಚೂರು ಜಿಲ್ಲೆಯ ಒಟ್ಟು 41 ಕಾಮಗಾರಿಗಳು. ರಾಯಚೂರು, ಮಾನವಿ, ಲಿಂಗಸುಗೂರು ಮತ್ತು ಸಿಂಧನೂರು ತಾಲೂಕು ವಿವಿಧೆಡೆ ಕಟ್ಟಡ, ಸೇತುವೆ ಮತ್ತು ರಸ್ತೆ ನಿರ್ವಹಣೆ ಕಾಮಗಾರಿಗಳು. 3) ಕಾಮಗಾರಿಯ ಮೊತ್ತ: ಕನಿಷ್ಠ ರೂ. 831668.44 ಗರಿಷ್ಠ ರೂ.79383179.77 4) ಮುಂಗಡ ಠೇವಣಿ ಮೊತ್ತ: ಕನಿಷ್ಠ ರೂ. 15800.00 ಗರಿಷ್ಠ ರೂ. 1190800.00 5) ಕಾಲಾವಧಿ (ಮಳೆಗಾಲ ಸೇರಿ): ಕನಿಷ್ಠ 3 (ಮೂರು) ತಿಂಗಳು ಗರಿಷ್ಠ 11 (ಹನ್ನೊಂದು) ತಿಂಗಳು 6) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: 12/12/2024 ಸಂಜೆ 4.00 ಗಂಟೆಯವರೆಗೆ 7) ಟೆಂಡರ್ ತೆರೆಯುವ ದಿನಾಂಕ: 13/12/2024 ಸಂಜೆ 4.30 ಗಂಟೆಯವರೆಗೆ
ಹೆಚ್ಚಿನ ವಿವರಗಳು ವೆಬ್‌ಸೈಟ್ https://kppp.karnataka.gov.in/ ಮುಖಾಂತರ ನೋಡಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.
DIP/RCR/575/KSMCA/573/2024-25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.
ಸಂ: ಬೆಂಅಪ್ರಾ/ನಯೋಸ/CLU-214/2271/2024-25 ದಿನಾಂಕ: 04.12.2024
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ಈ ಕೆಳಕಂಡ ಜಮೀನನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ.ಕೆ.ಪ್ರಸಾದ್	ಆನೇಕಲ್	ಸರ್ಜಾಪುರ	ಕತ್ರಿಗುಪ್ಪೆ	39/2	0–07	ವ್ಯವಸಾಯ	ವಾಣಿಜ್ಯ

ಷರಾ: ಈ ಜಮೀನಿನಲ್ಲಿ ವಾಣಿಜ್ಯ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಉತ್ತಮ ಬೆಲೆಯಲ್ಲಿ ದಿನ ಉಪಯೋಗಿ ವಸ್ತುಗಳು & ಕಡಿಮೆ ಬೆಲೆಯಲ್ಲಿ ವಾಣಿಜ್ಯ ಮಳಿಗೆಗಳು ಲಭ್ಯವಾಗುತ್ತದೆ. ವಾಣಿಜ್ಯ ಕಟ್ಟಡ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಾಣಿಜ್ಯ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ & ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು "**ವ್ಯವಸಾಯ ವಲಯ**" **ದಿಂದ** "**ವಾಣಿಜ್ಯ ಉಪಯೋಗಕ್ಕೆ**" ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.
ಸಂ: ಬೆಂಅಪ್ರಾ/ನಯೋಸ/CLU-252/2291/2024-25 ದಿನಾಂಕ: 05.12.2024
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಆರ್.ಪದ್ಮಾವತಮ್ಮ ಮತ್ತು ಇತರರು	ಆನೇಕಲ್	ಸರ್ಜಾಪುರ	ಹಲಸಹಳ್ಳಿ ತಿಪ್ಪಸಂದ್ರ	135/1	3–08	ವ್ಯವಸಾಯ	ವಾಣಿಜ್ಯ
2					135/2	0–25		
3					135/3	1–00		
4					136/2	0–19		
5					136/3	0–09		
6					136/4	0–32		
7					136/5	0–18		
					ಒಟ್ಟು	6–31		

ಷರಾ: ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಮುಡಾ: ಮತ್ತೊಂದು ದೂರು

ಮೈಸೂರು: ಮುಡಾ ಅಕ್ರಮದಲ್ಲಿ ಹಣ ಮಾಡಿರುವ ಅಧಿಕಾರಿಗಳು ತಮ್ಮ ಕುಟುಂಬಸ್ಥರು ಹಾಗೂ ಸಂಬಂಧಿಕರ ಆಸ್ತಿಗಳ ಕುರಿತು ತನಿಖೆ ಮಾಡುವಂತೆ ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಗುರುವಾರ ಮೈಸೂರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದಾರೆ.

ಮುಡಾದ 50:50 ಅನುಪಾತದ ನಿವೇಶನ ಹಗರಣದ ದೂರುದಾರ ಸ್ನೇಹಮಯಿ ಕೃಷ್ಣ ಲೋಕಾಯುಕ್ತಕ್ಕೆ ಮತ್ತೊಂದು ಮನವಿಪತ್ರ ಕೊಟ್ಟಿದ್ದಾರೆ.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಡಾ ನಿವೇಶನ ಹಂಚಿಕೆಯಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಅಕ್ರಮ ವ್ಯವಹಾರ ನಡೆದಿದೆ. ಹಿಂದಿನ ಆಯುಕ್ತ ನಟೇಶ್ ತಮ್ಮ ಹೆಂಡತಿ ರಶ್ಮಿ ಅವರನ್ನು ನಾಲ್ಕು ಸಂಸ್ಥೆಗಳಲ್ಲಿ ಪಾಲುದಾರರನ್ನಾಗಿ ಮಾಡಿ ಹಣ ಹೂಡಿದ್ದಾರೆ. ನಾಲ್ಕು ಕಂಪನಿಗಳಿಗೆ ಆಕೆ ನಿರ್ದೇಶಕಿಯಾಗಿದ್ದಾರೆ. ಅದರಲ್ಲಿ ರಶ್ಮಿ ಹೆಸರಲ್ಲಿ ಹಣ ಹೂಡಿರುವುದು ಕಂಡುಬಂದಿದೆ ಎಂದರು.

ಟ್ವೀಟೂ-ಖಾರಾ

ಜಾತ್ಯತೀತ ಜನತಾ ದಳ, ಕರ್ನಾಟಕ

ಕಾಂಗ್ರೆಸ್ ಸರಕಾರದಲ್ಲಿ ನಾಡಿಗೆ ದುಡಿದ ಮಹನೀಯರಿಗೆ ರಕ್ಷಣೆಯೇ ಇಲ್ಲ..! ನಡೆದಾಡುವ ದೇವರು ಎಂದೇ ಪ್ರಖ್ಯಾತರಾಗಿದ್ದ ಕರ್ನಾಟಕ ರತ್ನ, ತ್ರಿವಿಧ ದಾಸೋಹಿ ಸಿದ್ದಗಂಗಾ ಮಠದ ಪರಮ ಪೂಜ್ಯ ಡಾ. ಶಿವಕುಮಾರ ಮಹಾಸ್ವಾಮಿಗಳ ಪುತ್ಥಳಿಯನ್ನು ಕಿಡಿಗೇಡಿಗಳು ವಿರೂಪಗೊಳಿಸಿರುವುದು ಖಂಡನೀಯ. ಇಟಲಿ ಮಾತೆಯ ಆದೇಶವನ್ನು ಶಿರಸಾ ವಹಿಸಿ ಪಾಲಿಸುವ ಸಿಎಂ, ಡಿಸಿಎಂಗೆ ಕರ್ನಾಟಕದ ಮಹನೀಯರ ಬಗ್ಗೆ ಗೌರವವಿರಲಿ. ಮಹಾನ್ ಸಾಧಕರ ಪುತ್ಥಳಿ ಹಾಗೂ ಪ್ರತಿಮೆಗಳಿಗೆ ರಕ್ಷಣೆ ಕಲ್ಪಿಸಿ.

ಜಿ.ಎಸ್.ರಾಜಣ್ಣ, ಬೆಂಗಳೂರು

ಸಿದ್ದಗಂಗಾ ಶ್ರೀಗಳ ಮೂರ್ತಿಯನ್ನು ಯಾರೋ ಕಿಡಿಗೇಡಿಗಳು ವಿರೂಪಗೊಳಿಸಿರುವುದು ಖಂಡನೀಯ. ಅವರು ಯಾರೇ ಆಗಿದ್ದರೂ ಅಂತಹ ಕಿಡಿ ಗೇಡಿಗಳಿಗೆ ಕಠಿಣ ಶಿಕ್ಷೆ ಆಗಬೇಕು. ಇಂತಹ ವಿಚಾರದಲ್ಲಿ ಜೆಡಿಎಸ್ ಗಿರಾಕಿಗಳು ಅನಗತ್ಯವಾಗಿ ಅಧಿಕ ಪ್ರಸಂಗತನ ತೋರುವುದು ಕುಚೇಷ್ಟೆಯೇ ಸರಿ.



ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ:** ಮೈಸೂರಿನ ರಾಮಕೃಷ್ಣ ನಗರದ ಎ ಮತ್ತು ಬಿ ಬ್ಲಾಕ್‌ನ ವಿಶ್ವಮಾನವ ಜೋಡಿ ರಸ್ತೆ..
- **ಸಮಸ್ಯೆಯೇನು..?** ಮೈಸೂರಿನ ರಾಮಕೃಷ್ಣ ನಗರದ ಎ ಮತ್ತು ಬಿ ಬ್ಲಾಕ್‌ನ ವಿಶ್ವಮಾನವ ಜೋಡಿ ರಸ್ತೆಯಲ್ಲಿ ಒಣಗಿದ ಮರ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ.
- **ಪರಿಹಾರ:** ಒಣಗಿದ್ದ ಮರವನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಉಂಟಾಗಿದ್ದ ತೊಂದರೆ ನಿವಾರಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ವಾಹನ ಡಿಕ್ಕಿ: ತಾಯಿ, ಮಗ ಸಾವು

ತುಮಕೂರು: ಸಂಬಂಧಿಕರ ಹುಟ್ಟುಹಬ್ಬದ ಕಾರ್ಯಕ್ರಮ ಮುಗಿಸಿ ಮನೆಗೆ ವಾಪಸಾಗುತ್ತಿದ್ದ ವೇಳೆ ಅಪರಿಚಿತ ವಾಹನ ಡಿಕ್ಕಿಯಾಗಿ ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿದ ಘಟನೆ ತುಮಕೂರು ಸಮೀಪದ ಯಲ್ಲಾಪುರದಲ್ಲಿ ನಡೆದಿದೆ. ಉಮಾ (50), ವಿನೋದ್ (24), ಮೃತ ದುರ್ದೈವಿಗಳು. ಪಾವಗಡ ಮೂಲದ ಉಮಾ, ಎರಡು ದಿನಗಳ ಹಿಂದೆ ತಂಗಿ ಮನೆಗೆ ಬಂದಿದ್ದರು. ಬುಧವಾರ ಸಂಜೆ ತಂಗಿ ಮಗ ವಿನೋದ್ ಜತೆ ಯಲ್ಲಾಪುರದಲ್ಲಿ ಸಂಬಂಧಿಕರೊಬ್ಬರ ಬರ್ತ್ ಡೇ ಪಾರ್ಟಿಗೆ ತೆರಳಿದ್ದರು. ರಾತ್ರಿ ಊಟ ಮುಗಿಸಿಕೊಂಡು ಮನೆಗೆ ಬೈಕ್‌ನಲ್ಲಿ ವಾಪಸ್ ತೆರಳುವಾಗ ಅಪಘಾತ ಸಂಭವಿಸಿದೆ ಎನ್ನಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಮಹಾ ಸಿಎಂ ಆಗಿ ದೇವೇಂದ್ರ ಫಡ್ನವಿಸ್ ಪ್ರಮಾಣ ಸ್ವೀಕಾರ



ಹಾಸನದಲ್ಲಿ ಬೃಹತ್ ಜನಕಲ್ಯಾಣ ಸಮಾವೇಶದಲ್ಲಿ ಮುಖ್ಯಮಂತ್ರಿ, ಬಿಜೆಪಿ-ಜೆಡಿಎಸ್ ವಿರುದ್ಧ ಗುಡುಗು

ಗ್ಯಾರಂಟಿಗೆ ವಿರೋಧ ಜನದ್ರೋಹ: ಸಿಎಂ

ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆಗಳು ನಿಲ್ಲುವುದಿಲ್ಲ | ಗ್ಯಾರಂಟಿ ಯೋಜನೆ ಪಡೆದ ಫಲಾನುಭವಿಗಳಿಗೆ ಮೈತ್ರಿಪಕ್ಷಗಳ ಅಪಮಾನ | ಕಾಂಗ್ರೆಸ್‌ನಿಂದಷ್ಟೇ ಸುಭದ್ರ ಸರಕಾರ ಸಾಧ್ಯ: ಸಮಾವೇಶದಲ್ಲಿ ಸಿದ್ದರಾಮಯ್ಯ ಸಮರ್ಥನೆ

ಹಾಸನ: ಕಾಂಗ್ರೆಸ್ ಸರಕಾರದ ಐದು ಗ್ಯಾರಂಟಿಗಳನ್ನು ಪಡೆದಿರುವುದಕ್ಕೆ ಫಲಾನುಭವಿಗಳನ್ನು ಅವಮಾನಿಸುತ್ತಿರುವ ಬಿಜೆಪಿ-ಜೆಡಿಎಸ್ ಪರಮ ಜನದ್ರೋಹಿಗಳು. ಯಾವುದೇ ಕಾರಣಕ್ಕೂ ನಾವು ಗ್ಯಾರಂಟಿಗಳನ್ನು ನಿಲ್ಲಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದರು.

ಹಾಸನದಲ್ಲಿ ನಡೆದ ಬೃಹತ್ ಜನಕಲ್ಯಾಣೋತ್ಸವ ಸಮಾವೇಶವದಲ್ಲಿ ಮಾತನಾಡಿದ ಸಿಎಂ, ವರನಟ ಡಾ.ರಾಜ್ ಅವರು ಅಭಿಮಾನಿಗಳನ್ನು ದೇವರು ಎಂದು ಹೇಳುತ್ತಿದ್ದರು. ನಮಗೆ ಮತದಾರ ಬಂಧುಗಳೇ ದೇವರು. ಉಪ ಚುನಾವಣೆಯಲ್ಲಿ ಮೂರಕ್ಕೆ ಮೂರೂ ಕ್ಷೇತ್ರದಲ್ಲಿ ಕಾಂಗ್ರೆಸ್ ಆಶೀರ್ವದಿಸಿದ್ದಕ್ಕೆ ಧನ್ಯವಾದ ಎಂದರು.

ಮಹಾನ್ ನಾಯಕರ ಮೊಮ್ಮಕ್ಕಳಿಗೇ ಸೋಲು: ಹಾಸನದ ಮಹಾನ್ ನಾಯಕರ ಮೊಮ್ಮಗ ನಿಖಿಲ್ ಕುಮಾರಸ್ವಾಮಿಯನ್ನು ಚನ್ನಪಟ್ಟಣದಲ್ಲಿ, ಮಾಜಿ ಮುಖ್ಯಮಂತ್ರಿ ಎಸ್.ಆರ್.ಬೊಮ್ಮಾಯಿ ಅವರ ಮೊಮ್ಮಗನನ್ನು ಶಿಗ್ಗಾವಿಯಲ್ಲಿ ಜನ ಸೋಲಿಸಿ ನಮಗೆ ಆಶೀರ್ವದಿಸಿದ್ದಾರೆ ಎಂದರು.

ಎಚ್.ಡಿ.ಕುಮಾರಸ್ವಾಮಿ ಅವರಿಗೆ ಮುಖ್ಯಮಂತ್ರಿ ಆಗುವಷ್ಟು ಬಹುಮತ ಈ ರಾಜ್ಯದ ಜನರೆ ಯಾವತ್ತೂ ಕೊಟ್ಟಿಲ್ಲ. ಒಮ್ಮೆ ಕಾಂಗ್ರೆಸ್ ಬೆಂಬಲದಲ್ಲಿ ಮತ್ತೊಮ್ಮೆ ಬಿಜೆಪಿ ಬೆಂಬಲದಲ್ಲಿ ಮುಖ್ಯಮಂತ್ರಿ ಆದರು. ಬಳಿಕ ಎರಡೂ ಪಕ್ಷಗಳಿಗೆ ವಂಚಿಸಿದರು ಎಂದು ಸಿಎಂ ವಾಗ್ದಾಳಿ ನಡೆಸಿದರು.

ಬಿಜೆಪಿಯದ್ದು ಜನದ್ರೋಹಿ ಸರಕಾರ: ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ಸುಭದ್ರ ಸರಕಾರ ಕೊಟ್ಟಿದೆ. ಮಾತ್ರವಲ್ಲ ಕಾಂಗ್ರೆಸ್ ಆಡಳಿತಕ್ಕೆ ಬಂದಾಗಲೆಲ್ಲಾ ಕೊಟ್ಟಮಾತು ಉಳಿಸಿಕೊಂಡಿದ್ದೇವೆ. 2013 ರಲ್ಲಿ ಕೊಟ್ಟ ಮಾತಿನಂತೆ ಹಲವಾರು ಭಾಗ್ಯಗಳನ್ನು ಜಾರಿ ಮಾಡಿದೆವು. ಈ ಬಾರಿ ಐದಕ್ಕೆ ಐದೂ ಗ್ಯಾರಂಟಿಗಳ ಜೊತೆಗೆ ಪ್ರಣಾಳಿಕೆಯಲ್ಲಿ ಘೋಷಿಸಿದ ಎಲ್ಲಾ ಗ್ಯಾರಂಟಿಗಳನ್ನೂ ಈಡೇರಿಸುತ್ತಿದ್ದೇವೆ ಎಂದು ಒಂದೊಂದಾಗಿ ಅವರು ವಿವರಿಸಿದರು.

ಹಾಸನದಲ್ಲಿ ನಡೆದ ಬೃಹತ್ ಜನಕಲ್ಯಾಣ ಸಮಾವೇಶವನ್ನು ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಡಿಸಿಎಂ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಸಚಿವರಾದ ಡಾ.ಪರಮೇಶ್ವರ್, ಎಚ್.ಕೆ.ಪಾಟೀಲ್, ಡಾ.ಎಚ್.ಸಿ.ಮಹದೇವಪ್ಪ, ಜಮೀರ್ ಅಹಮದ್, ಕೆ.ಎಚ್.ಮುನಿಯಪ್ಪ ಮೊದಲಾದವರು ಇದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಷಣ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಷಣ.

ಮಾಜಿ ಪ್ರಧಾನಿಗೆ ತರಾಟೆ

ಮಾಜಿ ಪ್ರಧಾನಿ ದೇವೇಗೌಡರು ನನಗಿಂತ 15 ವರ್ಷ ಹಿರಿಯರು. ಅವರು ಅಷ್ಟೇ ಘನತೆಯಿಂದ ಮಾತಾಡಬೇಕಿತ್ತು. ಯಾವತ್ತೂ ಗರ್ವ ತೋರಿಸದ ನನಗೆ, ಸಿದ್ದರಾಮಯ್ಯ ಅವರ ಗರ್ವಭಂಗ ಮಾಡ್ತೀನಿ ಎಂದರು. ಇದನ್ನು ನೀವು ಒಪ್ಪಿಕೊಳ್ಳುತ್ತೀರಾ, ಸಹಿಸುತ್ತೀರಾ ಎಂದು ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜನತೆ ಯಾವುದೇ ಕಾರಣಕ್ಕೂ ಸಹಿಸಲ್ಲ ಎಂದು ಒಕ್ಕೊರಲಿನಿಂದ ಕೂಗಿದರು.

ಹಾಸನ ಮತ್ತೆ ಕಾಂಗ್ರೆಸ್ ತೆಕ್ಕೆಗೆ

ಕಾಂಗ್ರೆಸ್ ಸರಕಾರ ಮಾತ್ರ ಸುಭದ್ರ ಸರಕಾರ ಕೊಡಲು ಸಾಧ್ಯ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಹಾಸನ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಜಯಭೇರಿಗಳಿಸಲಿದೆ. ಇದು ಶತಃಸಿದ್ಧ ಎಂದು ಸಿದ್ದರಾಮಯ್ಯ ಭರವಸೆ ವ್ಯಕ್ತಪಡಿಸಿದರು. ಹಾಸನದಲ್ಲಿ ಈ ಮಟ್ಟದ ದೊಡ್ಡ ಜನಕಲ್ಯಾಣ ಕಾಂಗ್ರೆಸ್ ಸಮಾವೇಶ ಹಿಂದೆಂದೂ ಆಗಿರಲಿಲ್ಲ. ಇದರಲ್ಲಿ ಸ್ವಾಭಿಮಾನಿ ಒಕ್ಕೂಟಗಳು, ಕಾಂಗ್ರೆಸ್ಸೇತರ ಸಂಘಟನೆಗಳು ಮತ್ತು ಕಾಂಗ್ರೆಸ್ ಪಕ್ಷ ಒಟ್ಟಾಗಿ ಶ್ರಮಿಸಿದ್ದಾರೆ ಎಂದು ಮೆಚ್ಚುಗೆ ಸೂಚಿಸಿದರು.

ಮೇಕೆದಾಟು: ಎಚ್‌ಡಿ ಕುಮಾರಸ್ವಾಮಿ ಮೌನವೇಕೆ..?

ಕೇಂದ್ರದಲ್ಲಿ ಸಚಿವರಾಗಿರುವ ಎಚ್.ಡಿ.ಕುಮಾರಸ್ವಾಮಿ ಯವರು ಮೇಕೆದಾಟು ವಿಚಾರದಲ್ಲಿ ಮೌನವಾಗಿರು ವುದು ಏಕೆ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಬೆಂಗಳೂರಿನ ಜನತೆಗೆ ನೀರು ಬೇಕಾಗಿದೆ, ಕೊಡಿಸಲಿ ಎಂದು ಸವಾಲು ಹಾಕಿದರು. ಹಾಸನದ ಹೆಣ್ಣು ಮಕ್ಕಳು ಕಣ್ಣೀರಲ್ಲಿ ಕೈತೊಳೆಯುತ್ತಿದ್ದಾರೆ. ಕೇಂದ್ರ ಸರಕಾರ ರಾಜ್ಯದ ರೈತರ ಪಾಲಿನ ಸಾಲದಲ್ಲಿ ಶೇ58 ರಷ್ಟನ್ನು ಕಡಿತಗೊಳಿಸಿದೆ. ಇದರಿಂದ ಹಾಸನದ ರೈತರು ಮತ್ತು ರಾಜ್ಯದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ರೈತರ ಮಗ ಎಂದುಕೊಂಡಿರುವ ಕುಮಾರಸ್ವಾಮಿಯವರು ಏಕೆ ಕೇಂದ್ರ ಸರಕಾರವನ್ನು ಪ್ರಶ್ನಿಸುತ್ತಿಲ್ಲ. ನಬಾರ್ಡ್ ನಿಂದ ಆಗಿರುವ ಅನ್ಯಾಯವನ್ನು ಕುಮಾರಸ್ವಾಮಿ ಏಕೆ ಸರಿಪಡಿಸುತ್ತಿಲ್ಲ? ಕಳೆದ ಹಣಕಾಸು ವರ್ಷದಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಆಗಿರುವ 11 ಸಾವಿರ ಕೋಟಿ ರೂಪಾಯಿಗಳನ್ನು ರಾಜ್ಯಕ್ಕೆ ಕೊಡಿಸಲು ಬಿಜೆಪಿ- ಜೆಡಿಎಸ್ ಏಕೆ ಬಾಯಿಬಿಡುತ್ತಿಲ್ಲ ಎಂದು ಪ್ರಶ್ನಿಸಿದರು.

ಒಕ್ಕಲಿಗ ನಾಯಕರಿಗೆ ದೇವೇಗೌಡರು ಮಾರಕ

ದೇವೇಗೌಡರು ರಾಜಕೀಯವಾಗಿ ಒಕ್ಕಲಿಗ ನಾಯಕರನ್ನು ನಿರಂತರವಾಗಿ ಮುಗಿಸುತ್ತಿದ್ದಾರೆ. ಬಚ್ಚೇಗೌಡ, ವೈ.ಕೆ. ರಾಮಯ್ಯ, ಬೈರೇಗೌಡ, ಕೃಷ್ಣಪ್ಪ, ಚಲುವರಾಯಸ್ವಾಮಿ ಸೇರಿ ಸಮುದಾಯದ ಬಹಳಷ್ಟು ನಾಯಕರನ್ನು ದೇವೇಗೌಡರು ರಾಜಕೀಯವಾಗಿ ಮುಗಿಸಿದರು. ಎಂದು ಮುಖ್ಯಮಂತ್ರಿಯವರು ನುಡಿದರು.ನಾನು ಮತ್ತು ಜಾಲಪ್ಪ ಒಟ್ಟಾಗಿ ರಾಮಕೃಷ್ಣ ಹೆಗಡೆ ಬದಲಿಗೆ ದೇವೇಗೌಡರನ್ನು ಮುಖ್ಯಮಂತ್ರಿ ಮಾಡಿದೆವು. ಆಮೇಲೆ ನನ್ನನ್ನೇ ಪಕ್ಷದಿಂದ ಉಚ್ಚಾಟಿಸಿದರು ಎಂದು ಈ ಹಿಂದಿನ ರಾಜಕೀಯ ವಿದ್ಯಮಾನಗಳನ್ನು ಹಂತ ಹಂತವಾಗಿ ವಿವರಿಸಿದರು. ಬಿಜೆಪಿಯಾಗಲಿ, ಜೆಡಿಎಸ್ ಆಗಲಿ ಕೊಟ್ಟ ಮಾತು ಉಳಿಸಿಕೊಳ್ಳಲಿಲ್ಲ. ಪ್ರಧಾನಿ ಮೋದಿ ಅವರ ಸರಕಾರ ನಾವು ದುಡ್ಡು ಕೊಡ್ತೀವಿ ಅಂದರೂ ಅಕ್ಕಿ ಕೊಡಲಿಲ್ಲ. ಇಂಥಾ ಜನದ್ರೋಹಿ ಸರಕಾರ ಬಿಜೆಪಿಯದ್ದು ಎಂದು ಮುಖ್ಯಮಂತ್ರಿ ಹಿಗ್ಗಾಮುಗ್ಗಾ ಜಾಡಿಸಿದರು. ನಾವು ಐದು ಗ್ಯಾರಂಟಿಗಳಿಗಾಗಿ 56 ಸಾವಿರ ಕೋಟಿ ರೂಪಾಯಿಯನ್ನು ರಾಜ್ಯದ ಜನರ ಖಾತೆಗೆ ನೇರವಾಗಿ ಹಾಕುತ್ತಿದ್ದೇವೆ. ಈ ಐದು ಗ್ಯಾರಂಟಿಗಳನ್ನು ಪಡೆಯುತ್ತಿರುವ ಫಲಾನುಭವಿಗಳನ್ನು ಅವಮಾನಿಸುತ್ತಿರುವ ಬಿಜೆಪಿ-ಜೆಡಿಎಸ್ ದೊಡ್ಡ ಜನದ್ರೋಹಿಗಳು ಎಂದರು.

ಒಕ್ಕಲಿಗ ನಾಯಕರಾಗಿದ್ದ ಕೃಷ್ಣಪ್ಪ ಅವರು ಆಗಲೇ ಈ ಪಾಪದ ಹೊರೆಯನ್ನು ಹೊರಬೇಕಾಗುತ್ತದೆ ಎಂದು ದೇವೇಗೌಡರಿಗೆ ಹೇಳಿದ್ದರು. ಈಗ ಕೃಷ್ಣಪ್ಪ ಅವರ ಮಾತು ನಿಜವಾಗಿದೆ. ಸಾಲು ಸಾಲು ಒಕ್ಕಲಿಗ ನಾಯಕರನ್ನು ರಾಜಕೀಯವಾಗಿ ಮುಗಿಸಿದ್ದರ ಫಲವನ್ನು ಈಗ ದೇವೇಗೌಡರು ನೋಡುವಂತಾಗಿದೆ.

- ಸಿದ್ದರಾಮಯ್ಯ ಮುಖ್ಯಮಂತಿ

ಸಮಾವೇಶದಲ್ಲಿ ಪಾಲ್ಗೊಂಡ ಸಿಎಂ ಅವರ ಅಸಂಖ್ಯ ಅಭಿಮಾನಿಗಳ ಸಂಭ್ರಮ.

ಸಿಎಂ-ಡಿಸಿಎಂರಿಂದ ಜನತೆಗೆ ಧನ್ಯವಾದ.

ಸಮಾವೇಶದಲ್ಲಿ ನೇಗಿಲು ಹೊತ್ತ ಸಿಎಂ ಸಿದ್ದರಾಮಯ್ಯ, ಡಿಸಿಎಂ ಅವರೊಂದಿಗೆ.

ವಕ್ಫ್ ವಿರುದ್ಧ ಹೋರಾಟ ಬಿಜೆಪಿ ರಾಜಕೀಯ ನಾಟಕ: ಸಿದ್ದು ಲೇವಡಿ

ಹಾಸನ: ವಕ್ಫ್ ವಿರುದ್ಧ ಹೋರಾಟ ಮಾಡುತ್ತಿರುವ ಬಿಜೆಪಿ ವಿರುದ್ಧ ಸಿಎಂ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಜನಕಲ್ಯಾಣ ಸಮಾವೇಶಕ್ಕೆ ಮುನ್ನ ಭಾಗಿಯಾಗುವ ಮುನ್ನ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಕೀಯಕ್ಕಾಗಿ ಅವರು ವಕ್ಫ್ ಹೋರಾಟ ಮಾಡುತ್ತಿದ್ದಾರೆ ಎಂದು ದೂರಿದರು.

2014 ರಲ್ಲಿ ಅವರು ಚುನಾವಣಾ ಪ್ರಣಾಳಿಕೆಯಲ್ಲಿ ಏನು ಭರವಸೆ ನೀಡಿದ್ದರು. ಮುಸ್ಲಿಂ ಧರ್ಮಗುರುಗಳ ಜೊತೆ ಮಾತನಾಡುತ್ತೇವೆ. ಯಾರೆಲ್ಲಾ ಅತಿಕ್ರಮಣ ಮಾಡಿದ್ದಾರೋ ಅದೆಲ್ಲವನ್ನೂ ತೆರವುಗೊಳಿಸುತ್ತೇವೆ ಎಂದಿದ್ದರು. ಈ ಹಿಂದೆ ಸಿಎಂ ಆಗಿದ್ದ ಬಸವರಾಜ ಬೊಮ್ಮಾಯಿ ಸಹ ಅದನ್ನೇ ಹೇಳಿದ್ದರು. ನಮಗಿಂತ ಹೆಚ್ಚು ನೋಟಿಸ್ ಕೊಟ್ಟಿರುವುದು ಅವರೇ ಎಂದು ಮುಖ್ಯಮಂತ್ರಿ ತಿರುಗೇಟು ನೀಡಿದರು.

ಬಿಜೆಪಿಯ ದ್ವಂದ್ವ ನೀತಿ: ಬಿಜೆಪಿಯವರು ಪ್ರಣಾಳಿಕೆಯಲ್ಲಿ ಹೇಳಿದಂತೆ ನಡೆದುಕೊಂಡಿಲ್ಲ. ಅದರ ಬಗ್ಗೆ ಈಗ ಏನನ್ನೂ ಮಾತನಾಡುತ್ತಿಲ್ಲ. ಆದರೀಗ ನಮ್ಮ ವಿರುದ್ಧ ಹೋರಾಟದ ನಾಟಕ ಆಡುತ್ತಿದ್ದಾರೆ. ಇದು ರಾಜಕೀಯ ದ್ವಂದ್ವ ನೀತಿ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಇನ್ನೇನು ಚಳಿಗಾಲದ ಅಧಿವೇಶನ ಆರಂಭ ಆಗುತ್ತಿದೆ. ಅಲ್ಲಿ ಮಾತನಾಡಲು ಬಿಜೆಪಿಯವರಿಗೆ ವಿಷಯಗಳಿಲ್ಲ. ಇತ್ತೀಚೆಗೆ ನಡೆದ ಉಪ ಚುನಾವಣೆಯಲ್ಲಿ ನಾವು ಮೂರನ್ನೂ ಗೆದ್ದಿದ್ದೇವೆ. 25 ವರ್ಷಗಳ ನಂತರ ಶಿಗ್ಗಾವಿಯಲ್ಲಿ ಜಯ ಸಾಧಿಸಿದ್ದೇವೆ. ಚನ್ನಪಟ್ಟಣದಲ್ಲೂ ಗೆದ್ದಿದ್ದೇವೆ. ಇದು ಅವರಿಗೆ ಸಹಿಸಲು ಆಗುತ್ತಿಲ್ಲ. ಅದಕ್ಕಾಗಿ ಅವರು ರಾಜಕೀಯ ನಾಟಕ ಶುರು ಮಾಡಿದ್ದಾರೆ ಎಂದು ಕಟುಟೀಕೆ ಮಾಡಿದರು.

ಜನರಿಗೆ ದುಡ್ಡು ಕೊಟ್ರೆ, ಬಿಜೆಪಿಗೇಕೆ ಬೆಂಕಿ?

ಹಾಸನ: ಕೇಂದ್ರ ಸರಕಾರ ಶ್ರೀಮಂತ ಕಂಪನಿಗಳ ತೆರಿಗೆಯನ್ನು ಶೇ.33ರಿಂದ 24ಕ್ಕೆ ಇಳಿಸಿದೆ. ಆದರೆ ಕರ್ನಾಟಕದ ಸರಕಾರ ಜನರ ಜೇಬಿಗೆ 56 ಸಾವಿರ ಕೋಟಿ ಹಣವನ್ನು ಹಾಕಿದರೆ ಬಿಜೆಪಿಯವರ ಹೊಟ್ಟೆಗೆ ಏಕೆ ಬೆಂಕಿ ಬೀಳುತ್ತದೆ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣ್‌ದೀಪ್ ಸಿಂಗ್ ಸುರ್ಜೇವಾಲ ಟೀಕಿಸಿದರು.

ಸಮಾವೇಶದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ, ಶ್ರೀಮಂತ ಕಂಪನಿಗಳು ತೆರಿಗೆ ಕಡಿತಗೊಳಿಸಿ ಅವರ ಜೇಬಿಗೆ 3 ಲಕ್ಷ ಕೋಟಿ ರು. ಹಾಕಿದ್ದಾರೆ. ಆದರೆ ನಮ್ಮ ಸರಕಾರ ಜನರ ಜೇಬಿಗೆ 56 ಸಾವಿರ ಕೋಟಿಯನ್ನು ಹಾಕಿದರೆ ನಿಮ್ಮ ಹೊಟ್ಟೆಗೆ ಬೆಂಕಿ ಏಕೆ ಬೀಳುತ್ತದೆ? ಕೇಂದ್ರ ಸರಕಾರ ದೊಡ್ಡ ಕೈಗಾರಿಕೆಗಳ ಮಾಲೀಕರ 17 ಲಕ್ಷ ಕೋಟಿ ಸಾಲವನ್ನು ಮನ್ನಾ ಮಾಡಿದರೆ, ನಮ್ಮ ಸರಕಾರ ಜನರ ಜೇಬಿಗೆ ಹಣ ಹಾಕಿದರೆ ಯಾಕೆ ಅಸೂಯೆಪಡುತ್ತೀರಿ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ ಅವರು ಕೇವಲ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರ ಮೇಲೆ ಮಾತ್ರ ದಾಳಿ ಮಾಡುತ್ತಿಲ್ಲ. ಕರ್ನಾಟಕದ ಬಡವರು, ಕಾರ್ಮಿಕರು, ರೈತರು, ಪರಿಶಿಷ್ಟರ ಮೇಲೆ ದಾಳಿ ಮಾಡುತ್ತಿದೆ. ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಬಡವರ ಜೇಬಿಗೆ ನೇರವಾಗಿ ಹಣ ಹೋಗುತ್ತಿದೆ. ಹೀಗಾಗಿ ಬಿಜೆಪಿ ಗ್ಯಾರಂಟಿ ಯೋಜನೆಗಳ ಮೇಲೆ ಟೀಕೆ ಮಾಡುತ್ತಿದೆ. ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಿ ರಾಜ್ಯದ ಮಹಿಳೆಯರಿಗೆ ಸಿಗುವ ಎರಡು ಸಾವಿರ, ಅನ್ನಭಾಗ್ಯ ಯೋಜನೆ ಅಕ್ಕಿ ಹಣ, 200 ಯೂನಿಟ್ ಉಚಿತ ವಿದ್ಯುತ್, ನಿರುದ್ಯೋಗಿ ಯುವಕರ ನಿರುದ್ಯೋಗ ಭತ್ಯೆಯನ್ನು ಕಸಿಯಲು ಪ್ರಯತ್ನಿಸುತ್ತಿದೆ ಎಂದು ಸುರ್ಜೇವಾಲಾ ಆರೋಪಿಸಿದರು.

ಕರ್ನಾಟಕದ ರಾಜಕಾರಣದಲ್ಲಿ ದಲಿತ ಸಮುದಾಯದಲ್ಲಿ ಹುಟ್ಟಿ, ಬಡತನದಲ್ಲಿ ಬೆಳೆದು, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ನಮ್ಮ ಭರವಸೆ. ಬಡತನದಲ್ಲಿ ಹುಟ್ಟಿ ಚಾಮುಂಡಿಯ ಆಶೀರ್ವಾದದಲ್ಲಿ ಬೆಳೆದ ಸಿದ್ದರಾಮಯ್ಯ ರಾಜ್ಯದ ಭವಿಷ್ಯ. ಕನಕಪುರದ ರೈತನ ಮಗ ಡಿ.ಕೆ.ಶಿವಕುಮಾರ್ ರಾಜ್ಯದ ಡಿಸಿಎಂ ಆಗಿರೋದು ನಮ್ಮ ಭರವಸೆ. ಸಿದ್ದರಾಮಯ್ಯ ಅವರು ಪ್ರಮಾಣಿಕರು. ಪ್ರಮಾಣಿಕತೆಯ ಪಕ್ಕದಲ್ಲಿ ಸಿದ್ದರಾಮಯ್ಯ ಅವರ ಹೆಸರು ಬರೆಯಬೇಕು. ಅಂತಹ ಪ್ರಮಾಣಿಕರನ್ನು ನಾವು ಕಾಪಾಡಿಕೊಳ್ಳಬೇಕು.

- ಪ್ರದೀಪ್ ಈಶ್ವರ್ ಚಿಕ್ಕಬಳ್ಳಾಪುರ ಶಾಸಕ

ಸಚಿವ ಮುನಿಯಪ್ಪ ಕಾರಿಗೆ ಡಿಕ್ಕಿ

ಹಾಸನ: ನಗರದಲ್ಲಿ ನಡೆದ ಜನಕಲ್ಯಾಣ ಸಮಾವೇಶಕ್ಕೆ ಆಗಮಿಸುತ್ತಿದ್ದ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರ ಕಾರು ಅಪಘಾತ ವಾಗಿದೆ. ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ 75 ರ ಶಾಂತಿಗ್ರಾಮ ಬಳಿ ಈ ಘಟನೆ ನಡೆದಿದೆ. ಬೆಂಗಳೂರಿನಿಂದ ಬರುತ್ತಿದ್ದಾಗ ಶಾಂತಿಗ್ರಾಮದ ಶುಲ್ಕ ವಸೂಲಿ ಕೇಂದ್ರದ ಹತ್ತಿರ ಸಚಿವರು ಕಾರು ನಿಧಾನ ಆದಾಗ ಹಿಂಬದಿಯಿಂದ ವೇಗವಾಗಿ ಬಂದ ಇನ್ನೋವಾ ಕಾರು ಡಿಕ್ಕಿ ಹೊಡೆದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಆಗಿಲ್ಲ. ಆದರೆ ಇನ್ನೋವಾ ಕಾರಿನ ಮುಂಭಾಗ ಭಾಗಶಃ ಜಖಂಗೊಂಡಿದೆ. ನಂತರ ಸಚಿವರು ಬದಲಿ ಕಾರಿನಲ್ಲಿ ಸಮಾವೇಶಕ್ಕೆ ತೆರಳಿದರು.

ನಮ್ಮನ್ನು ಅಲುಗಾಡಿಸಲು ಆಗಲ್ಲ: ಡಾ.ಜಿ. ಪರಮೇಶ್ವರ್

ಹಾಸನ: ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮಾತನಾಡಿ, ಬಿಜೆಪಿ-ಜೆಡಿಎಸ್ ವಿರುದ್ಧ ವಾಗ್ದಾಳಿ ನಡೆಸಿದರು.ನಮ್ಮ ತಟ್ಟೆಯಲ್ಲಿ ನೊಣ ಬಿದ್ದಿದೆ ಎಂದರೆ, ನಿಮ್ಮ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದೆ. ನಿಮ್ಮ ರೀತಿಯಲ್ಲಿ ನಾವು ಗುಂಪುಗಾರಿಕೆ ಮಾಡಲಿಲ್ಲ. ಇಲ್ಲ ಸಲ್ಲದ ಆಪಾದನೆ ಮಾಡಲಿಲ್ಲ ಎಂದು ಕಿಡಿ ಕಾರಿದರು.ಇದೇ ವೇಳೆ ಜೆಡಿಎಸ್ ವಿರುದ್ಧವೂ ದೂಷಣೆ ಮಾಡಿದ ಪರಮೇಶ್ವರ್, ಯಾವ ಪಕ್ಷ ಜಾತ್ಯಾತೀತ ಎಂದು ಹೇಳಿಕೊಂಡು, ಕಳೆದ 25 ವರ್ಷದಿಂದ ಹಾಸನ ಜನತೆಗೆ ಮಂಕುಬೂದಿ ಎರಚಿತ್ತೋ ಆ ಪಕ್ಷ ಇಂದು, ಕೋಮುವಾದಿ ಪಕ್ಷದವರು ಜೊತೆ ಸೇರಿಕೊಂಡು ಮಂತ್ರಿ ಆಗಿದ್ದೀರಾ, ನಿಮಗೆ ನಾಚಿಕೆ ಆಗಬೇಕು ಎಂದು ಹೆಸರು ಹೇಳದೇ ಎಚ್.ಡಿ.ಕುಮಾರಸ್ವಾಮಿ ಅವರನ್ನು ಟೀಕಿಸಿದರು.

ಯಾರ್ಯಾರು ಏನಂದರು?

ಹಾಸನ ಜೆಡಿಎಸ್ ಭದ್ರಕೋಟೆ ಎಂಬುದು ಕಳೆದ ಲೋಕಸಭೆ ಚುನಾವಣೆಯಲ್ಲಿ ಸಾಬೀತಾಗಿದೆ. ಅವರ ಶಕ್ತಿ ಈಗ ಎಲ್ಲಿದೆ, ಉಪ ಚುನಾವಣೆ ಯಲ್ಲಿ ಏನಾಯಿತು ಇದು ಶಕ್ತಿ ಪ್ರದ ರ್ಶನ ಸಮಾವೇಶ ಅಲ್ಲ, ವಿರೋಧ ಪಕ್ಷಗಳ ಟೀಕೆಗೆ ಉತ್ತರ ಕೊಡುವುದಷ್ಟೇ ನಮ್ಮ ಉದ್ದೇಶ. ಜೊತೆಗೆ ನಮ್ಮ ನಾಯಕರ ಕೈ ಬಲ ಪಡಿಸುವುದು ಇದರ ಉದ್ದೇಶ.

-ಕೆ.ಎನ್.ರಾಜಣ್ಣ ಉಸ್ತುವಾರಿ ಸಚಿವ

ಹಾಸನ ಯಾರ ಭದ್ರಕೋಟೆಯೂ ಅಲ್ಲ, ಹಿಂದೆ ಕಾಂಗ್ರೆಸ್ 7ಕ್ಕೆ ಏಳೂ ಕ್ಷೇತ್ರ ಗೆದ್ದಿತ್ತು. ಇದು ಕಾಂಗ್ರೆಸ್ ಮತ್ತು ಶೋಷಿತ ವರ್ಗಗಳ ಸ್ವಾಭಿಮಾನಿ ಸಮಾವೇಶ. ಸಿಎಂ ಇಳಿಯುವ ಮುನ್ನ ನಡೆಯುತ್ತಿರುವ ಬಿಜೆಪಿ ಟೀಕೆ ಹಾಸ್ಯಾಸ್ಪದ. ಬಿಜೆಪಿಯವರಿಗೆ ಮಾಡಲು ಕೆಲಸ ಇಲ್ಲ. ಏನೇನೋ ಮಾತನಾಡುತ್ತಾರೆ. ಅದೆಲ್ಲ ನಗಣ್ಯ.

-ಡಾ.ಮಹದೇವಪ್ಪ, ಸಚಿವ

ರಾಜ್ಯದಲ್ಲಿ ನಮ್ಮ ಪಕ್ಷ ನೀಡಿರುವ ಐದು ಗ್ಯಾರಂಟಿಗಳು ನಿರೀಕ್ಷೆಗೂ ಮೀರಿ ಯಶಸ್ವಿಯಾಗಿವೆ. 40 ಲಕ್ಷ ಮಹಿಳೆಯರು ಶಕ್ತಿ ಯೋಜನೆಯಡಿ ನಿತ್ಯ ಪ್ರಯಾಣ ಮಾಡುತ್ತಿದ್ದಾರೆ. ನಾವು ಯಾವ ಜಾತಿ, ಧರ್ಮ ನೋಡಿಲ್ಲ. ಎಲ್ಲಾ ಪಕ್ಷದವರೂ ಇದ್ದಾರೆ. ಅವರು ಲಾಭ ಪಡೆಯುತ್ತಿಲ್ಲವೇ. 52 ಸಾವಿರ ಕೋಟಿ ಖರ್ಚು ಮಾಡಿ ಸ್ವಾಭಿಮಾನದ ಬದುಕು ಕೊಟ್ಟಿದ್ದೇವೆ. ಇದು ಬಿಜೆಪಿ ಜೆಡಿಎಸ್‌ನವರಿಗೆ ಹೊಟ್ಟೆ ಕಿಚ್ಚು ತಂದಿದೆ. ದಯವಿಟ್ಟು ನೀವು ನಿಮ್ಮ ಮನೆ ಮಕ್ಕಳ ನೋಡಿಕೊಳ್ಳಿ.

-ಪ್ರಿಯಾಂಕ್‌ಖರ್ಗೆ, ಸಚಿವ

ಅಭಿವೃದ್ಧಿ ಅಂದರೆ ಕೇವಲ ರಸ್ತೆ, ಕಟ್ಟಡ ಅಲ್ಲ, ಜನರ ಮನೆ ಬೆಳಗಬೇಕು.ಹಾಗಾಗಿ ಗ್ಯಾರಂಟಿ ಯೋಜನೆ ಜಾರಿಯಾಗಿದೆ. ಬಿಜೆಪಿಯವರು ಸಿಎಂ ಮೇಲೆ ಕ್ಷುಲ್ಲಕ ಆರೋಪ ಮಾಡಲಾಗುತ್ತಿದೆ. ಉಪ ಚುನಾವಣೆಯಲ್ಲಿ ಜನ ಇದಕ್ಕೆ ತಕ್ಕ ಶಾಸ್ತಿ ಮಾಡಿದ್ದಾರೆ. ಮಹಿಳೆಯರ ಬಗ್ಗೆ ಜೆಡಿಎಸ್ ಗೌರವಿಸಬೇಕು. ಹೆಣ್ಣಿನ ಶಾಪ ಯಾರನ್ನೂ ಬಿಡುವುದಿಲ್ಲ. ಎಷ್ಟೋ ಮಹಿಳೆಯರಿಗೆ ಹಾಸನದಲ್ಲಿ ಅನ್ಯಾಯವಾಗಿದೆ. ನಾವು ಸ್ವಾಭಿಮಾನದ ಬದುಕು ಕೊಡುತ್ತೇವೆ.

-ಲಕ್ಷ್ಮಿ ಹೆಬ್ಬಾಳ್ಕರ್, ಸಚಿವೆ

ರಾರಾಜಿಸಿದ ಸಿದ್ದು ಭಾವಚಿತ್ರ

ಮತ್ತೊಂದೆಡೆ ಸಮಾವೇಶದ ತುಂಬೆಲ್ಲಾ ಸಿಎಂ ಸಿದ್ದರಾಮಯ್ಯ ಅವರ ಭಾವಚಿತ್ರ ರಾರಾಜಿಸಿದವು. ಜನ ಕಲ್ಯಾಣ ಸಮಾವೇಶದಲ್ಲಿ ಭಾಗಿಯಾಗಿದ್ದ ಪ್ರತಿಯೊಬ್ಬರ ಕೈಯಲ್ಲೂ ನಾಡದೊರೆಯ ಫೋಟೋ ಇದ್ದವು. ಬಹುಶಃ ಇದು ಅಪ್ಪಟ ಸಿದ್ದರಾಮೋತ್ಸವ ಎಂಬುದನ್ನು ಮನವರಿಕೆ ಮಾಡಲು ಹೀಗೆ ಮಾಡಲಾಗಿದೆ ಎಂದು ಅನೇಕರು ಮಾತನಾಡಿಕೊಂಡರು.

ರಾಜ್ಯಕ್ಕೆ ನಿಮ್ಮ ಗ್ಯಾರಂಟಿ ಏನು: ಡಿಕೆಶಿ

ಹಾಸನ: ಕಾಂಗ್ರೆಸ್ ಪಕ್ಷ ರಾಜ್ಯ-ದೇಶದಲ್ಲಿ ಅಧಿಕಾರ ನಡೆಸಿದಾಗ ಅನೇಕ ಶಾಶ್ವತ ಯೋಜನೆ ಜಾರಿಗೆ ತಂದು ಗ್ಯಾರಂಟಿಗಳನ್ನು ಉಳಿಸಿದೆ. ಆದರೆ ನಿಮ್ಮ ಗ್ಯಾರಂಟಿ ಏನು ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರನ್ನು ಡಿಸಿಎಂ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.



ಜನಕಲ್ಯಾಣ ಸಮಾವೇಶದಲ್ಲಿ ಮಾತನಾಡಿದ ಅವರು, ಕನಕಪುರ ಬಂಡೆ ಸಿದ್ದರಾಮಯ್ಯ ಜೊತೆ ನಿಲ್ಲಲಿದೆ ಎಂದು ಮೈಸೂರಲ್ಲಿ ಹೇಳಿದ್ದೆ. ಇಲ್ಲೂ ಹೇಳುವೆ, ಸಾಯೋವರೆಗೂ ಅವರ ಜೊತೆ ಇರುವೆ ಎಂದು ಸ್ಪಷ್ಟಪಡಿಸಿದರು.

5 ಗ್ಯಾರಂಟಿ ಶಾಶ್ವತ: ಕಾಂಗ್ರೆಸ್ ಶಕ್ತಿ ದೇಶದ ಶಕ್ತಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲರಿಗೂ ಅಧಿಕಾರ ಸಿಕ್ಕಂತೆ ಎಂದ ಅವರು, ಜಿಲ್ಲೆಯಲ್ಲಾಗಿರುವ ಅನ್ಯಾಯದ ವಿರುದ್ಧ 25 ವರ್ಷದ ನಂತರ ಇಲ್ಲಿ ಶ್ರೇಯಸ್ ಪಟೇಲ್ ಗೆಲ್ಲಿಸಿದ್ದೀರಿ. ಮುಂದೆಯೂ ಎಂಪಿ ಜೊತೆಗೆ ಏಳೂ ಸ್ಥಾನಗಳಲ್ಲೂ ಕಾಂಗ್ರೆಸ್ ಗೆಲ್ಲಬೇಕು, ಗೆಲ್ಲಲಿದೆ ಎಂದು ಭವಿಷ್ಯ ನುಡಿದರು. ನಮ್ಮ ಐದು ಗ್ಯಾರಂಟಿ ಪರ್ಮನೆಂಟು, ಹಾಗೆಯೇ 2028 ರಲ್ಲೂ ನಾವೇ ಅಧಿಕಾರಕ್ಕೆ ಬರೋದು ಗ್ಯಾರಂಟಿ. ಯಾರೂ ಬದಲಿಸಲು ಆಗಲ್ಲ ಎಂದು ಡಿಸಿಎಂ ವಿಶ್ವಾಸದಿಂದ ನುಡಿದರು.

ನಿಮ್ಮ ಸಾಕ್ಷಿಗುಡ್ಡೆ ಏನು..?: ಚುನಾವಣೆ ವೇಳೆ ಕಣ್ಣೀರು ಹಾಕುತ್ತೀರಿ, ಆದರೆ ನಿಮ್ಮ ಸಾಕ್ಷಿ ಗುಡ್ಡೆ ಏನು ಎಂಬುದಕ್ಕೆ ಉತ್ತರ ಕೊಡಿ ಎಂದು ಅವರು ಪ್ರಶ್ನಿಸಿದರು.

ಸಮಾವೇಶದಲ್ಲಿ ಸಚಿವರಾದ ಬೋಸರಾಜು, ಕೆ.ಜೆ. ಜಾರ್ಜ್, ಶಿವರಾಜ್ ಎಸ್.ತಂಗಡಗಿ, ಎನ್. ಚಲುವರಾಯಸ್ವಾಮಿ, ಸತೀಶ್ ಜಾರಕಿಹೊಳಿ, ಆರ್.ಬಿ.ತಿಮ್ಮಾಪುರ, ಬೈರತಿ ಸುರೇಶ್, ಎಚ್.ಕೆ.ಪಾಟೀಲ್, ಶರಣಪ್ರಕಾಶ್ ಪಾಟೀಲ್, ರಹೀಂಖಾನ್, ಡಿ. ಸುಧಾಕರ್, ರಾಜ್ಯಸಭಾ ಸದಸ್ಯ ಚಂದ್ರಶೇಖರ್ ಇದ್ದರು.

ಇದೇನು ಆಲೂಗೆಡ್ಡೇನಾ ?

ದೇವೇಗೌಡರೇ ಆರು ತಿಂಗಳಲ್ಲಿ ಕಾಂಗ್ರೆಸ್ ಸರಕಾರ ಕಿತ್ತು ಹಾಕುವೆ ಅಂದ್ರಿ, ಇದೇನು ಹಾಸನದಲ್ಲಿ ಬೆಳೆದಿರುವ ಆಲೂಗೆಡ್ಡೆನಾ ಅಥವಾ ಕಡ್ಲೇಕಾಯಿ ಗಿಡನಾ ಎಂದು ಲೇವಡಿ ಮಾಡಿದರು. 138 ಶಾಸಕರ, ಜನ ಬೆಂಬಲದ ಸರಕಾರ ಕಿತ್ತು ಹಾಕುವುದು ನಿಮ್ಮ ಹಣೆಯಲ್ಲಿ ಬರೆದಿಲ್ಲ ಎಂದು ಡಿಸಿಎಂ ತಿರುಗೇಟು ನೀಡಿದರು.

ವಿಶ್ವವಾಣಿ

ಸಂಪಾದಕೀಯ

ಇಸ್ರೋದಿಂದ ಮತ್ತೊಂದು ವಿಕ್ರಮ

ಇದು ನಿಜಕ್ಕೂ ಹೆಮ್ಮೆಯ ಸಂಗತಿ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೋ) ಯುರೋಪಿಯನ್ ಸ್ಪೇಸ್ ಏಜೆನ್ಸಿಯ (ಇಎಸ್ಎ) 'ಪ್ರೋಬಾ-3' ಯೋಜನೆಯ ಎರಡು ಬಾಹ್ಯಾಕಾಶ ನೌಕೆಗಳನ್ನು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಯಶಸ್ವಿಯಾಗಿ ಉಡಾವಣೆ ಮಾಡಿದೆ. ಇದಕ್ಕೆ ಬಳಕೆಯಾಗಿದ್ದು 'ಪಿಎಸ್ಎಲ್ವಿ-ಸಿ 59' ಎಂದೇ ತಾಂತ್ರಿಕವಾಗಿ ಗುರುತಿಸಲ್ಪಡುವ ಇಸ್ರೋದ ಅತ್ಯಂತ ವಿಶ್ವಾಸಾರ್ಹ ವಾಹಕ ಎಂಬುದು ಗಮನಾರ್ಹ ಸಂಗತಿ. ಕ್ರಮವಾಗಿ 310 ಕೆ.ಜಿ. ಮತ್ತು 240 ಕೆ.ಜಿ. ತೂಕವಿದ್ದ 'ಕರೋನಾಗ್ರಾಫ್' ಮತ್ತು 'ಅಕಲ್ಟರ್' ಎಂಬ ಎರಡು ನೌಕೆಗಳನ್ನು ಒಟ್ಟಿಗೆ ಉಡಾಯಿಸಲಾಯಿತು. ಇವುಗಳ ನೆರವಿನಿಂದ ಕೃತಕ ಸೂರ್ಯಗ್ರಹಣವನ್ನು ಸೃಷ್ಟಿಸಿ ಸೂರ್ಯನ 'ಕರೋನಾ' ಪ್ರಭಾವಲಯವನ್ನು ಅಧ್ಯಯನ ಮಾಡಲಾಗುತ್ತದೆ ಎಂಬುದು ಲಭ್ಯ ಮಾಹಿತಿ. 'ಮಂಗಳ ಕಕ್ಷ್ಯಾಯಾನ', 'ಚಂದ್ರಯಾನ-3' ಹೀಗೆ ವಿಕ್ರಮಗಳನ್ನು ಸಾಧಿಸುತ್ತಲೇ ಬಂದಿರುವ ಇಸ್ರೋದ ಸಾಧನಾ ಕಿರೀಟಕ್ಕೆ ಸೇರಿದ ಮತ್ತೊಂದು ಗರಿಯಿದು ಎನ್ನಲಡ್ಡಿಯಿಲ್ಲ. ಜತೆಗೆ, 'ಆತ್ಮನಿರ್ಭರ ಭಾರತ', 'ಮೇಕ್ ಇನ್ ಇಂಡಿಯಾ' ಮಂತ್ರಗಳನ್ನು ಜಪಿಸುತ್ತಲೇ ಬಂದಿರುವ ನಮ್ಮ ಕೇಂದ್ರ ಸರಕಾರದ ಆಶಯಕ್ಕೆ ಮತ್ತಷ್ಟು ಬಲ ತುಂಬಿರುವ ಉಪಕ್ರಮವೂ ಇದಾಗಿದೆ. ಇದನ್ನು ಹೀಗೆ ಒತ್ತಿಹೇಳಲು ಇನ್ನೊಂದು ಕಾರಣವಿದೆ. ಒಂದು ಕಾಲಕ್ಕೆ 'ಭಾರತ' ಎಂದಾಕ್ಷಣ ವೈಶ್ವಿಕ ಸಮುದಾಯವು ನಮ್ಮ ದೇಶವನ್ನು ಮತ್ತು ದೇಶವಾಸಿಗಳನ್ನು ಕಲ್ಪಿಸಿಕೊಳ್ಳುತ್ತಿದ್ದ ಹಾಗೂ ನಡೆಸಿಕೊಳ್ಳುತ್ತಿದ್ದ ರೀತಿಯೇ ಬೇರೆ ತೆರನಾಗಿತ್ತು. 'ಭಾರತವೆಂದರೆ ಹಾವಾಡಿಗರ ದೇಶ' ಎಂಬ ಕೂರಂಬಿನ ಹಣೆಪಟ್ಟಿಯೂ ಸಾಕಷ್ಟು ದಶಕಗಳವರೆಗೆ ಭಾರತಕ್ಕೆ ತಗುಲಿಕೊಂಡಿತ್ತು. ಆದರೆ ಇಂಥ ಹಲವು ಅಪಸವ್ಯಗಳನ್ನು ಕಿತ್ತೊಗೆದು ಹೆಮ್ಮೆಯಿಂದ ತಲೆಯೆತ್ತಿ ನಿಂತು, ವಿಶ್ವಭೂಪಟದಲ್ಲಿ ತನ್ನನ್ನು ಢಾಳಾಗಿ ಗುರುತಿಸಿಕೊಂಡಿದೆ ಭಾರತ. ಇಂಥ ಸಾಧನೆ ಕೈಗೂಡಲು ನೆರವಾಗಿರುವ ಹತ್ತು ಹಲವು ಅಂಶಗಳಲ್ಲಿ ಇಸ್ರೋ ಕಾಲಾನುಕಾಲಕ್ಕೆ ದಾಖಲಿಸುತ್ತ ಬಂದಿರುವ ಇಂಥ ವಿಕ್ರಮಗಳೂ ಸೇರಿವೆ ಎನ್ನಲಡ್ಡಿಯಿಲ್ಲ. ಈ ಯಶೋಗಾಥೆ ಮುಂದುವರಿಯಲಿ.

ಸೊಂಪಾದಕೀಯ

ಮೂರ್ತಿ ಚಿಕ್ಕದು, ಕೀರ್ತಿ ದೊಡ್ಡದು

ಭಾರತದಲ್ಲಿ ಮನರಂಜನೆ ಅಂದ್ರೆ ಸಿನಿಮಾ ಅನ್ನೋ ಮಾತು ಜನಜನಿತ. ಈಗೀಗ ಸಿನಿಮಾ ನೋಡಬೇಕು ಅಂದ್ರೆ, ಚಿತ್ರಮಂದಿರಕ್ಕೇ ಹೋಗಬೇಕು ಅಂತೇನಿಲ್ಲ. ಮನೆಯ ದೂರದರ್ಶನ ಈಗ ಚಿತ್ರಮಂದಿರದಷ್ಟೇ ಹತ್ತಿರ. ಅಲ್ಲದೆ ಮೊಬೈಲ್, ಲ್ಯಾಪ್‌ಟಾಪ್, ಟ್ಯಾಬ್ಲೆಟ್‌ಗಳೂ ಈಗ ಟೂರಿಂಗ್ ಟಾಕೀಸ್‌ಗಳಾಗಿವೆ. ಹಾಗಾಗಿ ಮನರಂಜನೆ ಈಗ ಮನೆರಂಜನೆ ಆಗಿದೆ. ಆದರೆ ಇತ್ತೀಚೆಗೆ ಸಿನಿಮಾಗಳಿಗಿಂತ ಹೆಚ್ಚು ಸದ್ದು ಮಾಡ್ತಾ ಇರೋದು ಟಿವಿ ಧಾರಾವಾಹಿಗಳು. ನಮ್ಮ ಹೋಮ್ಲಿ ಆಡಿಯೆನ್ಸ್‌ಗೆ ಧಾರಾವಾಹಿಗಳ ಪರಿಚಯ ಇದ್ದಷ್ಟು ಸಿನಿಮಾಗಳ ಬಗ್ಗೆ ಇರೋದಿಲ್ಲ. ಧಾರಾವಾಹಿಗಳ ಹೆಸರು ಪ್ರೇಕ್ಷಕರಿಗೆ ನಾಲಿಗೆಯ ತುದಿ ಯಲ್ಲೇ ಇರುತ್ತೆ. ಆದರೆ ಸಿನಿಮಾಗಳು ಸೆಟ್ಟೇರಿದ್ದೂ, ಬಿಡುಗಡೆ ಆಗಿದ್ದೂ ಗೊತ್ತಾಗಿರಲ್ಲ. ಸಿನಿಮಾ ನಟರಲ್ಲಿ ಹಳೆ ತಲೆಗಳನ್ನು ಬಿಟ್ಟರೆ ಹೊಸಬರ ಬಗ್ಗೆ ಗೊತ್ತಿರಲ್ಲ. ಆದರೆ ಧಾರಾವಾಹಿಯ ನಟ-ನಟಿಯರನ್ನು ತಮ್ಮ ಮನೆ ಮಕ್ಕಳಂತೇ ನೋಡುತ್ತಾರೆ. ವರ್ಷದಲ್ಲಿ ನೂರಾರು ಸಿನಿಮಾ ಬಿಡುಗಡೆ ಆದ್ರೂ ಅವುಗಳಲ್ಲಿ ಜನರನ್ನು ತಲುಪೋದು ಮೂರು ಮತ್ತೊಂದು ಮಾತ್ರ. ಸಿನಿಮಾ ಮಾಡಿ ಮನೆ-ಮಠ ಕಳೆದುಕೊಂಡ ಜನ ಕಾಣಸಿಗುತ್ತಾರೆ. ಆದರೆ, ಧಾರಾವಾಹಿ ಮಾಡಿ ಹಣ ಕಳೆದುಕೊಂಡೆ ಅನ್ನೋರು ಸಿಗೋದು ಕಷ್ಟ. ಈಗ ಈ ಧಾರಾವಾಹಿಗಳು ಹಣಗಳಿಕೆಯಲ್ಲೂ ಸಿನಿಮಾಗಳಿಗಿಂತ ಮುಂದೆ ಇವೆ. ಹಾಗಾಗಿ ಸೀರಿಯಲ್ ಉದ್ಯಮದವರು ಜಾಹೀರಾತುಗಳಿಗೂ ಸಾಕಷ್ಟು ಖರ್ಚು ಮಾಡುತ್ತಿದ್ದಾರೆ. ಸಿನಿಮಾದವರೇ ಯಾವುದೇ ಪ್ರಚಾರ ಇಲ್ಲದೆ ಇದ್ದಕ್ಕಿದ್ದಂತೆ ಸಿನಿಮಾ ಬಿಡುಗಡೆ ಮಾಡುತ್ತಾರೆ. ಅದಕ್ಯಾಕೆ ಮತ್ತಷ್ಟು ಖರ್ಚು, ಮತ್ತಷ್ಟು ಲಾಸು ಅನ್ನೋ ಮನೋಭಾವ ಇದು. ಆದರೆ ಧಾರಾವಾಹಿಗಳು ಹಾಗಲ್ಲ. ಹೊಸ ಧಾರಾವಾಹಿ ಶುರು ಆಗ್ತಾ ಇದೆ ಅಂದ್ರೆ, ಎಲ್ಲ ಪತ್ರಿಕೆಗಳಲ್ಲೂ ಫುಲ್‌ಪೇಜ್ ಜಾಹೀರಾತು. ಟಿವಿಗಳಲ್ಲಂತೂ ಕೇಳೋದೇ ಬೇಡ. ಅಷ್ಟೇ ಅಲ್ಲದೆ ಊರಿನ ಗೋಡೆಗಳ ಮೇಲೆ ಪೋಸ್ಟರ್ ಅಂಟಿಸಲಾಗುತ್ತದೆ. ಜತೆಗೆ ಆಟೋ, ಸಿಟಿ ಬಸ್ಸುಗಳಲ್ಲೂ ಧಾರಾವಾಹಿಗಳ ಅಬ್ಬರ. ಹಾಗಾಗಿ ಧಾರಾವಾಹಿಗಳು ಸಿನಿಮಾಗಿಂತ ಮುಂದಿವೆ, ಹಣಕಾಸಿನ ವಿಷಯದಲ್ಲಿ ಸೇಫ್ ಎನಿಸಿಕೊಂಡಿವೆ ಅನ್ನೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಜಪಾನಿನ ಲೈಫ್'ಲೈನ್'

ನಾನು ಜಪಾನ್‌ಗೆ ಹೋಗುವ ಮುನ್ನ, ಕೆಲವು ಸ್ನೇಹಿತರ ಜತೆ ವಾಟ್ಸಾಪ್ ಚಾಟ್ ಮಾಡಲು ಬಯಸಿದ್ದೆ. ಕೆಲವರಿಗೆ ವಾಟ್ಸಾಪ್ ಮೆಸೇಜ್ ಕಳಿಸಿ 3-4 ತಾಸುಗಳಾದರೂ ಬ್ಲೂಟಿಕ್ ಬರುತ್ತಿರಲಿಲ್ಲ. ಅಂದರೆ ಅವರು ನನ್ನ ಮೆಸೇಜನ್ನೇ ನೋಡುತ್ತಿರಲಿಲ್ಲ. ಒಬ್ಬರು, ಇಬ್ಬರಾದರೆ ಅರ್ಥಮಾಡಿಕೊಳ್ಳಬಹುದು. ಆದರೆ ನಾನು ಚಾಟ್ ಮಾಡಿದ ಐದಾರು ಮಂದಿ ಸಹ ವಾಟ್ಸಾಪ್ ಮೆಸೇಜುಗಳನ್ನು ಕನಿಷ್ಠ ಒಂದು ಗಂಟೆಯ ಬಳಿಕ ನೋಡುತ್ತಿದ್ದರು. ಅಮೆರಿಕದಲ್ಲಿ ಇ-ಮೇಲ್ ಕಳಿಸಿದ 10 ನಿಮಿಷಗಳೊಳಗೆ ಉತ್ತರ ಬರದಿದ್ದರೆ ಚಡಪಡಿಸುತ್ತಾರೆ. ಸಾಮಾನ್ಯವಾಗಿ ಅಲ್ಲಿ ಇ-ಮೇಲ್ ಕಳಿಸಿದ ಒಂದೆರಡು ನಿಮಿಷಗಳಲ್ಲಿ ಪ್ರತಿಕ್ರಿಯೆ ಬರುತ್ತದೆ. ಉದ್ದದ ಉತ್ತರ ಬರೆಯಬೇಕಾದ ಸಂದರ್ಭದಲ್ಲಿ, 'ನಂತರ ನಿಮಗೆ ಉತ್ತರ ಬರೆಯಲಾಗುವುದು' ಎಂದಾದರೂ ಹೇಳುತ್ತಾರೆ. ಒಟ್ಟಾರೆ ಬಹುಬೇಗ ಉತ್ತರ ಬರುತ್ತದೆ. ಆದರೆ ಜಪಾನಿನಲ್ಲಿರುವ ಸ್ನೇಹಿತರು ವಾಟ್ಸಾಪ್‌ಗೆ ನಿಧಾನವಾಗಿ ಉತ್ತರಿಸುತ್ತಿದ್ದುದು ಸೋಜಿಗವನ್ನುಂಟುಮಾಡಿತ್ತು. ಈ ಕುರಿತು ಸ್ನೇಹಿತರೊಬ್ಬರನ್ನು ವಿಚಾರಿಸಿದಾಗ ಅವರು, ''ಜಪಾನಿನಲ್ಲಿ ಹೆಚ್ಚಿನ ಮಂದಿ ವಾಟ್ಸಾಪ್ ಬಳಸುವುದಿಲ್ಲ. ನಾವು ಪ್ರೈಮರಿ ಕಮ್ಯುನಿಕೇಷನ್ ಪ್ಲಾಟ್‌ಫಾರ್ಮ್ ಆಗಿ 'ಲೈನ್' (Line) ಬಳಸುತ್ತೇವೆ. ಭಾರತದಲ್ಲಿ ವಾಟ್ಸಾಪ್ ಇದ್ದ ಹಾಗೆ ಜಪಾನಿನಲ್ಲಿ ಲೈನ್'' ಎಂದು ಹೇಳಿದರು. ಅದಾಗಿ ಜಪಾನಿಗೆ ಹೋದ ಬಳಿಕ, ನಮ್ಮ ಜತೆಗಿದ್ದ ಗೈಡ್, ''ನಾನು ದಿನದಲ್ಲಿ ಹೆಚ್ಚೆಂದರೆ ಮೂರ್ನಾಲ್ಕು ಸಲ ವಾಟ್ಸಾಪ್ ನೋಡಬಹುದು, ಆದರೆ ಸದಾ 'ಲೈನ್' ನೋಡುತ್ತಾ ಇರುತ್ತೇನೆ. ನಮ್ಮ ಪಾಲಿಗೆ ಲೈನ್ ಎಂಬುದು ಲೈಫ್‌ಲೈನ್'' ಎಂದು ಹೇಳಿದಳು. ಭಾರತವನ್ನು 'ವಾಟ್ಸಾಪ್ ನೇಷನ್' ಎಂದು ಹೇಳುವುದುಂಟು. ಇಲ್ಲಿ ವಾಟ್ಸಾಪ್ ಗೊತ್ತಿಲ್ಲದವರು, ಬಳಸದವರು ಸಿಗುವುದು ಅಪರೂಪ. ಮೊಬೈಲ್ ಇರುವವರೆಲ್ಲರೂ ವಾಟ್ಸಾಪ್ ದಾಸರೇ. ಅಂದರೆ ವಾಟ್ಸಾಪ್ ಬಳಕೆದಾರರೇ. ಅದೇ ರೀತಿ ಜಪಾನಿನಲ್ಲಿ ಎಲ್ಲರೂ 'ಲೈನ್' ಹೊಡೆಯುವವರೇ! 2011ರಲ್ಲಿ ತೊಹೋಕು ಭೂಕಂಪ ಮತ್ತು ಸುನಾಮಿ ರೆಸ್ಪಾನ್ಸ್ ಆಪ್ ಆಗಿ ಆರಂಭವಾದ 'ಲೈನ್' ಇಂದು ಇಡೀ ಜಪಾನನ್ನು ಆವರಿಸಿಬಿಟ್ಟಿದೆ. ಒಂದು ನಿಮಿಷ 'ಲೈನ್' ಆಫ್ ಆದರೆ ಜನಜೀವನವೇ ಅಲ್ಲೋಲ ಕಲ್ಲೋಲವಾಗುತ್ತದೆ. ಜಪಾನಿನಲ್ಲಿ 104 ದಶಲಕ್ಷ ಇಂಟರ್ನೆಟ್ ಬಳಕೆದಾರರಿದ್ದಾರೆ. ಆ ಪೈಕಿ 96 ದಶಲಕ್ಷ ಮಂದಿ 'ಲೈನ್' ಅನ್ನು ಬಳಸುತ್ತಿದ್ದಾರೆ. ಲೈನ್ ಆಪ್‌ನಲ್ಲಿ ಜಾಹೀರಾತನ್ನೂ ನೀಡಬಹುದಾಗಿದೆ. ಇದನ್ನು ಮೂಲತಃ ಕೊರಿಯಾದ ನಾರ್ವೆ ಎಂಬ ಕಂಪನಿ ಅಭಿವೃದ್ಧಿಪಡಿಸಿದರೂ, ಜಪಾನಿಯರನ್ನು ಗಮನದಲ್ಲಿಟ್ಟುಕೊಂಡು ವಿಶೇಷವಾಗಿ ರೂಪಿಸಲಾಗಿದೆ. ಜಪಾನಿನಲ್ಲಿ ಪ್ರಾಕೃತಿಕ ದುರಂತ ಸಂಭವಿಸಿದಾಗ, ಅವರಿಗೆ ತುರ್ತು ಮತ್ತು ಅಗತ್ಯ ಮಾಹಿತಿ, ಸೂಚನೆ ನೀಡಲು ಲೈನ್ ಆರಂಭವಾಯಿತು. ಮುಂದಿನ ವರ್ಷ ಈ ಆಪ್ ಅನ್ನು ಸಾರ್ವಜನಿಕ ಬಳಕೆಗೆ ಪ್ರಸ್ತುತಪಡಿಸಲಾಯಿತು. 18 ತಿಂಗಳ ಅವಧಿಯಲ್ಲಿ 90 ದಶಲಕ್ಷ ಮಂದಿ ಆ ಆಪ್ ಅನ್ನು ಡೌನ್‌ಲೋಡ್ ಮಾಡಿಕೊಂಡರು. ಈಗ ಲೈನ್ ಇಲ್ಲದ ಜಪಾನನ್ನು ಊಹಿಸಿಕೊಳ್ಳುವುದೂ ಕಷ್ಟ. ವಾಟ್ಸಾಪ್ ಯಾವಯಾವ ವೈಶಿಷ್ಟ್ಯ ಮತ್ತು ಸೇವೆಗಳನ್ನು ಹೊಂದಿದೆಯೋ, ಲೈನ್ ಕೂಡ ಆ ಎಲ್ಲ ಸೇವೆಗಳನ್ನು ನೀಡುತ್ತದೆ. ಇದರ ಜತೆಗೆ ಹಣವನ್ನೂ ಲೈನ್ ಮೂಲಕ ವರ್ಗಾಯಿಸಬಹುದು ಮತ್ತು ಸ್ವೀಕರಿಸಬಹುದು. ಶಾಪಿಂಗ್‌ಗೆ ಸಂಬಂಧಿಸಿದ ಮಾಹಿತಿ ಮತ್ತು ಕ್ಷಣಕ್ಷಣದ ಸುದ್ದಿಯನ್ನೂ ಲೈನ್ ನೀಡುತ್ತದೆ. ಲೈನ್ ಸ್ಟಿಕರ್ ಮತ್ತು ಎಮೋಜಿಗಳು ಬಹಳ ಜನಪ್ರಿಯ. ಲೈನ್ ಅಧಿಕೃತ ಖಾತೆಯು ಬ್ರ್ಯಾಂಡ್‌ಗಳು ಮತ್ತು ವ್ಯವಹಾರಗಳಿಗೆ ವಿಶೇಷ ಪ್ರೊಫೈಲ್‌ಗಳನ್ನು ತೆರೆಯಲು ಮತ್ತು ಬಳಕೆದಾರರೊಂದಿಗೆ ಸಂಪರ್ಕ ಸಾಧಿಸಲು, ಪ್ರಚಾರದ ಮಾಹಿತಿಯನ್ನು ಕಳುಹಿಸಲು ಮತ್ತು ಗ್ರಾಹಕ ವಸ್ತುಗಳ ಪ್ರಚಾರ ಮಾಡಲು ಅನುವು ಮಾಡಿಕೊಡುತ್ತದೆ. ಯಾವುದೇ ಬಿಜಿನೆಸ್ ಆರಂಭಿಸಿದವರು ಲೈನ್‌ನಲ್ಲಿ ಉಚಿತವಾಗಿ ಅಧಿಕೃತ ಖಾತೆಯನ್ನು ತೆರೆಯಬಹುದು. ಅಪ್ಲಿಕೇಶನ್ ಬಳಕೆದಾರರು ಪೋಸ್ಟ್‌ಗಳನ್ನು ವೀಕ್ಷಿಸಬಹುದು ಮತ್ತು ಲೈನ್‌ನಲ್ಲಿ ಅವರ ಸ್ನೇಹಿತರು ಮತ್ತು ಕುಟುಂಬ ಸದಸ್ಯರು ಅಧಿಕೃತ ಖಾತೆಗಳೊಂದಿಗೆ ಸಂವಹನ ನಡೆಸಬಹುದು. ಲೈನ್‌ನ ಟೈಮ್‌ಲೈನ್‌ನಲ್ಲಿ ವಿಷಯವನ್ನು ಹಂಚಿಕೊಳ್ಳುವ ಮೂಲಕ, ಬ್ರ್ಯಾಂಡ್‌ಗಳು ಬಳಕೆದಾರರ ಮನಸ್ಸಿನಲ್ಲಿ ಉಳಿಯಬಹುದು ಮತ್ತು ಇತರ ಸಾಮಾಜಿಕ ಜಾಲತಾಣಗಳ ಪ್ಲಾಟ್‌ಫಾರ್ಮ್‌ಗಳಂತೆ ಅಪ್ಡೇಟ್‌ಗಳನ್ನು ಒದಗಿಸಬಹುದು.

ಇಲ್ಲಿ ಜೇನು ಕೂಡ ಕೃಷಿ ದಿನಗೂಲಿ...

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಅಮೆರಿಕದ ಪಶ್ಚಿಮ ಭಾಗದಲ್ಲಿರುವ ನೆವಾಡಾ ರಾಜ್ಯದಿಂದ ಅದರ ಪಶ್ಚಿಮಕ್ಕಿರುವ ಕ್ಯಾಲಿಫೋರ್ನಿಯಾಕ್ಕೆ ನಾವೊಂದಿಷ್ಟು ಗೆಳೆಯರು ಕಾರ್ ಡ್ರೈವ್ ಮಾಡಿಕೊಂಡು ಹೊರಟಿದ್ದೆವು. ಹೇಳಿ ಕೇಳಿ ಬೇಸಗೆ ಕಾಲ- ಸುಡುಬಿಸಿಲು, ವಿಪರೀತ ಸೆಖೆ. ನೆವಾಡಾದ ಸೆಖೆಯೇ ಅಂಥದ್ದು, ಎಷ್ಟು ನೀರು ಕುಡಿದರೂ ದಾಹ ತಣಿಯದು. ಎ.ಸಿ. ಇಲ್ಲದೆ ಬದುಕುವುದೇ ಅಸಾಧ್ಯ ಎನಿಸಿಬಿಡುತ್ತದೆ. ಅದರಲ್ಲೂ ನಾವು ಪಯಣಿಸುತ್ತಿದ್ದುದು 'ಡೆತ್ ವ್ಯಾಲಿ' ಮೂಲಕ. ಅದು ಅಕ್ಷರಶಃ ಡೆತ್ ವ್ಯಾಲಿಯೇ. ಆ ಮರಳುಗಾಡಲ್ಲಿ ಲವಲೇಶವೂ ಹಸಿರಿಲ್ಲ. ಹಗಲಲ್ಲಿ ಉಷ್ಣಾಂಶ 50 ಡಿಗ್ರಿ ಸೆಲ್ಸಿಯಸ್ ದಾಟಿರುತ್ತದೆ. ಕಾರಿನ ಗಾಜು ಇಳಿಸಿದರೆ ಅಗ್ನಿಜ್ವಾಲೆ ತಾಗಿದ ಅನುಭವ.

ಕಾರಿನಲ್ಲಿಟ್ಟುಕೊಂಡಿದ್ದ ನೀರೆಲ್ಲಾ ಖಾಲಿಯಾಗಿತ್ತು. ಸುಮಾರು 70 ಮೈಲಿ ಪಯಣಿಸಿದರೂ ಒಂದೇ ಒಂದು ಅಂಗಡಿ ಸಿಗಲಿಲ್ಲ. ಮರಳುಗಾಡು ದಾಟಿ ಸಮತಟ್ಟು ಹಸಿರು, ಕ್ಯಾಲಿಫೋರ್ನಿಯಾವನ್ನು ಪ್ರವೇಶಿಸುವ ಜಾಗಕ್ಕೆ ಮುಟ್ಟಿದಾಗಲೇ ಒಂದು ಟೋಲ್ ಪ್ಲಾಜಾ ಕಾಣಿಸಿದ್ದು- ಮರುಭೂಮಿ ದಾಟಿ ಓಯಸಿಸ್ ತಲುಪಿದ ಅನುಭವ. ಪೂರ್ವದ ಐದಾರು ರಾಜ್ಯಗಳಿಂದ ಬರುವ ವಾಹನಗಳೆಲ್ಲ ಆ ಟೋಲ್ ಪ್ಲಾಜಾ ದಾಟಿಯೇ ಕ್ಯಾಲಿಫೋರ್ನಿಯಾ ಹೊಕ್ಕಬೇಕು. ಹತ್ತಾರು ದೊಡ್ಡ ಟ್ರಕ್‌ಗಳು ನಿಂತಿದ್ದು ಕಂಡು, 'ಇಲ್ಲಿ ಖಂಡಿತ ನೀರು ಸಿಗಬಹುದು' ಎಂದುಕೊಂಡು ಟ್ರಕ್‌ಗಳ ಹಿಂದೆ ಕಾರನ್ನು ನಿಲ್ಲಿಸಿಕೊಂಡೆವು. ಕಾರಿಂದ ಕೆಳಗಿಳಿದರೆ ಸಮುದ್ರದ ಭೋರ್ಗರೆತದಂಥ ಸದ್ದು. ಅಲ್ಲೆಲ್ಲಿಯೂ ಸಮುದ್ರವೇನಿಲ್ಲ! ಹಾಗಾದರೆ ಈ ಶಬ್ದ ಬರುತ್ತಿರುವುದೆಲ್ಲಿಂದ? ನಮ್ಮ ಮುಂದೆ ನಿಲ್ಲಿಸಿದ್ದ ಉದ್ದುದ್ದದ ಟ್ರಕ್ಕುಗಳಲ್ಲಿ ಡಬ್ಬಿಗಳು ತುಂಬಿದ್ದವು. ಹಸಿರು ಬಣ್ಣದ, ಆಚೀಚೆ ಕಾಣಿಸುವ ತೆಳ್ಳನೆಯ ಬಟ್ಟೆಯನ್ನು ಅವುಗಳ ಮೇಲೆ ಹೊದಿಸಲಾಗಿತ್ತು. ಅದರೊಳಗಿದ್ದ ಕೋಟ್ಯಂತರ ಜೇನುಹುಳುಗಳ 'ಗುಂಯ್'ಗುಟ್ಟುವಿಕೆಯಿಂದಲೇ ಆ ಶಬ್ದ ಹೊಮ್ಮುತ್ತಿದೆ ಎಂದು ನಂತರ ಗೊತ್ತಾಯ್ತು. ಅವುಗಳ ಗಿಜಿಗಿಜಿಯೇ ಸಮುದ್ರದ ಅಬ್ಬರದಂತೆ ನಮಗೆ ಕೇಳಿಸಿದ್ದು! ಆ ತೆರೆದ ಟ್ರಕ್ಕುಗಳಿಗೆ ಬೀಸುಗಾಳಿ ಅಪ್ಪಳಿಸಿದಂತೆಲ್ಲಾ ಒಳಗಿದ್ದ ಜೇನುಗಳ ಗುಂಯ್‌ಗುಟ್ಟುವಿಕೆಯೂ ಹೆಚ್ಚುತ್ತಿತ್ತು, ಅದೆಲ್ಲ ಸೇರಿ ಥೇಟ್ ಸಮುದ್ರದಲೆಯ ಸಪ್ಪಳದಂತೆ ಏರಿಳಿತವಾಗುತ್ತಿತ್ತು.

ಸರತಿಯಲ್ಲಿ ನಿಂತ ಸಾಲು ಟ್ರಕ್ಕುಗಳು, ಅವುಗಳಲ್ಲಿ ತುಂಬಿದ ಜೇನುಹುಳುಗಳು, ಅವನ್ನು ಪರೀಕ್ಷಿಸಲು ಬಿಳಿ ಮುಸುಕುವಸ್ತ್ರ ಧರಿಸಿ ಬರುವ ವಿಜ್ಞಾನಿಗಳಂತೆ ಕಾಣುವವರು. ಡಬ್ಬಿಗಳಿಗೆ ಹೊದಿಸಿದ್ದ ಮುಸುಕನ್ನು ಸರಿಸಿ ಅವರು ಏನೋ ಪರೀಕ್ಷಿಸುತ್ತಿದ್ದರೆ, ಅದೊಂದು ಅವಕಾಶವೆಂಬಂತೆ ಹತ್ತಿಪ್ಪತ್ತು ಜೇನುಹುಳುಗಳು ಆಚೆ ಹಾರಿಬಂದು ಅವರ ಮೈ ಕೈ ಮೇಲೆ ಕೂರುತ್ತಿದ್ದವು. ಟ್ರಕ್ ಡ್ರೈವರ್‌ಗಳು ಸ್ವಲ್ಪ ದೂರದಲ್ಲಿಯೇ ನಿಂತಿದ್ದರು. ಪಕ್ಕದಲ್ಲೇ ನಿಂತಿದ್ದ ನನಗಂತೂ ಎಲ್ಲಿ ಜೇನು ಕಡಿಯುವುದೋ ಎಂಬ ಹೆದರಿಕೆ. ಆದರೂ, ತೀರಾ ಅನಿರೀಕ್ಷಿತವಾದುದರಿಂದ ಈ ಜೇನುಹುಳುಗಳು ಎಲ್ಲಿಂದ ಬಂದವು, ಇವನ್ನು ಎಲ್ಲಿಗೆ ಒಯ್ಯಲಾಗುತ್ತಿದೆ? ಎಂಬ ಕುತೂಹಲ. ಅಷ್ಟು ಹೊತ್ತಿಗೆ ದಾಹ ಮರೆತುಹೋಗಿತ್ತು. ಏನೋ ಪರೀಕ್ಷೆ ನಡೆಯುತ್ತಿತ್ತು. ಕೆಲ ನಿಮಿಷದಲ್ಲಿ ಡ್ರೈವರ್‌ಗಳು ಗಡಿಬಿಡಿಯಲ್ಲಿ ಅವರಿಂದ ಕಾಗದವೊಂದನ್ನು ಪಡೆದು ಅಲ್ಲಿಂದ ಹೊರಡುತ್ತಿದ್ದರು. ಅದಾಗಲೇ ಇಂಥ ಜೇನುನೊಣ ತುಂಬಿಕೊಂಡ ಸುಮಾರು 15 ಟ್ರಕ್ಕುಗಳು ಅಲ್ಲಿ ನಿಂತಿದ್ದವು, ನೋಡ ನೋಡುತ್ತಲೇ ಇನ್ನೂ ನಾಲ್ಕೈದು ಬಂದು ಸೇರಿಕೊಂಡವು.

ಒಂದೊಂದು ಟ್ರಕ್‌ನಲ್ಲೂ ಸುಮಾರು 400-500 ಜೇನುಗೂಡುಗಳು. ಜೇನು ಸಾಕಿದ ಅನುಭವ ನನಗಿದೆ. ಆ ಗಾತ್ರದ ಒಂದೊಂದು ಗೂಡಿನಲ್ಲೂ ಕನಿಷ್ಠ 50,000 ಜೇನುಹುಳುಗಳಿವೆ ಎಂದು ಅಂದಾಜಿಸಿದರೂ, ಪ್ರತಿ ಟ್ರಕ್‌ನಲ್ಲಿ ಏನಿಲ್ಲವೆಂದರೂ ಎರಡೂವರೆ ಕೋಟಿ ಹುಳುಗಳು. ಅಂಥ 20 ಟ್ರಕ್‌ಗಳೆಂದರೆ ಸುಮಾರು 50 ಕೋಟಿ ಹುಳುಗಳು ನಮ್ಮ ಸುತ್ತಮುತ್ತಲಿದ್ದವು. ಅಷ್ಟೊಂದು ಜೀವಗಳು ಇಷ್ಟು ಸನಿಹದಲ್ಲಿವೆ ಅಂದುಕೊಳ್ಳುವುದೇ ರೋಮಾಂಚಕಾರಿ, ಜತೆಗೆ ಅವು ಜೇನುನೊಣಗಳೆಂಬ ಕಾರಣಕ್ಕೆ ಸ್ವಲ್ಪ ಭಯ. ಜೇನುಹುಳು ಸಾಕಣೆಗೆ ಈ ಪ್ರಮಾಣದಲ್ಲಿ ಯಾರಾದರೂ ಖರೀದಿಸುತ್ತಿದ್ದಾರೆಯೇ? ಇದೆಂಥಾ ಬ್ಯುಸಿನೆಸ್ಸು? ಎಂಬೆಲ್ಲ ಪ್ರಶ್ನೆಗಳು ಕ್ಷಣಾರ್ಧದಲ್ಲಿ ಗಿರಕಿಹೊಡೆಯತೊಡಗಿದವು. ಆ ಟ್ರಕ್‌ಗಳೆಲ್ಲ ಒಂದೇ ರಾಜ್ಯದಿಂದ ಬಂದವು ಎಂಬುದು ನಂಬರ್ ಪ್ಲೇಟ್‌ನಿಂದ ತಿಳಿಯುತಿತ್ತು. ಇಬ್ಬರು ಟ್ರಕ್ ಡ್ರೈವರ್‌ಗಳನ್ನು ನಿಲ್ಲಿಸಿ, ''ಏನಿದರ ಹಕೀಕತ್ತು?'' ಎಂದು ಪ್ರಶ್ನಿಸಿದಾಗ, ಹೊಸತೊಂದು ವ್ಯವಹಾರದ ಜಗತ್ತೇ ತೆರೆದುಕೊಂಡಿತು.

ಈ ಜೇನುಗಳೆಲ್ಲ ಹೊರಟಿದ್ದು ಲೂಸಿಯಾನಾ ರಾಜ್ಯದಿಂದ; ಅಲ್ಲಿಂದ ಕ್ಯಾಲಿಫೋರ್ನಿಯಾ ಏನಿಲ್ಲವೆಂದರೂ ಎರಡೂವರೆ ಸಾವಿರ ಕಿ.ಮೀ. ಈ ಎಲ್ಲ ಜೇನುಗಳು ಮಾರಾಟಕ್ಕಲ್ಲ, ಕ್ಯಾಲಿಫೋರ್ನಿಯಾದ ಬಾದಾಮಿ ತೋಟಗಳಲ್ಲಿನ ಕೃಷಿಕಾರ್ಯಕ್ಕೆ. ನಿಜ, ಅಮೆರಿಕದಲ್ಲಿ ಜೇನನ್ನು ದುಡಿಸಿಕೊಳ್ಳುವ ಬೃಹತ್ ಉದ್ಯಮವೇ ಇದೆ. ಕ್ಯಾಲಿಫೋರ್ನಿಯಾದ ಸುಮಾರು 7,60,000 ಎಕರೆ ಬಾದಾಮಿ ತೋಟಗಳಲ್ಲಿ ಮತ್ತು ದೇಶದ ಉದ್ದಗಲಕ್ಕೆ ಪರಾಗಸ್ಪರ್ಶ ಮಾಡುವುದೇ ಇವುಗಳ ಕೆಲಸ.

ಅಮೆರಿಕದಲ್ಲಿ ಅತಿಹೆಚ್ಚು ಬಾದಾಮಿ ಬೆಳೆವ ರಾಜ್ಯ ಕ್ಯಾಲಿಫೋರ್ನಿಯಾ. ಬಾದಾಮಿಯ ಇಳುವರಿ ಸೊಗಸಾಗಿರಬೇಕೆಂದರೆ ಕೀಟಮುಖೇನ ಪರಾಗಸ್ಪರ್ಶವಾಗಬೇಕು. ಕೆಲ ದಶಕಗಳ ಹಿಂದೆ ಬಾದಾಮಿ ಕೃಷಿ ಅಲ್ಪಪ್ರಮಾಣದಲ್ಲಿದ್ದಾಗ, ಅಲ್ಲಿನ ಸ್ಥಳೀಯ ಕೀಟಗಳು ಮತ್ತು ಜೇನುಹುಳುಗಳು ಪರಾಗಸ್ಪರ್ಶ ಮಾಡುತ್ತಿದ್ದವು. ದಿನಗಳೆದಂತೆ, ಅಮೆರಿಕದಲ್ಲಿನ ಕೃಷಿ ಕ್ರಾಂತಿಯಿಂದಾಗಿ ಬಾದಾಮಿಯ ಬೇಡಿಕೆ ಹೆಚ್ಚಿತು; ಬಾದಾಮಿಯ ರಫ್ತು ಲಾಭದಾಯಕವಾದದ್ದರಿಂದ ಕ್ಯಾಲಿಫೋರ್ನಿಯಾದಲ್ಲಿ ಬಾದಾಮಿ ತೋಟಗಳು ವಿಸ್ತರಿಸತೊಡಗಿದವು. ಆದರೆ ಸಮಸ್ಯೆಯೆಂದರೆ, ಅಲ್ಲಿ ಆ ಪ್ರಮಾಣದ ಪರಾಗಸ್ಪರ್ಶಕ್ಕೆ ಜೇನುಹುಳುಗಳೇ ಇರಲಿಲ್ಲ. ಹೀಗಾಗಿ ಇಳುವರಿ ಕ್ರಮೇಣ ಕುಸಿಯಿತು. ಅದೆಷ್ಟೇ ಜೇನುಹುಳುಗಳನ್ನು ಸಾಕಿದರೂ, ಪ್ರತಿವರ್ಷದ ಬೇಸಗೆಯ ಸೆಖೆಗೆ, ನೀರಿನ ಕೊರತೆಗೆ, ಬಾದಾಮಿ ಬೆಳೆವ ಸಮಯ ಬಿಟ್ಟರೆ ಬೇರೆ ಕಾಲದಲ್ಲಿ ಹೊಟ್ಟೆಗಿಲ್ಲದೆ ಬಹುಪಾಲು ಜೇನುಹುಳುಗಳು ಸಾಯುತ್ತಿದ್ದವು. ಆಗ ಅವನ್ನು ಪರರಾಜ್ಯಗಳಿಂದ ಕೆಲಸಕ್ಕೆ ತರುವ ಪದ್ಧತಿ ಶುರುವಾಯಿತು.

ಇಂದು ಅಮೆರಿಕದಲ್ಲಿ ಜೇನುತುಪ್ಪಕ್ಕಿಂತ ಪರಾಗಸ್ಪರ್ಶದ ಕೆಲಸಕ್ಕೆ ಜೇನುಹುಳುಗಳನ್ನು ಸಾಕಿ ಬೆಳೆಸುವುದು ಲಾಭದಾಯಕವಾಗಿದೆ. ಲೂಸಿಯಾನಾದ ಹಸನಾದ ವಾತಾವರಣದಲ್ಲಿ ಇದು ನಡೆಯುತ್ತದೆ (!). ನಂತರ ಅವನ್ನು ಟ್ರಕ್‌ಗಳಲ್ಲಿ ತುಂಬಿಕೊಂಡು, ಬಾದಾಮಿ ಗಿಡಗಳು ಹೂಬಿಡುವ ವೇಳೆಗೆ ಕ್ಯಾಲಿಫೋರ್ನಿಯಾಕ್ಕೆ ತಂದು ಪರಾಗಸ್ಪರ್ಶ ಮಾಡಲು ಬಿಡಲಾಗುತ್ತದೆ. ಕೃಷಿಯಲ್ಲಿ ಎಷ್ಟೇ ಆಧುನಿಕತೆ ಬಂದಿದ್ದರೂ ಪರಾಗಸ್ಪರ್ಶದಂಥ ಅತಿಸೂಕ್ಷ್ಮ ಕೆಲಸಕ್ಕೆ ಯಾವುದೇ ಯಂತ್ರ/ತಂತ್ರಜ್ಞಾನವನ್ನು ಕಂಡುಹಿಡಿಯಲಾಗಿಲ್ಲ; ಅದಕ್ಕೆ ಜೇನುಹುಳುಗಳೇ ಬೇಕು. ಅಲ್ಲಿ ಪರಾಗಸ್ಪರ್ಶ ಮುಗಿದ ನಂತರ ಈ ಕೋಟ್ಯಂತರ ಜೇನುಹುಳುಗಳನ್ನು ಅನ್ಯರಾಜ್ಯಗಳಿಗೆ, ಮತ್ತೊಂದು ತೋಟಕ್ಕೆ ಒಯ್ಯಲಾಗುತ್ತದೆ. ಹೀಗೆ ಒಯ್ಯುವ ಕೆಲಸ ಅಂದುಕೊಂಡಷ್ಟು ಸುಲಭವಲ್ಲ. ಉಳಿದ ಸಾಮಾನುಗಳಂತೆ ಜೇನುಹುಳುಗಳನ್ನು ಬೇಕಾಬಿಟ್ಟಿಯಾಗಿ, ಫ್ರಿಜ್ಜಿನಲ್ಲಿ ಒಯ್ಯಲಾಗುವುದಿಲ್ಲ. ಅವು ಸೂಕ್ಷ್ಮ ದೇಹ ಪ್ರಕೃತಿಯ ಜೀವಿಗಳು, ಮಾರ್ಗಮಧ್ಯೆ ಬಿಸಿಲಿನ ತಾಪ ಹೆಚ್ಚಿದಲ್ಲಿ 5 ನಿಮಿಷದೊಳಗೆ ಸಾಯುತ್ತವೆ. ಅವನ್ನು ಒಯ್ಯುವ ಟ್ರಕ್ಕುಗಳು ಎಲ್ಲಿಯೂ ನಿಲ್ಲದೆ ಸಾಗುತ್ತಿರಬೇಕು. ಹಾಗಾಗಿ ಸರತಿಯಲ್ಲಿ ಡ್ರೈವ್ ಮಾಡಲು ಇಬ್ಬರು ಚಾಲಕರು ಇರುತ್ತಾರೆ. ಜತೆಗೆ ಪಯಣವು ಹೆಚ್ಚೆಂದರೆ ಒಂದೂವರೆ ದಿನದಲ್ಲಿ ಮುಗಿಯಲೇಬೇಕು. 2 ದಿನಕ್ಕಿಂತ ಹೆಚ್ಚಿನ ಸಮಯ ಬಂಧಿಸಿಟ್ಟರೆ ಜೇನುಹುಳುಗಳು ಬದುಕುವುದಿಲ್ಲ. ಈ ಡ್ರೈವರ್‌ಗಳು ಊಟಕ್ಕೆ, ವಿಶ್ರಾಂತಿಗೆ ಮಾರ್ಗಮಧ್ಯೆ ನಿಲ್ಲುವಂತಿಲ್ಲ. ಹೀಗಾಗಿ ಮೂತ್ರಕ್ಕೂ ಟ್ರಕ್ಕಿನೊಳಗೇ ವ್ಯವಸ್ಥೆಯಿರುತ್ತದೆ. ಗೂಡುಗಳ ಮೂಲಕ ಗಾಳಿ ಹಾಯುತ್ತಿದ್ದರಷ್ಟೇ ಒಳಗಿನ ಉಷ್ಣಾಂಶವು ಹದವಾಗಿ, ತಂಪಾಗಿರಲು ಸಾಧ್ಯ. ಹೀಗಿರುವಾಗ ಟ್ರಕ್‌ಗಳನ್ನು ಈ ಟೋಲ್ ಪ್ಲಾಜಾದಲ್ಲಿ ನಿಲ್ಲಿಸಿದ್ದೇಕೆ? ಇಲ್ಲಿ ನಡೆಯುತ್ತಿರುವುದೇನು?

ಅಸಲಿಗೆ ಅದು ಟೋಲ್ ಪ್ಲಾಜಾ ಆಗಿರದೆ, ಹಾಗೆ ಕಾಣಿಸುವ ಕ್ಯಾಲಿಫೋರ್ನಿಯಾದ ಕೃಷಿ ಇಲಾಖೆಯ ಚೆಕ್ ಪಾಯಿಂಟ್ ಎಂದು ನಂತರ ತಿಳಿಯಿತು. ಕ್ಯಾಲಿಫೋರ್ನಿಯಾವನ್ನು ಪ್ರವೇಶಿಸುವ ಜೇನು ತುಂಬಿದ ಟ್ರಕ್ಕುಗಳೆಲ್ಲವನ್ನೂ ಅಲ್ಲಿ ಪರೀಕ್ಷಿಸಲಾಗುತ್ತಿತ್ತು. ಜೇನಿನ ಜತೆಗೆ ಇನ್ಯಾವುದೋ ಕೀಟವು ಒಳಬಂದರೆ ಅವು ಬಾದಾಮಿ ಮತ್ತು ಉಳಿದ ಬೆಳೆಗಳಿಗೆ ಮಾರಕವಾಗಬಹುದು. ಹಾಗಾಗಿ ಜೇನಿನ ಟ್ರಕ್ಕುಗಳನ್ನು ಪರೀಕ್ಷಿಸಿ ಮುಂದೆ ಬಿಡಲಾಗುತ್ತಿತ್ತು. ಜೇನಿನ ಜತೆಗೆ ಬೇರಾವುದೇ ಹುಳು ಕಾಣಿಸಿಕೊಂಡರೆ, ಆ ಚೆಕ್ ಪಾಯಿಂಟ್‌ನ ತಜ್ಞರು ಅದರ ಫೋಟೋ ತೆಗೆದು ಕೃಷಿ ಕೇಂದ್ರಾಲಯಕ್ಕೆ ಇ-ಮೇಲ್ ಮೂಲಕ ರವಾನಿಸುತ್ತಿದ್ದರು. ಅಲ್ಲಿ ಸುಮಾರು 2-3 ನಿಮಿಷದೊಳಗೆ ಅದು ಯಾವ ಹುಳು, ಅದರ ಜತೆಗೆ ಈ ಟ್ರಕ್ಕನ್ನು ರಾಜ್ಯದೊಳಗೆ ಬಿಟ್ಟುಕೊಳ್ಳಬಹುದೇ ಎಂಬಿತ್ಯಾದಿ ನಿರ್ಣಯವಾಗಬೇಕು. ಇದು ನಿರ್ದಿಷ್ಟ ಸಮಯದೊಳಗೆ ನಡೆಯದಿದ್ದರೆ ಆ ಜೇನುಹುಳುಗಳೆಲ್ಲ ಸಾಯುತ್ತವೆ. ನಿಲ್ಲಿಸಿದ ಒಂದೈದು ನಿಮಿಷದಲ್ಲಿ ಉಷ್ಣಾಂಶ ತಗ್ಗಿಸಿ ಗೂಡುಗಳನ್ನು ತಂಪಾಗಿಸಲು ನೀರಿನ ಸ್ಪ್ರೇ ಮಾಡುವ ವ್ಯವಸ್ಥೆಯಿದ್ದರೂ ಅದು ತಾತ್ಕಾಲಿಕ ಪರಿಹಾರವಷ್ಟೇ. ಒಂದೊಮ್ಮೆ ಬೇಡದ/ಹಾನಿಕಾರಕ ಹುಳುಗಳು ಅಧಿಕವಾಗಿ ಕಾಣಿಸಿಕೊಂಡರೆ ಆ ಟ್ರಕ್ಕು ಕ್ಯಾಲಿಫೋರ್ನಿಯಾವನ್ನು ಪ್ರವೇಶಿಸುವಂತಿಲ್ಲ. ಇಂಥ ಟ್ರಕ್‌ನಲ್ಲಿನ ಹುಳುಗಳನ್ನು ಮಾರ್ಗಮಧ್ಯದ ಬೇರಾವ ರಾಜ್ಯದಲ್ಲೂ ಬಿಡುವಂತಿಲ್ಲ, ಹಾಗೆ ಬಿಟ್ಟರೆ, ಅಲ್ಲಿನ ಕೃಷಿ ಮೇಲೆ ಅಡ್ಡಪರಿಣಾಮವಾಗುತ್ತದೆ. ಮರಳಿ ಲೂಸಿಯಾನಾಕ್ಕೆ ಪಯಣಿಸಬೇಕೆಂದರೆ ಮತ್ತೆರಡು ದಿನ ಬೇಕು. ಹಾಗಾಗಿ ಇಂಥ ಟ್ರಕ್‌ಗಳು ತಿರಸ್ಕೃತಗೊಂಡರೆ ಸುಮಾರು ಎರಡೂವರೆ ಕೋಟಿ ಜೀವಗಳು ಸತ್ತವೆಂದೇ ಅರ್ಥ.

ಜೇನುಹುಳು ಬದುಕುವುದೇ ಸುಮಾರು 120-150 ದಿನ. ಹಾಗಾಗಿ, ಲೂಸಿಯಾನಾದಲ್ಲಿ ಹುಟ್ಟಿದ ಜೇನು ಮತ್ತೆ ಲೂಸಿಯಾನಾವನ್ನು ನೋಡುವುದೇ ಇಲ್ಲ. ಅತ್ತ ಕ್ಯಾಲಿಫೋರ್ನಿಯಾದಲ್ಲಿರುವಾಗ ಹುಟ್ಟಿದ ಹುಳುಗಳು ಮರಳಿ ಕ್ಯಾಲಿಫೋರ್ನಿಯಾವನ್ನು ನೋಡುವುದೇ ಇಲ್ಲ. ಅವು ಕ್ಯಾಲಿಫೋರ್ನಿಯಾದ ಬಾದಾಮಿ ತೋಟಗಳಲ್ಲಿ ಪರಾಗಸ್ಪರ್ಶ ಮಾಡಿದ ನಂತರ, ಪೂರ್ವದ ನ್ಯೂಯಾರ್ಕ್ ಮತ್ತು ನ್ಯೂಜೆರ್ಸಿಯ ಸೇಬು ತೋಟಗಳಿಗೆ ಒಯ್ಯಲ್ಪಡುತ್ತವೆ. ಅಲ್ಲಿನ ಕೆಲಸವಾದ ನಂತರ ಮೈನ್ ರಾಜ್ಯದ ಬ್ಲೂಬೆರ್ರಿ ತೋಟಕ್ಕೆ, ನಂತರ ಮೆಸ್ಸಾಚುಸೆಟ್ಸ್‌ನ ಕ್ರ್ಯಾನ್‌ಬೆರ್ರಿ ತೋಟಕ್ಕೆ. ನಂತರ ಅವು ಮತ್ತೆ ಲೂಸಿಯಾನಾಕ್ಕೆ ಮರಳುತ್ತವೆ. ಮಾರ್ಗಮಧ್ಯದಲ್ಲಾಗುವ ಸಾವುನೋವಿಗೆ ಲೆಕ್ಕವಿಲ್ಲ. ಎಷ್ಟೇ ಮುತುವರ್ಜಿ ವಹಿಸಿದರೂ ಕೆಲವೊಮ್ಮೆ ಅರ್ಧಕ್ಕೂ ಹೆಚ್ಚು ಜೇನುಹುಳುಗಳು ಸಾಯುತ್ತವೆ. ಹೀಗಾಗಿ ಅವಶ್ಯವಿರುವುದಕ್ಕಿಂತಲೂ ದುಪ್ಪಟ್ಟು ಜೇನುಹುಳುಗಳನ್ನು ಲೂಸಿಯಾನಾದಿಂದ ಕಳಿಸಿಕೊಡಲಾಗುತ್ತದೆ. ಹೀಗೆ ಕಳುಹಿಸಿಕೊಟ್ಟ ಗೂಡುಗಳು ಮರಳುವಾಗ ಹೊಸ ತಲೆಮಾರಿನ ಹುಳುಗಳು ಅಲ್ಲಿರುತ್ತವೆ.

ಹೀಗೆ ಅರ್ಧದೇಶವನ್ನು 2 ದಿನದೊಳಗೆ ಸುತ್ತುವ ಈ ಪುಟ್ಟಜೀವಿಗಳು ಮಾನಸಿಕ ಒತ್ತಡಕ್ಕೆ ಒಳಗಾಗುತ್ತವೆ. ಸದಾ ಚಟುವಟಿಕೆಯಿಂದ ಸ್ವಚ್ಛಂದವಾಗಿ ಹಾರುವ ಜೇನನ್ನು 2 ದಿನದ ಪಯಣದ ಸಮಯದಲ್ಲಿ ಬಂಧಿಸಿಟ್ಟಾಗ ಅವುಗಳ ಮಾನಸಿಕ ಉದ್ವೇಗ ಹೆಚ್ಚಿರುತ್ತದೆ. ತಲುಪಬೇಕಾದ ತೋಟಕ್ಕೆ ತಂದು, ಪರದೆ ತೆರೆದಾಕ್ಷಣ ಅವು ಗುಂಪಾಗಿ, ಕಾರ್ಮೋಡಸದೃಶವಾಗಿ ಮೇಲಕ್ಕೆ ಹಾರುತ್ತವೆ, ಕಚ್ಚಾಡಿಕೊಳ್ಳುತ್ತವೆ, ಭಾರಿ ಪ್ರಮಾಣದಲ್ಲಿ ಸಾಯುತ್ತವೆ. ಜೇನುಹುಳು ತೀರಾ ಸೂಕ್ಷ್ಮಗ್ರಾಹಿ. ಆಧುನಿಕ ಕೃಷಿಯಲ್ಲಿ ಅಳತೆಗೆಟ್ಟ ಪ್ರಮಾಣದಲ್ಲಿ ಬಳಕೆಯಾಗುವ ಕೀಟನಾಶಕಗಳು, ಅವು ಪರಾಗಸ್ಪರ್ಶ ಮಾಡುವಾಗ ಮೈಗೆ ಅಂಟಿಕೊಳ್ಳುತ್ತವೆ. ಹೀಗೆ ಕೀಟನಾಶಕವನ್ನು ಬಳಿದುಕೊಂಡು ಗೂಡಿಗೆ ಮರಳುವ ಹುಳುಗಳನ್ನು ದ್ವಾರಪಾಲಕ ಹುಳುಗಳು ತಡೆಯುವುದರಿಂದ, ಅವು ಗೂಡಿನ ಹೊರಗೇ ಉಳಿದು ಸಾಯುತ್ತವೆ. ಅಲ್ಲದೆ, ಒಂದೇ ತರಕಾರಿಯನ್ನು ಜೀವಮಾನಪೂರ್ತಿ ತಿನ್ನಲು ಕೊಟ್ಟರೆ ನಮಗಾಗುವ ಸ್ಥಿತಿಯೇ ಈ ಜೇನುಹುಳುಗಳಿಗೂ ಒದಗುತ್ತದೆ. ಅಂದರೆ, ಸುಮಾರು 2 ತಿಂಗಳು ಅವನ್ನು ಸಾವಿರಾರು ಎಕರೆಯಷ್ಟಿರುವ ಒಂದೇ ಬೆಳೆಯ ಮಧ್ಯೆ ಬಿಡುವುದರಿಂದ, ಅವಕ್ಕೆ ವೈವಿಧ್ಯಮಯ ಸಮತೋಲನ ಆಹಾರದ ಕೊರತೆಯೂ ಆಗುತ್ತದೆ.

ಮನುಷ್ಯನು ಜೇನುಹುಳುವಿಲ್ಲದೆ ಸಾಕಷ್ಟು ಬೆಳೆಗಳನ್ನು ಬೆಳೆಯಲು ಸಾಧ್ಯವೇ ಇಲ್ಲ. ಒಂದು ಲೆಕ್ಕಾಚಾರದಂತೆ, ನಾವು ತಿನ್ನುವ 3 ತುತ್ತಿನಲ್ಲಿ ಒಂದರ ಉತ್ಪಾದನೆಯಲ್ಲಿ ಜೇನುಹುಳು ಭಾಗಿಯಾಗಿರುತ್ತದೆ. ಇಂಥ ಜೇನು ಈ ಭೂಮಿಯಿಂದ ಮಾಯವಾದಲ್ಲಿ ಮನುಷ್ಯ ಮೂರೇ ವರ್ಷದಲ್ಲಿ ನಾಶವಾಗುತ್ತಾನೆ ಎನ್ನುತ್ತದೆ ವೈಜ್ಞಾನಿಕ ಲೆಕ್ಕಾಚಾರ. ಕೆಲ ಬೆಳೆಗಳಿಗೆ ಜೇನುಹುಳುವಿನ ಅವಶ್ಯಕತೆ ಅಷ್ಟಿರುವುದಿಲ್ಲ, ಬೀಸುವ ಗಾಳಿಯಿಂದಲೇ ಅವುಗಳ ಪರಾಗಸ್ಪರ್ಶವಾಗುತ್ತದೆ. ಹಾಗಾಗಿ, ಅಂಥ ಬೆಳೆಗಳಲ್ಲಿ ಕೀಟನಾಶಕಗಳ ಯಥೇಚ್ಛ ಬಳಕೆಯಾಗುತ್ತದೆ. ಅವು ಸ್ಥಳೀಯ ಜೇನುಹುಳುಗಳಿಗೆ/ಕೀಟಗಳಿಗೆ ಮಾರಕವಾಗುತ್ತವೆ. ಜೇನುಹುಳುಗಳ ಮೇಲೆಯೇ ಮನುಷ್ಯನ ಆಹಾರ ಸರಪಳಿ ನಿಂತಿರುವ ಸತ್ಯ ತಿಳಿದಿದ್ದರೂ, ಅದರ ಪರಿವೆಯಿಲ್ಲದಂತೆ ನಮ್ಮ ಇಂದಿನ ಕೃಷಿ ಸಾಗಿರುವುದು ದುರಂತ. ಕೀಟನಾಶಕದ ಪ್ರಮಾಣವನ್ನು ಅಂದಾಜಿಸಿ ನಂತರ ಈ ಜೇನುಹುಳುಗಳನ್ನು ತೋಟಕ್ಕೆ ಬಿಡಬೇಕೆಂಬ ಕಾನೂನಿದೆ. ದುರಂತವೆಂದರೆ, ಈ ಪರೀಕ್ಷೆ ನಡೆಸುವವರು ಕೀಟನಾಶಕ ಕಂಪನಿಯವರೇ!

ಅಮೆರಿಕದಲ್ಲಿ ಕೀಟನಾಶಕ ಮತ್ತಿತರ ಕಾರಣಗಳಿಂದಾಗಿ 2005ರಲ್ಲಿ ಅರ್ಧಕ್ಕರ್ಧ ಜೇನುಹುಳುಗಳು ಸತ್ತವು. ಹೀಗಾಗಿ ಆಸ್ಟ್ರೇಲಿಯಾದಿಂದ ಅವನ್ನು ವಿಮಾನದಲ್ಲಿ ತರಿಸಿಕೊಳ್ಳಲಾಯಿತು. ಹೀಗೆ ಭೂಮಿಯ ಒಂದು ಭಾಗದಿಂದ, ಭೂಮಧ್ಯರೇಖೆ ದಾಟಿ ಮತ್ತೊಂದು ಭಾಗಕ್ಕೆ ಬಂದ ಹುಳುಗಳು ವಾತಾವರಣ ಮತ್ತು ಋತು ಬದಲಾವಣೆಯಿಂದಾಗಿ ಬದುಕಲಿಲ್ಲ. ಯುರೋಪ್‌ನ ಜೇನುಗಳು ಹೆಚ್ಚು ಶಕ್ತಿಶಾಲಿ, ಚಟುವಟಿಕೆಯವು ಎಂಬ ಕಾರಣಕ್ಕೆ ಅವನ್ನೂ ಅಲ್ಲಿಂದ ಆಮದು ಮಾಡಿಕೊಂಡರೂ, ಅವೂ ಬದುಕಲಿಲ್ಲ. ಮನುಷ್ಯರ ದಾಹ/ಅವಶ್ಯಕತೆ ಎಷ್ಟೇ ಇದ್ದರೂ, ತನಗೆ ವಿರುದ್ಧವಾಗಿ ನಡೆದಲ್ಲಿ ಪ್ರಕೃತಿಯು ಅದನ್ನು ಸುಲಭದಲ್ಲಿ ಒಪ್ಪುವುದಿಲ್ಲ. ಆದರೆ ಮನುಷ್ಯ ಕೂಡ ಪಟ್ಟುಸಡಿಲಿಸುವ ಜಾಯಮಾನದವನಲ್ಲ. ಕ್ಷಮತೆಯ ಏಕೈಕ ಕಾರಣಕ್ಕೆ ಯುರೋಪ್‌ನ ಜೇನುತಳಿಯನ್ನು ಅಮೆರಿಕದಲ್ಲಿ ಅಭಿವೃದ್ಧಿಪಡಿಸಲಾಯಿತು. ಇಂದು ಅಮೆರಿಕದಲ್ಲಿರುವ ಕೂಲಿಜೇನಿನಲ್ಲಿ ಹೆಚ್ಚಿನವು ಯುರೋಪ್ ಮೂಲದವು. ಅವುಗಳ ಜೀನ್‌ಗಳು ಇಂದಿಗೂ ಅಮೆರಿಕದ ಬೆಳೆ/ಹೂವುಗಳಿಗೆ ಒಗ್ಗಿಕೊಳ್ಳದದ್ದರಿಂದ ಹತ್ತಾರು ರೋಗಗಳಿಂದ ಬಾಧಿಸಲ್ಪಡುತ್ತವೆ. ಅಲ್ಲದೆ, ಹೀಗೆ ಅನ್ಯಪ್ರಭೇದದ ಹುಳುಗಳ ಪ್ರಮಾಣ ಹೆಚ್ಚಿದ್ದರಿಂದ, ಸ್ಥಳೀಯ ಜೇನುಗಳ ಪ್ರಮಾಣ ಗಣನೀಯವಾಗಿ ತಗ್ಗುತ್ತಿದೆ.

ಈ ವ್ಯವಹಾರ ತೀರಾ ಕೃತ್ರಿಮ ಪದ್ಧತಿಯೆನಿಸಿದರೂ, ಇದೊಂದು ಲಾಭದಾಯಕ ಉದ್ಯಮವಾಗಿಬಿಟ್ಟಿದೆ. ಹಾಗಾಗಿ ಪ್ರಕೃತಿಯೊಡ್ಡುವ ಎಲ್ಲ ಸವಾಲುಗಳ ನಡುವೆಯೂ ಈ ಜೇನುಗಳಿಂದ ದುಡಿಸಿಕೊಳ್ಳುವ ಮನುಷ್ಯನ ಅಮಾನವೀಯ ಕೃತ್ಯ ಮುಂದುವರಿದಿದೆ. ಪ್ರದೂಷಣೆ ಮಾಡುವುದರೊಂದಿಗೆ, ಪ್ರಕೃತಿಯ ಜೀವಿಗಳ ಜತೆಗೂ ಮನುಷ್ಯ ಅನಾಚಾರಕ್ಕಿಳಿದಿರುವ ಉದಾಹರಣೆಗಳಲ್ಲಿ ಇದೂ ಒಂದು. ಆಕಳು, ಮೇಕೆಯಂಥ ಪ್ರಾಣಿಗಳನ್ನು ಸ್ವಾರ್ಥಕ್ಕೆ ಬಳಸುವುದನ್ನು, ಅದೊಂದು ಉದ್ಯಮ/ಆಧುನಿಕತೆ ಎಂಬುದನ್ನು ಒಪ್ಪಿಕೊಳ್ಳುವ ನಾವು, ಇದನ್ನೂ ಆಧುನಿಕ ಕೃಷಿ ಪದ್ಧತಿಯ ಭಾಗ ಎಂದು ಒಪ್ಪಬೇಕಾಗಿದೆ. ಭಾರತ ಸೇರಿದಂತೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲೂ ಕೃಷಿಕ್ರಾಂತಿಯಾಗಬೇಕೆಂದರೆ ಇಂಥ ವಿಕೃತಿಗಳನ್ನು ಮುಂದೆ ನೆಚ್ಚಬೇಕಾಗಬಹುದೇನೋ? ಆ ಹಂತವನ್ನು ಮುಟ್ಟುವ ಮೊದಲು, ಸುಸ್ಥಿರ-ಸಮತೋಲನದ ಕೃಷಿ ಪದ್ಧತಿಯನ್ನು ನಮ್ಮದಾಗಿಸಿಕೊಳ್ಳಲು ವಿಚಾರ ಮಾಡುವ, ಹೆಜ್ಜೆಯಿಡುವ ಅಗತ್ಯವಿದೆ. ಜೇನುಹುಳುವಿನ ಮಹತ್ವ ನಮ್ಮಲ್ಲಿಂದು ಬಹುತೇಕ ಕೃಷಿಕರಿಗೆ ಇದ್ದಂತಿಲ್ಲ, ಅದು ಕೇವಲ ಜೇನುತುಪ್ಪಕ್ಕೋಸ್ಕರ ಎಂಬ ಭಾವನೆಯಿದೆ ಬಹುತೇಕರಲ್ಲಿ. ಎರೆಹುಳುವಿನಂತೆ ಜೇನುಹುಳುವೂ 'ಕೃಷಿಕ ಸ್ನೇಹಿ' ಎಂಬುದನ್ನು ನಾವು ಅರಿಯಬೇಕಿದೆ. ಜೇನನ್ನು ಸಹಜವಾಗಿ ಸಾಕಿದಲ್ಲಿ ಉತ್ತಮ ಇಳುವರಿ ಸಾಧ್ಯ ಎಂಬ ಸೂಕ್ಷ್ಮ ಸಂಗತಿಯನ್ನು ನಮ್ಮ ಕೃಷಿಕರಿಗೆ ತಲುಪಿಸಿ ಪ್ರೋತ್ಸಾಹಿಸುವ ಹೊಣೆ ಕೃಷಿ ಇಲಾಖೆಯದ್ದು. ಉತ್ತರ ಕನ್ನಡದ ಕುಮಟಾ, ಹೊನ್ನಾವರ ಸೇರಿದಂತೆ ಕರಾವಳಿಯ ಹಲವೆಡೆಯಿರುವ 'ಜೇನು ಸೊಸೈಟಿಗಳು' ಜೇನಿನೆಡೆಗಿನ ಈ ಜಾಗೃತಿಯನ್ನು ಮೂಡಿಸುವಲ್ಲಿ ಕೊಂಚ ವ್ಯಸ್ತವಾಗಿರುವುದೇನೋ ನಿಜ. ಆದರೆ ಸರಕಾರದ ಅಸಡ್ಡೆಯಿಂದಾಗಿ ಅವು ತಮ್ಮ ಕೆಲಸವನ್ನು ಜೇನುಸಂಗ್ರಹ ಮತ್ತು ಮಾರಾಟಕ್ಕಷ್ಟೇ ಸೀಮಿತಗೊಳಿಸಿಕೊಂಡಿವೆ. ಕೃಷಿ ಇಲಾಖೆಯಂತೂ ಜೇನಿನೆಡೆಗೆ ದಿವ್ಯನಿರ್ಲಕ್ಷ್ಯ ವಹಿಸಿದಂತಿದೆ. ನಮ್ಮ ಕೃಷಿಕರೂ ಜೇನುಸಾಕಣೆಯನ್ನು ಮರೆತಂತಿದೆ. ಇಂಥ ನಿರ್ಲಕ್ಷ್ಯವು ನಮ್ಮನ್ನೂ ಮುಂದೊಂದು ದಿನ ಅಮೆರಿಕದ ಸ್ಥಿತಿಗೆ ದೂಡಬಹುದು. ಹಾಗಾದಲ್ಲಿ, 'ಕೂಲಿಜೇನು ಸಾಕಣೆ' ಒಂದೊಳ್ಳೆಯ ಬ್ಯುಸಿನೆಸ್ ಆಗಿ, ಹತ್ತಾರು ಕುಟುಂಬದ ಹೊಟ್ಟೆ ತುಂಬಬಹುದು, ಅಲ್ಲವೇ?

ನಿಷ್ಕಾಮ ಸೇವೆಗೆ ಮತ್ತೊಂದು ಹೆಸರು ಗೃಹರಕ್ಷಕ ದಳ

ಕಾನೂನು ಮತ್ತು ಶಿಸ್ತುಪಾಲನೆಯಲ್ಲಿ ಪೊಲೀಸ್ ಇಲಾಖೆಗೆ ಪೂರಕಪಡೆಯಾಗಿ ಕೆಲಸ ಮಾಡುವ ಗೃಹರಕ್ಷಕ ದಳವು, ಪ್ರಾಕೃತಿಕ ವಿಪತ್ತು ಮತ್ತು ಮಾನವ ನಿರ್ಮಿತ ವಿಷಮ ಪರಿಸ್ಥಿತಿಗಳ ವೇಳೆ ಜೀವ ಹಾಗೂ ಆಸ್ತಿ ಸಂರಕ್ಷಣೆ, ವಿಪತ್ತು ನಿರ್ವಹಣೆ, ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳಲ್ಲಿ ಸಮುದಾಯಕ್ಕೆ ಅಗತ್ಯ ನೆರವು ನೀಡುತ್ತದೆ.



ತನ್ನಿಮಿತ್ತ
ಡಾ. ಮುರಲೀ ಮೋಹನ್ ಚೂಂತಾರು
vveditoped@gmail.com

ಗೃಹರಕ್ಷಕ ದಳ ಎಂಬುದು ಸರಕಾರದ ಅಧೀನದಲ್ಲಿರುವ, ಸಮವಸ್ತ್ರಧಾರಿ ಶಿಸ್ತುಬದ್ಧ ಸ್ವಯಂಸೇವಕರನ್ನು ಒಳಗೊಂಡ ಒಂದು ಸಂಸ್ಥೆಯಾಗಿದ್ದು, ಸಮಾಜಕ್ಕೆ ತುರ್ತು ಅಗತ್ಯ ಒದಗಿದಾಗ ಇದು ಸೇವೆ ಸಲ್ಲಿಸುತ್ತದೆ. ಸಮಾಜದ ಎಲ್ಲಾ ವರ್ಗದ ಜನರಿಗೆ ರಕ್ಷಣೆ ನೀಡುವ ಧ್ಯೇಯವಿರುವ ಈ ಸಂಸ್ಥೆಗೆ 'ನಿಷ್ಕಾಮ ಸೇವೆಯೇ' ಪರಮಗುರಿ, ಅದುವೇ ಸಂಸ್ಥೆಯ ಮೂಲಮಂತ್ರ.

ಎರಡನೇ ಮಹಾಯುದ್ಧದ ವೇಳೆ ಹಿಟ್ಲರನ 'ನಾಜಿ' ಸೈನ್ಯಪಡೆಯನ್ನು ಹಿಮ್ಮೆಟ್ಟಿಸಲು, ಪೊಲೀಸ್ ಮತ್ತು ಮಿಲಿಟರಿಗೆ ಪರ್ಯಾಯವಾಗಿ, ದೇಶವನ್ನು ರಕ್ಷಿಸಲು ದೇಶದ ಜನರೇ ಹುಟ್ಟುಹಾಕಿದ ನಾಗರಿಕ ಪಡೆಯನ್ನು ಮೊದಲು 'ಲೋಕಲ್ ಡಿಫೆನ್ಸ್ ವಾಲಂಟೀರ್ಸ್' (ಎಲ್‌ಡಿವಿ) ಅಂದರೆ 'ಸ್ಥಳೀಯ ರಕ್ಷಣಾ ಸ್ವಯಂಸೇವಕರು' ಎಂದು ಕರೆಯಲಾಗುತ್ತಿತ್ತು. 1946ರಲ್ಲಿ ಭಾರತದ ಬಾಂಬೆ ರಾಜ್ಯದಲ್ಲಿ ಗೃಹರಕ್ಷಕ ದಳದ ಮೂಲ ಅಸ್ತಿತ್ವಕ್ಕೆ ಬಂತು. ನೌಕಾದಳ, ವಾಯುಪಡೆ ಮತ್ತು ಭೂಸೇನೆಯ ಜತೆಗೆ ಜನರಿಗೆ ಮತ್ತು ದೇಶಕ್ಕೆ ತುರ್ತು ಸಂದರ್ಭಗಳಲ್ಲಿ ರಕ್ಷಣೆ ನೀಡಲೆಂದು 'ಪೌರರಕ್ಷಣೆ ಮತ್ತು ಗೃಹರಕ್ಷಕ ದಳ' ಎಂಬುದಾಗಿ ಇದು ಡಿಸೆಂಬರ್ 6ರಂದು ಅಸ್ತಿತ್ವಕ್ಕೆ ಬಂತು. ಮೊರಾರ್ಜಿ ದೇಸಾಯಿಯವರು ಪ್ರಧಾನಿಯಾಗಿದ್ದಾಗ ಗೃಹರಕ್ಷಕ ದಳದ ಕಾಯ್ದೆ-ಕಾನೂನುಗಳನ್ನು ಗೃಹಸಚಿವಾಲಯದ ಅಡಿಯಲ್ಲಿ ತರಲಾಯಿತು. ಸಾಮಾನ್ಯ ದಿರಿಸಿನಲ್ಲಿದ್ದುಕೊಂಡು ಪೊಲೀಸರಿಗೆ ಸಹಾಯಮಾಡುವ ಇಂಥ ಸ್ವಯಂಸೇವಕರ ಪಡೆಯನ್ನು, ಮತೀಯ ಗಲಭೆ, ಹಿಂಸಾಚಾರಗಳ ವೇಳೆ ಜನರಿಗೆ ರಕ್ಷಣೆಯೊದಗಿಸಲು ನಿಯೋಜಿಸಲಾಗಿತ್ತು. ನಂತರ ಈ ಪಡೆಯನ್ನು ಬೇರೆ ರಾಜ್ಯಗಳಲ್ಲೂ ಆರಂಭಿಸಲಾಯಿತು. 1962ರ ಭಾರತ-ಚೀನಾ ಯುದ್ಧದ ವೇಳೆ ಈ ಪಡೆಯನ್ನು ರಕ್ಷಣಾ ಕಾರ್ಯಕ್ಕೆ ಬಳಸಲೆಂದು, ಕೇಂದ್ರ ಸರಕಾರವು ಎಲ್ಲಾ ರಾಜ್ಯ ಸರಕಾರ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸ್ವಯಂಸೇವಕರ ತಂಡಗಳಿಗೆ 'ಗೃಹರಕ್ಷಕ ದಳ' ಎಂಬ ಮಾನ್ಯತೆಯೊಂದಿಗೆ ಖಾಕಿ ಸಮವಸ್ತ್ರವನ್ನು ನೀಡಿತು.

ಪ್ರಾಥಮಿಕ ಧ್ಯೇಯಗಳು: ಕಾನೂನು ಮತ್ತು ಶಿಸ್ತುಪಾಲನೆಯಲ್ಲಿ ಪೊಲೀಸ್ ಇಲಾಖೆಗೆ ಪೂರಕಪಡೆಯಾಗಿ ಕೆಲಸ ಮಾಡುವ ಗೃಹರಕ್ಷಕ ದಳವು, ಪ್ರಾಕೃತಿಕ ವಿಪತ್ತು ಮತ್ತು ಮಾನವ ನಿರ್ಮಿತ ವಿಷಮ ಪರಿಸ್ಥಿತಿಗಳ ವೇಳೆ ಜೀವ ಹಾಗೂ ಆಸ್ತಿ ಸಂರಕ್ಷಣೆ, ವಿಪತ್ತು ನಿರ್ವಹಣೆ, ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳಲ್ಲಿ ಸಮುದಾಯಕ್ಕೆ ಅಗತ್ಯ ನೆರವು ನೀಡುತ್ತದೆ. ಅಗ್ನಿ ಅವಘಡ, ವೈಮಾನಿಕ ದಾಳಿ, ಸುನಾಮಿ, ಭೂಕಂಪಗಳಾದಾಗ, ಸಾಂಕ್ರಾಮಿಕ ರೋಗಗಳು ಉಲ್ಬಣಗೊಂಡಾಗ ಸಾಮಾಜಿಕ ಸುವ್ಯವಸ್ಥೆ-ಶಾಂತಿ-ನೆಮ್ಮದಿಯ ಮರುಸ್ಥಾಪನೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ.

ಯಾರು ಸೇರಬಹುದು?

ಗೃಹರಕ್ಷಕ ದಳಕ್ಕೆ ಸೇರಲು ಬಯಸುವವರಿಗೆ ಮುಖ್ಯವಾಗಿ ಸಮಾಜಸೇವೆಯ ತುಡಿತವಿರಬೇಕು. ಸ್ವಯಂಸೇವಾ ಮನೋಭಾವವುಳ್ಳ ಸಮಾಜದ ಯಾವುದೇ ಸ್ತರದ ವ್ಯಕ್ತಿಗಳು ಈ ದಳವನ್ನು ಸೇರಿಕೊಳ್ಳಬಹುದು. ಸದೃಢ ಆರೋಗ್ಯವನ್ನು ಹೊಂದಿದ್ದು, ಯಾವುದೇ ಸ್ವಹಿತಾಸಕ್ತಿಯಿಲ್ಲದೆ ಸಮಾಜದ ಉನ್ನತಿಗೆ 'ನಿಷ್ಕಾಮ ಸೇವೆ' ಸಲ್ಲಿಸುವ ಮನೋಧರ್ಮ ಅವರಲ್ಲಿರಬೇಕು. ಯಾವುದೇ ಭಾಷಾ ಮಾಧ್ಯಮದಲ್ಲಿ ಕನಿಷ್ಠ ಪಕ್ಷ 10ನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು, ವಯೋಮಾನವು 19 ವರ್ಷ ಮೇಲ್ಪಟ್ಟಿರಬೇಕು ಮತ್ತು 50 ವರ್ಷದ ಒಳಗಿರಬೇಕು. ಸಾಮಾನ್ಯವಾಗಿ ಒಮ್ಮೆ ದಾಖಲಾತಿಯಾದ ಬಳಿಕ 3 ವರ್ಷಗಳಿಗೊಮ್ಮೆ ಮರುದಾಖಲಾತಿ ಮಾಡಿಕೊಳ್ಳಬೇಕು. ಸರಕಾರವೇ ನಿಗದಿಪಡಿಸಿದ ಅರ್ಜಿ ನಮೂನೆಗಳು ಗೃಹರಕ್ಷಕ ದಳದ ಜಿಲ್ಲಾ ಕಚೇರಿಗಳಲ್ಲಿ ಉಚಿತವಾಗಿ ದೊರಕುತ್ತವೆ.

ಅರ್ಜಿ ಸಲ್ಲಿಸಿದ ವ್ಯಕ್ತಿಯ ಮೇಲೆ ಯಾವುದೇ ಪೊಲೀಸ್ ದೂರು ಮತ್ತು ಕ್ರಿಮಿನಲ್ ದಾಖಲೆ ಇಲ್ಲವೆಂಬುದು ಸಾಬೀತಾದ ಬಳಿಕ ಆತನ ಆಯ್ಕೆಗೆ ಸಂದರ್ಶನ ನಡೆಯುತ್ತದೆ. ಆಯ್ಕೆಯಾದವರಿಗೆ 10 ದಿನಾವಧಿಯ ಮೂಲ ತರಬೇತಿ ಇರುತ್ತದೆ. ಈ ಶಿಬಿರದಲ್ಲಿ, ನಿಯೋಜಿತ ಕರ್ತವ್ಯಗಳನ್ನು ಶಿಸ್ತುಬದ್ಧವಾಗಿ, ಪರಿಣಾಮಕಾರಿಯಾಗಿ ನಿರ್ವಹಿಸಿದವರಿಗೆ ಪ್ರಥಮ ಚಿಕಿತ್ಸೆ, ಪ್ರವಾಹದ ವೇಳೆಯಲ್ಲಿನ ರಕ್ಷಣೆ, ಅಗ್ನಿಶಮನ, ಸಂಚಾರ ನಿಯಂತ್ರಣ, ಶಸ್ತ್ರಗಳ ಬಳಕೆ ವಿಷಯದಲ್ಲಿ ತರಬೇತಿ ನೀಡಿ ಸಜ್ಜುಗೊಳಿಸಲಾಗುತ್ತದೆ. ವಿದ್ಯಾರ್ಥಿಗಳು, ಕೃಷಿಕರು, ವೈದ್ಯರು, ಅಭಿಯಂತರರು, ವಕೀಲರು, ಶಿಕ್ಷಕರು, ಕೂಲಿಕಾರ್ಮಿಕರು ಹೀಗೆ ಸಮಾಜದ ಎಲ್ಲ ವರ್ಗಗಳ ಜನರನ್ನು ಗೃಹರಕ್ಷಕರಾಗಿ ಸೇರಿಸಿಕೊಳ್ಳಲಾಗುತ್ತದೆ. ಒಟ್ಟಿನಲ್ಲಿ, ತಮ್ಮ ದಿನನಿತ್ಯದ ಕೆಲಸ ವೇಳೆಯಿಂದಾಚೆಗೆ ವಿಶಿಷ್ಟ ತರಬೇತಿ ಪಡೆದು, ಅವಶ್ಯಕ ಮತ್ತು ತುರ್ತು ಸಂದರ್ಭಗಳಲ್ಲಿ ನಿಸ್ವಾರ್ಥ ಸ್ವಯಂಸೇವೆಯನ್ನು ದೇಶಕ್ಕೆ ಮುಡಿಪಾಗಿಡುವ ನಮ್ಮ-ನಿಮ್ಮಂಥ ಸಾಮಾನ್ಯ ಸ್ತ್ರೀ-ಪುರುಷರೇ ಗೃಹರಕ್ಷಕರು ಎಂದರೆ ತಪ್ಪಾಗಲಾರದು. ಇದೇ ರೀತಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರು ಈ ದಳದಲ್ಲಿ ಸೇವೆ ಸಲ್ಲಿಸಲು ಮುಕ್ತ ಅವಕಾಶವಿರುತ್ತದೆ.

ಗೃಹರಕ್ಷಕರ ಕರ್ತವ್ಯಗಳೇನು?

- ದೇಶದ ಆಂತರಿಕ ಭದ್ರತೆಯನ್ನು ಕಾಪಾಡುವಲ್ಲಿ ಪೊಲೀಸ್ ವ್ಯವಸ್ಥೆಗೆ ಪೂರಕವಾಗಿ ಕಾರ್ಯನಿರ್ವಹಿಸುವುದು.
- ನೆರೆಹಾವಳಿ, ಭೂಕಂಪ, ಚಂಡಮಾರುತ, ಸುನಾಮಿ, ಭೂಕುಸಿತದಂಥ ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ರಕ್ಷಣಾ ಕಾರ್ಯಚರಣೆಯಲ್ಲಿ, ಗಾಯಾಳುಗಳ ಮತ್ತು ಮೃತದೇಹಗಳ ಶೋಧನೆ, ಸ್ಥಳಾಂತರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು.
- ಯುದ್ಧ ಅಥವಾ ತುರ್ತುಸ್ಥಿತಿ ಎದುರಾದಾಗ, ವೈಮಾನಿಕ ದಾಳಿಗಳಾದಾಗ ಸಮುದಾಯವನ್ನು ಎಚ್ಚರಿಸುವುದು ಮತ್ತು ಸಂರಕ್ಷಿಸುವುದು.
- ಕಟ್ಟಡ ಕುಸಿತ, ಅನಿಲ ಸೋರಿಕೆಯ/ಸ್ಫೋಟದ ದುರಂತ ಅಥವಾ ಇನ್ನಾವುದೇ ವಿಷಮ ಪರಿಸ್ಥಿತಿಯಂಥ ಮಾನವ ನಿರ್ಮಿತ ವಿಕೋಪಗಳ ವೇಳೆ ಜನರ ಪ್ರಾಣ, ಆಸ್ತಿ-ಪಾಸ್ತಿಯನ್ನು ರಕ್ಷಿಸುವುದು.
- ಜಾತ್ರೆ, ಉತ್ಸವ, ರಾಷ್ಟ್ರೀಯ ಹಬ್ಬಗಳ ಆಚರಣೆ, ಮುಷ್ಕರ, ಪ್ರತಿಭಟನೆ, ಸಾರ್ವಜನಿಕ ಸಭೆ-ಸಮಾರಂಭಗಳ ಸಮಯದಲ್ಲಿ, ಚುನಾವಣೆಯ ವೇಳೆಯಲ್ಲಿ ಬಂದೋಬಸ್ತ್ ಕರ್ತವ್ಯಗಳಿಗೆ ನೆರವಾಗುವುದು.
- ಸಂಚಾರ ನಿರ್ವಹಣೆ, ಕಾನೂನು-ಸುವ್ಯವಸ್ಥೆ, ಸಾರ್ವಜನಿಕ ಕಟ್ಟಡಗಳ ಪಹರೆ ಕರ್ತವ್ಯಗಳಲ್ಲಿ ಸಹಭಾಗಿಯಾಗುವುದು.
- ಪೊಲೀಸ್ ಠಾಣೆ, ರಾಜ್ಯ ಗುಪ್ತಚರ ವಿಭಾಗ, ಕಾರಾಗೃಹ, ಸಾರಿಗೆ, ಪ್ರವಾಸೋದ್ಯಮ, ರೇಲ್ವೆ, ವಿಧಿವಿಜ್ಞಾನ ಪ್ರಯೋಗಾಲಯ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಎನ್‌ಸಿಸಿ ಇತ್ಯಾದಿಗಳಲ್ಲಿ ಪಹರೆ ಕರ್ತವ್ಯ ಮತ್ತು ಸಾಮಾಜಿಕ ಸ್ವತ್ತು ರಕ್ಷಣಾ ಕಾರ್ಯಗಳಲ್ಲಿ ಭಾಗಿಯಾಗುವುದು.
- ಗೃಹರಕ್ಷಕ ದಳದ 'ಗಡಿರಕ್ಷಣಾ ಪಡೆ'ಯು ದೇಶದ ಗಡಿಯನ್ನು ಕಾಯುವಲ್ಲಿ ಗಡಿಭದ್ರತಾ ಪಡೆಗೆ (ಬಿಎಸ್‌ಎಫ್) ಸಹಾಯ ನೀಡುತ್ತದೆ.

ಸಮಾಜಕ್ಕೆ ನಮ್ಮ ಕೈಲಾದ ಏನಾದರೂ ಕೆಲಸವನ್ನು ಮಾಡಬೇಕು ಎನ್ನುವ ತುಡಿತವಿರುವ ವ್ಯಕ್ತಿಗಳಿಗೆ, ಯಾವುದೇ ಫಲಾಪೇಕ್ಷೆಯಿಲ್ಲದೆ ಸಮುದಾಯದ ಸೇವೆ ಮಾಡುವ ಆಶಯವನ್ನು ಹೊಂದಿರುವವರಿಗೆ ಗೃಹರಕ್ಷಕ ದಳವು ಒಂದು ಒಳ್ಳೆಯ ವೇದಿಕೆ ಎಂದರೆ ತಪ್ಪಾಗಲಾರದು. ಗೃಹರಕ್ಷಕರು ಯಾವುದೇ ಫಲಾಪೇಕ್ಷೆಯಿಲ್ಲದೆ ಕೆಲಸ ಮಾಡುತ್ತಿದ್ದರೂ, ಈ ದಳಕ್ಕೆ ಹೆಚ್ಚೆಚ್ಚು ಜನರು ಸೇರಲಿ ಎಂಬ ಸದುದ್ದೇಶದಿಂದ ಮತ್ತು ಅವರ ಸೇವೆಯನ್ನು ಗುರುತಿಸುವ ಸಲುವಾಗಿ ಸರಕಾರವು ದಿನವೊಂದಕ್ಕೆ 600 ರುಪಾಯಿಯಂತೆ ಗೌರವ ಧನ ನೀಡಿ ಪ್ರೋತ್ಸಾಹಿಸುತ್ತಿದೆ. ಇದಲ್ಲದೆ, ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ನಿಯೋಜಿಸಲಾದ ಪೊಲೀಸ್ ಪೇದೆಗಳಿಗೆ ಮೀಸಲಾದ ಕರ್ತವ್ಯ ನಿರ್ವಹಿಸುವ ಗೃಹರಕ್ಷಕರಿಗೆ ಮಾತ್ರ ದಿನವೊಂದಕ್ಕೆ 850 ರು., ಅಗ್ನಿಶಾಮಕ ದಳ, ಸಾರಿಗೆ-ಗೃಹ ಇಲಾಖೆ, ಎನ್‌ಸಿಸಿಗಳಲ್ಲಿ ಕಾರ್ಯನಿರ್ವಹಿಸುವ ಗೃಹರಕ್ಷಕರಿಗೆ ದಿನಕ್ಕೆ 600 ರು. ನೀಡಲಾಗುತ್ತದೆ. 60 ವರ್ಷ ವಯಸ್ಸಾಗುವವರೆಗೆ ಗೃಹರಕ್ಷಕ ದಳದಲ್ಲಿ ಕರ್ತವ್ಯ ನಿರ್ವಹಿಸಬಹುದು.

ಒಟ್ಟಿನಲ್ಲಿ ದೇಶದ ಆರ್ಥಿಕ, ಸಾಮಾಜಿಕ, ನೈತಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ, ಭದ್ರತೆಗೆ ಗೃಹರಕ್ಷಕ ದಳವು ತನ್ನದೇ ಆದ ಕಾಣಿಕೆಯನ್ನು ನೀಡುತ್ತಾ ಬಂದಿದೆ. ಇಂಥ ನಿಷ್ಕಾಮ ಸೇವೆಗೈಯುವ ಎಲ್ಲ ಗೃಹರಕ್ಷಕ ಬಂಧುಗಳಿಗೆ ಗೃಹರಕ್ಷಕರ ದಿನವಾದ ಇಂದು (ಡಿ.6) ಒಂದು ಧನ್ಯವಾದ ಸಮರ್ಪಿಸೋಣ.

(ಲೇಖಕರು ವೈದ್ಯರು ಮತ್ತು ದ.ಕ. ಜಿಲ್ಲಾ ಗೃಹರಕ್ಷಕ ದಳದ ಸಮಾದೇಷ್ಟರು)

ಭಟ್ಟರ್ ಸ್ಕಾಚ್

- **ಚಂದ್ರಶೇಖರ ನಾಗೂರ, (ಇಮೇಲ್ ಮೂಲಕ)**
ಭಟ್ರೇ, ಹಳೇ ಗೆಳೆಯ ಹೊಸ ಶತ್ರು, ಹಳೇ ಗೆಳತಿ?
- **ಯಾವತ್ತೂ ಆಗೊಲ್ಲ ಸತಿ!**

- **ರಾಘೋಜಿ, ಕೃಷ್ಣಮೂರ್ತಿಪುರಂ**
ಭಟ್ರೇ, ಮಹೇಶ್ ಜೋಷಿ ಹಾಡು ಕೇಳುವುದೆಂದರೆ 'ಮಧುರ ಮಧುರವೀ ಮಂಜುಳಗಾನ..'. ಅದೇ ಮಧು ಬಂಗಾರಪ್ಪರ ಕನ್ನಡ ಭಾಷಣ?
- **ಕಾರ್ಕೋಟಕ ವಿಷಪಾನ!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಕುಮಾರಸ್ವಾಮಿಯವರು ಕಣ್ಣೀರು ಹಾಕುವುದು ಜನರ ಕಷ್ಟ ನೋಡಿ ಅಂತೆ?
- **ಜನರ ಕಷ್ಟ ನೋಡಿಯೂ ತಾವು ಸ್ಪಂದಿಸದಿರುವುದಕ್ಕೆ ಕಣ್ಣೀರು ಹಾಕಿದ್ದರೆ ಅದಕ್ಕೊಂದು ಅರ್ಥವಿರುತ್ತಿತ್ತು!**

- **ವಿಶಾಲಾಕ್ಷಿ ಎಂ., ಬಾಗೇನಹಳ್ಳಿ**
ಭಟ್ರೇ, ನಮ್ಮ ಮನೆಯವರಿಗೆ ಅರವತ್ತೆ ದಾದರೂ ನಾಚಿಕೆ ಇಲ್ಲ ಅಂತ ನನ್ನ ಗೆಳತಿ ಹೇಳ್ತಾಳಲ್ಲ?
- **ವಯಸ್ಕರ ಶಿಕ್ಷಣ ಈ ರೀತಿ ಅಡ್ಡ ಪರಿಣಾಮ ಬೀರುತ್ತೆ ಅನ್ನೋದು ಗೊತ್ತಿರಲಿಲ್ಲ!**

- **ವಿಠೋಬ ಕಾಂಬಳೆ, ಬೆಳಗಾವಿ**
ಭಟ್ರೇ, ನಿಮ್ಮನ್ನು 'ಸದಾ ಬರೆಯುವ ಕತ್ತೆ' ಎಂದು ಕರೆಯಬಹುದಾ?
- **ಸುಮ್ಮನಿರುವ ಪುನುಗನ ಬೆಕ್ಕು ಎಂದು ಹೇಳುವುದಕ್ಕಿಂತ ಇದೇ ವಾಸಿ, ವಿಠೋಬಾ!**

- **ವೀರೇಶ ಕಮತಗಿ, ಅಡಗೂರು**
ಭಟ್ರೇ, ಕನ್ನಡ ಸಿನಿಮಾ ನಿರ್ದೇಶಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರಲ್ಲ?
- **ಹೂಂ.. ಕನ್ನಡ ಸಿನಿಮಾಗಳು ಶವಾಗಾರ ಸೇರುತ್ತಿದ್ದುದೇ ಒಳ್ಳೆಯದಿತ್ತು ಅಂತೀಯಾ?!**

- **ಸುದೇಶ ಕೆ.ಚಂದ್ರ, ಬೆಂಗಳೂರು**
ಭಟ್ರೇ, ಹುಚ್ಚ ವೆಂಕಟ್ ನೀಟಾಗಿ ಹೇರ್ ಕಟಿಂಗ್ ಮಾಡಿಸಿಕೊಂಡರೆ ಆತನನ್ನು ನೋಡಿ ಯಾರೂ ಹೆದರಲಿಕ್ಕಿಲ್ಲ ಅಲ್ವಾ?
- **ಸಲೂನಿನಲ್ಲಿ ಕತ್ತರಿಸಿದ ಕೂದಲುಗಳನ್ನು ನೋಡಿದ್ದರೆ ಕಿಟಾರನೆ ಕಿರುಚಿಕೊಳ್ತಾ ಇದ್ದೆ ಹೂಂ..!**

- **ರವಿ ಕದಿರೇನಹಳ್ಳಿ, (ಇಮೇಲ್ ಮೂಲಕ)**
ಭಟ್ರೇ, ಕುಮಾರಣ್ಣನಿಗೆ ಕಣ್ಣೀರು ವರವೋ, ಶಾಪವೋ?
- **ತಿಳ್ಕೋ, ರಾಜಕೀಯ ಅಸ್ತ್ರ ಕಣೋ!**

- **ಸೂರಜ್ ಹೆಗಡೆ, ಶಿರಸಿ**
ಭಟ್ರೇ, ಕುಮಾರಸ್ವಾಮಿ ರಾಜಕಾರಣಿ ಆಗದಿದ್ದರೆ ಏನಾಗ್ತಾ ಇದ್ದರು?
- **ಸಿದ್ದರಾಮಯ್ಯ, ಡಿಕೆಶಿ ಮಾತ್ರ ಆಗಬೇಕಾ ಅಂತ ಉಪವಾಸ ಸತ್ಯಾಗ್ರಹ ಮಾಡ್ತಾ ಇದ್ರು!**

- **ರವಿ ಕಾಗಲ್, (ಇಮೇಲ್ ಮೂಲಕ)**
ಭಟ್ರೇ, ನನ್ನ ಸ್ನೇಹಿತ ಮಂಜ ಯಾವಾಗ ಒರಿಜಿನಲ್ಲಾಗಿ ಕಾಣ್ತಾನೆ?
- **ಮುಂಜಾನೆ ಮಂಜಿನಲ್ಲಿ!**

ಬೇಟೆಗಾರನೊಬ್ಬನ ಪರಿಸರ ಕಾಳಜಿ!

ಶಶಾಂಕಣ

ಶಶಿಧರ ಹಾಲಾಡಿ
vveditoped@gmail.com

ಹಿಮಾಲಯದ ಸೆರಗಿನಲ್ಲಿರುವ ಬದರಿನಾಥ ಮತ್ತು ಕೇದಾರನಾಥಕ್ಕೆ ಹಿಂದೆ ಪ್ರತಿವರ್ಷ ಸಾವಿರಾರು ಜನರು ನಡೆದುಕೊಂಡೇ ಹೋಗುತ್ತಿದ್ದರು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕುವ ತನಕ ಆ ಪರ್ವತ ಪ್ರದೇಶಗಳಲ್ಲಿ ಉತ್ತಮ ರಸ್ತೆಗಳಿರಲಿಲ್ಲ; ಈಗ ಅಲ್ಲೆಲ್ಲಾ ರಸ್ತೆಯಾಗಿದ್ದು, ಭಕ್ತರ ಜತೆ ಸಾವಿರಾರು ಪ್ರವಾಸಿಗರು ಸಹ ಬದರಿನಾಥ ನೋಡಲು ಹೋಗುತ್ತಿದ್ದಾರೆ ಮತ್ತು ಆ ಜಾಗಕ್ಕೆ ಹೋಗುವುದು ಸುಲಭ ಎನಿಸಿದೆ. ದೇಶಕ್ಕೆ ದೊರಕುವ ಸ್ವಾತಂತ್ರ್ಯವು ಹೇಗೆ ಒಂದು ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಕೊಡಬಲ್ಲದು ಮತ್ತು ಆ ಮೂಲಕ ಸ್ಥಳೀಯ ನಾಗರಿಕರ ಅಭಿವೃದ್ಧಿಗೆ ಕಾರಣವಾಗಬಲ್ಲದು ಎಂಬುದನ್ನು ಕೇದಾರನಾಥ, ಬದರಿನಾಥ ಮೊದಲಾದ ಕಡೆ ನಿರ್ಮಾಣವಾಗಿರುವ ರಸ್ತೆ ಮತ್ತು ಸೇತುವೆಗಳೇ ಹೇಳುತ್ತವೆ. ಇರಲಿ, ಅದು ಬೇರೆ ವಿಚಾರ. ಹಿಮಾಲಯದ ತಪ್ಪಲಿನ ಕಾಡಿನಲ್ಲಿದ್ದ ನರಭಕ್ಷಕರ ವಿಚಾರಕ್ಕೆ ಬರೋಣ.

ನಡೆದುಕೊಂಡೇ ಹೋಗುತ್ತಿದ್ದ ಸಾವಿರಾರು ಪ್ರಯಾಣಿಕರನ್ನು ಗಮನಿಸಿದ್ದ ಒಂದು ಚಿರತೆಯು, ರುದ್ರಪ್ರಯಾಗದ ಹತ್ತಿರ ಸಾಗುವ ಕಾಡುದಾರಿಯಲ್ಲಿ ಅಮಾಯಕ ಯಾತ್ರಿಕರ ಮೇಲೆ ಎರಗುತ್ತಿತ್ತು. ಯಾವುದೋ ಕಾರಣದಿಂದ ನರಭಕ್ಷಕನ ರೂಪ ಪಡೆದಿದ್ದ ಆ ಚಿರತೆಯು ರುದ್ರಪ್ರಯಾಗದ ಸರಹದ್ದಿನ ಜನರಿಗೆ, ಯಾತ್ರಿಕರಿಗೆ ಕಂಟಕ ಎನಿಸಿತ್ತು. ಬಹುಶಃ ಆಹಾರ ಸಿಗದೇ ಅಥವಾ ಸ್ಥಳೀಯರು ಬೇಟೆಯಾಡಲು ಪ್ರಯತ್ನಿಸಿದ್ದಾಗ ಅದು ಗಾಯಗೊಂಡಿರಬಹುದು. ಬ್ರಿಟಿಷ್ ಸರಕಾರದ ಸಂಬಂಧಪಟ್ಟ ಇಲಾಖೆಯ ಸಿಬ್ಬಂದಿಯು, ಈ ಚಿರತೆಯ ಚಲನವಲನಗಳನ್ನು ದಾಖಲಿಸಿಟ್ಟಿದ್ದಾರೆ. ಹಿಂದೆ ಹಲವರನ್ನು ಸಾಯಿಸಿದ್ದ ಆ ಚಿರತೆ, 14.4.1926ರಂದು ಒಬ್ಬ ವ್ಯಕ್ತಿಯನ್ನು ಸಾಯಿಸಿದ ಸುದ್ದಿ ಸರಕಾರಕ್ಕೆ ತಲುಪಿತು. ಅದೇ ಆ ಚಿರತೆಯ ಕೊನೆಯ ಬಲಿ. ಏಕೆಂದರೆ, 2.5.1926ರಂದು ಖ್ಯಾತ ಬೇಟೆಗಾರ ಜಿಮ್ ಕಾರ್ಬೆಟ್ ಅದನ್ನು ಗುಂಡಿಟ್ಟು ಕೊಂದರು.

15.5.1926ರಂದು ಈ ನರಭಕ್ಷಕನ ಬೇಟೆಯ ಕಥೆಯನ್ನು 'ದಿ ಪಯೊನಿರ್' ಪತ್ರಿಕೆ ವರದಿ ಮಾಡಿತ್ತು. ಈ ಘಟನೆ ನಡೆದು ಸುಮಾರು 20 ವರ್ಷಗಳ ನಂತರ, ಜಿಮ್ ಕಾರ್ಬೆಟ್ ಬರೆದ ಪುಸ್ತಕ 'ರುದ್ರಪ್ರಯಾಗದ ನರಭಕ್ಷಕ ಚಿರತೆ' (ದಿ ಮ್ಯಾನ್ ಈಟಿಂಗ್ ಲೆಪಾರ್ಡ್ ಆಫ್ ರುದ್ರಪ್ರಯಾಗ) (1947) ಪುಸ್ತಕ ಪ್ರಕಟಗೊಂಡಿತು. ಆ ಚಿರತೆಯ ಬೇಟೆಯ ಅನುಭವವು ಜಿಮ್ ಕಾರ್ಬೆಟ್ ಅವರ ನೆನಪಿನಲ್ಲಿ ಅಡಗಿ ಕುಳಿತಿದ್ದು ಕಾವು ಪಡೆದು, 2 ದಶಕಗಳ ನಂತರ ಕಾದಂಬರಿ ಸ್ವರೂಪದಲ್ಲಿ ಪ್ರಕಟಗೊಂಡು ಜನಮೆಚ್ಚುಗೆ ಗಳಿಸಿತು ಎಂಬುದು ಒಂದು ಸಾಹಿತ್ಯಕ ಅನುಭವವಾಗಿಯೂ ವಿಶಿಷ್ಟ. ಜತೆಗೆ ಈ ಪುಸ್ತಕ ಮತ್ತು ಜಿಮ್ ಕಾರ್ಬೆಟ್ ರಚಿಸಿದ ಇತರ ಬೇಟೆಯ ನೆನಪಿನ ಪುಸ್ತಕಗಳಿಗೆ ವಿಶ್ವದಾದ್ಯಂತ ಓದುಗರ ಮೆಚ್ಚುಗೆ ದಕ್ಕಿದ್ದು, ಅದನ್ನು ಇಂಗ್ಲಿಷ್ ಬಲ್ಲ ಓದುಗರು ಬಹುವಾಗಿ ಮೆಚ್ಚಿಕೊಂಡದ್ದು, ಇವೆಲ್ಲವೂ ಸಾಹಿತ್ಯ ಲೋಕದ ದಾಖಲೆಗಳಾಗಿ ಉಳಿದುಹೋಗಿವೆ. 'ರುದ್ರಪ್ರಯಾಗದ ನರಭಕ್ಷಕ' ಎಂಬ ಹೆಸರಿನಲ್ಲಿ ತೇಜಸ್ವಿಯವರು ಇದನ್ನು ಕನ್ನಡದಲ್ಲೂ ಹೊರತಂದಿದ್ದಾರೆ. ಜಿಮ್ ಕಾರ್ಬೆಟ್ ಅವರ ಬೇಟೆಯ ಇತರ ಪುಸ್ತಕಗಳೂ ಕನ್ನಡದಲ್ಲಿ ಅನುವಾದಗೊಂಡಿವೆ, ಈಗಲೂ ಅನುವಾದಗೊಳ್ಳುತ್ತಿವೆ. ಬೇಟೆಯ ಅನುಭವದ ಆ ಪುಸ್ತಕಗಳು ಜನಮೆಚ್ಚುಗೆ ಗಳಿಸಿರುವುದು ವಿಶೇಷ.

ಜಿಮ್ ಕಾರ್ಬೆಟ್ (1875–1955) ಒಬ್ಬ ಬ್ರಿಟಿಷ್ ಬೇಟೆಗಾರ. ಅದರಲ್ಲೂ ಹುಲಿ, ಚಿರತೆಯಂಥ ದೊಡ್ಡ ಪ್ರಾಣಿಗಳನ್ನು ಬೇಟೆಯಾಡಿ, ಸುದ್ದಿ ಮಾಡಿ ಪ್ರಸಿದ್ಧನಾದ ವ್ಯಕ್ತಿ. ಸಾಮಾನ್ಯವಾಗಿ ಜನರಿಗೆ ತೊಂದರೆ ಕೊಡುವ, ನರಭಕ್ಷಕ ಸ್ವರೂಪ ಪಡೆದ ಹುಲಿಗಳನ್ನು ಬೇಟೆಯಾಡುವುದರಲ್ಲಿ ಇವರು ಎತ್ತಿದ ಕೈ. ಉದ್ದೇಶ ಏನೇ ಇರಲಿ, ಬಂದೂಕು ಚಲಾಯಿಸಿ ಪ್ರಾಣಿಗಳನ್ನು ಹತ್ಯೆ ಮಾಡುವುದು ಇವರ ಖಯಾಲಿಯೂ ಹೌದು, ಹಳ್ಳಿಯ ಜನರಿಗೆ ಸಹಾಯ ಮಾಡುವ ವಿಧಾನವೂ ಹೌದು. ಮೂಲತಃ ಮನುಷ್ಯರನ್ನು ಕಂಡರೆ ಹೆದರಿ ದೂರ ಸರಿಯುವ ಹುಲಿ ಮತ್ತು ಚಿರತೆಗಳು, ಅದಾವುದೋ ಕಾರಣದಿಂದ ಮನುಷ್ಯನ ಮೇಲೆ ಆಕ್ರಮಣ ಮಾಡುವ ಗುಣವನ್ನು ರೂಢಿಸಿಕೊಂಡಾಗ, ಅಂಥ ನರಭಕ್ಷಕನನ್ನು ಗುಂಡಿಟ್ಟು ಸಾಯಿಸುವ ಮೂಲಕ ನಾನು ಬಹಳಷ್ಟು ಜನರ ಜೀವ ಉಳಿಸಿದೆ ಮತ್ತು ಆ ಮೂಲಕ ನಮ್ಮ ದೇಶದ ಗ್ರಾಮೀಣ ಪ್ರದೇಶದ ಜನರಿಗೆ ಸಹಾಯ ಮಾಡಿದೆ ಎಂದೇ ಜಿಮ್ ಕಾರ್ಬೆಟ್ ತಮ್ಮ ಬರಹಗಳಲ್ಲಿ ಸೂಚಿಸಿದ್ದಾರೆ.

ನರಭಕ್ಷಕ ಚಿರತೆ, ಹುಲಿಗಳನ್ನು ಸಾಯಿಸಿದ್ದ ಇಂಥ ಒಬ್ಬ ಬೇಟೆಗಾರನು ಸಾಹಿತಿಯಾಗಿಯೂ ಯಶಸ್ಸು ಪಡೆದಿರುವುದು ಒಂದು ಅಚ್ಚರಿ. ಇನ್ನೂ ವಿಸ್ಮಯದ ವಿಚಾರವೆಂದರೆ, ನಮ್ಮ ದೇಶದ ಪ್ರಖ್ಯಾತ ರಾಷ್ಟ್ರೀಯ ಅಭಯಾರಣ್ಯಕ್ಕೆ ಇವರ ಹೆಸರನ್ನು ಇಟ್ಟಿರುವುದು! ಜಿಮ್ ಕಾರ್ಬೆಟ್ ಕೇವಲ ಗುಂಡು ಹಾರಿಸಿ ಮೃಗಗಳನ್ನು ಸಾಯಿಸುವ ಬೇಟೆಗಾರನಾಗಿರಲಿಲ್ಲ, ಅವರಲ್ಲಿ ಒಬ್ಬ ಸಾಹಿತಿ ಇದ್ದ, ಜತೆಗೆ ಅವರಲ್ಲಿ ಒಬ್ಬ ಪರಿಸರಪ್ರೇಮಿ ಇದ್ದ, ಪ್ರಾಣಿ ಪ್ರೇಮಿಯೂ ಇದ್ದ, ಜನರ ಮೇಲೆ ಕಳಕಳಿಯಿದ್ದ ಅಧಿಕಾರಿಯೂ ಇದ್ದ. ಬೇಟೆಗಾರನೊಬ್ಬನು ಪರಿಸರ ರಕ್ಷಣೆಯ ಮೊದಲ ಪಾಠಗಳನ್ನು ಬೋಧಿಸಿದ ಅಪರೂಪದ ಉದಾಹರಣೆಯನ್ನು ಜಿಮ್ ಕಾರ್ಬೆಟ್ ಅವರಲ್ಲಿ ನೋಡಬಹುದು.

25.7.1875ರಂದು ಜಿಮ್ ಕಾರ್ಬೆಟ್ ಜನಿಸಿದ ಸಮಯದಲ್ಲಿ, ಅವರಿದ್ದ ನೈನಿತಾಲ್ ಪಕ್ಕಾ ಕಾಡು ಪ್ರದೇಶ. ಹಿಮಾಲಯದ ತಪ್ಪಲಿನ ಕಾಡುಗಳ, ಬೆಟ್ಟಗಳ ಮಧ್ಯೆ ಇದ್ದ ನೈನಿತಾಲ್ ಅಂದು ಬ್ರಿಟಿಷರ ಕಾಲೊನಿ. ತಂಪಾದ ಹವೆ ಇದ್ದುದರಿಂದ, ತಾವು ವಾಸಿಸಲು, ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಬ್ರಿಟಿಷರು ನೈನಿತಾಲನ್ನು ಆಯ್ದುಕೊಳ್ಳುತ್ತಿದ್ದರು. ಜಿಮ್ ಕಾರ್ಬೆಟ್ ಅವರ ತಂದೆಯು, ಬ್ರಿಟಿಷ್ ಸೇನೆಯಿಂದ ಸ್ವಯಂ ನಿವೃತ್ತಿ ಪಡೆದು ನೈನಿತಾಲ್‌ನಲ್ಲಿ ಪೋಸ್ಟ್ ಮಾಸ್ಟರ್ ವೃತ್ತಿ ನಿರ್ವಹಿಸುತ್ತಿದ್ದರು. ಅವರ ತಾಯಿಯು ನೈನಿತಾಲ್‌ನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು! ಇವರಿಬ್ಬರಿಗೆ 12 ಜನ ಮಕ್ಕಳು. ಅವರಲ್ಲಿ ಎಂಟನೆಯವರೇ ಜಿಮ್ ಕಾರ್ಬೆಟ್. ಆರಂಭಿಕ ಶಿಕ್ಷಣವನ್ನು ನೈನಿತಾಲ್‌ನಲ್ಲಿ ಪಡೆದ ಜಿಮ್ ಕಾರ್ಬೆಟ್, 19ನೆಯ ವಯಸ್ಸಿನಲ್ಲಿ ಬೆಂಗಾಲ್ ಮತ್ತು ನಾರ್ತ್ ಈಸ್ಟರ್ನ್ ರೈಲ್ವೆಯಲ್ಲಿ ಕೆಲಸಕ್ಕೆ ಸೇರಿದರು. ನಂತರದ ದಿನಗಳಲ್ಲಿ ಪದೋನ್ನತಿ ಹೊಂದಿ, ಬ್ರಿಟಿಷ್ ಸೇನೆಯೊಂದಿಗೂ ವೃತ್ತಿ ನಿರ್ವಹಿಸಿ, ಬೇರೆ ದೇಶಗಳಲ್ಲಿ ಮುಖ್ಯವಾಗಿ ಆಫ್ರಿಕಾದಲ್ಲಿ ಸುತ್ತಾಡಿ ಬಂದರು. ಬ್ರಿಟಿಷ್ ಸೇನೆಯಲ್ಲಿ ಅವರಿಗೆ ಕರ್ನಲ್ ಸಮಾನ ಸ್ಥಾನಮಾನವಿತ್ತು.

ಹಿಮಾಲಯದ ತಪ್ಪಲಿನಲ್ಲಿದ್ದ, ನೈನಿತಾಲ್ ಸುತ್ತಮುತ್ತಲಿನ ಕಾಡು ಎಂದರೆ ಜಿಮ್ ಕಾರ್ಬೆಟ್‌ಗೆ ಬಹು ಇಷ್ಟ. ಬಾಲ್ಯದಿಂದಲೂ ಕಾಡಿನಲ್ಲಿ ಓಡಾಡಿದ್ದರಿಂದ, ಆ ಕಾಡಿನ ಮಿಡಿತವನ್ನು ಅವರು ಬಲ್ಲರು. ಕ್ರಮೇಣ ಚತುರ ಬೇಟೆಗಾರನಾಗಿ ರೂಪುಗೊಂಡ ಅವರ ಗುರಿ ಅಸಾಧಾರಣ. ಕೊನೆಯ ತನಕವೂ ಬ್ರಹ್ಮಚಾರಿಯಾಗಿಯೇ ಉಳಿದ ಜಿಮ್ ಕಾರ್ಬೆಟ್ ಕಾಡಿನೊಂದಿಗೇ ತಮ್ಮ ಜೀವನ ಕಳೆದರು. ನಮ್ಮನ್ನು ಆಳುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯದ ಉತ್ತರ ಭಾಗದಲ್ಲಿ, ಹಿಮಾಲಯದ ತಪ್ಪಲಿನಲ್ಲಿ, ವಿಶೇಷವಾಗಿ ಉತ್ತರ ಭಾರತದಲ್ಲಿ, ಎಲ್ಲೇ ನರಭಕ್ಷಕ ಹುಲಿ, ಚಿರತೆಗಳ ಕಾಟ ಕಂಡುಬಂದರೂ, ಕರೆ ಹೋಗುತ್ತಿದ್ದುದು ಜಿಮ್ ಕಾರ್ಬೆಟ್ ಅವರಿಗೆ.

ನರಭಕ್ಷಕ ಹುಲಿಗಳನ್ನು ಸ್ಥಳೀಯ ಬೇಟೆಗಾರರು ಗುಂಡಿಟ್ಟು ಸಾಯಿಸುತ್ತಿದ್ದುದುಂಟು. ಬ್ರಿಟಿಷ್ ಸರಕಾರವು ಆ ದಿನಗಳಲ್ಲಿ ಬೇಟೆಗೆ ಅವಕಾಶ ಕೊಟ್ಟಿತ್ತು. ಅದು ಅಂದು ಕ್ರೀಡಾ ಸ್ವರೂಪವನ್ನೂ (ಸ್ಪೋರ್ಟ್) ಪಡೆದಿತ್ತು. ಯುರೋಪಿಯನ್ನರು ಮತ್ತು ನಮ್ಮ ದೇಶದ ಸಿರಿವಂತರು ಸಾವಿರಾರು ಕಾಡುಪ್ರಾಣಿಗಳನ್ನು ಮೋಜಿಗಾಗಿ ಸಾಯಿಸುತ್ತಿದ್ದ ಕಾಲ ಅದು. ಆದರೆ ಹಿಮಾಲಯದ ದಟ್ಟ ಕಾಡುಗಳ ನಡುವೆ ಹಲವು ಗ್ರಾಮಗಳಿದ್ದು, ಅಲ್ಲಿ ಅಕಸ್ಮಾತ್ ನರಭಕ್ಷಕ ಹುಲಿಗಳ ಉಪಟಳ ಆರಂಭವಾದರೆ, ಆ ದುರ್ಗಮ ಪ್ರದೇಶಕ್ಕೆ ಬೇಟೆಗಾರರು ಬರುವುದು ತುಸು ಕಷ್ಟವಿತ್ತು. ಜನರಿಗೆ, ಗ್ರಾಮೀಣರಿಗೆ ಉಪಟಳ ನೀಡುತ್ತಿದ್ದ ಪ್ರಾಣಿಗಳನ್ನು ಸ್ಥಳೀಯ ಬೇಟೆಗಾರರು ಕೊಲ್ಲಲು ವಿಫಲರಾದಾಗ, ಜಿಮ್ ಕಾರ್ಬೆಟ್ ರಂಗಪ್ರವೇಶಿಸುತ್ತಿದ್ದರು. ಜನರಿಗೆ ತೊಂದರೆ ಕೊಡುವ, ಜನರ ಮೇಲೆ ಆಕ್ರಮಣ ಮಾಡುವ ಹುಲಿಗಳನ್ನು ಸಾಯಿಸುವುದು ಎಂದರೆ ಅಂದಿನ ದಿನಗಳಲ್ಲಿ ಪರೋಪಕಾರ ಮಾಡಿದಂತೆ. ಸರಕಾರವೂ ಅದನ್ನು ಪ್ರೋತ್ಸಾಹಿಸುತ್ತಿತ್ತು. ಆದ್ದರಿಂದಲೇ, ಅಂಥ ಕರೆ ಬಂದಾಗ ಜಿಮ್ ಕಾರ್ಬೆಟ್ ರೈಫಲ್ ಹಿಡಿದು ಹೊರಡುತ್ತಿದ್ದರು. ಅವರ ಬಂದೂಕಿಗೆ ಬಲಿಯಾಗಿದ್ದು ಸಾಮಾನ್ಯವಾಗಿ ನರಭಕ್ಷಕ ಹುಲಿ ಮತ್ತು ಚಿರತೆಗಳು. ಒಮ್ಮೊಮ್ಮೆ ನರಭಕ್ಷಕ ಅಲ್ಲದ ಹುಲಿಯನ್ನೂ ಅವರು ಬೇಟೆಯಾಡಿದ್ದುಂಟು. 'ಬ್ಯಾಚಲರ್ ಆಫ್ ಪಾವಲ್ಗರ್' ಎಂದು ಹೆಸರಾಗಿದ್ದ, 10 ಅಡಿ 7 ಇಂಚು ಉದ್ದದ ಭಾರಿ ಹುಲಿ ಅಂಥ ಬೇಟೆಗಳಲ್ಲಿ ಒಂದು. ಜಿಮ್ ಕಾರ್ಬೆಟ್ ಭಾರತದಲ್ಲಿ ಒಟ್ಟು 19 ಹುಲಿ, 16 ಚಿರತೆಗಳನ್ನು ಸಾಯಿಸಿದ್ದಾರೆ.

1926ರಲ್ಲಿ ಅವರು ರುದ್ರಪ್ರಯಾಗದ ನರಭಕ್ಷಕ ಚಿರತೆಯನ್ನು ಕೊಂದಿದ್ದು ಬಹಳ ಸುದ್ದಿಯಾಯಿತು. ಅದಕ್ಕೂ ಹಿಂದಿನ ಕೆಲವು ವರ್ಷಗಳ ಅವಧಿಯಲ್ಲಿ ಆ ಚಿರತೆಯು ರುದ್ರಪ್ರಯಾಗದ ಸುತ್ತಮುತ್ತಲಿನ ಪ್ರದೇಶದಲ್ಲಿ 120ಕ್ಕೂ ಹೆಚ್ಚಿನ ಯಾತ್ರಿಕರನ್ನು ಸಾಯಿಸಿತ್ತು ಎಂದು ಬ್ರಿಟಿಷ್ ದಾಖಲೆಗಳು ಹೇಳುತ್ತವೆ. ರುದ್ರಪ್ರಯಾಗದ ನರಭಕ್ಷಕನನ್ನು ಸಾಯಿಸಿದ ಜಿಮ್ ಕಾರ್ಬೆಟ್ ಅವರ ಈ ಕೆಲಸವು ಅವರಿಗೆ ಭಾರಿ ಪ್ರಸಿದ್ಧಿಯನ್ನು ತಂದುಕೊಟ್ಟಿತು ಮತ್ತು ಜನರಿಗೆ ಉಪಕಾರ ಮಾಡಿದರು ಎಂಬ ಭಾವವನ್ನು ಮೂಡಿಸಿತು. ಅದಕ್ಕೂ ಮುಂಚೆ, 1910ರ ಸಮಯದಲ್ಲಿ, ಪೆನಾಂಗ್ ಚಿರತೆಯನ್ನು ಅವರು ಗುಂಡಿಟ್ಟು ಸಾಯಿಸಿದ್ದರು; ಆ ಚಿರತೆಯು ಸುಮಾರು 400 ಜನರನ್ನು ಕೊಂದಿತ್ತು ಎಂದು ಹೇಳಲಾಗಿತ್ತು. ಈ ರೀತಿಯ ನರಭಕ್ಷಕಗಳ ದೇಹವನ್ನು ಪರಿಶೀಲಿಸಿ, ಅವುಗಳ ದೇಹದಲ್ಲಿದ್ದ ಹಳೆಯ ಗುಂಡೇಟಿನ ಗುರುತುಗಳನ್ನು ಕಾರ್ಬೆಟ್ ಪತ್ತೆ ಮಾಡಿ, ಆ ರೀತಿ ಅರ್ಧಂಬರ್ಧ ಏಟು ತಿಂದ ಹುಲಿಗಳು ಮುಂದೆ ನರಭಕ್ಷಕಗಳಾಗುತ್ತವೆ ಎಂದು ಹೇಳಿದ್ದರು. ಮುಳ್ಳು ಹಂದಿಗಳ ಮುಳ್ಳಿನಿಂದ ಗಾಯಗೊಂಡ ಹುಲಿಗಳು ಸಹ ಮುಂದೆ, ಮನುಷ್ಯನ ಮೇಲೆ ಸುಲಭ ಬೇಟೆಗಾಗಿ ದಾಳಿ ಮಾಡುತ್ತವೆ ಎಂದು ಗುರುತಿಸಿದ್ದರು.

ನರಭಕ್ಷಕ ಪ್ರಾಣಿಗಳನ್ನು ಸಾಯಿಸಿ, ಜನರಿಗೆ ಉಪಕಾರ ಮಾಡಿದ ಹಿನ್ನೆಲೆಯಲ್ಲಿ, ಬ್ರಿಟಿಷ್ ಸರಕಾರವು ಇವರಿಗೆ 1928ರಲ್ಲಿ 'ಕೈಸರ್ ಎ ಹಿಂದ್' ಪ್ರಶಸ್ತಿಯನ್ನು ನೀಡಿ ಗೌರವಿಸಿತು! ಆ ದಿನಗಳಲ್ಲಿ ಈ ಪ್ರಶಸ್ತಿ ಪಡೆಯುವುದು ಎಂದರೆ ಬಹುದೊಡ್ಡ ಗೌರವ. ಅದು ಇಂದಿನ 'ಭಾರತರತ್ನ'ಕ್ಕೆ ಸಮಾನ ಎನ್ನಬಹುದು. ಬ್ರಿಟಿಷ್ ಸರಕಾರವು ಅವರಿಗೆ 'ಚಾಂಪಿಯನ್ ಆಫ್ ಇಂಡಿಯಾ' ಗೌರವವನ್ನು ಸಹ ದಯಪಾಲಿಸಿದೆ.

ಜಿಮ್ ಕಾರ್ಬೆಟ್ ಕೇವಲ ಬೇಟೆಗಾರನಾಗಿದ್ದರೆ ಇಷ್ಟು ಪ್ರಸಿದ್ಧಿ ಪಡೆಯುತ್ತಿರಲಿಲ್ಲ. ನರಭಕ್ಷಕ ಹುಲಿ ಮತ್ತು ಚಿರತೆಗಳನ್ನು ಸಾಯಿಸಿದ ಅವರು, ಕಾಡಿನ ವಿದ್ಯಮಾನಗಳನ್ನು ಗಮನಿಸುತ್ತಿದ್ದರು; ವಿಶೇಷವಾಗಿ ಕಾಡಿನ ಅಂಚಿನಲ್ಲಿದ್ದ ಹಳ್ಳಿಗಳ ಜನಜೀವನ, ಅವರ ಕಷ್ಟಗಳು, ಅಂದಿನ ಹಳ್ಳಿಗಳಲ್ಲಿದ್ದ ಅಜ್ಞಾನ, ಮೂಢನಂಬಿಕೆ, ಕಾಡುಪ್ರಾಣಿಗಳೊಂದಿಗಿನ ಗ್ರಾಮೀಣ ಜನರ ಮುಖಾಮುಖಿ ಎಲ್ಲವನ್ನೂ ಗಮನಿಸುತ್ತಿದ್ದರು, ಹುಲಿ ಅಥವಾ ಚಿರತೆಯೊಂದು ನರಭಕ್ಷಕನಾಗಲು ಕಾರಣವೇನು ಎಂಬುದನ್ನು ಪರಿಶೀಲಿಸುತ್ತಿದ್ದರು. ಬೇಟೆಯಾಡುವಾಗ ಗಾಯಗೊಂಡ ಹುಲಿ ನರಭಕ್ಷಕನಾಗುವುದುಂಟು ಎಂದು ಅವರು ಅಧ್ಯಯನ ಮಾಡಿದ್ದರು. ಹಿಮಾಲಯ ತಪ್ಪಲಿನಲ್ಲಿದ್ದ ಕಾಡನ್ನು ರಕ್ಷಿಸಬೇಕು ಎಂಬುದನ್ನು ಅವರು ಆಗಲೇ ಗುರುತಿಸಿದ್ದರು.

ಬೇಟೆಯಾಡುವ ಜತೆಯಲ್ಲೇ, 1920ರಲ್ಲಿ ಅವರೊಂದು ಕ್ಯಾಮೆರಾ ಖರೀದಿಸಿ, ವನ್ಯಜೀವಿಗಳ ಚಿತ್ರಗಳನ್ನು ತೆಗೆಯತೊಡಗಿದರು. ಅವರ ಗೆಳೆಯ, ಛಾಯಾಗ್ರಾಹಕ ಫ್ರೆಡರಿಕ್ ವಾಲ್ಟರ್ ಚಾಂಪಿಯನ್ ಇದಕ್ಕೆ ಸ್ಫೂರ್ತಿ. ಬಂದೂಕಿನಿಂದ ಶೂಟ್ ಮಾಡುವ ಬದಲು ಕ್ಯಾಮೆರಾದಿಂದ ಶೂಟ್ ಮಾಡುವ ಹವ್ಯಾಸವು ಉತ್ತಮ ಎಂಬುದನ್ನು ಅಂದಿನ ದಿನಗಳಲ್ಲೇ ಜಿಮ್ ಕಾರ್ಬೆಟ್ ಪ್ರತಿಪಾದಿಸಿದ್ದುಂಟು. ಮೂವಿ ಕ್ಯಾಮೆರಾಗಳನ್ನು ಅರಣ್ಯದ ಕಿಬ್ಬದಿಯಲ್ಲಿ, ಮೂಲೆಗಳಲ್ಲಿ, ತೊರೆಗಳ ದಡದಲ್ಲಿ ಅಳವಡಿಸಿ, ವನ್ಯಜೀವಿಗಳ ಚಿತ್ರವನ್ನು ಚಿತ್ರಿಸಲು ಅವರು ಸಾಕಷ್ಟು ಪಡಿಪಾಟಲು ಪಟ್ಟಿದ್ದರು. ಅವರು ಆಫ್ರಿಕಾದ ಕೀನ್ಯಾ ಮೊದಲಾದ ಪ್ರದೇಶದಲ್ಲಿ ವ್ಯಾಪಕವಾಗಿ ಓಡಾಡಿದ್ದರು. ಆಗಾಗ ಅಲ್ಲಿ ಹೋಗಿ ತಂಗುತ್ತಿದ್ದರು, ಅಲ್ಲಿನ ವನ್ಯಜೀವಿಗಳನ್ನು ಗಮನಿಸುತ್ತಿದ್ದರು. ಆಫ್ರಿಕಾದಲ್ಲಿ ಸಾವಿರಾರು ಸಂಖ್ಯೆಯಲ್ಲಿದ್ದ ಪ್ರಾಣಿಗಳ ಹಿಂಡನ್ನು ಹೋಲಿಸಿದರೆ, ನಮ್ಮ ದೇಶದಲ್ಲಿರುವ ವನ್ಯಜೀವಿಗಳ ಸಂಖ್ಯೆ ತುಂಬಾ ಕಡಿಮೆ ಎಂಬುದನ್ನು ಗುರುತಿಸಿದ್ದರು.

1920ರ ದಶಕದಲ್ಲಿ ಅವರ ಸಹ ಸಂಪಾದಕತ್ವದಲ್ಲಿ 'ಇಂಡಿಯನ್ ವೈಲ್ಡ್ ಲೈಫ್' ಎಂಬ ಪತ್ರಿಕೆ ಹೊರಬರುತ್ತಿದ್ದು, ಆಗಲೇ ಇಲ್ಲಿನ ಪರಿಸರ ಮತ್ತು ವನ್ಯಜೀವಿ ನಾಶದ ಕುರಿತು ತಮ್ಮ ಕಳಕಳಿ ವ್ಯಕ್ತಪಡಿಸಿದ್ದಾರೆ. ನಮ್ಮ ದೇಶದಲ್ಲಿ ಅರಣ್ಯ ನಾಶವು ಅವ್ಯಾಹತವಾಗಿ ಮುಂದುವರಿದರೆ, ಕಾಡುಪ್ರಾಣಿಗಳ ಬೇಟೆಯನ್ನು ನಿಯಂತ್ರಿಸದಿದ್ದರೆ, ಇಲ್ಲಿನ ವನ್ಯಸಂಪತ್ತು ಕ್ರಮೇಣ ಕಣ್ಮರೆಯಾಗುತ್ತದೆ ಎಂಬುದನ್ನು ಅವರು ಗುರುತಿಸಿ, ಆ ಕುರಿತು ಬರೆಯುತ್ತಿದ್ದರು. ಬೇಟೆಗಾರನಾಗಿದ್ದರೂ, ಪರಿಸರ ಪ್ರೇಮಿಯಾಗಿದ್ದ ಮತ್ತು ನಮ್ಮ ದೇಶದ ಕಾಡುಗಳನ್ನು ರಕ್ಷಿಸಬೇಕು ಎಂದು 20ನೇ ಶತಮಾನದಲ್ಲೇ ಹೇಳಿದ್ದ ಜಿಮ್ ಕಾರ್ಬೆಟ್‌ನ ಹೆಸರನ್ನು, ಉತ್ತರಾಖಂಡ ರಾಜ್ಯದಲ್ಲಿರುವ ರಾಷ್ಟ್ರೀಯ ಉದ್ಯಾನವನಕ್ಕೆ ಇಟ್ಟು, ಗೌರವಿಸಲಾಗಿದೆ.

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್

- **ಹಾಸನದಲ್ಲಿ ಗುರುವಾರ ಸಿದ್ದರಾಮಯ್ಯರ ಬಲ ಪ್ರದರ್ಶನ: ಸುದ್ದಿ**
- ಶತ್ರುಗಳ ಪಾಳಯಕ್ಕೆ ನುಗ್ಗಿ, ಅವರ ವಿರುದ್ಧವೇ ತೊಡೆತಟ್ಟೋದು ಅಂದ್ರೆ ಇದೇ ಇರಬೇಕು ಕಣ್ರೀ!

- **ತೆಲಂಗಾಣದಲ್ಲಿ ಬುಧವಾರ ಬೆಳಗ್ಗೆ 5.3 ತೀವ್ರತೆಯ ಭೂಕಂಪ: ಸುದ್ದಿ**
- ''ಅದ್ಯಾವ ಸೀಮೆ ಭೂಕಂಪ ರೀ.... ನಮ್ ಹಾಸನದಲ್ಲೂ ಗುರುವಾರ ಒಂದು ದೊಡ್ಡ 'ರಾಜಕೀಯ ಭೂಕಂಪ' ಆಯ್ತು ಗೊತ್ತಾ? ಭೂಕಂಪದ 'ಎಪಿಸೆಂಟರ್' ಇದ್ದಿದ್ದು ಹಾಸನದಲ್ಲಾದ್ರೂ, ಅದರ ಅಲೆಗಳು ಬೆಂಗಳೂರಿನ 'ಪದ್ಮನಾಭನಗರ'ದವರೆಗೂ ಹಬ್ಬಿ ಅಲ್ಲಿನ 'ಕುಟುಂಬ ರಾಜಕಾರಣಿಗಳು' ಗಡಗಡ ನಡುಗಿಬಿಟ್ರು, ಗೊತ್ತಾ?!'' ಎಂದು ಕರ್ನಾಟಕದ ಕಾಂಗ್ರೆಸ್ಸಿಗರು ಹೆಮ್ಮೆಯಿಂದ ಟವೆಲ್ ಕೊಡವಿಕೊಂಡ್ರಂತೆ!

- **ದೊಡ್ಡ ದೊಡ್ಡ ಹೋಮ ಮಾಡಿ ಪೂರ್ಣಾಹುತಿ ನೀಡಿದ ನಂತರ ಪ್ರಸಾದ ಕೊಡುತ್ತಾರೆ. ಆ ಪ್ರಸಾದ ಕೊಡುವ ಸಮಯಕ್ಕೆ ಬಂದಿದ್ದೇವೆ: ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ**
- ಒಳ್ಳೇದು ಸರ್! ಆದರೆ ಪ್ರಸಾದ ಸ್ವೀಕಾರದ ವೇಳೆ ಯಾವುದೇ 'ಕಳ್ಳಬೆಕ್ಕು' ಅಡ್ಡ ಬರದ ಹಾಗೆ ನೋಡ್ಕೊಳ್ಳಿ, ಪ್ಲೀಸ್!

- **ಸುಧಾರಿಸಿದ ದೆಹಲಿ ಗಾಳಿಯ ಗುಣಮಟ್ಟ: ಸುದ್ದಿ**
- ಅರೆ ಇಸ್ಕಿ! ಹಂಗಾದ್ರೆ ಸಂಸತ್ತಿನ ಚಳಿಗಾಲದ ಅಧಿವೇಶನ ಮುಗಿದುಹೋಯ್ತಾ?!

- **ಬಿಜೆಪಿ ವಿರುದ್ಧ ಕಂದಾಯ ಸಚಿವ ಕೃಷ್ಣ ಬೈರೇಗೌಡ ವಾಗ್ದಾಳಿ: ಸುದ್ದಿ**
- ''ಸರ್, ಈ ಕೆಲಸವನ್ನ ಅವರ ಪಕ್ಷದವರೇ ಮಾಡ್ತಿದ್ದಾರೆ, ನೀವ್ಯಾಕೆ ಸುಮ್ಮನೆ ಕಂಠಶೋಷಣೆ ಮಾಡ್ಕೋತೀರಿ?'' ಅಂತ ಹೇಳಿ ಆಪ್ತರೊಬ್ಬರು ಸಚಿವರಿಗೆ ಶುಂಠಿಪುಡಿ ಮಿಶ್ರಿತ ಚಹಾ ಕುಡಿಸಿದರಂತೆ!

- **ಬೈಕ್‌ನಲ್ಲಿ ಬಂದು 'ಹಾಲು' ಕದ್ದ ಭೂಪರು. ಕೃತ್ಯ ಸಿಸಿಟಿವಿಯಲ್ಲಿ ಸೆರೆ: ಸುದ್ದಿ**
- ಇಂಥ 'ಮನೆಹಾಲು' ಬುದ್ಧಿಯೋಲು ಇಲೋದ್ಲಿಂದ್ಲೇ ನಮ್ಮಂಥ ಮಕ್ಕಳಿಗೆ ಕಾಲಕಾಲಕ್ಕೆ ಸಿಗಬೇಕಾದ ಮೊಸಲು-ಬೆನ್ನೆ ಚಿಕ್ತಾ ಇಲ್ಲ!

- **ರೈತರಿಗೆ ಅನ್ಯಾಯವಾಗಲು ಬಿಡೋದಿಲ್ಲ: ವಕ್ಫ್ ವಿರೋಧಿ ಪ್ರತಿಭಟನಾ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಗುಡುಗು**
- ''ಹಾಗೆಯೇ, ದಶಕಗಳಿಂದ ಬಿಜೆಪಿಯಲ್ಲಿರುವ ನಿಷ್ಠರಿಗೂ ಅನ್ಯಾಯವಾಗದಂತೆ ನೋಡ್ಕೊಳ್ಳಿ ಸರ್'' ಎಂದು 'ಸೈಡ್ ವಿಂಗ್'ನಿಂದ ಯಾರೋ ಪಲುಕಿದರಂತೆ!

- **ಯಾವುದೇ ಬಗೆಯ ಪರೀಕ್ಷೆ ನಡೆಸುವುದಕ್ಕೂ ಭಾರತ ಉತ್ತಮ ಪ್ರಯೋಗಶಾಲೆ: ಮೈಕ್ರೋಸಾಫ್ಟ್ ಸಂಸ್ಥಾಪಕ ಬಿಲ್‌ಗೇಟ್ಸ್**
- ಹಾಗಂತ, ಎಲ್ಲ ಸಂದರ್ಭಗಳಲ್ಲೂ ಭಾರತೀಯರನ್ನು 'ಪ್ರಯೋಗ ಪಶುಗಳು' ಅಂತ ಭಾವಿಸಿದ್ರೆ ತಪ್ಪಾಗುತ್ತೆ!

- **ಮೂವರೂ ಸೇರಿ ಅಧಿಕಾರ ನಡೆಸುತ್ತೇವೆ; ಏಕನಾಥ್ ಶಿಂದೆ, ಅಜಿತ್ ಪವಾರ್ ಜತೆಗೂಡಿ ರಾಜ್ಯಪಾಲರ ಬಳಿ ಹಕ್ಕು ಮಂಡಿಸಿದ ದೇವೇಂದ್ರ ಫಡ್ನವಿಸ್: ಸುದ್ದಿ**
- ನೀವು 'ಮೂರು' ಮಂದಿ ಸೇರಿಕೊಂಡಿದ್ದಕ್ಕೆ ಸಂತೋಷವೇ. ಆದರೆ, 'ಮನೆಯೊಂದು ಮೂರು ಬಾಗಿಲು' ಆಗದ ಹಾಗೆ ನೋಡ್ಕೊಳ್ಳೀಪ್ಪಾ...!!

ಅಂಬೇಡ್ಕರರ ತತ್ತ್ವಾದರ್ಶಗಳು ಸರ್ವಕಾಲಕ್ಕೂ ಮಾರ್ಗದರ್ಶಕ

ಮಹಾಪ್ರಸ್ಥಾನ

ಲಕ್ಷ್ಮೀ ಹೆಬ್ಬಾಳ್ಕರ್
vveditoped@gmail.com

''ನನ್ನ ಜೀವಿತದ ಅವಧಿಯಲ್ಲೇ ನನ್ನ ಜನರು ಈ ದೇಶದ ಆಳುವ ವರ್ಗವಾಗುವುದನ್ನು ನಾನು ನೋಡಬಯಸಿದ್ದೆ. ರಾಜಕೀಯ ಅಧಿಕಾರವನ್ನು ಸಮಾನತೆಯ ಆಧಾರದ ಮೇಲೆ ಇತರರ ಜತೆ ಹಂಚಿಕೊಳ್ಳುವುದನ್ನು ನೋಡಲು ನಾನು ಬಯಸಿದ್ದೆ. ಆದರೆ ಅಂಥ ಸಾಧ್ಯತೆ ನನಗೀಗ ಕಾಣುತ್ತಿಲ್ಲ''– ಸಮಾನತೆಗಾಗಿ ಜೀವನಪೂರ್ತಿ ಹೋರಾಟ ನಡೆಸಿದ ಮಹಾನ್ ಮಾನವತಾವಾದಿ, ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊನೆಯ ದಿನಗಳಲ್ಲಿ ಅತ್ಯಂತ ಬೇಸರದಿಂದ ನುಡಿದ ಮಾತುಗಳಿವು.

ಜೀವನ ಪೂರ್ತಿ ಯಾವುದಕ್ಕಾಗಿ ಹೋರಾಡಿದ್ದರೋ ಆ ಗುರಿ ತಲುಪಲು ಸಾಧ್ಯವಾಗದಿದ್ದಾಗ ಅತ್ಯಂತ ನೋವಿನ ನುಡಿಗಳನ್ನಾಡುತ್ತ, ತಮ್ಮ ಮನದಾಳದ ದುಃಖವನ್ನು ಈ ರೀತಿಯಾಗಿ ತೋಡಿಕೊಂಡರು. ಯಾರ ಹಕ್ಕುಗಳನ್ನೂ, ಅಧಿಕಾರವನ್ನೂ ಅವರು ಕಸಿದುಕೊಳ್ಳಲು ಬಯಸಿರಲಿಲ್ಲ. ಆದರೆ ಎಲ್ಲರನ್ನೂ ಸಮಾನವಾಗಿ ಕಾಣಬೇಕೆನ್ನುವುದಷ್ಟೆ ಅವರ ಬಯಕೆಯಾಗಿತ್ತು. ಇದಕ್ಕಾಗಿ ಅವರು ಸಾಕಷ್ಟು ಹೋರಾಟ ಮಾಡಿದರು. ತಾವು ವಿಶ್ವಾಸವಿಟ್ಟ ಜನರೂ ಸ್ವಾರ್ಥಕ್ಕೆ ಬಲಿಯಾದಾಗ ಅವರ ದುಃಖ ಇಮ್ಮಡಿಯಾಯಿತು. ಸಂವಿಧಾನದ ಮೂಲಕವೂ ಸಮಾನತೆಯನ್ನು ಸಾಧಿಸಲು ಅವರು ಪ್ರಯತ್ನಿಸಿದರು. ಆದರೆ, ಜನರ ಮನಸ್ಥಿತಿಯಲ್ಲಿ ಅಂಥ ಬದಲಾವಣೆ ಕಾಣದಿದ್ದಾಗ ಒಂದು ರೀತಿಯಲ್ಲಿ ಅವರು ನಿರಾಶರಾಗಿದ್ದರು. ''ಅಂಥ ಪ್ರಯತ್ನವನ್ನು ನಾನೇ ಮಾಡೋಣವೆಂದರೆ ನಾನು ಕೂಡ ಈಗ ಅನಾರೋಗ್ಯದ ಕಾರಣದಿಂದಾಗಿ ನಿಶ್ಶಕ್ತನಾಗಿದ್ದೇನೆ'' ಎನ್ನುತ್ತ ತಮ್ಮ ದುಃಖವನ್ನು ಹೊರಹಾಕಿದ್ದರು. ಕೊನೆಗೆ, ಅದೇ ಸಮುದಾಯದ ಸ್ವಾರ್ಥಿಗಳ ಬಗೆಗೆ ಕೂಡ ಬಹಿರಂಗವಾಗಿಯೇ ಅಸಮಾಧಾನವನ್ನು ಹೊರಹಾಕಿದ್ದರು. ''ನಾನು ಇದುವರೆಗೆ ಏನನ್ನು ಸಾಧಿಸಿ ಪಡೆದಿರುವೆನೋ ಆ ಸಾಧನೆಯ ಫಲವನ್ನು ಶಿಕ್ಷಣ ಪಡೆದ ನನ್ನ ಸಮುದಾಯದ ಕೆಲವೇ ಕೆಲವು ಮಂದಿ ಅನುಭವಿಸಿ ಮಜಾ ಮಾಡುತಿದ್ದಾರೆ'' ಎಂದೂ ಆಕ್ರೋಶಗೊಂಡಿದ್ದರು. ''ತಮ್ಮ ಇನ್ನಿತರ ಶೋಷಿತ ಸಹೋದರರ ಬಗ್ಗೆ ಅವರು ಯಾವುದೇ ಅನುಕಂಪ, ಕಾಳಜಿ ತೋರುತ್ತಿಲ್ಲ. ತಮ್ಮ ಈ ವಂಚನೆಯ ಕ್ರಿಯೆಯಿಂದಾಗಿ ಒಂದು ರೀತಿಯಲ್ಲಿ ಅವರು ಅಯೋಗ್ಯರಾಗಿದ್ದಾರೆ. ವೈಯಕ್ತಿಕ ಹಿತಾಸಕ್ತಿಯನ್ನಷ್ಟೆ ಸಾಧಿಸಿಕೊಂಡು ತಮ್ಮಷ್ಟಕ್ಕೆ ಬದುಕುವ ಅವರು ಒಂದರ್ಥದಲ್ಲಿ ನನ್ನ ಎಲ್ಲಾ ನಿರೀಕ್ಷೆಗಳನ್ನು ಹುಸಿಗೊಳಿಸಿದ್ದಾರೆ. ಅವರಲ್ಲಿ ಯಾರು ಕೂಡ ಸಮುದಾಯದ ಸೇವೆಯನ್ನು ಮಾಡಲು ಮುಂದೆ ಬರುತ್ತಿಲ್ಲ'' ಎಂಬುದಾಗಿ ಅಂಬೇಡ್ಕರ್, ಮೀಸಲಾತಿಯ ಲಾಭ ಪಡೆದು ನೌಕರಿ ಗಿಟ್ಟಿಸಿದವರ ಬಗೆಗಿನ ತಮ್ಮ ಮನದಾಳದ ನೋವನ್ನು ಹೊರಹಾಕಿದ್ದರು. ''ಈ ಚಳವಳಿಯನ್ನು ಮುನ್ನಡೆಸಬಲ್ಲವರೆಂದು ನನ್ನ ಸಹಪಾಠಿಗಳ ಪೈಕಿ ಯಾರಲ್ಲಿ ನಾನು ನಂಬಿಕೆ ಮತ್ತು ವಿಶ್ವಾಸವಿರಿಸಿದ್ದೆನೊ ಅವರು ತಮ್ಮ ತಮ್ಮಲ್ಲೇ ನಾಯಕತ್ವ ಮತ್ತು ಅಧಿಕಾರಕ್ಕಾಗಿ ಕಚ್ಚಾಡುತ್ತಿದ್ದಾರೆ'' ಎಂದು ನೊಂದಿದ್ದ ಅಂಬೇಡ್ಕರ್, ಈ ಎಲ್ಲವನ್ನೂ ನೋಡಿ ಸಹಿಸಲಾಗದೆ, ತಮ್ಮ ನಂಬಿಕೆಗೆ ಅಪಚಾರವಾದಾಗ ಅಂತಿಮವಾಗಿ ಬೌದ್ಧ ಧರ್ಮವನ್ನು ಸ್ವೀಕರಿಸುವ ನಿರ್ಧಾರಕ್ಕೆ ಬಂದರು. ಒಂದು ವರ್ಷದಷ್ಟು ಕಾಲ ಆ ಧರ್ಮವನ್ನು ಅಧ್ಯಯನ ಮಾಡಿದ ನಂತರ ಅಂತಿಮವಾಗಿ 1956ರ ಅಕ್ಟೋಬರ್ 14ರಂದು 5 ಲಕ್ಷ ಬೆಂಬಲಿಗರೊಂದಿಗೆ ಅಂಬೇಡ್ಕರ್ ಅವರು ಬೌದ್ಧಧರ್ಮಕ್ಕೆ ಮತಾಂತರಗೊಂಡರು. ಆ ಸಂದರ್ಭದಲ್ಲಿ ಅವರ ಅನುಯಾಯಿಗಳು ಇವರನ್ನು 'ಬೌದ್ಧ ನಾಯಕ' ಎಂದೇ ಪರಿಗಣಿಸಿದರು.

''ನಾನು ಅಸ್ಪೃಶ್ಯತೆ ಆಚರಿಸುವುದಿಲ್ಲ ಮತ್ತು ಎಲ್ಲ ಮನುಷ್ಯರನ್ನು ಸಮಾನವಾಗಿ ಕಾಣುತ್ತೇನೆ. ಕೊಲ್ಲುವುದಿಲ್ಲ, ಕದಿಯುವುದಿಲ್ಲ, ತಪ್ಪಾದ ಲೈಂಗಿಕ ವರ್ತನೆ ತೋರುವುದಿಲ್ಲ, ಮದ್ಯ ಸೇವಿಸುವುದಿಲ್ಲ ಮತ್ತು ಸುಳ್ಳು ಹೇಳುವುದಿಲ್ಲ ಎಂಬ ಪಂಚಶೀಲ ತತ್ತ್ವಗಳನ್ನು ಅನುಸರಿಸುತ್ತೇನೆ. ಜ್ಞಾನ, ಸಹಾನುಭೂತಿ ಮತ್ತು ಕರ್ತವ್ಯ ಎಂಬ 3 ಪ್ರಮುಖ ತತ್ತ್ವಗಳನ್ನು ಆಧರಿಸಿರುವ ಬೌದ್ಧ ಧರ್ಮ ಮಾತ್ರವೇ ನಿಜವಾದ ಧರ್ಮ ಎಂದು ನಾನು ನಂಬಿದ್ದೇನೆ. ಹಾಗಾಗಿಯೇ ಹಿಂದೂ ಧರ್ಮವನ್ನು ತೊರೆದು ಬೌದ್ಧ ಧರ್ಮವನ್ನು ಅಪ್ಪಿಕೊಳ್ಳುವ ಮೂಲಕ ಹೊಸಹುಟ್ಟು ಪಡೆದುಕೊಂಡಿದ್ದೇನೆ''– ಇದು ಅಂಬೇಡ್ಕರ್ ಮತ್ತು ಅವರ ಅನುಯಾಯಿಗಳು ಕೈಗೊಂಡ ಪ್ರಮಾಣ.

ಮಹಾಪರಿನಿರ್ವಾಣ ದಿನ: ಪರಿನಿರ್ವಾಣ ಎಂಬುದು ಬೌದ್ಧಧರ್ಮದ ಮುಖ್ಯ ತತ್ತ್ವ ಹಾಗೂ ಗುರಿಗಳಲ್ಲಿ ಒಂದಾಗಿದೆ. ಇದು ದೇಹವು ಸತ್ತ ನಂತರ ನಿರ್ವಾಣದ ಸಾಧನೆಯನ್ನು ಸೂಚಿಸುತ್ತದೆ. ಬೌದ್ಧಧರ್ಮದ ಪ್ರಕಾರ ಜೀವನದ ಕರ್ಮವನ್ನು ದೇಹದ ಮರಣದ ನಂತರ ಆತ್ಮದ ಮೂಲಕ ಮುಂದಿನ ಜನ್ಮಕ್ಕೆ ಸಾಗಿಸಲಾಗುತ್ತದೆ. ಒಮ್ಮೆ ನಿರ್ವಾಣ ಸಾಧಿಸಿದರೆ ಪುನರ್ಜನ್ಮದ ಚಕ್ರವು ನಿಲ್ಲುತ್ತದೆ. ಏಕೆಂದರೆ ನಿರ್ವಾಣವಾದರೆ ಯಾವುದೇ ಕರ್ಮದ ಬಾಕಿ ಉಳಿಯುವುದಿಲ್ಲ ಎನ್ನುವುದು ನಂಬಿಕೆ.

ಅಂಬೇಡ್ಕರ್ ಅವರು ತಮ್ಮ 'ಬುದ್ಧ ಮತ್ತು ಅವರ ಧಮ್ಮ' ಗ್ರಂಥವನ್ನು ಪೂರ್ಣಗೊಳಿಸಿದ ಕೆಲವೇ ದಿನಗಳಲ್ಲಿ ದೆಹಲಿಯ ತಮ್ಮ ನಿವಾಸದಲ್ಲಿ 1956ರ ಡಿಸೆಂಬರ್ 6ರಂದು ಮರಣ ಹೊಂದಿದರು. ಅಂಬೇಡ್ಕರರ ಅನುಯಾಯಿಗಳು, ತಮ್ಮ ಗುರುಗಳು ಭಗವಾನ್ ಬುದ್ಧನಂತೆಯೇ ಪ್ರಭಾವಶಾಲಿ, ಶುದ್ಧ ಮನಸ್ಸಿನವರು ಹಾಗೂ ದೇವರಿಂದ ಆಶೀರ್ವಾದ ಪಡೆದವರು ಎಂದು ನಂಬುತ್ತಾರೆ. ಸಮಾಜದಲ್ಲಿ ಅಂಬೇಡ್ಕರರು ಕೈಗೊಂಡ ಮಹಾನ್ ಕಾರ್ಯಗಳಿಂದಾಗಿ ಅವರಿಗೆ ಯಾವುದೇ ಕರ್ಮದ ಋಣ ಉಳಿದಿಲ್ಲ ಎಂದು ಭಾವಿಸಿ, ಅಂಬೇಡ್ಕರ್ ಅವರ ಪುಣ್ಯತಿಥಿಯನ್ನು 'ಮಹಾಪರಿನಿರ್ವಾಣ ದಿನ' ಎಂದು ಅನುಯಾಯಿಗಳು ಕರೆದರು.

ಸಂವಿಧಾನ ಶಿಲ್ಪಿ: ಮಹಾನ್ ಮಾನವತಾವಾದಿ, ಸಂವಿಧಾನ ಶಿಲ್ಪಿ, ಕಾನೂನು ತಜ್ಞ, ಸಮಾಜ ಸುಧಾರಕ, ಅರ್ಥ ಶಾಸ್ತ್ರಜ್ಞ, ಪತ್ರಕರ್ತ, ತತ್ತ್ವಜ್ಞಾನಿ, ಸಾಹಿತಿ ಇನ್ನೂ ಏನೇನೋ ಆಗಿದ್ದ ಡಾ. ಬಾಬಾ ಸಾಹೇಬ್ ಅಂಬೇಡ್ಕರರು, ಒಬ್ಬ ವ್ಯಕ್ತಿ ಏನೆಲ್ಲ ಸಾಧನೆ ಮಾಡಬಹುದು ಎನ್ನುವುದಕ್ಕೆ ಉದಾಹರಣೆಯಾಗಿದ್ದರು. ಸಂವಿಧಾನದ ಕರಡನ್ನು ಸಿದ್ಧ ಮಾಡಲು, ಬಹುತೇಕ ಒಬ್ಬಂಟಿಯಾಗಿ ಎರಡು ವರ್ಷ ದುಡಿದ ಅಂಬೇಡ್ಕರ್, ಅನಾರೋಗ್ಯವಿದ್ದಾಗ್ಯೂ 1948ರ ಮೊದಲಿನಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಿ, ಅದೇ ವರ್ಷದ ಕೊನೆಯಲ್ಲಿ ಸಂಸತ್ತಿನಲ್ಲಿ ಮಂಡಿಸಿ, ಸಂವಿಧಾನದ ಹಸ್ತಪ್ರತಿಯನ್ನು ಬೆಳ್ಳಿತಟ್ಟೆಯಲ್ಲಿಟ್ಟು, ಆಗಿನ ಪ್ರಧಾನಿ ಜವಾಹರಲಾಲ್ ನೆಹರು ಅವರ ಸಮ್ಮುಖದಲ್ಲಿ ಇಡೀ ರಾಷ್ಟ್ರಕ್ಕೆ ಅದನ್ನು ಸಮರ್ಪಣೆ ಮಾಡಿದರು. ಅಂದಿನಿಂದ ಅಂಬೇಡ್ಕರ್ ಅವರು ಭಾರತದ ಸಂವಿಧಾನ ಶಿಲ್ಪಿಯೆಂದೇ ಹೆಸರಾದರು.

ಆರು ದಶಕದ ಹಿಂದೆ ಈ ನೆಲದಲ್ಲಿ ಬದುಕಿದ್ದು, ನಮ್ಮೆಲ್ಲರ ಪ್ರೇರಕರು ಮತ್ತು ಮಾರ್ಗದರ್ಶಕರಾಗಿ ಬದುಕಿಗೊಂದು ದಾರಿ ತೋರಿಸಿಕೊಟ್ಟ ಶಕ್ತಿ ಡಾ.ಅಂಬೇಡ್ಕರ್. ಅವರ ಹೆಸರು ಹೇಳಿದರೆ ನಮಗೆಲ್ಲ ಏನೋ ಸ್ಫೂರ್ತಿ ಉಕ್ಕಿ ಹರಿಯುತ್ತದೆ, ಹೊಸ ಪ್ರೇರಣೆ ಉಂಟಾಗುತ್ತದೆ, ಒಂದು ಆದರ್ಶ ನಮ್ಮ ಕಣ್ಣೆದುರು ನಿಲ್ಲುತ್ತದೆ. ಅಂಬೇಡ್ಕರ್ ಅವರ ಬದುಕು, ತತ್ತ್ವ ಆದರ್ಶಗಳು ನಮ್ಮೆಲ್ಲರ ಪಾಲಿಗೆ ಸಾರ್ವಕಾಲಿಕ ಮಾರ್ಗದರ್ಶಕ. ಸಮಾನತೆ ಮತ್ತು ಪ್ರಗತಿಯ ಕನಸು ಕಂಡ ಮೇರುನಾಯಕ ಅವರು. ಅಂಬೇಡ್ಕರರ ಆದರ್ಶ ಎಲ್ಲರ ಜೀವನಕ್ಕೆ ದಾರಿದೀಪ, ಅವರ ಚಿಂತನೆಗಳು ಇಂದಿಗೂ, ಎಂದಿಗೂ ಯುವಜನತೆಗೆ ಸ್ಫೂರ್ತಿ. 1920ರ ದಶಕದಲ್ಲೇ ಎರಡೆರಡು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪಡೆದ ಮಹಾನ್ ಚೇತನ ಅವರು. ಸಮಾಜದಲ್ಲಿ ಅಸಮಾನತೆ, ಅಸ್ಪೃಶ್ಯತೆ ತಾಂಡವವಾಡುತ್ತಿದ್ದ ಅಂದಿನ ದಿನಗಳಲ್ಲಿ ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾಲಯ ಮತ್ತು ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್‌ನಿಂದ ಡಾಕ್ಟರೇಟ್ ಪದವಿ ಪಡೆದರು ಎಂದರೆ ಅಂಬೇಡ್ಕರರ ಜೀವನೋತ್ಸಾಹ ಹೇಗಿತ್ತು ಎನ್ನುವುದನ್ನು ನಾವು ಊಹಿಸಲೂ ಸಾಧ್ಯವಾಗುವುದಿಲ್ಲ.

ಡಾಕ್ಟರೇಟ್ ಪದವಿ ಪಡೆದು ಹಿಂದಿರುಗಿದಾಗ ಮೊದಲಿನ ಷರತ್ತಿನಂತೆ ಬರೋಡಾದ ಮಹಾರಾಜರ ಆಸ್ಥಾನದಲ್ಲಿ ಸೈನ್ಯದ ಕಾರ್ಯದರ್ಶಿಗಳಾಗಿ ಕೆಲಸಕ್ಕೆ ಸೇರಿದರು ಅಂಬೇಡ್ಕರ್. ಆದರೆ, ಆಸ್ಥಾನಿಕ ಹಿರಿಯ ಮಂತ್ರಿಗಳು ಮಹಾರಾಜರಿಗೆ ತಿಳಿಯದಂತೆ ಅಸ್ಪೃಶ್ಯತೆಯ ಆಚರಣೆ ಮೂಲಕ ಇವರಿಗೆ ಕಿರುಕುಳ ನೀಡುತ್ತಿದ್ದರು. ಸಾಮಾನ್ಯ ಸಿಪಾಯಿ ಕೂಡ ಇವರ ಫೈಲ್‌ಗಳನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ, ಉಳಿಯಲು ಆಸ್ಥಾನದಲ್ಲಿ ನೆಲೆ ನೀಡಲಿಲ್ಲ ಮತ್ತು ಉಳಿದಿದ್ದ ಪಾರ್ಸಿ ಹೋಟೆಲ್‌ನಿಂದ ಇವರನ್ನು ಹೊರಹಾಕಿದರು. ಅಲ್ಲಿ ಕೆಲಸ ಮಾಡಲಾಗದೆ ಅನಿವಾರ್ಯವಾಗಿ ಮುಂಬೈಗೆ ಬಂದ ಅಂಬೇಡ್ಕರರು, ಸಾಮಾಜಿಕ ಸಮಾನತೆಗಾಗಿ ಹೋರಾಟ ನಡೆಸಿದರು. ಅಸ್ಪೃಶ್ಯತೆ ವಿರುದ್ಧ ಸಮರ ಸಾರಿದರು. ಒಬ್ಬ ಅರ್ಥ ಶಾಸ್ತ್ರಜ್ಞರಾಗಿ, ಸಮಾಜ ಸುಧಾರಕರಾಗಿ, ಕಾನೂನು ತಜ್ಞರಾಗಿ, ನ್ಯಾಯ ಶಾಸ್ತ್ರಜ್ಞರಾಗಿ, ಪತ್ರಕರ್ತರಾಗಿ, ಸಾಹಿತಿಗಳಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಸಂವಿಧಾನ ಶಿಲ್ಪಿಗಳಾಗಿ ಅಂಬೇಡ್ಕರ್ ಅವರು ಈ ರಾಷ್ಟ್ರಕ್ಕೆ ನೀಡಿದ ಕೊಡುಗೆ ಅವಿಸ್ಮರಣೀಯ, ಅಮೋಘ.

ಸ್ವತಂತ್ರ ಭಾರತದ ಮೊದಲ ಕಾನೂನು ಸಚಿವರಾಗಿ ನಮ್ಮೆಲ್ಲರಿಗೆ ಮೇಲ್ಪಂಕ್ತಿ ಹಾಕಿಕೊಟ್ಟವರು ಅಂಬೇಡ್ಕರ್ ಅವರು. ಇಡೀ ವಿಶ್ವದಲ್ಲೇ ಶ್ರೇಷ್ಠ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದ್ದು ಅಂಬೇಡ್ಕರ್ ಅವರು ರೂಪಿಸಿಕೊಟ್ಟ ಭಾರತದ ಸಂವಿಧಾನ. ಇಂಥ ನಾಡಿನಲ್ಲಿ ಜೀವಿಸುತ್ತಿರುವುದೇ ನಮಗೆಲ್ಲ ದೊಡ್ಡ ಹೆಮ್ಮೆ. ಅವರ ಜೀವನ ಸಾಧನೆಯು ಸೂರ್ಯ–ಚಂದ್ರರಿರುವವರೆಗೂ ಈ ಭೂಮಿಯ ಮೇಲಿರುವವರಿಗೆ ಪ್ರೇರಣೆಯಾಗಬೇಕು, ದಾರಿದೀಪವಾಗಬೇಕು.

(ಲೇಖಕಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಬಿಸಿಯಲ್ಲಿ ಮೈಕಾಯಿಸಿಕೊಂಡ್ರಾ?!

ಅಕ್ಷರಶಃ 'ಡೋಂಟ್-ಕೇರ್-ಮಾಸ್ಟರ್' ರೀತಿಯಲ್ಲಿ ವರ್ತಿಸುತ್ತಿದ್ದ ರಾಜ್ಯದ 'ಕಮಲ'ಶೋಭಿತ ಶಾಸಕರೊಬ್ಬರ ವಿರುದ್ಧ ದೆಹಲಿಯ ಶಿಸ್ತು ಸಮಿತಿಯು ಷೋಕಾಸ್ ನೋಟಿಸನ್ನು ವಗಾಯಿಸಿತ್ತಂತೆ. ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಸದರಿ ಶಾಸಕರು ಆ ಶಿಸ್ತು ಸಮಿತಿಯ ಮುಂದೆ ಹಾಜರಾಗಿ, ತಮ್ಮ 'ಕೇರ್-ಫ್ರೀ' ವರ್ತನೆಗೆ ಕಾರಣವೇನು? ಪಕ್ಷದ ಯಾರ್ಯಾರೆಲ್ಲಾ ಏನೇನು ರಂಗ್‌ಬಿರಂಗಿ ಆಟಗಳನ್ನಾಡಿದ್ದಾರೆ? ಎಂಬ ಬಗ್ಗೆ ದೂರು ಸಲ್ಲಿಸಿದ್ದಾರಂತೆ.



ಆದರೆ ಇದಕ್ಕೂ ಮುನ್ನ, 'ಮಳೆ ನಿಂತರೂ, ಮರದಿಂದ ನೀರು ಉದುರೋದು ನಿಲ್ಲಲಿಲ್ಲ' ಎಂಬ ಮಾತಿನಂತೆ ಕರ್ನಾಟಕದಿಂದ ದೆಹಲಿಗೆ ಬಂದಿದ್ದರೂ 'ಕಮಲ ಪಾಳೇಪಟ್ಟಿನ' ರಾಜ್ಯಾಧ್ಯಕ್ಷರ ವಿರುದ್ಧದ ಈ ಶಾಸಕರ ಸಮರ ದೆಹಲಿಯಲ್ಲೂ ನಿಂತಿರಲಿಲ್ಲವಂತೆ. ಹೀಗಾಗಿ, ಈ 'ಬಣ ಬಡಿದಾಟ'ಕ್ಕೆ ಇತಿಶ್ರೀ ಹಾಡಲೆಂದು ನಿರ್ಧರಿಸಿದ ಪಕ್ಷದ 'ಸೋ ಕಾಲ್ಡ್' ವರಿಷ್ಠರು, ''ಇನ್ ಮ್ಯಾಕೆ ಪಕ್ಷದ ನಾಯಕರ ಇರುದ್ದ ಇಂಗೆಲ್ಲಾ ಬಾಯಿಗ್ ಬಂದಂಗೆ ಬಯಿರಂಗವಾಗಿ ಮಾತಾಡ್‌ಬ್ಯಾಡ ಕಣಣ್ಣಾ...'' ಎಂದು ಸೂಚ್ಯವಾಗಿ ಹೇಳುವ ಮೂಲಕ, 'ಉಗ್ರಪ್ರತಾಪ' ಮೆರೆಯುತ್ತಿದ್ದ ಸದರಿ ಶಾಸಕರಿಗೆ 'ಲಕ್ಷ್ಮಣರೇಖೆ' ಹಾಕಿ ಲೈಟಾಗಿ ಬಿಸಿ ಮುಟ್ಟಿಸಲು ಆಲೋಚಿಸುತ್ತಿದ್ದರಂತೆ. ಈ ಸಂಗತಿಯನ್ನು ತಮ್ಮ ಅತ್ಯಾಪ್ತ ಹಿಂ'ಬಾಲಕ'ನಿಂದ ಪಡೆದುಕೊಂಡ ಉಗ್ರಪ್ರತಾಪಿ ಎಂಎಲ್‌ಎ ಸಾಹೇಬರು, 'ಕದನದೋಳ್ ಕಲಿಪಾರ್ಥನಂ ಕೆಣಕಿ ಉಳಿದ ವರಿಲ್ಲ' ಎಂಬ ಕಂದಪದ್ಯದ ಧಾಟಿಯಲ್ಲಿ, ''ನಾನು ಅಂದ್ರೇನು... ನನ್ ಗತ್ತು-ಗೈರತ್ತು ಅಂದ್ರೇನು... ನನ್ ಎದುರಿಗೆ ಪುಟಗೋಸಿ 'ಲಕ್ಷ್ಮಣರೇಖೆ' ಎಳೀತಾರಂತಾ? ನನ್ನನ್ನೇನು ಲಕ್ಷ್ಮಣರೇಖೆಗೆ ಹೆದರಿ ಓಡಿಹೋಗೋ 'ಜಿರಲೆ' ಅಂದುಕೊಂಡುಬಿಟ್ರಾ ಅವರು..'' ಎಂಬುದಾಗಿ ದೆಹಲಿಯ ಚುಮುಚುಮು ಚಳಿಯಲ್ಲೂ ಕೆರಳಿ ಕೆಂಡವಾಗಿ ಅಬ್ಬರಿಸಿದರಂತೆ. ಈ ಆರ್ಭಟವನ್ನು ಕಂಡ ಅವರದೇ ಪಕ್ಷದ ಮತ್ತೊಬ್ಬ ಗಡ್ಡಧಾರಿ ನಾಯಕರು 'ಸೀಟಿ' ಹೊಡೆಯುತ್ತಾ, ಆ ಕೆಂಡದ ಬಿಸಿಯಲ್ಲೇ ಮೈ ಕಾಯಿಸಿಕೊಂಡರಂತೆ...!

ಮೇಲೆ ವಿವರಿಸಿರೋ ಲಘು ಪ್ರಹಸನವನ್ನು ಓದಿದ ಮೇಲೆ ನೀವು ಪಕ್ಕಾ ಹೈಸ್ಕೂಲ್ ಹುಡುಗರ ಥರ, ''ಮೇಲಿನ ಮಾತನ್ನು ಯಾರು ಯಾರಿಗೆ ಯಾವಾಗ ಹೇಳಿದರು? ಅದನ್ನು ಕೇಳಿ 'ಸೀಟಿ' ಹೊಡೆದ 'ಗಡ್ಡಧಾರಿ' ನಾಯಕರಾರು? ಸಂದರ್ಭ ಸಹಿತ ವಿವರಿಸಿ'' ಎಂದು ತ್ರಿಲೋಕ ಸಂಚಾರಿ ನಾರದರನ್ನು ಕೇಳುವ ಅಗತ್ಯವೇನಿಲ್ಲ. ಏಕೆಂದರೆ, ನಿಮಗೇ ಗೊತ್ತಿರುವಂತೆ ಈ ನಾರದರು 'ಕಲಹಪ್ರಿಯರ್' ಆಗಿದ್ದಾರೆಯೇ ವಿನಾ, 'ಕ್ಲಾರಿಫೈಯರ್' ಅಲ್ಲ! ನೀವುಂಟು, ನಿಮ್ಮ ಚುರುಕುಬುದ್ಧಿಯುಂಟು, ವಿಶ್ಲೇಷಣಾ ಸಾಮರ್ಥ್ಯವುಂಟು...!!

ನಾರಾಯಣ ನಾರಾಯಣ!

ಅದಾನಿ ಲಂಚ ಪ್ರಕರಣ, ಸಂಭಾಲ್ ಘಟನೆ ಕುರಿತು ಲೋಕಸಭೆಯಲ್ಲಿ ಚರ್ಚೆಗೆ ಸ್ಪೀಕರ್ ಅವಕಾಶ ನೀಡಲಿಲ್ಲ ಎಂದು ಸಿಟ್ಟಿಗೆದ್ದ 'ಇಂಡಿಯಾ' ಮೈತ್ರಿಕೂಟದ ಸದಸ್ಯರು ಮೊನ್ನೆ ಮಂಗಳವಾರ ಸಭಾತ್ಯಾಗ ಮಾಡಿದ್ದನ್ನು ಈಗಾಗಲೇ ನೀವು ಓದಿದ್ದೀರಿ. 'ಹುಚ್ಚು ಬಿಡದ ಹೊರತು ಮದುವೆಯಾಗೋಲ್ಲ, ಮದುವೆಯಾಗದ ಹೊರತು ಹುಚ್ಚು ಬಿಡೋಲ್ಲ' ಎಂಬ ಮಾತಿಗೆ ಎಂತೆಂಥಾ ಉದಾಹರಣೆಗಳು ಸಿಗುತ್ವೆ, ಅಲ್ವಾ?!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 347

ಸಮಾಚಾರ ಸಣ್ಣದಲ್ಲ

ಹೆರಾಯಿನ್ ಸಾಗಣೆ: ಮೂವರ ಬಂಧನ

ಚಂಡೀಗಢ: ಮಾದಕ ವಸ್ತುಗಳ ಕಳ್ಳಸಾಗಣೆ ವಿರುದ್ಧ ಪಂಜಾಬ್ ಪೊಲೀಸರು ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಈ ನಡುವೆ ಗಡಿ ಭಾಗಗಳಲ್ಲಿ ಮಾದಕ ವಸ್ತುಗಳ ಸಾಗಾಟ ಪ್ರಕರಣವೊಂದು ಬೆಳಕಿಗೆ ಬಂದಿದೆ. ಪಾಕಿಸ್ತಾನದ ಪೆಡ್ಲರ್‌ಗಳ ಮೂಲಕ ಭಾರತಕ್ಕೆ ಹೆರಾಯಿನ್ ಕಳ್ಳಸಾಗಣೆ ಮಾಡುತ್ತಿದ್ದ ಮೂವರನ್ನು ಪೊಲೀಸರು ಬಂಧಿಸಿದ್ದು, 5 ಕೆ.ಜಿ ಮಾಲು ವಶಕ್ಕೆ ಪಡೆದಿದ್ದೇವೆ ಎಂದು ಡಿಜಿಪಿ ಗೌರವ್ ಯಾದವ್ ತಿಳಿಸಿದ್ದಾರೆ. ಅಮೃತ್‌ಸರ್ ನಿವಾಸಿ ಹಸನ್‌ಪ್ರೀತ್ ಸಿಂಗ್, ಅಟಾರಿ ಮಂಡಿ ನಿವಾಸಿಗಳಾದ ಕರಣ್‌ದೀಪ್ ಸಿಂಗ್ ಆಲಿಯಾಸ್ ಮನ್ನಾ ಮತ್ತು ಮನಿಂದರ್ ಸಿಂಗ್ ಬಂಧಿತರು. ಇವರಿಂದ ಹೆರಾಯಿನ್ ಜೊತೆಗೆ ನಗದು ಮತ್ತು ದ್ವಿಚಕ್ರ ವಾಹನವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇತ್ತೀಚೆಗೆ ಪಾಕ್ ಕಳ್ಳಸಾಗಣೆದಾರರಿಂದ ಭಾರೀ ಪ್ರಮಾಣದ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿತ್ತು.

ಪ್ಯಾಲೆಸ್ತೀನ್: ದ್ವಿರಾಷ್ಟ್ರಕ್ಕೆ ಭಾರತ ಬೆಂಬಲ

ದೆಹಲಿ: ಇಸ್ರೇಲ್ ರಾಷ್ಟ್ರದ ಜೊತೆ ಜೊತೆಗೇ ಸಾರ್ವಭೌಮ, ಸ್ವತಂತ್ರ ಮತ್ತು ಕಾರ್ಯಸಾಧ್ಯವಾದ ಪ್ಯಾಲೆಸ್ತೀನ್ ರಾಜ್ಯದ ಅಸ್ತಿತ್ವವನ್ನು ಭಾರತ ಬೆಂಬಲಿಸುತ್ತದೆ ಎಂದು ಜೈಶಂಕರ್ ಸ್ಪಷ್ಟಪಡಿಸಿದ್ದಾರೆ. ಗಾಜಾಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆಯ ಎಲ್ಲಾ ನಿರ್ಣಯಗಳಿಂದ ಭಾರತ ದೂರವಿರುವುದರ ಬಗ್ಗೆ ರಾಜ್ಯಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಕೇಳಲಾದ ಪ್ರಶ್ನೆಯೊಂದಕ್ಕೆ ಜೈಶಂಕರ್ ಉತ್ತರಿಸಿದ್ದು, ಇಸ್ರೇಲ್–ಪ್ಯಾಲೆಸ್ತೀನ್ ವಿಷಯದಲ್ಲಿ ಭಾರತ ದ್ವಿರಾಷ್ಟ್ರ ಪರಿಹಾರಕ್ಕೆ ಬೆಂಬಲ ನೀಡುತ್ತದೆ ಎಂದೂ ಸ್ಪಷ್ಟಪಡಿಸಿದ್ದಾರೆ. ಕಳೆದ ವರ್ಷ ಅಕ್ಟೋಬರ್ 7ರಂದು ಆರಂಭವಾಗಿದ್ದ ಇಸ್ರೇಲ್– ಹಮಾಸ್ ಸಂಘರ್ಷದ ಬಳಿಕ ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯಲ್ಲಿ ಪ್ಯಾಲೆಸ್ತೀನ್ ಬಗ್ಗೆ 13 ನಿರ್ಣಯಗಳನ್ನು ಮಂಡಿಸಲಾಗಿದೆ. ಅದರಲ್ಲಿ ಭಾರತವು 10 ನಿರ್ಣಯಗಳ ಪರವಾಗಿ ಮತ ಚಲಾಯಿಸಿತು ಮತ್ತು ಮೂರು ನಿರ್ಣಯಗಳಿಂದ ದೂರವಿತ್ತು ಎಂದು ಜೈಶಂಕರ್ ಹೇಳಿದ್ದಾರೆ.

ಆರೋಪಿ ಕುಲದೀಪ್‌ಗೆ ಮಧ್ಯಂತರ ಜಾಮೀನು

ದೆಹಲಿ: 2017ರಲ್ಲಿ ಉತ್ತರ ಪ್ರದೇಶದ ಉನ್ನಾವೊದಲ್ಲಿ ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಎಸಗಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಬಿಜೆಪಿ ಉಚ್ಚಾಟಿತ ನಾಯಕ ಕುಲದೀಪ್ ಸಿಂಗ್ ಸೆಂಗಾರ್‌ಗೆ ವೈದ್ಯಕೀಯ ಕಾರಣಗಳಿಗಾಗಿ ದೆಹಲಿ ಹೈಕೋರ್ಟ್ ಗುರುವಾರ ಎರಡು ವಾರಗಳ ಮಧ್ಯಂತರ ಜಾಮೀನು ನೀಡಿದೆ. ನ್ಯಾಯಮೂರ್ತಿ ಪ್ರತಿಭಾ ಎಂ. ಸಿಂಗ್ ಮತ್ತು ನ್ಯಾಯಮೂರ್ತಿ ಅಮಿತ್ ಶರ್ಮಾ ಅವರನ್ನೊಳಗೊಂಡ ಪೀಠವು ಕುಲದೀಪ್ ಸೆಂಗಾರ್ ಅವರ ವೈದ್ಯಕೀಯ ಮೌಲ್ಯಮಾಪನಕ್ಕಾಗಿ ದೆಹಲಿಯ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ಗೆ (ಎಐಐಎಂಎಸ್) ದಾಖಲಾಗುವಂತೆ ನಿರ್ದೇಶಿಸಿದೆ, ನ್ಯಾಯಾಲಯವು ಏಮ್ಸ್ ವೈದ್ಯಕೀಯ ಮಂಡಳಿಯಿಂದ ವರದಿಯನ್ನು ಕೇಳಿದೆ.

ವಿದ್ಯಾರ್ಥಿ ಆತ್ಮಹತ್ಯೆ

ಉತ್ತರಾಖಂಡ: ಐಐಟಿ ರೂರ್ಕಿಯ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆಗೆ ಶರಣಾಗಿದ್ದು, ಕೊಠಡಿಯೊಳಗೆ ಶವ ಪತ್ತೆಯಾಗಿದೆ. ಮಾಹಿತಿ ಮೇರೆಗೆ ಆಗಮಿಸಿದ ಪೊಲೀಸರು ಕೊಠಡಿಯ ಬಾಗಿಲು ಒಡೆದು ಶವವನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ. ಮೃತ ವಿದ್ಯಾರ್ಥಿ ರಾಜಸ್ಥಾನದ ನಿವಾಸಿ ಎನ್ನಲಾಗಿದೆ. ಆದರೆ, ಸಾವಿಗೆ ಕಾರಣ ಇನ್ನೂ ತಿಳಿದು ಬಂದಿಲ್ಲ. ಮೃತ ವಿದ್ಯಾರ್ಥಿಯು ಐಐಟಿ ಯಲ್ಲಿ ಬಿಎಸ್–ಎಂಎಸ್ ವ್ಯಾಸಂಗ ಮಾಡು ತ್ತಿದ್ದ. ವಿದ್ಯಾರ್ಥಿ ಕೊಠಡಿಯಿಂದ ಹೊರಗೆ ಬಾರದಿ ದ್ದಾಗ ಆತನ ಪಕ್ಕದ ಕೊಠಡಿಯಲ್ಲಿ ವಾಸವಿದ್ದ ವಿದ್ಯಾರ್ಥಿಗಳು ಭದ್ರತಾ ಸಿಬ್ಬಂದಿಗೆ ಮಾಹಿತಿ ನೀಡಿದ್ದರು.

ಪಂಜಾಬ್ ರೈತರಿಂದ ಇಂದು ದೆಹಲಿ ಚಲೋ

ನವದೆಹಲಿ: ಡಿಸೆಂಬರ್ 6ರಂದು ಪಂಜಾಬ್ ರೈತರ ದೆಹಲಿ ಚಲೋ ಮೆರವಣಿಗೆ ನಡೆಯಲಿದ್ದು, ಸಿಂಘು ಗಡಿಯಲ್ಲಿ ಯಾವುದೇ ಪರಿಸ್ಥಿತಿಯನ್ನು ನಿಭಾಯಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ದೆಹಲಿ ಪೊಲೀಸರು ಗುರುವಾರ ಹೇಳಿದ್ದಾರೆ. ಆದಾಗ್ಯೂ, ಸಿಂಘು ಗಡಿಯಲ್ಲಿ ಹೆಚ್ಚುವರಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಾಷ್ಟ್ರ ರಾಜಧಾನಿಯತ್ತ ರೈತರ ಜಾಥಾಗೆ ಮುಂಚಿತವಾಗಿ ದೆಹಲಿ–ಚಂಡೀ ಗಢ ಹೆದ್ದಾರಿಯ ಸಿಂಘು ಗಡಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪೊಲೀಸರನ್ನು ನಿಯೋಜಿಸಲಿದ್ದೇವೆ. ಪರಿಸ್ಥಿತಿಯನ್ನು ವಿಶ್ಲೇಷಿಸುತ್ತಿದ್ದೇವೆ ಮತ್ತು ರೈತರ ಚಲನವಲನಗಳ ಬಗ್ಗೆ ನಮಗೆ ಯಾವುದೇ ಗುಪ್ತಚರ ಮಾಹಿತಿ ಸಿಕ್ಕರೆ, ಅದಕ್ಕೆ ಅನುಗುಣವಾಗಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಸುದ್ದಿ ಸಂಸ್ಥೆಯೊಂದಕ್ಕೆ ತಿಳಿಸಿದ್ದಾರೆ.

{ ಯೋಗಿ ಆದಿತ್ಯನಾಥ } ಉತ್ತರ ಪ್ರದೇಶ ಸಿಎಂ

ಅಯೋಧ್ಯೆ ಹಾಗೂ ಸಂಭಲ್‌ನಲ್ಲಿ 500 ವರ್ಷಗಳ ಹಿಂದೆ ಮೊಘಲ್ ದೊರೆ ಬಾಬರ್‌ನ ಸೇನಾಧಿಪತಿ ಏನು ಮಾಡಿದ್ದನೋ ಅದೇ ಸ್ವರೂಪದ, ಅದೇ ಉದ್ದೇಶದ ಘಟನೆಗಳು ಬಾಂಗ್ಲಾದೇಶದಲ್ಲಿಯೂ ನಡೆಯುತ್ತಿವೆ.

ಮುಂಬೈನ ಆಜಾದ್ ಮೈದಾನದಲ್ಲಿ ಬೃಹತ್ ಸಮಾರಂಭ | ಮೋದಿ ಸೇರಿ ಹಲವು ಕೇಂದ್ರ ನಾಯಕರ ಉಪಸ್ಥಿತಿ

ಫಡ್ನವಿಸ್ ಸಿಎಂ; ಶಿಂಧೆ, ಪವಾರ್ ಡಿಸಿಎಂ

ಮುಂಬೈ: ಮಹಾರಾಷ್ಟ್ರದ ಹೊಸ ಮುಖ್ಯಮಂತ್ರಿಯಾಗಿ ದೇವೇಂದ್ರ ಫಡ್ನವಿಸ್ ಗುರುವಾರ ಸಂಜೆ ಪ್ರಮಾಣವಚನ ಸ್ವೀಕರಿಸಿದರು. ಶಿವಸೇನೆಯ (ಶಿಂಧೆ ಬಣ) ಮುಖ್ಯಸ್ಥ ಏಕನಾಥ್ ಶಿಂಧೆ, ಎನ್‌ಸಿಪಿ ಮುಖ್ಯಸ್ಥ ಅಜಿತ್ ಪವಾರ್ ಅವರು ಉಪ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು.



ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗಿ ಸುಮಾರು ಎರಡು ವಾರಗಳ ನಂತರ ಗುರುವಾರ ಸಂಜೆ ದಕ್ಷಿಣ ಮುಂಬೈನ ಆಜಾದ್ ಮೈದಾನದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರು ಮುಖ್ಯಮಂತ್ರಿ ಮತ್ತು ಉಪಮಂತ್ರಿ ಗಳಿಗೆ ಅಧಿಕಾರದ ಗೌಪ್ಯತೆಯ ಪ್ರಮಾಣವಚನ ಬೋಧಿಸಿದರು.

ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ನಿರ್ಮಲಾ ಸೀತಾರಾಮನ್, ಜ್ಯೋತಿರಾದಿತ್ಯ ಸಿಂಧಿಯಾ, ಶಿವರಾಜ್ ಸಿಂಗ್ ಚೌಹಾಣ್, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮತ್ತು ಎನ್‌ಡಿಎ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು, ಕೇಂದ್ರ ಸಚಿವರು, ಎನ್‌ಡಿಎ ನಾಯಕರು, ಪ್ರಮುಖ ನಟರು, ಎಲ್ಲಾ ಪಕ್ಷಗಳ ಮುಖಂಡರು ಉಪಸ್ಥಿತರಿದ್ದರು.

ಬಾಲಿವುಡ್ ನಟರಾದ ಶಾರುಖ್ ಖಾನ್, ಸಲ್ಮಾನ್ ಖಾನ್, ರಣಬೀರ್ ಕಪೂರ್ ಮತ್ತು ರಣವೀರ್ ಸಿಂಗ್, ಮಾಜಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್, ಕೈಗಾರಿಕೋದ್ಯಮಿಗಳಾದ ಮುಖೇಶ್ ಅಂಬಾನಿ ಮತ್ತು ಗೌತಮ್ ಅದಾನಿ ಸೇರಿದಂತೆ ಪ್ರಮುಖ ಸೆಲೆಬ್ರಿಟಿಗಳೂ ಸಹ ಸಮಾರಂಭಕ್ಕೆ ಸಾಕ್ಷಿಯಾದರು. ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಕಾರ್ಯಕರ್ತರು ಕೂಡಾ ಆಗಮಿಸಿದ್ದರು.

ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮಕ್ಕೂ ಮುನ್ನ ಸಂಗೀತ ಸಂಯೋಜಕ ಅಜಯ್ ಅತುಲ್ ಅವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ದೇವೇಂದ್ರ ಫಡ್ನವೀಸ್, ಏಕನಾಥ್ ಶಿಂಧೆ, ಅಜಿತ್ ಪವಾರ್ ವೇದಿಕೆಗೆ ಆಗಮಿಸುತ್ತಿದ್ದಂತೆ ಕಾರ್ಯಕರ್ತರ ಹರ್ಷೋದ್ಗಾರ ಮುಗಿಲುಮುಟ್ಟಿತ್ತು. ಪೊಲೀಸ್ ಬ್ಯಾಂಡ್, ರಾಷ್ಟ್ರಗೀತೆಯೊಂದಿಗೆ ಪ್ರಮಾ ಣವಚನ ಸ್ವೀಕಾರ ಸಮಾರಂಭ ಆರಂಭವಾಯಿತು.

3ನೇ ಬಾರಿಗೆ ಸಿಎಂ ಆಗಿ ಫಡ್ನವೀಸ್ ಪ್ರಮಾಣ: ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿ ದೇವೇಂದ್ರ ಫಡ್ನವಿಸ್ ಅವರು ಮೂರನೇ ಬಾರಿ ಪ್ರಮಾಣವಚನ ಸ್ವೀಕರಿಸಿದರು. ಮೊದಲ ಬಾರಿಗೆ ಪೂರ್ಣ ಅವಧಿಗೆ ಮುಖ್ಯಮಂತ್ರಿ ಯಾಗಿದ್ದರು. ಅಲ್ಲದೇ 44ನೇ ವಯಸ್ಸಿಗೇ ಸಿಎಂ ಹುದ್ದೆ ಅಲಂಕರಿಸಿದ ವ್ಯಕ್ತಿ ಎಂಬ ಗೌರವಕ್ಕೂ ಪಾತ್ರರಾಗಿದ್ದರು. ಫಡ್ನವಿಸ್ ತಮ್ಮ ಎರಡನೇ ಅವಧಿಯಲ್ಲಿ ಕೇವಲ ಮೂರು ದಿನಗಳ ಕಾಲ ಮಾತ್ರ ಅಧಿಕಾರದಲ್ಲಿದ್ದರು. ರಾಜಕೀಯ ಕಾರಣಗಳಿಂದಾಗಿ ಅವರು ರಾಜೀನಾಮೆ ನೀಡಬೇಕಾಗಿತ್ತು, ಬಳಿಕ ಏಕನಾಥ್ ಶಿಂಧೆ ನೇತೃತ್ವದ ಸಮ್ಮಿಶ್ರ ಸರಕಾರದಲ್ಲಿ ಫಡ್ನವೀಸ್ ಉಪಮುಖ್ಯಮಂತ್ರಿಯಾಗಿ ಮುಂದುವರಿದಿದ್ದರು.



ಪ್ರಮಾಣ ವಚನ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ , ದೇವೇಂದ್ರ ಫಡ್ನವಿಸ್, ಏಕನಾಥ್ ಶಿಂಧೆ ಮತ್ತು ಅಜಿತ್ ಪವಾರ್

ಚಕ್ರವ್ಯೂಹ ಭೇದಿಸಿದ ದೇವೇಂದ್ರ

ಆಘಾತಗಳು, ಒಡಕುಗಳು ಮತ್ತು ಅತ್ಯುನ್ನತ ತ್ಯಾಗದ ನಂತರ, ಭಾರತೀಯ ಜನತಾ ಪಕ್ಷದ ದೇವೇಂದ್ರ ಫಡ್ನವಿಸ್ ಅವರು ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದಾರೆ. 2014, 2019ರಲ್ಲಿ ಮೋದಿ ಅಲೆಯ ನಡುವೆ ಬಿಜೆಪಿ–ಶಿವಸೇನೆ ಮೈತ್ರಿಕೂಟದ ಬಹುಮತದ ಮೇಲೆ ಫಡ್ನವೀಸ್ ಸಿಎಂ ಕುರ್ಚಿಯ ಆಸೆಗೆ ಒಂದು ವಿಶಿಷ್ಟ ಸವಾಲನ್ನು ಒಡ್ಡಿತ್ತು, ಆದರೆ ಮತ್ತೆ ಮಹಾರಾಷ್ಟ್ರ ಸಿಎಂ ಗಾದಿಗೇರಿದ ಫಡ್ನವಿಸ್ 'ನಾನು ವಾಪಸ್ ಬರುತ್ತೇನೆ' ಎಂದು 2019ರಲ್ಲಿ ನೀಡಿದ್ದ ಭರವಸೆ ಯನ್ನು ಪಾಲಿಸಿದಂತಾಗಿದೆ. ಐದು ವರ್ಷಗಳ ನಂತರ, ರಾಜ್ಯದಲ್ಲಿ ಎರಡು ಪ್ರಮುಖ ಪಕ್ಷಗಳಲ್ಲಿ ವಿಭಜನೆಯ ನಂತರ, ಲೋಕಸಭೆಯ ಹಿನ್ನಡೆ ಮತ್ತು 2024ರ ವಿಧಾನಸಭಾ ಚುನಾವಣೆಯಲ್ಲಿ ಅವರ ಮೈತ್ರಿಗೆ ಅಭೂತಪೂರ್ವ ಜಯಗಳ ನಂತರ, ಫಡ್ನವಿಸ್ ಅವರು ತಮ್ಮನ್ನು ತಾವು 'ಆಧುನಿಕ–ದಿನದ ಅಭಿಮನ್ಯು' ಎಂದು ಕರೆದಿದ್ದನ್ನು ಸಾಬೀತುಪಡಿಸಿದ್ದಾರೆ. ಪ್ರಚಾರದ ಸಮಯದಲ್ಲಿ, ಫಡ್ನವಿಸ್‌ರವರು 'ಚಕ್ರವ್ಯೂಹವನ್ನು ಭೇದಿಸಿ ಹಿಂತಿರುಗಬ ಹುದು' ಎಂದು ಬಿಜೆಪಿಯ ಕಾರ್ಯಕರ್ತರು ಹೇಳುತ್ತಿದ್ದರು. ಅವಿಭಜಿತ ಶಿವಸೇನೆ–ಬಿಜೆಪಿಗೆ ಅನುಕೂಲಕರ ಬಹುಮತದೊಂದಿಗೆ 2014ರಲ್ಲಿ, ಕಾಂಗ್ರೆಸ್ ಯುಗದ ಹಗರಣಗಳನ್ನು ಎತ್ತಿ ಹಿಡಿದು ವಿರೋಧ ಪಕ್ಷದ ನಾಯಕನಾಗಿ ಜನಪ್ರಿಯರಾಗಿದ್ದ ಫಡ್ನವೀಸ್ ಅವರನ್ನು ಸಿಎಂ ಮಾಡಲಾಯಿತು.

ರಾಜ್ಯಸಭೆಯಲ್ಲಿ ಹೆಚ್‌ಡಿಡಿ ಮನವಿ

ಮೇಕೆದಾಟು ಯೋಜನೆ ಶೀಘ್ರ ಅನುಮತಿ ನೀಡಿ

ದೆಹಲಿ: ಕರ್ನಾಟಕ ರಾಜ್ಯದಲ್ಲಿ ಆಡಳಿತ ನಡೆಸಿದ ಎಲ್ಲಾ ಸರ್ಕಾರಗಳು ಮೇಕೆದಾಟು ಯೋಜನೆಗಾಗಿ ಕೆಲಸ ಮಾಡಿವೆ, ಆದರೆ ಇಲ್ಲಿಯವರೆಗೂ ಯಶಸ್ಸು ಸಿಕ್ಕಿಲ್ಲ. ಯೋಜನೆಗೆ ಅನುಮತಿ ನೀಡುವಂತೆ ಕೇಂದ್ರಕ್ಕೆ ಕರ್ನಾಟಕ ಸರ್ಕಾರ ಪ್ರಸ್ತಾವನೆ ಸಲ್ಲಿಸಿದೆ. ಕೇಂದ್ರ ಸರ್ಕಾರ ಆದಷ್ಟು ಬೇಗ ಒಪ್ಪಿಗೆ ನೀಡಬೇಕು ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಕೇಂದ್ರ ಸರಕಾರವನ್ನು ಕೋರಿದರು.

ರಾಜ್ಯಸಭೆಯಲ್ಲಿ ಗುರುವಾರ ಮಾತನಾಡಿದ ಅವರು ಬೆಂಗಳೂರಿನ ನೀರಿನ ಬವಣೆ ನೀಗಿಸಬೇಕಾದರೆ ಮೇಕೆದಾಟು ಯೋಜನೆಗೆ ಅನುಮತಿ ಸಿಗಬೇಕಿದೆ. ಎಲ್ಲಾ ರಾಜಕೀಯ ಬದಿಗಿಟ್ಟು ಈ ಯೋಜನೆಗೆ ಬೆಂಬಲ ಕೊಡಬೇಕಿದೆ ಎಂದೂ ಅವರು ಮನವಿ ಮಾಡಿದರು.

ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದ್ದು, ಟ್ಯಾಂಕರ್ ಮಾಫಿಯಾ ಜನರನ್ನು ಸುಲಿಗೆ ಮಾಡುತ್ತಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು. ರಾಜ್ಯಸಭೆಯಲ್ಲಿ ಈ ಬಗ್ಗೆ ಮಾತನಾಡಿದ ಅವರು, ದೇಶದ ಪ್ರಮುಖ ನಗರಗಳಲ್ಲಿ ಒಂದಾಗಿರುವ, ಭಾರತದ ಮಾಹಿತಿ ತಂತ್ರಜ್ಞಾನ ರಾಜಧಾನಿ ಆಗಿರುವ ಬೆಂಗಳೂರು ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆದರು. ಈ ಹಿನ್ನೆಲೆಯಲ್ಲಿ ಎಲ್ಲರೂ ರಾಜಕೀಯ ಬದಿಗಿಟ್ಟು ಮೇಕೆದಾಟು ಯೋಜನೆಗೆ ಬೆಂಬಲ ನೀಡಬೇಕಿದೆ. ಈ ಯೋಜನೆ ಕಾರ್ಯಗತವಾದರೆ ಈ ಸಮಸ್ಯೆಗೆ ಮುಕ್ತಿ ದೊರೆಯಲಿದೆ ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ತಿಳಿಸಿದರು.

ಟ್ಯಾಂಕರ್ ಮಾಫಿಯಾ

1.45 ಕೋಟಿ ಜನಸಂಖ್ಯೆ ಇರುವ ಬೆಂಗಳೂರಿಗೆ 16 ಟಿಎಂಸಿ ಅಡಿಯಷ್ಟು ಕಾವೇರಿ ನೀರನ್ನು ಪೂರೈಕೆ ಮಾಡಲಾಗುತ್ತಿದೆ. ಆದರೆ ನಗರದ ಬೇಡಿಕೆಗೆ ಹೋಲಿಸಿದರೆ ಈ ನೀರು ಬಹಳ ಕಡಿಮೆ. ಇದನ್ನೇ ಅಸ್ತ್ರ ಮಾಡಿಕೊಂಡಿರುವ ಟ್ಯಾಂಕರ್ ಮಾಫಿಯಾ ಜನರನ್ನು ಸುಲಿಗೆ ಮಾಡುತ್ತಿದೆ. ಒಂದು ಟ್ಯಾಂಕರ್ ನೀರಿಗೆ ರು.3000 ತೆರಬೇಕಿದೆ. ಇದು ಎಷ್ಟು ಅನ್ಯಾಯ ಎಂದರೆ ಕೇವಲ ನಾಲ್ಕು ಜನರಿರುವ ಒಂದು ಕುಟುಂಬ ಪ್ರತೀ ತಿಂಗಳು ನೀರಿಗಾಗಿ ರು.20,000 ಖರ್ಚು ಮಾಡಬೇಕಿದೆ, ಇದು ಕಳವಳಕಾರಿ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಪುಷ್ಪಾ–2 ನೂಕು ನುಗ್ಗಲು: ಮಹಿಳೆ ಸಾವು

ಹೈದರಾಬಾದ್: ಗುರುವಾರ ಬೆಳಗ್ಗೆ ಬಿಡುಗಡೆಯಾದ ಪುಷ್ಪಾ–2 ಸಿನಿಮಾ ವೀಕ್ಷಣೆ ವೇಳೆ ಇಲ್ಲಿನ ಸಂಧ್ಯಾ ಥಿಯೇಟರ್‌ನಲ್ಲಿ ಕಾಲ್ತುಳಿತ ಉಂಟಾಗಿದ್ದು, ಮಹಿಳೆಯೊಬ್ಬರು ಸಾವನ್ನಪ್ಪಿದ್ದು, ಆಕೆಯ ಮಗನ ಸ್ಥಿತಿ ಗಂಭೀರವಾಗಿದೆ. ಮೃತ ಮಹಿಳೆಯ ಕುಟುಂಬಕ್ಕೆ ನೆರವು ನೀಡುವುದಾಗಿ ಸಿನಿಮಾದ ನಾಯಕ ನಟ ಅಲ್ಲು ಅರ್ಜುನ್ ಅವರ ತಂಡ ಘೋಷಿಸಿದೆ. ಸಂಧ್ಯಾ ಥಿಯೇಟರ್ ನಟ ಅಲ್ಲು ಅರ್ಜುನ್ ಸೇರಿದಂತೆ ಚಿತ್ರತಂಡವು ಭೇಟಿ ನೀಡುತ್ತಿದೆ ಎಂಬ ಸುದ್ದಿ ತಿಳಿದು ಹೆಚ್ಚಿನ ಅಭಿಮಾನಿಗಳು ಥಿಯೇಟರ್‌ನಲ್ಲಿ ಜಮಾಯಿಸಿದ್ದರು. ಈ ವೇಳೆ, ಕಾಲ್ತುಳಿತ ಉಂಟಾಗಿದೆ. ಕಾಲ್ತುಳಿತದಲ್ಲಿ ದೇವತಿ (39)ಸಾವನ್ನಪ್ಪಿದ್ದಾರೆ. ಅವರ ಮಗ ಶ್ರೀತೇಜ್ (9) ಸ್ಥಿತಿಯೂ ಗಂಭೀರವಾಗಿದ್ದು, 78 ಗಂಟೆಗಳ ಕಾಲ ಏನನ್ನೂ ಹೇಳಲು ಸಾಧ್ಯವಿಲ್ಲ ಎಂದು ವೈದ್ಯರು ತಿಳಿಸಿದ್ದಾರೆ. ಪುಷ್ಪಾ–2 ಸಿನಿಮಾ ನಿರ್ಮಿಸಿರುವ ಸಂಸ್ಥೆ ಮೈತ್ರಿ ಮೂವೀಸ್ ಕೂಡ ಪ್ರತಿಕ್ರಿಯಿಸಿದ್ದು 'ದುರಂತ ಘಟನೆಯಿಂದ ನಮಗೆ ತೀವ್ರ ದು:ಖ ತಂದಿದೆ, ಆ ಕುಟುಂಬ ಮತ್ತು ಚಿಕಿತ್ಸೆಗೊಳಗಾಗಿರುವ ಮಗುವಿಗಾಗಿ ನಾವು ಪ್ರಾರ್ಥಿಸುತ್ತೇವೆ. ಈ ಕಠಿಣ ಸಂದರ್ಭದಲ್ಲಿ ನಾವು ಅವರೊಂದಿಗೆ ನಿಲ್ಲುತ್ತೇವೆ, ಸಾಧ್ಯವಿರುವ ಎಲ್ಲ ಬೆಂಬಲ ಒದಗಿಸುತ್ತೇವೆ' ಎಂದು ಹೇಳಿದೆ.

ಅಲ್ಲು ಅರ್ಜುನ್–ಥಿಯೇಟರ್ ಮಾಲಿಕರ ವಿರುದ್ಧ ಕೇಸ್

ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ಅಲ್ಲು ಅರ್ಜುನ್ ಹಾಗೂ ಥಿಯೇಟರ್ ಮಾಲಿಕರ ವಿರುದ್ಧ ಕೇಸ್ ದಾಖಲಿಸಲಾಗಿದೆ. ಚಿತ್ರತಂಡ ಆಗಮಿಸುವ ಬಗ್ಗೆ ಚಿತ್ರಮಂದಿರ ಆಡಳಿತ ಮಂಡಳಿ ಯಾವುದೇ ಮಾಹಿತಿ ನೀಡಿಲ್ಲ. ನಟ ಅಲ್ಲು ಅರ್ಜುನ್ ಏಕಾಏಕಿ ಯಾವುದೇ ಮುನ್ಸೂಚನೆ ಇಲ್ಲದೆಯೇ ಆಗಮಿಸಿದ್ದರು. ಇದರಿಂದ ಅವರ ನೋಡಲು ನೂಕು ನುಗ್ಗಲು ಉಂಟಾಗಿತ್ತು. ಅಲ್ಲದೇ ನಟ–ನಟಿಯರ ಆಗಮನ ಮತ್ತು ನಿರ್ಗಮನಕ್ಕೆ ಪ್ರತ್ಯೇಕ ವ್ಯವಸ್ಥೆಯನ್ನೂ ಮಾಡಿಲ್ಲ. ಚಿತ್ರಮಂದಿರದಲ್ಲಿ ಯಾವುದೇ ಭದ್ರತಾ ವ್ಯವಸ್ಥೆ ಇರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಅಡಕೆ ಸಮಗ್ರ ಅಧ್ಯಯನಕ್ಕೆ ಕೇಂದ್ರ ತಂಡ

ದೆಹಲಿ: ಅಡಿಕೆ ಸೇವನೆಯಿಂದ ಆರೋಗ್ಯದ ಮೇಲಾಗುವ ಪರಿಣಾಮಗಳ ಕುರಿತು ಸಾಕ್ಷ್ಯಾಧಾರಿತ ಅಧ್ಯಯನ ನಡೆಸಲು ಕೇಂದ್ರ ಸರಕಾರ ನಿರ್ಧರಿಸಿದೆ. ಈ ಅಧ್ಯಯನವು ವಿವಿಧ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಂಶೋಧನಾ ಸಂಸ್ಥೆಗಳನ್ನು ಒಳಗೊಂಡಿರುತ್ತದೆ.



'ಈ ಅಧ್ಯಯನವು ವೈದ್ಯಕೀಯ ಸಂಶೋಧನೆಯೊಂದಿಗೆ ವ್ಯವಹರಿಸುವ ಸುಮಾರು 16 ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಏಜೆನ್ಸಿಗಳನ್ನು ಒಟ್ಟುಗೂಡಿಸುತ್ತದೆ, ಇದರಲ್ಲಿ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಕೌನ್ಸಿಲ್ ಫಾರ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್–ಸೆಂಟರ್ ಫಾರ್ ಸೆಲ್ಯುಲಾರ್ ಮತ್ತು ಮಾಲಿಕ್ಯುಲರ್ ಬಯಾಲಜಿ, ಭಾರತೀಯ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮತ್ತು ಇತರ ಸಂಸ್ಥೆಗಳು ಇರಲಿವೆ. ಮಾನವನ ಆರೋಗ್ಯದ ಮೇಲೆ ಅಡಿಕೆಯ ಪರಿಣಾಮದ ಬಗ್ಗೆ ವಿವರವಾದ ಸಂಶೋಧನೆ ಹಾಗೂ ಅಧ್ಯಯನವನ್ನು ಈ ಸಂಸ್ಥೆಗಳು ನಡೆಸಲಿದೆ' ಎಂದು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವ ಭಾಗೀರಥ್ ಚೌಧರಿ ಲೋಕಸಭೆಯಲ್ಲಿ ಲಿಖಿತ ರೂಪದಲ್ಲಿ ಮಾಹಿತಿ ನೀಡಿದ್ದಾರೆ.

ಕಾಸರಗೋಡು ಸಂಸದ ರಾಜಮೋಹನ್ ಉನ್ನಿಥಾನ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಅಡಿಕೆಯಲ್ಲಿ ಹಲವಾರು ಆಲ್ಕಲಾಯ್ಡ್‌ಗಳಿರುವುದರಿಂದ ಆಯುರ್ವೇದ ಮತ್ತು ಪಶುವೈದ್ಯಕೀಯ ಔಷಧಿಗಳಲ್ಲಿ ಬಳಕೆ ಇದೆ ಎಂದಿದ್ದಾರೆ. ಅಡಿಕೆ ಕೃಷಿಯ ಮೇಲೆ ತೇವಾಂಶದ ಪ್ರಭಾವದ ಕುರಿತು ಶಿವಮೊಗ್ಗ ಸಂಸದ ಬಿವೈ ರಾಘವೇಂದ್ರ ಪ್ರಶ್ನೆಗೆ ಉತ್ತರಿಸಿದ ಕೃಷಿ ರಾಜ್ಯ ಸಚಿವ ರಾಮನಾಥ್ ಠಾಕೂರ್, ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಅಡಿಕೆಗಾಗಿ 7% ಗರಿಷ್ಠ ತೇವಾಂಶದ ಅಗತ್ಯವನ್ನು ಪರಿಶೀಲಿಸಲು ಯಾವುದೇ ಪರಿಣಾಮದ ಮೌಲ್ಯಮಾಪನವನ್ನು ನಡೆಸಿಲ್ಲ ಎಂದು ಹೇಳಿದರು.

ಕೇಂದ್ರಕ್ಕೆ ಪತ್ರ

ಇತ್ತೀಚೆಗೆ (ಕ್ಯಾಂಪ್ಕೊ) ಲಿಮಿಟೆಡ್ ಅಡಿಕೆಯನ್ನು ಕ್ಯಾನ್ಸರ್ ಕಾರಕ ಎಂದು ಡಬ್ಲ್ಯುಎಚ್‌ಒ ವರ್ಗೀಕರಿಸುವುದರ ವಿರುದ್ಧ ಮಧ್ಯಪ್ರವೇಶಿಸುವಂತೆ ಕೇಂದ್ರಕ್ಕೆ ಪತ್ರ ಬರೆದಿತ್ತು.

ಸಂಭಾಲ್ ಗಲಭೆ: 200 ಆರೋಪಿಗಳ ಪೋಸ್ಟರ್

ಲಖನೌ: ನವೆಂಬರ್ 24 ರಂದು ಉತ್ತರ ಪ್ರದೇಶದ ಸಂಭಾಲ್‌ನಲ್ಲಿ ನಡೆದ ಹಿಂಸಾ ಚಾರಕ್ಕೆ ಸಂಬಂಧಿಸಿದಂತೆ ಆರೋಪಿಗಳ ಫೋಟೋವನ್ನು ಪ್ರಕಟಿಸಲಾಗುವುದು ಎಂದು ಸಂಭಾಲ್ ಜಿಲ್ಲಾ ಮ್ಯಾಜಿಸ್ಟ್ರೇಟ್ ರಾಜೇಂದರ್ ಪೆನ್ಸಿಯಾ ಹೇಳಿದ್ದಾರೆ. ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿದ ಅವರು ಈಗಾಗಲೇ ಗಲಭೆಗೆ ಸಂಬಂಧಿಸಿದಂತೆ 400ಕ್ಕೂ ಹೆಚ್ಚು ಜನರನ್ನು ಗುರುತಿಸಲಾಗಿದ್ದು, ಅವರ ಫೋಟೋ ಇರುವ ಪೋಸ್ಟರ್‌ಗಳನ್ನೂ ವಿನ್ಯಾಸ ಮಾಡಲಾಗುತ್ತಿದೆ. ಪೋಸ್ಟರ್ ತಯಾರಾದ ನಂತರ ಗೋಡೆ ಮೇಲೆ ಅಂಟಿಸಲಾಗುವುದು ಎಂದು ಹೇಳಿದ್ದಾರೆ. ಹಿಂಸಾಚಾರದಲ್ಲಿ ಭಾಗವಹಿಸಿದ್ದ 32 ಜನರನ್ನು ಈವರೆಗೆ ಬಂಧಿಸಲಾಗಿದೆ. ಉತ್ತರ ಪ್ರದೇಶ ಸರ್ಕಾರ ನವೆಂಬರ್ 27ರಂದು ಸಂಭಾಲ್ ಹಿಂಸಾಚಾರದಲ್ಲಿ ಭಾಗಿಯಾಗಿರುವವರು ಸಾರ್ವಜನಿಕ ಆಸ್ತಿಗೆ ಹಾನಿಯನ್ನು ಪಾವತಿಸುವಂತೆ ಮತ್ತು ಸಾರ್ವಜನಿಕ ಗೋಡೆಗಳ ಮೇಲೆ ಅವರ ಚಿತ್ರಗಳನ್ನು ಪ್ರದರ್ಶಿಸುವಂತೆ ಹೇಳಿತ್ತು. ಸಂಭಾಲ್ ಪೊಲೀಸರು ಈಗಾಗಲೇ ಹಿಂಸಾಚಾ ರದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಹಲವು ವ್ಯಕ್ತಿಗಳ ಫೋಟೋಗಳನ್ನು ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ಈಗಾಗಲೇ 9 ವ್ಯಕ್ತಿಗಳನ್ನು ಗುರು ತಿಸಲಾಗಿದ್ದು, ಉಳಿದ ವ್ಯಕ್ತಿಗಳನ್ನು ಪತ್ತೆ ಮಾಡಲಾಗುತ್ತಿದೆ. ಮೊಘಲರ ಕಾಲದ ಮಸೀದಿಯೊಂದರ ಸಮೀಕ್ಷೆಯ ವೇಳೆ ಸಂಭಾಲ್‌ನಲ್ಲಿ ಭಾರೀ ಹಿಂಸಾಚಾರ ಸಂಭವಿಸಿತ್ತು. ಆ ಘಟನೆಯಲ್ಲಿ ನಾಲ್ವರು ಮೃತಪಟ್ಟಿದ್ದರೆ ಹಲವು ಪೊಲೀಸರು ಸೇರಿ ಅನೇಕರು ಗಾಯಗೊಂಡಿದ್ದರು. ಮಸೀದಿಯನ್ನು ಮೂಲತಃ ಹರಿಹರ ದೇವಸ್ಥಾನದ ಸ್ಥಳದಲ್ಲಿ ನಿರ್ಮಿಸಲಾಗಿದೆ ಎಂದು ವಕೀಲರೊಬ್ಬರು ಸ್ಥಳೀಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಆಂಧ್ರದ ಶ್ರೀಹರಿಕೋಟಾದಿಂದ ಯಶಸ್ವಿ ಉಡಾವಣೆ | 2 ವರ್ಷಗಳ ಕಾಲ ಸೂರ್ಯನ ಅಧ್ಯಯನ

ಪ್ರೋಬಾ–3 ನೌಕೆ: ಕೃತಕ ಸೂರ್ಯಗ್ರಹಣ ಸೃಷ್ಟಿಗೆ ಇಸ್ರೋ ಸಾಹಸ

ಶ್ರೀಹರಿಕೋಟಾ: ಜಾಗತಿಕ ಬಾಹ್ಯಾಕಾಶ ಆವಿಷ್ಕಾರ ಹಾಗೂ ಸಹಯೋಗಕ್ಕೆ ಕೈಜೋಡಿಸಿರುವ ಭಾರತದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ –ಇಸ್ರೋ, ಗುರುವಾರ ಯುರೋಪಿಯನ್ ಬಾಹ್ಯಾಕಾಶ ಸಂಸ್ಥೆಯ(ಇಎಸ್‌ಎ) ಪ್ರೋಬಾ–3 ನೌಕೆಯನ್ನು ಯಶಸ್ವಿಯಾಗಿ ನಭಕ್ಕೆ ಹಾರಿಸಿದೆ. ಇದು ಇಸ್ರೋದ ವಾಣಿಜ್ಯ ಬಾಹ್ಯಾಕಾಶ ಮಿಷನ್ ಆಗಿದ್ದು, ಸಂಜೆ 4 ಗಂಟೆ 4 ನಿಮಿಷಕ್ಕೆ ಯಶಸ್ವಿ ಉಡಾವಣೆ ನಡೆದಿದೆ. 550 ಕೆ.ಜಿ ತೂಕದ ಪ್ರೋಬಾ 3 ಮಿಷನ್ ಅನ್ನು ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಬಾಹ್ಯಾಕಾಶ ನಿಲ್ದಾಣದಿಂದ ಪಿಎಸ್‌ಎಲ್‌ವಿ ಸಿ59 ರಾಕೆಟ್ ಮೂಲಕ ನಭಕ್ಕೆ ಹಾರಿಸಲಾಗಿದೆ. ಇಸ್ರೋದ ವಾಣಿಜ್ಯ ವಿಭಾಗವಾದ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಇದನ್ನು ನಿರ್ವಹಣೆ ಮಾಡಲಿದೆ.

ಈ ಕಾರ್ಯಾಚರಣೆಯನ್ನು ಆರಂಭದಲ್ಲಿ ಡಿಸೆಂಬರ್ 4ರಂದು ಸಂಜೆ 4:08ಕ್ಕೆ ಉಡಾವಣೆ ಮಾಡಬೇಕಿತ್ತು, ಆದರೆ ಉಪಗ್ರಹ ಪ್ರೊಪಲ್ಷನ್ ಸಿಸ್ಟಮ್‌ನಲ್ಲಿ ಅಸಂಗತತೆ ಪತ್ತೆಯಾದ ಕಾರಣಕ್ಕೆ ಇಎಸ್‌ಎ ಇದನ್ನು ಮುಂದೂಡಿಕೆ ಮಾಡುವ ನಿರ್ಧಾರ ಮಾಡಿತ್ತು. ಪ್ರಯತ್ನಿಸೋಣ ಎಂಬರ್ಥದ ಲ್ಯಾಟಿನ್ ಪದದ ನಂತರ ಪ್ರೋಬಾ (ಆನ್‌ಬೋರ್ಡ್ ಅನ್ಯಾಟಮಿ ಯೋಜನೆ) ಎಂದು ಹೆಸರಿಸಲಾಗಿದೆ. ಅಂದಾಜು 9.2 ಕೋಟಿ ರು. ವೆಚ್ಚದಲ್ಲಿ ಈ ನೌಕೆಯನ್ನು ಯುರೋಪಿಯನ್ ಸ್ಪೇಸ್ ಏಜೆನ್ಸಿ ನಿರ್ಮಾಣ ಮಾಡಿದೆ. ಇದು ಎರಡು ವರ್ಷಗಳ ಕಾಲ ಸೂರ್ಯನ ಅಧ್ಯಯನ ಮಾಡಲಿದೆ. ಈ ಎರಡು ವರ್ಷದ ಅವಧಿಯಲ್ಲಿ ಸರಿಸುಮಾರು 6 ಗಂಟೆಗಳ ಕಾಲ ಕೃತಕ ಸೂರ್ಯಗ್ರಹಣವನ್ನು ಈ ನೌಕೆ ಉಂಟು ಮಾಡಲಿದೆ. ಈ ನೌಕೆಯು ಭೂಮಿಯ ಸುತ್ತಲೂ ದೀರ್ಘಾಕಾರದ ವೃತ್ತದಲ್ಲಿ ಇರಿಸಲಾಗುತ್ತದೆ. ಭೂಮಿಗೆ ಅತ್ಯಂತ ಸನಿಹದ ಬಿಂದುವಿನಲ್ಲಿ ಅಂದರೆ ಪೆರಿಜೀ, ಭೂಮಿಯಿಂದ 600 ಕಿ.ಮೀ ದೂರದಲ್ಲಿದ್ದರೆ, ಭೂಮಿಯಿಂದ ಅತ್ಯಂತ ದೂರದ ಬಿಂದು ಅಂದರೆ ಅಪೋಜಿ 60, 530 ಕಿಲೋಮೀಟರ್ ದೂರದಲ್ಲಿರಲಿದೆ. ಕಳೆದ 10 ವರ್ಷಕ್ಕಿಂತ ಹೆಚ್ಚಿನ ಕಾಲ ಈ ನೌಕೆಗಾಗಿ ಯುರೋಪ್‌ನ 40ಕ್ಕೂ ಅಧಿಕ ಕಂಪನಿಗಳು ಕೆಲಸ ಮಾಡಿವೆ. ಇಎಸ್‌ಎನಲ್ಲಿರುವ 13 ರಾಷ್ಟ್ರಗಳು ಇದಕ್ಕೆ ವೆಚ್ಚ ಮಾಡಿವೆ.



ಪ್ರೋಬಾ 3: ಪ್ರಮುಖ ಅಂಶಗಳು

- ಪ್ರೋಬಾ 3 ಎರಡು ಉಪಗ್ರಹಗಳನ್ನು ಒಳಗೊಂಡಿರುತ್ತದೆ-ಕರೋನಾಗ್ರಾಫ್ (310 ಕೆಜಿ) ಮತ್ತು ಆಕಲ್ಟರ್ (240 ಕೆಜಿ), ಇದು ಒಂದರಿಂದ 150 ಮೀಟರ್ ದೂರದಲ್ಲಿ ಒಟ್ಟಿಗೆ ಹಾರುತ್ತದೆ.
- ಈ ಮಿಷನ್ ಕರೋನಾ ಕುರಿತು ಪ್ರಮುಖ ಒಳನೋಟಗಳನ್ನು ಒದಗಿಸುತ್ತದೆ, ಇದು ಇಖಂ ಪ್ರಕಾರ, ಸೂರ್ಯನಿಗಿಂತ ಬಿಸಿಯಾಗಿರುತ್ತದೆ ಮತ್ತು ಬಾಹ್ಯಾಕಾಶ ಹವಾಮಾನವನ್ನು ನಿರ್ಧರಿಸುತ್ತದೆ.
- ಎರಡೂ ಉಪಗ್ರಹಗಳಲ್ಲಿನ ಉಪಕರಣಗಳು ಸೌರ ರಿಮ್ ಅನ್ನು ತಲುಪಲು ಒಂದು ಸಮಯದಲ್ಲಿ ಸುಮಾರು ಆರು ಗಂಟೆಗಳನ್ನು ತೆಗೆದುಕೊಳ್ಳುತ್ತದೆ ಮತ್ತು ಭೂಮಿಯ ಸುತ್ತ 19 ಗಂಟೆಗಳ ಕಕ್ಷೆಯನ್ನು ಪ್ರಾರಂಭಿಸುತ್ತದೆ.
- 44.5 ಮೀಟರ್ ಎತ್ತರದ ರಾಕೆಟ್ ತನ್ನ ಅಪೇಕ್ಷಿತ ಕಕ್ಷೆಯನ್ನು ತಲುಪಲು 18 ನಿಮಿಷಗಳನ್ನು ತೆಗೆದುಕೊಳ್ಳುತ್ತದೆ.

ಪ್ಲಂಬರ್‌ಗೆ ಒಲಿದ 1.5 ಕೋಟಿ ರು. ಲಾಟರಿ

ಚಂಡೀಗಢ: ಹರಿಯಾಣದ ಸಿರ್ಸಾದಲ್ಲಿ ವಾಸಿಸುವ ಮಂಗಲ್ ಎಂಬಾತನಿಗೆ ಬರೋಬ್ಬರಿ ಲಾಟರಿಯಲ್ಲಿ 1.5 ಕೋಟಿ ರು. ಬಂದಿದ್ದು, ಕುಟುಂಬಸ್ಥರಲ್ಲಿ ಸಂತಸ ಮನೆ ಮಾಡಿದೆ. ಮಂಗಲ್ ಸಿಂಗ್ ಮತ್ತು ಅವರ ಕುಟುಂಬದವರು ಸಿಹಿ ಹಂಚಿ, ಡೋಲು ಬಾರಿಸುವ ಮೂಲಕ ಸಂತಸ ವ್ಯಕ್ತಪಡಿಸಿದ್ದಾರೆ. ಮಂಗಳವಾರ ರಾತ್ರಿ 8 ಗಂಟೆಗೆ ಲಾಟರಿ ಡ್ರಾ ನಡೆದಾಗ ಲಾಟರಿ ಮಾರಾಟಗಾರ ಲಲಿತ್ ಗುಂಬರ್ ಎನ್ನುವವರು ಮಂಗಲ್ ಸಿಂಗ್ ಅವರಿಗೆ ಕರೆ ಮಾಡಿ ಈ ವಿಷಯ ತಿಳಿಸಿದ್ದಾನೆ. ಒಂದೂವರೆ ಕೋಟಿ ರು. ಬಹುಮಾನ ಗೆದ್ದ ಖುಷಿಯಲ್ಲಿ ತನಗೆ ಮತ್ತು ಇಡೀ ಕುಟುಂಬಕ್ಕೆ ರಾತ್ರಿಯಿಡೀ ನಿದ್ದೆಯೇ ಬರಲಿಲ್ಲವೆಂದು ಹೇಳಿದ್ದಾನೆ.

ವೃತ್ತಿಯಲ್ಲಿ ಪ್ಲಂಬರ್ ಆಗಿ ಕೆಲಸ ಮಾಡುತ್ತಿದ್ದ ಮಂಗಲ್ ಕಳೆದ ನಾಲ್ಕು ವರ್ಷಗಳಿಂದ ಲಾಟರಿ ಖರೀದಿಸುತ್ತಿದ್ದರಂತೆ. ಪ್ರತಿ ಬಾರಿ ಲಲಿತ್ ಗುಂಬರ್ ಅವರಿಂದ ಖರೀದಿಸುತ್ತಿದ್ದು, ಈ ಬಾರಿಯೂ 200 ರೂ.ಗೆ ಖರೀದಿಸಿದ್ದರು. ಮಾಧ್ಯಮ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಿದ ಮಂಗಲ್, ತಾನು ಬಡ ಕುಟುಂಬದಿಂದ ಬಂದಿದ್ದು, ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ. ಲಾಟರಿ ಹಣದಲ್ಲಿ ಮೊದಲು ಮನೆ ಕಟ್ಟುತ್ತೇನೆ, ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಅಪೇಕ್ಷೆಯಿದೆ. ತನಗೆ ಐದು ವರ್ಷದ ಮಗಳಿದ್ದು, ಅವಳ ಭವಿಷ್ಯಕ್ಕಾಗಿ ಹಣ ಕೂಡಿಡಬೇಕಾಗಿದೆ ಎಂದೂ ಹೇಳಿದ್ದಾನೆ.

ಸ್ವರ್ಣ ಮಂದಿರದಲ್ಲಿ ಸೇವೆಗೆ ಮರಳಿದ ಸುಖಬೀರ್ ಸಿಂಗ್

ಚಂಡೀಗಢ: ಬುಧವಾರ ಅಮೃತಸರದ ಗೋಲ್ಡನ್ ಟೆಂಪಲ್‌ನ ಪ್ರವೇಶದ್ವಾರದಲ್ಲಿ ಶೂ ಪಾಲಿಷ್ ಮಾಡುತ್ತಿದ್ದ ಪಂಜಾಬ್ ಮಾಜಿ ಉಪ–ಮುಖ್ಯಮಂತ್ರಿ ಸುಖಬೀರ್ ಸಿಂಗ್ ಬಾದಲ್ ಮೇಲೆ ವ್ಯಕ್ತಿಯೊಬ್ಬ ಗುಂಡಿನ ದಾಳಿ ನಡೆಸಲು ಪ್ರಯತ್ನ ಪಟ್ಟಿದ್ದು, ಘಟನೆ ನಡೆದ ಮರುದಿನವೇ ಬಾದಲ್ ಮತ್ತೆ ತಮಗೆ ನೀಡಿದ್ದ ಶಿಕ್ಷೆಯನ್ನು ಪೂರ್ಣಗೊಳಿಸಲು ಸೇವಾ ಕಾರ್ಯಕ್ಕೆ ಮರಳಿದ್ದಾರೆ.

ಡಿ. 3ರಂದು ಸೇವೆಯಲ್ಲಿ ನಿರತರಾಗಿದ್ದ ಬಾದಲ್ ಮೇಲೆ ವ್ಯಕ್ತಿಯೊಬ್ಬ ಗುಂಡಿನ ದಾಳಿ ನಡೆಸಿದ್ದ. ಘಟನೆ ನಡೆದ ಮರುದಿನವೇ ಬಾದಲ್ ಮತ್ತೆ ಸೇವೆಗೆ ಮರಳಿದ್ದು, ಸೇವಾಕಾರ್ಯದಲ್ಲಿ ತೊಡಗಿ ದ್ದಾರೆ. ಝಡ್ ಪ್ಲಸ್ ಸೆಕ್ಯುರಿಟಿಯೊಂದಿಗೆ ರೂಪನಗರದಲ್ಲಿರುವ ತಖ್ತ್ ಕೇಸ್‌ಗಢ್ ಸಾಹಿಬ್‌ನಲ್ಲಿ ಮಾಜಿ ಉಪಮುಖ್ಯಮಂತ್ರಿ ಊಟದ ತಟ್ಟೆಗಳನ್ನು ತೊಳೆಯುತ್ತಿದ್ದಾರೆ. ದರ್ಬಾರ್ ಸಾಹಿಬ್ ಮತ್ತು ಫತೇಘರ್ ಸಾಹಿಬ್‌ನಲ್ಲಿ ತಲಾ ಎರಡು ದಿನಗಳ ಕಾಲ ಸೇವಾ ಕಾರ್ಯವನ್ನು ಮಾಡುವಂತೆ ಅಕಾಲ್ ತಖ್ತ್ ಆದೇಶ ನೀಡಿದೆ. ಘಟನೆಯ ನಂತರ ದರ್ಬಾರ್ ಸಾಹಿಬ್ ಸುತ್ತಮು ತ್ತಲಿನ ಪ್ರದೇಶಕ್ಕೆ ಬಿಗಿ ಭದ್ರತೆ ಒದಗಿ ಸಲಾಗಿದ್ದು, ದರ್ಬಾರ್ ಸಾಹಿಬ್ ಒಳಗೆ ಬರುವ ಭಕ್ತರನ್ನು ಸಂಪೂರ್ಣ ತಪಾಸಣೆಗೆ ಒಳಪಡಿಸಲಾಗುತ್ತಿದೆ.

ಛತ್ತೀಸ್‌ಗಢದಲ್ಲಿ ನಕ್ಸಲ್ ದಾಳಿಗೆ ಯೋಧ ಹುತಾತ್ಮ

ರಾಯ್‌ಪುರ: ಛತ್ತೀಸ್‌ಗಢದ ನಾರಾಯಣಪುರ ಜಿಲ್ಲೆಯಲ್ಲಿ ನಕ್ಸಲರೊಂದಿಗೆ ನಡೆದ ಎನ್‌ಕೌಂಟರ್‌ನಲ್ಲಿ ಜಿಲ್ಲಾ ರಿಸರ್ವ್ ಗಾರ್ಡ್‌ನ ಹೆಡ್ ಕಾನ್ಸ್‌ಟೇಬಲ್ ಹುತಾತ್ಮರಾಗಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಬುಜ್‌ಮದ್‌ನ ಸೋನ್ಪುರ್ ಮತ್ತು ಕೊಹ್ಕಮೆಟಾ ಪೊಲೀಸ್ ಠಾಣೆ ಪ್ರದೇಶಗಳ ಗಡಿ ಯಲ್ಲಿರುವ ಅರಣ್ಯದಲ್ಲಿ ಭದ್ರತಾ ಸಿಬ್ಬಂದಿಯ ಜಂಟಿ ತಂಡವು ನಕ್ಸಲ್ ವಿರೋಧಿ ಕಾರ್ಯಾಚರಣೆ ನಡೆಸು ತ್ತಿದ್ದ ವೇಳೆ ಗುಂಡಿನ ಚಕಮಕಿ ಪ್ರಾರಂಭವಾಯಿತು ಎಂದು ಅವರು ಹೇಳಿದ್ದಾರೆ.

ಜಿಲ್ಲಾ ರಿಸರ್ವ್ ಗಾರ್ಡ್ ಮತ್ತು ಗಡಿ ಭದ್ರತಾ ಪಡೆ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿತ್ತು. ನಕ್ಸಲರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಡಿಆರ್‌ಜಿ ನಾರಾಯಣಪುರದ ಹೆಡ್ ಕಾನ್ಸ್‌ಟೇಬಲ್ ಬೀರೇಂದ್ರ ಕುಮಾರ್ ಸೋರಿ (36) ಮೃತಪಟ್ಟಿದ್ದಾರೆ. ಸೋರಿ 2010ರಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಸೇರಿಕೊಂಡಿದ್ದರು. ನಕ್ಸಲ್ ವಿರೋಧಿ ಕಾರ್ಯಾಚರಣೆ ಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಅವರಿಗೆ 2018ರಲ್ಲಿ ಹೆಡ್ ಕಾನ್ಸ್‌ಟೇಬಲ್ ಹುದ್ದೆಗೆ ಮುಂಬಡ್ತಿ ನೀಡಲಾಗಿತ್ತು. ಮೃತದೇಹ ವನ್ನು ಕಾಡಿನಿಂದ ಹೊರಗೆ ತರಲಾಗುತ್ತಿದ್ದು, ಶೋಧ ಕಾರ್ಯಾಚರಣೆ ಮುಂದುವರಿದಿದೆ ಎಂದು ಮೂಲಗಳು ತಿಳಿಸಿವೆ.

ಯುಪಿಐ ಲೈಟ್: ಮಿತಿ ಏರಿಸಿದ ಆರ್‌ಬಿಐ

ದೆಹಲಿ: ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಯುಪಿಐ ಲೈಟ್ ವಾಲೆಟ್ ಮಿತಿಯನ್ನು ರು.5,000ಕ್ಕೆ ಮತ್ತು ಪ್ರತಿ ವಹಿವಾಟಿನ ಮಿತಿಯನ್ನು ರು.1,000ಕ್ಕೆ ಹೆಚ್ಚಿಸಿದೆ. ಪ್ರಸ್ತುತ ಆಫ್‌ಲೈನ್ ಪಾವತಿ ವಹಿವಾಟಿನ ಗರಿಷ್ಠ ಮಿತಿ ರು. 500 ಮತ್ತು ಪಾವತಿ ಸಾಧನದಲ್ಲಿನ ಆಫ್‌ಲೈನ್ ವಹಿವಾಟುಗಳ ಒಟ್ಟು ಮಿತಿಯು ಯಾವುದೇ ಸಮಯದಲ್ಲಿ ರು. 2,000 ಆಗಿದೆ.

ಆಫ್‌ಲೈನ್ ಮೋಡ್‌ನಲ್ಲಿ ಸಣ್ಣ ಮೌಲ್ಯದ ಡಿಜಿಟಲ್ ಪಾವತಿಗಳನ್ನು ಸುಲಭಗೊಳಿಸುವ ಉದ್ದೇಶದಿಂದ 2022ರ ಜನವರಿಯಲ್ಲಿ ನೀಡಲಾದ 'ಆಫ್‌ಲೈನ್ ಫ್ರೇಮ್‌ವರ್ಕ್' ಅನ್ನು ರಿಸರ್ವ್ ಬ್ಯಾಂಕ್ ಬುಧವಾರ ತಿದ್ದುಪಡಿ ಮಾಡಿದೆ. ಯುಪಿಐ ಲೈಟ್‌ಗೆ ವರ್ಧಿತ ಮಿತಿಗಳು ಪ್ರತಿ ವಹಿವಾಟಿಗೆ ರು.1,000 ಆಗಿರುತ್ತದೆ, ಯಾವುದೇ ಸಮಯದಲ್ಲಿ ರು.5,000 ಒಟ್ಟು ಮಿತಿಯಾಗಿರುತ್ತದೆ. ಇದಕ್ಕಾಗಿ ಯುಪಿಐ ಪಿನ್ ಅಥವಾ ದೃಢೀಕರಣದ ಅಗತ್ಯವಿರೋದಿಲ್ಲ ಎಂದು ರಿಸರ್ವ್ ಬ್ಯಾಂಕ್ ಸುತ್ತೋಲೆ ಹೇಳಿದೆ. ಇದರಿಂದಾಗಿ ಗ್ರಾಹಕರು ಯಾವುದೇ ಸಮಯದಲ್ಲಿ ಅವರ ಯುಪಿಐ ಲೈಟ್ ವ್ಯಾಲೆಟ್‌ನಲ್ಲಿ ರು. 5000 ಇರಿಸಿಕೊಳ್ಳಬಹುದು ಹಾಗೂ ಆ ವ್ಯಾಲೆಟ್‌ನಿಂದ ರು.ಯನ್ನು ಯಾವುದೇ ಸಮಯದಲ್ಲಿ ಪಾವತಿ ಮಾಡಬಹುದು.

ಸಮಾಚಾರ ಸಣ್ಣದಲ್ಲ

ಬಳ್ಳಾರಿ: ಮತ್ತೊಬ್ಬ ಬಾಣಂತಿ ಸಾವು

ಬಳ್ಳಾರಿ: ಜಿಲ್ಲಾಸ್ಪತ್ರೆಯಲ್ಲಿ ಬಾಣಂತಿಯರ ಸಾವಿನ ಸರಣಿ ಮುಂದುವರಿದಿದೆ. ಬಿಮ್ಸ್ ಆಸ್ಪತ್ರೆಯಲ್ಲಿ ಸಿಸೇರಿಯನ್ ಮಾಡಿಸಿಕೊಂಡ ಬಳಿಕ ಮತ್ತೊಬ್ಬ ಬಾಣಂತಿ ಗುರುವಾರ ಸಾವನ್ನಪ್ಪಿದ್ದಾರೆ. ಸುಮಯಾ (25) ಮೃತ ಬಾಣಂತಿ. ಈಕೆ ಕಳೆದ 23 ದಿನಗಳಿಂದ ಬಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಡಿ.5ರಂದು ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ. ಇದರೊಂದಿಗೆ ಮೃತ ಬಾಣಂತಿಯರ ಸಂಖ್ಯೆ 5ಕ್ಕೇರಿದೆ. ಸಿಸೇರಿಯನ್ ಮಾಡಿಸಿಕೊಂಡ ಬಳಿಕ ಸುಮಯಾ ಆರೋಗ್ಯದಲ್ಲಿ ಏರುಪೇರಾಗಿತ್ತು. ಹೀಗಾಗಿ ನವೆಂಬರ್ 12 ರಂದು ಸುಮಾಯ ಅವರನ್ನು ಬಿಮ್ಸ್‌ಗೆ ರವಾನೆ ಮಾಡಲಾಗಿತ್ತು. ಈ ನಡುವೆ ಕಿಡ್ನಿ ವೈಫಲ್ಯವಾಗಿ ಸತತ ಡಯಾಲಿಸಿಸ್ ಮಾಡಲಾಗಿತ್ತು. ಆದರೂ ಚಿಕಿತ್ಸೆ ಫಲಕಾರಿಯಾಗದೇ 23 ದಿನಗಳ ಬಳಿಕ ಸುಮಯಾ ಸಾವನ್ನಪ್ಪಿದ್ದಾರೆ.

ಹಸುಗೂಸು ಏಕಾಏಕೀ ಸಾವು!: ಗುರುವಾರ (ಡಿ.5) ಮಧ್ಯಾಹ್ನ ಬಿಮ್ಸ್ ಆಸ್ಪತ್ರೆಯಲ್ಲೇ ನವಜಾತ ಶಿಶುವೊಂದು ಸಾವನ್ನಪ್ಪಿದೆ. ಹೆರಿಗೆ ಬಳಿಕ ಆರೋಗ್ಯವಾಗಿದ್ದ ಮಗು ಏಕಾಏಕೀ ಮೃತಪಟ್ಟಿರುವ ಬೆನ್ನಲ್ಲೇ ಬಾಣಂತಿ ಸಾವನ್ನಪ್ಪಿರುವ ಘಟನೆ ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ.

ವಕ್ಫ್: ಇನ್ನಷ್ಟು ಕಡೆ ಯತ್ನಾಳ ಬಣ ಸಭೆ

ದೆಹಲಿ: ಮುಂದಿನ ಹಂತದ ವಕ್ಫ್ ಹೋರಾಟವನ್ನು ಬಳ್ಳಾರಿ, ವಿಜಯನಗರ, ಹಾವೇರಿ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ನಡೆಸಲಾಗುವುದು ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು. ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ಮೊದಲ ಹಂತದಲ್ಲಿ ಕಲ್ಯಾಣ ಕರ್ನಾಟಕ ಹಾಗೂ ಮುಂಬೈ ಕರ್ನಾಟಕದ ಬಹುತೇಕ ಭಾಗಗಳಿಗೆ ಭೇಟಿ ನೀಡಲಾಗಿದೆ ಎಂದರು. ಜಂಟಿ ಸಂಸದೀಯ ಸಮಿತಿಯ ಅವಧಿಯನ್ನು ಬಜೆಟ್ ಅಧಿವೇಶನದ ವರೆಗೆ ವಿಸ್ತರಿಸಲಾಗಿದೆ. ಲಭ್ಯ ಇರುವ ಎಲ್ಲ ದಾಖಲೆಗಳನ್ನು ಸಮಿತಿಗೆ ನೀಡಲಾಗಿದೆ. ಹೀಗಾಗಿ, ಈಗ ಮತ್ತೊಮ್ಮೆ ಸಮಿತಿಯವರನ್ನು ಭೇಟಿ ಮಾಡುವುದಿಲ್ಲ. ಎರಡನೇ ಹಂತದ ಹೋರಾಟ ಪೂರ್ಣಗೊಂಡ ಬಳಿಕ ರೈತರು ಹಾಗೂ ಮಠಾಧೀಶರನ್ನು ಒಳಗೊಂಡ ನಿಯೋಗದ ಮೂಲಕ ಸಮಿತಿಗೆ ದಾಖಲೆಗಳನ್ನು ಹಸ್ತಾಂತರಿಸಲಾಗುವುದು ಎಂದರು.

ಹಾಸನ ವಿಮಾನ ನಿಲ್ದಾಣ ತ್ವರಿತಕ್ಕೆ ಗೌಡರ ಮನವಿ

ದೆಹಲಿ: ಕರ್ನಾಟಕದ ಪ್ರವಾಸೋದ್ಯಮ ಕ್ಷೇತ್ರದ ಬಲವರ್ಧನೆ ಸಹಕಾರಿ ಯಾಗುವ ಹಾಗೂ ರೈತರಿಗೆ ಅತಿ ಹೆಚ್ಚು ಉಪಯುಕ್ತ ವಾಗುವ ಹಾಸನ ವಿಮಾನ ನಿಲ್ದಾಣ ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣ ಗೊಳಿಸಬೇಕು ಎಂದು ಮಾಜಿ ಪ್ರಧಾನಿಗಳಾದ ಎಚ್.ಡಿ.ದೇವೇಗೌಡರು ಕೇಂದ್ರ ಸರಕಾರಕ್ಕೆ ಮನವಿ ಮಾಡಿದರು. ಗುರು ವಾರ ರಾಜ್ಯಸಭೆಯಲ್ಲಿ ಮಾತನಾಡಿದ ಮಾಜಿ ಪ್ರಧಾನಿ, ಹಾಸನದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಆಗುವುದರಿಂದ ಇತಿಹಾಸ ಪ್ರಸಿದ್ಧ ಬೇಲೂರು-ಹಳೇಬೀಡು-ಶ್ರವಣಬೆಳಗೊಳ ತಾಣಗಳ ಪ್ರವಾಸೋದ್ಯಮ ಅಭಿವೃದ್ಧಿಯಾಗು ವುದರ ಜತೆಗೆ ಜಿಲ್ಲೆಯ ರೈತರಿಗೆ ಕೃಷಿ ರಫ್ತು ಹೆಚ್ಚಿಸುವಲ್ಲಿ ಸಹಕಾರಿ ಆಗುತ್ತದೆ. ಈ ನಿಟ್ಟಿನಲ್ಲಿ ವಿಮಾನ ನಿಲ್ದಾಣ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಬೇಕು ಎಂದು ಅವರು ಕೋರಿದರು. ಇದು ಅತ್ಯಂತ ಮಹತ್ವಾಕಾಂಕ್ಷೆಯ ವಿಮಾನ ನಿಲ್ದಾಣವಾಗಿದ್ದು, ಕ್ಷಿಪ್ರಗತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿದರೆ ಜನತೆಗೆ ಹೆಚ್ಚು ಅನುಕೂಲ ಆಗುತ್ತದೆ. ರಾಜ್ಯಕ್ಕೆ ದೊಡ್ಡ ಕೊಡುಗೆ ನೀಡುತ್ತದೆ ಎಂದು ಒತ್ತಿ ಹೇಳಿದರು.

ಕಲಾ ಪ್ರಕಾರಗಳ ಉಚಿತ ತರಬೇತಿ

ಬೆಂಗಳೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 2024-25ನೇ ಸಾಲಿನ ಪರಿಶಿಷ್ಟ ಜಾತಿಯ ಯುವಜನರಿಗಾಗಿ ಯುವಜನ ಮೇಳ ಹಾಗೂ ಯುವಜನೋತ್ಸವ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಉತ್ತೇಜಿಸುವ ಸಲುವಾಗಿ ಜಾನಪದ ಕಲಾ ಪ್ರಕಾರಗಳ ಉಚಿತ ತರಬೇತಿ ಶಿಬಿರವನ್ನು ಬೆಂಗಳೂರಿನ ತರಬೇತಿ ಕೇಂದ್ರದಲ್ಲಿ ಆಯೋಜಿಸಲಾಗಿದೆ. ತರಬೇತಿ ಪಡೆಯಲು ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಅಥವಾ ಅನುತ್ತೀರ್ಣವಾಗಿರಬಹುದು. ಅಭ್ಯರ್ಥಿಯ ವಯೋಮಿತಿಯು ಕನಿಷ್ಠ 16 ವರ್ಷದಿಂದ 40 ವರ್ಷದೊಳಗಿರಬೇಕು. ಡಿಸೆಂಬರ್ 10 ರಿಂದ 17 ರವರೆಗೆ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5.30 ಗಂಟೆಯ ವರೆಗೆ ತರಬೇತಿ ನಡೆಯಲಿದೆ. ತರಬೇತಿ ಶಿಬಿರದಲ್ಲಿ ಭಾಗವಹಿಸುವ ಶಿಬಿರಾರ್ಥಿಗಳಿಗೆ ಲಘು ಉಪಹಾರ ಒದಗಿಸಲಾಗುವುದು. ಅಭ್ಯರ್ಥಿಗಳು ಜಾತಿ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಹೊರಜಿಲ್ಲೆಗಳಿಂದ ಭಾಗವಹಿಸುವ ಶಿಬಿರಾರ್ಥಿಗಳಿಗೆ ಸಾಮಾನ್ಯ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ 9731251411ಗೆ ಕರೆ ಮಾಡಿ.

ವಿರಾಮ
ಪ್ರತಿ ಭಾನುವಾರ

{ ಎಸ್. ಜೈಶಂಕರ್ } ವಿದೇಶಾಂಗ ಸಚಿವ

ಗಡಿ ವಿವಾದವನ್ನು ಅಂತ್ಯಗೊಳಿಸಲು ಭಾರತ ಹಾಗೂ ಚೀನಾ ದಶಕಗಳಿಂದ ಮಾತನಾಡುತ್ತಿದೆ. ಆದರೆ ಎಲ್‌ಎಸಿಯಲ್ಲಿ ವಿವಾದ ಮುಂದುವರೆದಿದೆ, ಪರಸ್ಪರ ಒಪ್ಪಿಗೆಯಿಂದ ಗಡಿ ವಿವಾದ ಬಗೆಹರಿಸಿಕೊಳ್ಳಲು ಮುಂದಾಗಿದ್ದೇವೆ. ಎರಡೂ ದೇಶಗಳು ಪರಿಸ್ಥಿತಿಯನ್ನು ಸುಧಾರಿಸಲು ಬದ್ಧವಾಗಿವೆ.

ಜಾಗತಿಕ ಆರ್ಥಿಕತೆಯಲ್ಲಿ ಭಾರತಕ್ಕೆ ಪ್ರಬಲ ಸ್ಥಾನ | ಭಾರತದಲ್ಲಿ ಉತ್ಪಾದನಾ ಘಟಕ ತೆರೆಯಲು ರಷ್ಯಾ ಸಿದ್ಧ

ಮೇಕ್ ಇನ್ ಇಂಡಿಯಾ ಯೋಜನೆ ಮೋದಿಯನ್ನು ಹಾಡಿ ಹೊಗಳಿದ ಪುಟಿನ್

ಮಾಸ್ಕೋ: ಮೇಕ್ ಇನ್ ಇಂಡಿಯಾ ಮೂಲಕ ಸಣ್ಣ ಮತ್ತು ದೊಡ್ಡ ಗಾತ್ರದ ಉದ್ಯಮಗಳಿಗೆ ಭಾರತದ ನಾಯಕತ್ವ ಉತ್ತೇಜನ ನೀಡುತ್ತಿದೆ ಎಂದು ಭಾರತ ಸರ್ಕಾರ ಮತ್ತು ನರೇಂದ್ರ ಮೋದಿ ಅವರ ನಾಯಕತ್ವವನ್ನು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹಾಡಿ ಹೊಗಳಿದ್ದಾರೆ.

ಮಾಸ್ಕೋದಲ್ಲಿ ವಿಟಿಬಿ ಹೂಡಿಕೆ ಕುರಿತು ನಡೆದ ಕಾರ್ಯಕ್ರಮದಲ್ಲಿ ಭಾರತದ 'ಮೇಕ್ ಇನ್ ಇಂಡಿಯಾ' ಯೋಜನೆ ಬಗ್ಗೆ ಪುಟಿನ್ ಮಾತನಾಡಿದ್ದಾರೆ. ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಧಾನಿಯವರ 'ಮೇಕ್ ಇನ್ ಇಂಡಿಯಾ' ಯೋಜನೆಗಾಗಿ ರಷ್ಯಾ, ತನ್ನ ಉತ್ಪಾದನಾ ಘಟಕವನ್ನು ಭಾರತದಲ್ಲಿ ಸ್ಥಾಪಿಸಲು ಸಿದ್ಧತೆಯನ್ನು ನಡೆಸಿದೆ. ಇದಕ್ಕೆಲ್ಲಾ ಭಾರತದ ನಾಯಕತ್ವವೇ ಕಾರಣ. ಹೀಗಾಗಿ, ಭಾರತವು ತನ್ನ ಹಿತಾಸಕ್ತಿಗಳ ಈಡೇರಿಕೆಗಾಗಿ ಹೆಚ್ಚಿನ ಆದ್ಯತೆ ನೀಡುತ್ತದೆ ಎಂದು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ, ಜೊತೆಗೆ ಭಾರತದಲ್ಲಿನ ಹೂಡಿಕೆಗಳು ಲಾಭದಾಯಕವೆಂದು ನಾವು ನಂಬುತ್ತೇವೆ ಎಂದು ತಿಳಿಸಿದರು. ಗ್ರಾಹಕ ಸರಕುಗಳು, ಐಟಿ, ಉನ್ನತ ತಂತ್ರಜ್ಞಾನ ಮತ್ತು ಕೃಷಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ರಷ್ಯಾದ ಸಾಧನೆಯನ್ನು ಉಲ್ಲೇಖಿಸಿ, ಪಾಶ್ಚಾತ್ಯ ಬ್ರಾಂಡ್‌ಗಳನ್ನು ಬದಲಿಸುವ ಮೂಲಕ ಹೊಸ ರಷ್ಯಾದ ಬ್ರ್ಯಾಂಡ್‌ಗಳು ಯಶಸ್ಸು ಗಳಿಸಿದೆ. ಇದು ಆಮದು ಪರ್ಯಾಯ ಕಾರ್ಯಕ್ರಮದ ಭಾಗವಾಗಿ ವಿಶೇಷ ಪ್ರಸ್ತುತತೆಯನ್ನು ಹೊಂದಿದೆ. ಇನ್ನೂ ಕೃಷಿಯಲ್ಲಿ ತಯಾರಕರ ಮತ್ತು ಉತ್ಪಾದಕರ ಸಂಖ್ಯೆ ದಿನೇದಿನೇ ಬೆಳೆಯುತ್ತಿದೆ. 1988ರಲ್ಲಿ ಸೋವಿಯತ್ ಒಕ್ಕೂಟವು 35 ಶತಕೋಟಿ ಅಮೇರಿಕನ್ ಡಾಲರ್ ಧಾನ್ಯವನ್ನು ಆಮದು ಮಾಡಿಕೊಂಡಿತ್ತು. ಕಳೆದ ವರ್ಷ 66 ಶತಕೋಟಿ ಅಮೇರಿಕನ್ ಡಾಲರ್‌ನಷ್ಟು ಧಾನ್ಯವನ್ನು ರಫ್ತು ಮಾಡಿದ್ದೇವೆ. ಇದು ನಮ್ಮ ರೈತರ ಸಾಮರ್ಥ್ಯವಾಗಿದ್ದು, ರಷ್ಯಾ ಒಕ್ಕೂಟದ ಎಲ್ಲಾ ಕ್ಷೇತ್ರಗಳಲ್ಲಿಯೂ ಅವಕಾಶಗಳನ್ನು ವಿಸ್ತರಿಸುವ ಹೆಚ್ಚಿನ ಅವಶ್ಯಕತೆಯಿದೆ ಎಂದರು.

ಇದೇ ವೇಳೆ, ಉದ್ಯಮಗಳ ಬೆಳವಣಿಗೆಯನ್ನು ಬೆಂಬಲಿಸಲು ಬ್ರಿಕ್ಸ್ ರಾಷ್ಟ್ರಗಳ ಸಹಕಾರಕ್ಕಾಗಿ ಪುಟಿನ್ ಕರೆ ನೀಡಿದರು. ಮುಂದಿನ ವರ್ಷ ಬ್ರೆಜಿಲ್‌ನಲ್ಲಿ ನಡೆಯಲಿರುವ ಶೃಂಗಸಭೆಯಲ್ಲಿ ಸಹಯೋಗಕ್ಕಾಗಿ ಪ್ರಾಥಮಿಕ ಕ್ಷೇತ್ರಗಳನ್ನು ಮೌಲ್ಯಮಾಪನ ಮಾಡಲು ಸದಸ್ಯ ರಾಷ್ಟ್ರಗಳಲ್ಲಿ ಮನವಿ ಮಾಡಿದರು.

ಗಯಾನಾ ಅಧ್ಯಕ್ಷರಿಂದಲೂ ಮೋದಿ ಗುಣಗಾನ

ಗಯಾನಾ ಅಧ್ಯಕ್ಷ ಮೊಹಮ್ಮದ್ ಇರ್ಫಾನ್ ಅಲಿ ಅವರು ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಶ್ಲಾಘಿಸಿದ್ದರು. ಮೋದಿಯವರ ಪ್ರಭಾವಶಾಲಿ ನಾಯಕತ್ವ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಅವರ ಕೊಡುಗೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದ ಇರ್ಫಾನ್ ಅಲಿ ಮೋದಿಯವರನ್ನು 'ಎಲ್ಲ ನಾಯಕರಲ್ಲಿ ನೀವೊಬ್ಬ ಚಾಂಪಿಯನ್' ಎಂದು ಬಣ್ಣಿಸಿದ್ದಾರೆ. ಜಾರ್ಜ್‌ಟೌನ್‌ನಲ್ಲಿ ನಡೆದಿದ್ದ ಸಭೆಯಲ್ಲಿ ಮಾತನಾಡಿದ್ದ ಮೊಹಮ್ಮದ್ ಇರ್ಫಾನ್ ಅಲಿ, ಭಾರತದಲ್ಲಿನ ನರೇಂದ್ರ ಮೋದಿಯವರ ಆಡಳಿತ ಶೈಲಿಯನ್ನು ಹೊಗಳಿದ್ದರು. ಗಯಾನಾ ಮತ್ತು ಇತರ ರಾಷ್ಟ್ರಗಳಲ್ಲಿ ಅವರ ಪ್ರಭಾವವನ್ನು ಪ್ರಸ್ತಾಪಿಸಿದ್ದ ಅವರು, 'ನೀವು ಇಲ್ಲಿ ಬಂದಿರುವುದು ನಮಗೆ ಹೆಮ್ಮೆ' ಎಂದಿದ್ದರು. 'ನೀವು ನಾಯಕರಲ್ಲಿ ಚಾಂಪಿಯನ್ ಆಗಿದ್ದೀರಿ. ಭಾರತ ದೇಶವನ್ನು ನಂಬಲಾಗದಷ್ಟು ಮುನ್ನಡೆಸಿ ಅಭಿವೃದ್ಧಿಶೀಲ ಜಗತ್ತಿಗೆ ಬೆಳಕನ್ನು ತೋರಿಸಿದ್ದೀರಿ. ನಿಮ್ಮನ್ನು ನೋಡಿ ಅನೇಕರು ತಮ್ಮ ದೇಶದಲ್ಲಿ ಅಭಿವೃದ್ಧಿ ಮಾಪನಗಳು ಮತ್ತು ಚೌಕಟ್ಟನ್ನು ಅಳವಡಿಸಿಕೊಳ್ಳುತ್ತಿದ್ದಾರೆ' ಎಂದು ಗಯಾನಾ ಅಧ್ಯಕ್ಷ ಹೇಳಿದ್ದರು.

ಫ್ರಾನ್ಸ್ ಪ್ರಧಾನಿ ಪದಚ್ಯುತ



ಪ್ಯಾರಿಸ್: ಫ್ರಾನ್ಸ್ ಪ್ರಧಾನಿ ಮಿಷೆಲ್ ಬರ್ನಿಯರ್ ವಿರುದ್ಧ ಬುಧವಾರ ಮಂಡಿಸಲಾಗಿದ್ದ ಅವಿಶ್ವಾಸ ನಿರ್ಣಯ ಅಂಗೀಕಾರ ವಾಗಿದ್ದು, ಅವರು ಅಧಿಕಾರದಿಂದ ಪದಚ್ಯುತಗೊಂಡಿದ್ದಾರೆ.

1962ರ ಬಳಿಕ ಇದೇ ಮೊದಲ ಬಾರಿಗೆ ಅವಿಶ್ವಾಸ ನಿರ್ಣಯಕ್ಕೆ ಯಶಸ್ಸು ದೊರೆತಿದೆ. ಫ್ರಾನ್ಸ್ ಸಂಸತ್ತಿನ ಬಲಪಂಥೀಯ ಮತ್ತು ಎಡಪಂಥೀಯ ಸದಸ್ಯರು ಒಗ್ಗೂಡಿ ನಿರ್ಣಯದ ಪರ ಮತ ಚಲಾಯಿಸಿದರು. ಅವಿಶ್ವಾಸ ನಿರ್ಣಯಕ್ಕೆ ಗೆಲುವಾದ ಹಿಂದೆಯೇ ಬರ್ನಿಯರ್ ಮತ್ತು ಅವರ ಸಂಪುಟ ಸದಸ್ಯರು ರಾಜೀನಾಮೆ ಸಲ್ಲಿಸಿದರು. ನಿರ್ಣಯದ ಪರ 331 ಮತಗಳು ಬಂದವು. ಅಂಗೀಕಾರಕ್ಕೆ ಒಟ್ಟು 288 ಮತಗಳ ಅಗತ್ಯವಿತ್ತು. ಸೆಪ್ಟೆಂಬರ್ ತಿಂಗಳಲ್ಲಿ ಪ್ರಧಾನಿಯಾಗಿ ನೇಮಕವಾಗಿದ್ದ ಬರ್ನಿಯರ್ ಅವರು ಇತ್ತೀಚಿನ ವರ್ಷಗಳಲ್ಲಿ ಅತಿ ಕಡಿಮೆ ಅವಧಿ ಯಲ್ಲಿ ಅಧಿಕಾರದಲ್ಲಿದ್ದ ಪ್ರಧಾನಿ ಎಂದು ಇತಿಹಾಸ ದಲ್ಲಿ ದಾಖಲಾದರು. ಈ ಅವಿಶ್ವಾಸ ನಿರ್ಣಯ ಎಲ್ಲವನ್ನೂ ಗಂಭೀರಗೊಳಿಸಲಿದೆ. ಪರಿಸ್ಥಿತಿಯನ್ನು ಮತ್ತಷ್ಟು ಕ್ಲಿಷ್ಟಕರವಾಗಿಸಲಿದೆ ಎಂದು ಅವರು ವಿದಾಯ ಭಾಷಣದಲ್ಲಿ ಹೇಳಿದರು. ಫ್ರಾನ್ಸ್‌ನ ನ್ಯಾಷನಲ್ ಅಸೆಂಬ್ಲಿಯಲ್ಲಿ ಯಾವುದೇ ಪಕ್ಷ ಸ್ಪಷ್ಟ ಬಹುಮತ ಪಡೆದಿಲ್ಲ. ಪ್ರಸ್ತುತ ಮೂರು ಮೈತ್ರಿಕೂಟ ಗಳಿವೆ. ಸರಕಾರದ ಪತನದ ಹಿಂದೆಯೇ ದೇಶದಲ್ಲಿ ರಾಜಕೀಯ ಮತ್ತು ಆರ್ಥಿಕ ಅನಿಶ್ಚಿತತೆಯೂ ಮೂಡಿದೆ. ಬರ್ನಿಯರ್ ರಾಜೀನಾಮೆ ನೀಡಿರುವು ದನ್ನು ಅಧ್ಯಕ್ಷರ ಕಚೇರಿ ದೃಢಪಡಿಸಿದೆ. ಹೊಸ ಸರಕಾರ ರಚನೆ ಆಗುವವವರೆಗೂ ಉಸ್ತುವಾರಿ ಪ್ರಧಾನಿಯಾಗಿ ಮುಂದುವರಿಯಬೇಕು ಎಂದು ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಅವರು ಸೂಚಿಸಿದ್ದಾರೆ.

ಜಾಗತಿಕ ಮಟ್ಟದ ಐದನೇ ಕೇಂದ್ರ

ದೇಶದಲ್ಲೇ ಹೈದರಾಬಾದ್‌ನಲ್ಲಿ ಇದೇ ಮೊದಲು

ಗೂಗಲ್ ಸೇಫ್ಟಿ ಕೇಂದ್ರ

ಹೈದರಾಬಾದ್: ಭಾರತದಲ್ಲಿ ಮೊದಲ ಬಾರಿಗೆ ಗೂಗಲ್ ಸೇಫ್ಟಿ ಇಂಜಿನಿಯರಿಂಗ್ ಸೆಂಟರ್ (ಜಿಎಸ್‌ಇಸಿ) ಸ್ಥಾಪನೆಗೆ ಮುಂದಾಗಿದೆ. ಇದಕ್ಕಾಗಿ ಹೈದರಾಬಾದ್ ನಗರವನ್ನು ಅದು ಆಯ್ಕೆ ಮಾಡಿದೆ. ಏಷ್ಯಾ ಫೆಸಿಫಿಕ್ ಪ್ರದೇಶದಲ್ಲಿ ಟೋಕಿಯೋ ಬಳಿಕ ಸ್ಥಾಪನೆ ಆಗುತ್ತಿರುವ ಮತ್ತು ಜಾಗತಿಕ ಮಟ್ಟದ ಐದನೇ ಕೇಂದ್ರ ಇದಾಗಿದೆ. ಬೆಳೆಯುತ್ತಿರುವ ಟೆಕ್ ಉದ್ಯಮಕ್ಕೆ ಇದೊಂದು ಪ್ರಮುಖವಾದ ಬೆಳವಣಿಗೆಯಾಗಿದೆ.

ಗೂಗಲ್‌ನ ಮುಖ್ಯ ಮಾಹಿತಿ ಅಧಿಕಾರಿ ರಾಯಲ್ ಹನ್ಸೆನ್ ನೇತೃತ್ವದ ನಿಯೋಗ ಈ ಘೋಷಣೆಯನ್ನು ಮಾಡಿದೆ. ಜೂಬ್ಲಿಹಿಲ್ಸ್‌ನ ನಿವಾಸದಲ್ಲಿ ಆಂಧ್ರ ಮುಖ್ಯಮಂತ್ರಿ ರೇವಂತ್ ರೆಡ್ಡಿ ಮತ್ತು ಐಟಿ ಮತ್ತು ಕೈಗಾರಿಕಾ ಸಚಿವ ಶ್ರೀಧರ್ ಬಾಬು ಭೇಟಿಯಾದ ನಿಯೋಗವು ಇದರ ಸ್ಥಾಪನೆ ಸಂಬಂಧದ ಪ್ರಮುಖ ಒಪ್ಪಂದಕ್ಕೆ ತೆಲಂಗಾಣ ರಾಜ್ಯ ಸರಕಾರದೊಂದಿಗೆ ಸಹಿ ಹಾಕಿದೆ.

ತೆಲಂಗಾಣ ಸರಕಾರದ ನಿರಂತರ ಪ್ರಯತ್ನದಿಂದಾಗಿ ಈ ಯೋಜನೆಯ ಸ್ಥಾಪನೆಯ ಅವಕಾಶ ಪಡೆದಿದೆ. ಈ ಯೋಜನೆಯನ್ನು ಹೈದರಾಬಾದ್‌ಗೆ ಪಡೆಯುವಲ್ಲಿ ಸಿಎಂ ಕೂಡ ಪ್ರಮುಖ ಪಾತ್ರಹೊಂದಿದ್ದು, ತಮ್ಮ ಅಮೇರಿಕ ಪ್ರವಾಸದಲ್ಲಿ ಅವರು ಗೂಗಲ್ ಪ್ರಮುಖ ಕಚೇರಿಗೆ ಭೇಟಿ ಮಾಡಿ, ಮಾತುಕತೆ ನಡೆಸಿದ್ದರು.

ಈ ಕುರಿತು ಮಾತನಾಡಿರುವ ಸಿಎಂ ರೇವಂತ್ ರೆಡ್ಡಿ, ಇದು ತೆಲಂಗಾಣಕ್ಕೆ ಹೆಮ್ಮೆಯ ಸಮಯವಾಗಿದೆ. ಜಿಎಸ್‌ಇಸಿ ಹೈದರಾಬಾದ್ ಅನ್ನು ಜಾಗತಿಕ ಐಟಿ ಕೇಂದ್ರವಾಗಿ ಇರಿಸುತ್ತದೆ. ತೆಲಂಗಾಣವನ್ನು ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನಾಗಿ ಮಾಡುವ ನಮ್ಮ ಗುರಿಗೆ ಇದು ಗಣನೀಯ ಕೊಡುಗೆ ನೀಡುತ್ತದೆ ಎಂದರು.

ಉದ್ಯೋಗ ಮತ್ತು ಅವಿಷ್ಕಾರಕ್ಕೆ ಉತ್ತೇಜನ: ಜಾಗತಿಕ ಐಟಿ ಮತ್ತು ಇಂಜಿನಿಯರಿಂಗ್ ಹಬ್ ಮತ್ತು ಡಿಜಿಟಲ್ ಕೌಶಲ್ಯ ಅಭಿವೃದ್ಧಿಯಲ್ಲಿ ತೆಲಂಗಾಣದ ನಾಯಕತ್ವ ಕುರಿತು ರಾಯಲ್ ಹನ್ಸೆನ್ ಪ್ರಶಂಸೆ ವ್ಯಕ್ತಪಡಿಸಿದರು. ಅಂತಾರಾಷ್ಟ್ರೀಯ ಸೈಬರ್ ಭದ್ರತಾ ಸವಾಲನ್ನು ಜಿಎಸ್‌ಇಸಿ ಸಮರ್ಥವಾಗಿ ನಿರ್ವಹಿಸುತ್ತದೆ. ಇದು ನೇರ ಮತ್ತು ಪರೋಕ್ಷವಾಗಿ ಸಾವಿರಾರು ಜನರಿಗೆ ಉದ್ಯೋಗ ಸೃಷ್ಟಿಸಲಿದೆ. ಜಿಎಸ್‌ಇಸಿಯನ್ನು ಹೈದರಾಬಾದ್‌ನಲ್ಲಿ ಸ್ಥಾಪಿಸುವುದು ಸೈಬರ್ ಸೆಕ್ಯೂರಿಟಿ ಜಾಗತಿಕ ನಾಯಕತ್ವದ ಭಾರತದ ನಡೆಯ ಗಮನಾರ್ಹ ಮೈಲುಗಲ್ಲಾಗಲಿದೆ.



ಸೆಕ್ಯೂರಿಟಿ ಹಬ್‌ನ ವೈಶಿಷ್ಟ್ಯ

ಜಿಎಸ್‌ಇಸಿ ಹೈದರಾಬಾದ್ ವಿಶಿಷ್ಟ ರೀತಿಯಲ್ಲಿ ಅಂತಾರಾಷ್ಟ್ರೀಯ ಸೈಬರ್ ಸೆಕ್ಯೂರಿಟಿ ಹಬ್ ಆಗಿ ಕಾರ್ಯ ನಿರ್ವಹಿಸಲಿದೆ. ಇದು ಭದ್ರತಾ ಅಭಿವೃದ್ಧಿ ಮತ್ತು ಆನ್‌ಲೈನ್ ಸುರಕ್ಷತಾ ಉತ್ಪನ್ನಗಳ ಕುರಿತು ನೈಪುಣ್ಯತೆಯನ್ನು ಹೊಂದಲಿದೆ. ಅಕ್ಟೋಬರ್ 3ರಂದು ನಡೆದ 'ಗೂಗಲ್ ಫಾರ್ ಇಂಡಿಯಾ-2024' ಸಮಾವೇಶದಲ್ಲಿ ಕಂಪನಿ ಮೊದಲ ಬಾರಿಗೆ ತನ್ನ ಈ ಯೋಜನೆ ಘೋಷಿಸಿತು, ಅಂದಿನಿಂದ ಅನೇಕ ರಾಜ್ಯಗಳು ಕಂಪನಿಗೆ ಆಹ್ವಾನ ನೀಡಲು ಮುಂದಾಗಿದ್ದವು.

ವಿದ್ಯಾರ್ಥಿಗಳಿಂದ 3.15 ಲಕ್ಷ ರು. ದೇಣಿಗೆ ಬನ್ನೇರುಘಟ್ಟಕ್ಕೆ ಹಸ್ತಾಂತರ

ಬೆಂಗಳೂರು: ಡಾ. ಫೇಡಿಲ್ ಆಂಗ್ಲ ಶಾಲೆಯು ನಡೆಸಿದ 'ವಾತ್ಸಲ್ಯ ಆನಂದ: ಬದುಕು ಮತ್ತು ಬದುಕಲು ಬಿಡಿ' ಎಂಬ ನಿಧಿ ಸಂಗ್ರಹಣೆ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳು, ಸಿಬ್ಬಂದಿ ಮತ್ತು ಪೋಷಕರು ವಿವಿಧ ವಸ್ತುಗಳೊಂದಿಗೆ ಶೈಕ್ಷಣಿಕ ಮಳಿಗೆಗಳನ್ನು ಸ್ಥಾಪಿಸಿ ಚಟುವಟಿಕೆಗಳು, ರಸಪ್ರಶ್ನೆಗಳು ಜೀವವೈವಿಧ್ಯ ಮತ್ತು ಪ್ರಕೃತಿ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಿದರು. ನಿಧಿ ಸಂಗ್ರಹಣೆಯಿಂದ ಸಂಗ್ರಹಿಸಿದ 3,15,000 ರು. ದೇಣಿಗೆಯನ್ನು ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ವಿವಿಧ ಪ್ರಾಣಿಗಳನ್ನು ದತ್ತು ಸ್ವೀಕಾರ ಕಾರ್ಯಕ್ರಮಕ್ಕೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನವನದ ವಿವಿಧ ಅಳಿವಿನಂಚಿನ ಪ್ರಾಣಿಗಳಾದ, ಎರಡು ವರ್ಷದ ಅವಧಿಗೆ ಹಿಮಾಲಯದ ಕಪ್ಪು ಕರಡಿ ಮತ್ತು ಗರಿಯಲ್ ಗಳು, ಒಂದು ವರ್ಷದ ಅವಧಿಗೆ ಭಾರತೀಯ ಮುಳ್ಳುಹಂದಿಗಳನ್ನು ದತ್ತು ಪಡೆದಿರುತ್ತಾರೆಂದು ತಿಳಿಸಲು ಸಂತೋಷವಾಗಿದೆ. ಶಾಲೆಯ ವಿದ್ಯಾರ್ಥಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು, ಜೈವಿಕ ಉದ್ಯಾನವನದ ಪಶುವೈದ್ಯಾಧಿಕಾರಿ ಡಾ. ಆನಂದ್ ಅವರಿಗೆ ಸಂಗ್ರಹಿತ ಮೊತ್ತವನ್ನು ಹಸ್ತಾಂತರಿಸಿತು ಮತ್ತು ವನ್ಯಜೀವಿಗಳ ನಿರ್ವಹಣೆ ಮತ್ತು ಸಂರಕ್ಷಣೆ ಕುರಿತು ಪಶುವೈದ್ಯರು ಮಾಹಿತಿ ಹಂಚಿಕೊಂಡರು.

ಸಂತೋಷ್-ನಿಖಿಲ್ ಭೇಟಿ

ದೆಹಲಿ: ಚನ್ನಪಟ್ಟಣ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆ ನಂತರ ದೆಹಲಿಗೆ ಭೇಟಿ ನೀಡಿರುವ ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರನ್ನು ಭೇಟಿ ಮಾಡಿದರು.

ಈ ಸಂದರ್ಭದಲ್ಲಿ ಬಿ.ಎಲ್. ಸಂತೋಷ್ ಅವರಿಗೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಜೀವನ - ಸಾಧನೆ ಕುರಿತ Furrows in a Field: The Unexplored Life of H.D. Deve Gowda (ಕನ್ನಡದಲ್ಲಿ: ನೇಗಿಲ ಗೆರೆಗಳು) ಗ್ರಂಥವನ್ನು ನೀಡಿ ಆಶೀರ್ವಾದ ಪಡೆದುಕೊಂಡ ನಿಖಿಲ್ ಅವರು, ಉಪ ಚುನಾವಣೆ, ಆ ನಂತರದ ರಾಜಕೀಯ ಬೆಳವಣಿಗೆಗಳ ಬಗ್ಗೆ ಹಲವು ಅಂಶಗಳನ್ನು ಅವರ ಗಮನಕ್ಕೆ ತಂದರು.

ಅಲ್ಲದೆ, ಚನ್ನಪಟ್ಟಣ ಚುನಾವಣೆಯ ಬಗ್ಗೆ ಸಂತೋಷ್ ಅವರು ಕೆಲ ಮಾಹಿತಿಗಳನ್ನು ನಿಖಿಲ್ ಅವರಿಂದ ಪಡೆದುಕೊಂಡರು ಹಾಗೂ ಮುಂದಿನ ರಾಜಕೀಯ ಬೆಳವಣಿಗೆ ದೃಷ್ಟಿಯಿಂದ ನಿಖಿಲ್ ಅವರಿಗೆ ಮಹತ್ವದ ಸಲಹೆ ಸೂಚನೆ ಮಾರ್ಗದರ್ಶನ ನೀಡಿದರು.

ಈ ಬಗ್ಗೆ ಮಾಹಿತಿ ನೀಡಿರುವ ನಿಖಿಲ್ ಕುಮಾರಸ್ವಾಮಿ ಅವರು, ದೆಹಲಿ ಭೇಟಿ ವೇಳೆ ಸಂತೋಷ್ ಜೀ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದುಕೊಂಡೆ. ಚನ್ನಪಟ್ಟಣ ಚುನಾವಣೆ ಕುರಿತಂತೆ ಕೆಲ ಮಾಹಿತಿಗಳನ್ನು ಕೇಳಿ ಪಡೆದುಕೊಂಡರು. ನನ್ನ ರಾಜಕೀಯ ಬೆಳವಣಿಗೆ ಹಾಗೂ ರಾಜ್ಯದಲ್ಲಿ ಎನ್‌ಡಿಎ ಮೈತ್ರಿಕೂಟವನ್ನು ಬಲಗೊಳಿಸುವ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಿದರು ಎಂಬುದಾಗಿ ತಿಳಿಸಿದ್ದಾರೆ



ವಾರಣಾಸಿಯ ಅನುಜ್ ಕುಮಾರ್‌ಗೆ 98 ಲಕ್ಷ ರು. ವಂಚಿಸಿದ ಸೈಬರ್ ಖದೀಮರು.

ನಿವೃತ್ತ ನೌಕಾಧಿಕಾರಿ ಡಿಜಿಟಲ್ ಅರೆಸ್ಟ್

ವಾರಣಾಸಿ: ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ವಂಚನೆ ಹಾಗೂ ಡಿಜಿಟಲ್ ಅರೆಸ್ಟ್ ಪ್ರಕರಣಗಳು ಹೆಚ್ಚುತ್ತಲೇ ಇವೆ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಕೂಡ ಕಳವಳ ವ್ಯಕ್ತಪಡಿಸಿದ್ದರು. ಇದೀಗ ವಾರಣಾಸಿಯಲ್ಲಿ ನಿವೃತ್ತ ನೌಕರರೊಬ್ಬರು ಇಂತಹ ಮೋಸದ ಜಾಲಕ್ಕೆ ಸಿಲುಕಿ, 98 ಲಕ್ಷ ಹಣ ಕಳೆದುಕೊಂಡಿದ್ದಾರೆ. ಭಾರತೀಯ ನೌಕಾ ಸೇನೆಯಲ್ಲಿದ್ದ ಸಬ್‌ಲೆಫ್ಟಿನೆಂಟ್ ಬರೋಬ್ಬರಿ 22 ದಿನಗಳ ಕಾಲ ಡಿಜಿಟಲ್ ಅರೆಸ್ಟ್‌ಗೆ ಒಳಗಾಗಿದ್ದು, 98 ಲಕ್ಷ ರೂಪಾಯಿ ಕಳೆದುಕೊಂಡಿದ್ದಾರೆ.

ಪ್ರಕರಣದ ಹಿನ್ನೆಲೆ: ವಾರಣಾಸಿಯ ಮಾಧವ ನಗರ ಕಾಲೋನಿಯ ನಿವಾಸಿಯಾಗಿರುವ ಅನುಜ್ ಕುಮಾರ್ ಯಾದವ್ ವಂಚನೆಗೆ ಒಳಗಾದ ನಿವೃತ್ತ ಅಧಿಕಾರಿ. 2024 ಜುಲೈ 31ರಂದು ಸೇವೆಯಿಂದ ನಿವೃತ್ತಿಯಾಗಿದ್ದ ಇವರು ನಿವೃತ್ತಿ ಜೀವನವನ್ನು ಕಳೆಯುತ್ತಿದ್ದರು. ನವೆಂಬರ್ 11ರಂದು ಸೈಬರ್ ಅಪರಾಧಿಗಳು ಟ್ರಾಯ್ ಅಧಿಕಾರಿಗಳಂತೆ ಬಿಂಬಿಸಿಕೊಂಡು ಕರೆ ಮಾಡಿದ್ದರು, ಅಲ್ಲದೇ ಅಂದಿನಿಂದ ಡಿಸೆಂಬರ್ 3ರ ವರೆಗೆ ಡಿಜಿಟಲ್ ಅರೆಸ್ಟ್‌ಗೆ ಒಳಗಾಗಿದ್ದರು ಎಂಬ ಅಂಶ ಹೊರಬಿದ್ದಿದೆ.

'ನಿಮ್ಮ ಹೆಸರಿನಲ್ಲಿ ಸಿಮ್‌ಕಾರ್ಡ್ ವಿತರಿಸಲಾಗಿದ್ದು, ಇದನ್ನು ಅಕ್ರಮ ಚಟುವಟಿಕೆಗೆ ಬಳಕೆ ಮಾಡಲಾಗುತ್ತಿದೆ' ಎಂದು ಬೆದರಿಕೆ ಹಾಕಿದ್ದಾರೆ. ಇದಾದ ಸ್ವಲ್ಪ ಹೊತ್ತಿನಲ್ಲಿ ಮತ್ತೊಂದು ಕರೆ ಬಂದಿದ್ದು, 'ತಾವು ಪೊಲೀಸರು ಎಂದು ಹೇಳಿಕೊಂಡಿದ್ದು, ನಿಮ್ಮ ಹೆಸರಿನಲ್ಲಿ ಎಫ್‌ಐಆರ್ ದಾಖಲಾಗಿದೆ' ಎಂದಿದ್ದಾರಲ್ಲದೇ, ಈ ವೇಳೆ ಮಾಜಿ ಸಿಜೆಐ ಫೋಟೋವನ್ನು ವಾಟ್ಸಾಪ್ ಮಾಡುವ ಮೂಲಕ ನರೇಶ್ ಗೋಯಲ್ ಮನಿ ಲಾಂಡರಿಂಗ್ ಕೇಸ್‌ನಲ್ಲಿ ನಿಮ್ಮ ಪಾತ್ರವಿದೆ ಎಂದು ಬೆದರಿಸಿದ್ದಾರೆ.

ಇಷ್ಟಕ್ಕೆ ಮುಗಿಯದೇ, ಅನೇಕ ವಾಟ್ಸಾಪ್ ನಂಬರ್‌ನಿಂದ ಅವರಿಗೆ ಬೆದರಿಕೆ ಕರೆ ಬಂದಿದೆ. ತನಿಖೆ ನಡೆಯುತ್ತಿದ್ದು, ಈ ಉದ್ದೇಶದಿಂದ ನಿಮ್ಮ ಬ್ಯಾಂಕ್ ಖಾತೆಯಲ್ಲಿರುವ ಹಣವನ್ನು ವರ್ಗಾಯಿಸುವ ಸ್ವಾತಂತ್ರ್ಯ ನೀಡಿ, ತನಿಖೆ ಮುಗಿದ ಬಳಿಕ ಎಲ್ಲಾ ಹಣವನ್ನು ನಿಮಗೆ ವರ್ಗಾಯಿಸುತ್ತೇವೆ ಎಂದು ತಿಳಿಸಿದ್ದಾರೆ. ಇದಾದ ಬಳಿಕ ನವೆಂಬರ್-14ರಂದು 33 ಲಕ್ಷ ರು. ಹಣವನ್ನು ಕೋಟಕ್ ಮಹೀಂದ್ರಾ ಬ್ಯಾಂಕ್‌ಗೆ ವರ್ಗಾವಣೆ ಮಾಡಿಸಲಾಗಿದೆ. ನಂತರ ನವೆಂಬರ್ 16ರಂದು ಎರಡು ಕಂತಿನಂತೆ ಪ್ರತಿ ಬಾರಿ ಐಸಿಐಸಿಐಗೆ ಬ್ಯಾಂಕ್ ಖಾತೆಗೆ 7.5 ಲಕ್ಷ ರು. ವರ್ಗಾಯಿಸಲಾಗಿದೆ. ಇದರಲ್ಲಿ ಎಫ್.ಡಿ ಮತ್ತು ಪೆನ್ಷನ್ ಹಣವನ್ನು ಕೂಡ ವರ್ಗಾಯಿಸಿಕೊಳ್ಳಲಾಗಿದೆ.

ಪ್ರಕರಣದ ಕುರಿತು ಮಾಹಿತಿ ನೀಡಿದ ಸೈಬರ್ ಪೊಲೀಸ್ ಅಧಿಕಾರಿ ವಿಜಯ್ ನಾರಾಯಣ್ ಮಿಶ್ರಾ, ಹಣ ವರ್ಗಾವಣೆ ಮಾಹಿತಿ ಆಧಾರದ ಮೇಲೆ ಮೂರು ನಂಬರ್ ಪತ್ತೆ ಮಾಡಲಾಗಿದ್ದು, ಮೂರು ನಗರಗಳಲ್ಲಿ ಇವು ಕಂಡು ಬಂದಿವೆ. ನವದೆಹಲಿಯ ರೋಹಿಣಿ ಪ್ರದೇಶದ ಬ್ಯಾಂಕ್‌ಗೆ 33 ಲಕ್ಷ ರೂ. ಗುರುಗ್ರಾಮದ ಕೋಟಕ್ ಮಹೀಂದ್ರಾ ಬ್ಯಾಂಕ್‌ಗೆ 50 ಲಕ್ಷ ರೂ. ಹರಿಯಾಣದ ಪಾಣಿಪತ್ ಐಸಿಐಸಿಐ ಬ್ಯಾಂಕ್‌ಗೆ ಏಳೂವರೆ ಲಕ್ಷ ಮತ್ತು ಉತ್ತರ ಪ್ರದೇಶದ ಕುಶಿನಗರ ಬ್ಯಾಂಕ್‌ಗೆ ಏಳು ಲಕ್ಷ ವರ್ಗಾವಣೆಯಾಗಿದೆ. ಈ ಕುರಿತು ಮಾತನಾಡಿರುವ ನಿವೃತ್ತ ನೌಕಾಧಿಕಾರಿ ಅನುಜ್, ವಂಚಕರು ತನಗೆ ಇದು ರಾಷ್ಟ್ರೀಯ ಭದ್ರತೆ ವಿಚಾರವಾಗಿದ್ದು, ಸಹಕಾರ ನೀಡಬೇಕು ಎಂದು ಬೆದರಿಕೆ ಹಾಕಿದ್ದರು ಎಂದೂ ಹೇಳಿದ್ದಾರೆ.

ಬಯಲಾಗಿದ್ದು ಹೇಗೆ ಈ ರಹಸ್ಯ?

ಸುಮಾರು 22 ದಿನಗಳ ಕಾಲ ಡಿಜಿಟಲ್ ಅರೆಸ್ಟ್ ಆದ ನಿವೃತ್ತ ಅಧಿಕಾರಿಯು ಈ ಅವಧಿಯಲ್ಲಿ ಯಾರ ಸಂಪರ್ಕಕ್ಕೂ ಬಂದಿರಲಿಲ್ಲ. ಅನೇಕ ದಿನಗಳ ಕಾಲ ತಂದೆಯ ಫೋನ್ ಕರೆಯಿಲ್ಲದೆ ಮಗ ಅನುಮಾನಗೊಂಡು ಡಿಸೆಂಬರ್ 3ರಂದು ಮನೆಗೆ ಬಂದಿದ್ದಾರೆ. ಇದಾದ ಬಳಿಕ ಘಟನೆಯ ಬಗ್ಗೆ ತಿಳಿದಾಗ ತಂದೆ ಸೈಬರ್ ವಂಚನೆಗೆ ಒಳಗಾಗಿದ್ದನ್ನು ತಿಳಿದು, ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

12ರಂದು ನಿಗಮಗಳಿಗೆ ಅನುದಾನಕ್ಕೆ ಆಗ್ರಹಿಸಿ ಹೋರಾಟ

ಬೆಂಗಳೂರು: ನಿಗಮಗಳಿಗೆ ಅನುದಾನ ಬಿಡುಗಡೆ ಮಾಡಿ, ಇಲ್ಲವೇ ಅವುಗಳನ್ನು ಮುಚ್ಚಿಬಿಡಿ ಎಂಬ ಘೋಷಣೆಯೊಂದಿಗೆ ಡಿಸೆಂಬರ್ 12ರಂದು ರಾಜ್ಯಾದ್ಯಂತ ಹೋರಾಟ ನಡೆಯಲಿದೆ ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಹೇಳಿದ್ದಾರೆ.

ರಾಜ್ಯಾದ್ಯಂತ ಹಿಂದುಳಿದ ವರ್ಗದ ಆರ್ಥಿಕ, ಔದ್ಯೋಗಿಕ, ಕೃಷಿ ಚಟುವಟಿಕೆಗೆ ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಅನುದಾನ ಸರಕಾರ ಸ್ಥಗಿತ ಮಾಡಿದೆ. ಹಿಂದುಳಿದ ವರ್ಗಗಳ ಸಮುದಾಯಗಳಿಗೆ ಕಲ್ಯಾಣ ಕಾರ್ಯಕ್ಕೆ ಅವಕಾಶ ಮಾಡಿಕೊಡದಿದ್ದರೆ ಹೋರಾಟ ಕೈಗೊಳ್ಳುತ್ತೇವೆ.

-ರಘು ಕೌಟಿಲ್ಯ, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ

ಬಿಜೆಪಿ ರಾಜ್ಯ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಿಂದುಳಿದ ವರ್ಗಗಳು ತಾವು ಪಡೆಯುತ್ತಿದ್ದ ಆರ್ಥಿಕ ನೆರವಿನಿಂದ ವಂಚಿತವಾಗುತ್ತಿವೆ. ಅರಿವು ಯೋಜನೆಗಳ ಮೂಲಕ ವಿದ್ಯಾರ್ಥಿಗಳಿಗೆ ಸಿಗುವಂತ ಆರ್ಥಿಕ ನೆರವು ಕೂಡ ಸಿಗುತ್ತಿಲ್ಲ. ಸಣ್ಣ ಹಿಡುವಳಿದಾರರಿಗೆ ಸಿಗುವಂತಹ ಗಂಗಾ ಕಲ್ಯಾಣ ಯೋಜನೆ ಸಂಪೂರ್ಣ ನಿಂತು ಹೋಗಿದೆ. ಅಹಿಂದ ಎಂದು ಹೇಳುವವರು ಹಿಂದುಳಿದ ವರ್ಗಗಳಿಗೆ ವಂಚನೆ ಮಾಡಿ ಆಡಳಿತ ನಡೆಸುತ್ತಿದ್ದಾರೆ ಇದನ್ನು ಖಂಡಿಸಿ ಹೋರಾಟ ಮಾಡಲಾಗುವುದು ಎಂದರು.

ಬಿಜೆಪಿ ರಾಜ್ಯ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ - ರಘು ಕೌಟಿಲ್ಯ ಮಾತನಾಡಿದರು.

ಯುವಕರಲ್ಲಿ ಪಾರ್ಶ್ವವಾಯು ಹೆಚ್ಚಳ

ಬೆಂಗಳೂರು: ವಯೋವೃದ್ಧರಿಗೆ ಕಾಡುವ ಆರೋಗ್ಯ ಸಮಸ್ಯೆ ಪಾರ್ಶ್ವವಾಯು ಈಗ ಕರ್ನಾಟಕದ ಯುವ ಜನರಲ್ಲಿ ಅಪಾಯಕಾರಿ ಮಟ್ಟದಲ್ಲಿ ಹೆಚ್ಚಾಗುತ್ತಿದೆ ಎಂದು ಇತ್ತೀಚಿನ ಸಂಶೋಧನೆಯೊಂದು ತಿಳಿಸಿದೆ.

ದುರ್ಬಲ ಜೀವನಶೈಲಿ ಆಯ್ಕೆಗಳು, ತೀವ್ರ ಒತ್ತಡ ಮತ್ತು ಪಾರಿಸರಿಕ ಪ್ರಭಾವಗಳಿಂದ ಉಂಟಾಗುವ ಪಾರ್ಶ್ವವಾಯುವಿನ ಪ್ರಕರಣಗಳ ಸಂಖ್ಯೆಯು ರಾಜ್ಯದಲ್ಲಿ ಹದಿವಯಸ್ಸಿನರಲ್ಲೂ ಹೆಚ್ಚಾಗುತ್ತಿದೆ.

ಈ ಪಾರ್ಶ್ವವಾಯುಗಳು ಆಗಾಗ್ಗೆ ಗಂಭೀರ ನರಸಂಬಂಧಿ ಕೊರತೆಗಳನ್ನು ಉಂಟು ಮಾಡುತ್ತಿದ್ದು ಇದರಿಂದ ಬಳಲಿದವರು ದೈಹಿಕ, ಭಾವನಾತ್ಮಕ ಮತ್ತು ಅರಿವಿನ ಸವಾಲುಗಳಿಗೆ ಒಳಗಾಗುತ್ತಾರೆ.

ಪ್ರಾರಂಭಿಕ ಮಧ್ಯಪ್ರವೇಶ ಮತ್ತು ಪುನರ್ ವಸತಿಗಳು ಈ ತೀವ್ರವಾಗಿ ಬೆಳೆಯುತ್ತಿರುವ ಅನಾರೋಗ್ಯ ನಿಯತ್ರಿಸಲು ಅತ್ಯಂತ ಅಗತ್ಯವಾಗಿದೆ ಎಂದು 19 ವರ್ಷದ ಹುಡುಗನ ಗಮನಾರ್ಹ ಚೇತರಿಕೆಯಲ್ಲಿ ಕಂಡುಬಂದಿದೆ ಎಂದು ಎಚ್‌ಸಿಎಚ್ ರಿಕವರಿ ಅಂಡ್ ರಿಹ್ಯಾಬಿಲಿಟೇಷನ್ ಸೆಂಟರ್ ಪಿಎಂ ಅಂಡ್ ಆರ್ ಸ್ಪೆಷಲಿಸ್ಟ್ ಡಾ.ಧೀರಜ್ ಅಡಿಗ ಅವರು ತಿಳಿಸಿದ್ದಾರೆ.

ನಗರದಲ್ಲಿ ನಂದಿನಿ ದೋಸೆ, ಇಡ್ಲಿ ಹಿಟ್ಟು ಬಿಡುಗಡೆ ವಿಳಂಬ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಂದಿನಿ ಬ್ರ್ಯಾಂಡ್‌ನ ದೋಸೆ ಹಿಟ್ಟು ಹಾಗೂ ಇಡ್ಲಿ ಹಿಟ್ಟನ್ನು ಬಿಡುಗಡೆ ವಿಳಂಬವಾಗುವ ಸಾಧ್ಯತೆಯಿದ್ದು, ಕೆಎಂಎಫ್‌ನಲ್ಲಿ ಈ ವಿಚಾರಕ್ಕೆ ಸಂಬಂಧಿಸಿದಂತೆ ಆಂತರಿಕ ವಿರೋಧವುಂಟಾಗಿದೆ ಎಂದು ಮೂಲಗಳು ತಿಳಿಸಿದೆ.

ಈ ಹಿಂದೆ ಕೆಎಂಎಫ್ ಪ್ರೋಟಿನ್‌ಯುಕ್ತ ದೋಸೆ ಹಾಗೂ ಇಡ್ಲಿ ಹಿಟ್ಟನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ಚಿಂತನೆ ನಡೆಸಿತ್ತು. ಈ ಉತ್ಪನ್ನಗಳ ಬಿಡುಗಡೆಗೆ ದಿನಾಂಕ ನಿಗದಿಯಾಗಿತ್ತು. ಈ ನಿಟ್ಟಿನಲ್ಲಿ ಬಾಹ್ಯ ಕಂಪನಿಯೊಂದು ನಂದಿನಿ ಬ್ರ್ಯಾಂಡ್ ಹೆಸರಿನಲ್ಲಿ ದೋಸೆ ಹಿಟ್ಟು ಉತ್ಪಾದಿಸಿ ಮಾರಾಟ ಮಾಡಲಿ ಆಸಕ್ತಿ ತೋರಿಸಿತ್ತು. ಆದರೆ ಗುಣಮಟ್ಟದ ವಿಚಾರದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ ಎನ್ನುವ ಉದ್ದೇಶದಿಂದ ಕೆಎಂಎಫ್ ಆಡಳಿತ ಮಂಡಳಿ ಈ ಯೋಜನೆಯಿಂದ ಹಿಂದೆ ಸರಿದಿದ್ದು, ಮಾರುಕಟ್ಟೆಗೆ ದೋಸೆ ಹಿಟ್ಟು ಮತ್ತಷ್ಟು ವಿಳಂಬವಾಗಲಿದೆ ಎಂದು ಹೇಳಲಾಗುತ್ತಿದೆ. ದೋಸೆ ಹಿಟ್ಟಿನ ಗುಣಮಟ್ಟ ಕಾಯ್ದುಕೊಳ್ಳದಿದ್ದರೆ ನಂದಿನಿ ಬ್ರ್ಯಾಂಡ್‌ಗೆ ಕೆಟ್ಟ ಹೆಸರು ಬರುತ್ತದೆ. ಇದು ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ವಹಿವಾಟಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಆತಂಕವಿದೆ. ಈ ಹಿನ್ನೆಲೆ ನಂದಿನಿ ಬ್ರ್ಯಾಂಡ್‌ನ ದೋಸೆ ಹಿಟ್ಟನ್ನು ಮಾರುಕಟ್ಟೆಗೆ ಬಿಡುಗಡೆ ಮಾಡದಿರಲು ತೀರ್ಮಾನಿಸಲಾಗಿದೆ ಎಂದು ಕೆಎಂಎಫ್ ಮೂಲಗಳು ತಿಳಿಸಿದೆ. ಬೆಂಗಳೂರಿನಲ್ಲಿ ಪ್ರೋಟಿನ್ ಆಧಾರಿತ ಇಡ್ಲಿ ಹಾಗೂ ದೋಸೆ ಹಿಟ್ಟನ್ನು ಬಿಡುಗಡೆಗೊಳಿಸುವುದಾಗಿ ಕೆಲ ದಿನಗಳ ಹಿಂದೆ ಕೆಎಂಎಫ್ ಹೇಳಿತ್ತು. ಕಡಿಮೆ ಬೆಲೆಯಲ್ಲಿ 900 ಗ್ರಾಂ ಮತ್ತು 450 ಗ್ರಾಂ ದೋಸೆ, ಇಡ್ಲಿ ಹಿಟ್ಟನ್ನು ಮಾರಾಟ ಮಾಡಲು ಮುಂದಾಗಿತ್ತು. ಆದರೆ ಇದೀಗ ಈ ಯೋಜನೆಯಲ್ಲಿ ವಿಳಂಬವಾಗುತ್ತಿದೆ.

ಈ ಹಿಂದೆ ನಂದಿನಿ ಇಂಡಿಯನ್ ಸೂಪರ್ ಲೀಗ್ ಮತ್ತು ಪ್ರೊ ಕಬಡ್ಡಿ ಪಂದ್ಯಾವಳಿಗಳಿಗೆ ಕೇಂದ್ರ ಪ್ರಾಯೋಜಕತ್ವವನ್ನು ವಹಿಸಿತ್ತು, ಟಿ20 ವಿಶ್ವಕಪ್‌ನಲ್ಲಿ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ಕ್ರಿಕೆಟ್ ತಂಡವನ್ನು ಪ್ರಾಯೋಜಿಸಿತ್ತು. ಜತೆಗೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಂದಿನಿ ತಾಜಾ ಡೈರಿ ಉತ್ಪನ್ನವನ್ನು ಪರಿಚಯಿಸುವ ಮೂಲಕ ರಾಷ್ಟ್ರ ಮಟ್ಟದಲ್ಲಿ ಮಾರುಕಟ್ಟೆ ವಿಸ್ತರಣೆಯಾಗಿತ್ತು. ಜತೆಗೆ ದುಬೈನಲ್ಲಿಯೂ ನಂದಿನಿ ಕೆಫೆ, ಮಳಿಗೆಗಳನ್ನು ಪರಿಚಯಿಸಲಾಗಿತ್ತು.

ವಿಶ್ವವಾಣಿ
@vishwavaninews

ಬೆಂಗಳೂರು ಶುಕ್ರವಾರ 06-12-2024

ಅನುದಿನವೂ ವಿರಾಮಕ್ಕೆ ಒಂದು ನೆಪ

ಆರಾಮ

ಗಾಯಕ, ವಾದ್ಯಗೋಷ್ಠಿ ಸಂಘಟಕ ಗಂಧರ್ವ ಮಂಜು

ಗಂಧರ್ವ ಮಂಜು ಅವರಿಗೆ ಬಾಲ್ಯದಲ್ಲಿ ಸಂಗೀತ ಕಲಿಯುವ ಅವಕಾಶ ದೊರಕಲಿಲ್ಲ; ನಂತರ, ಸ್ವಂತ ಪರಿಶ್ರಮದಿಂದ ಹಾಡುಗಳನ್ನು ಹಾಡುತ್ತಾ, ವಾದ್ಯಗೋಷ್ಠಿಗಳಲ್ಲಿ ಭಾಗವಹಿಸುತ್ತಾ, ಈಗ ಗಂಧರ್ವ ಇವೆಂಟ್ಸ್ ಎಂಬ ಸಂಸ್ಥೆಯನ್ನು ಕಟ್ಟಿದ್ದಾರೆ. ಈಗ ಆ ಸಂಸ್ಥೆಗೆ ಬೆಳ್ಳಿಹಬ್ಬದ ವರ್ಷ.

• ಅಜಯ್ ಅಂಚೆಪಾಳ್ಯ

'ಗಂಧರ್ವ ಇವೆಂಟ್ಸ್'ನ ಮಾಲೀಕ ಮತ್ತು ಗಾಯಕ ಗಂಧರ್ವ ಮಂಜು ಅವರು ಸಂಗೀತ ಕ್ಷೇತ್ರದಲ್ಲಿ ಇಂದು ತಮ್ಮದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದ್ದಾರೆ. ಬಾಲ್ಯದಲ್ಲಿ ಸಂಗೀತ ಕಲಿಯುವಂತಹ ಅವಕಾಶ ಇರಲಿಲ್ಲ; ಬಡತನದಲ್ಲೇ ಬೆಳೆದರು. ಹತ್ತು ವರ್ಷದ ಬಾಲಕನಾಗಿದ್ದಾಗಲೇ ತಂದೆ-ತಾಯಿ ಇಬ್ಬರನ್ನೂ ಕಳೆದುಕೊಂಡರು. ನಂತರ ಅಣ್ಣ ಜಯರಾಂ ಅವರ ಆಸರೆಯಲ್ಲಿ ಬೆಳೆದರು. 8ನೇ ತರಗತಿಗೇ ವಿದ್ಯಾಭ್ಯಾಸಕ್ಕೆ ಇತಿಶ್ರೀ ಹೇಳುವ ಅನಿವಾರ್ಯತೆ. ಗಾಯನದ ಬಗ್ಗೆ ಅಪಾರ ಆಸಕ್ತಿ; ಆರಂಭದಲ್ಲಿ ಸಣ್ಣ ಪುಟ್ಟ ವಾದ್ಯಗೋಷ್ಠಿಯಲ್ಲಿ ಹಾಡತೊಡಗಿದರು. ಇವರ ಆಸಕ್ತಿ, ಗಾಯನ ಶೈಲಿ ಮತ್ತು ಸ್ವರ ಮಾಧುರ್ಯವನ್ನು ಕಂಡು, ಹಲವರು ಪ್ರೋತ್ಸಾಹ ನೀಡಿದರು; ಇದೇ ರೀತಿ ಗಾಯನ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿ, ಮುಂದೆ 'ಗಂಧರ್ವ ಇವೆಂಟ್ಸ್' ಎಂಬ ಸಂಸ್ಥೆ ಸ್ಥಾಪಿಸಿದರು.

ಹಿರಿಯರ ಮಾರ್ಗದರ್ಶನ

ಗಂಧರ್ವ ಗಾಯಕ ಪಿ.ಬಿ. ಶ್ರೀನಿವಾಸ್, ಎಸ್. ಜಾನಕಿ, ಎಲ್. ಆರ್. ಈಶ್ವರಿ, ಪಿ. ಸುಶೀಲ ಮುಂತಾದವರನ್ನು ಆಹ್ವಾನಿಸಿ ಸಂಗೀತ ಕಾರ್ಯಕ್ರಮ ಗಳನ್ನು ನೀಡುವ ಮಟ್ಟಕ್ಕೆ ಬೆಳೆದರು. ಮುಂದೆ ಇವರಿಗೆ ಎಸ್. ಪಿ. ಬಾಲಸುಬ್ರಹ್ಮಣ್ಯಂ ಅವರ ಸಾಂಗತ್ಯ ದೊರಕಿತು. ಕನ್ನಡದ ಹಿರಿಯ ಗಾಯಕರು ಇವರಿಗೆ ಮಾರ್ಗದರ್ಶನ ಮತ್ತು ಪ್ರೋತ್ಸಾಹವನ್ನು ನೀಡಿದ್ದನ್ನು ಗಂಧರ್ವ ಮಂಜು ಅವರು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಹಲವು ರಾಜಕೀಯ ದಿಗ್ಗಜರ ಬೃಹತ್ ಮತ್ತು ಅದ್ದೂರಿ ಕಾರ್ಯಕ್ರಮಗಳಲ್ಲಿ ವಾದ್ಯಗೋಷ್ಠಿ ನಡೆಸಿದ ಶ್ರೇಯಸ್ಸು ಇವರದು. ನಾಡಿನ ಹೆಮ್ಮೆಯ ಸಂಗೀತ ನಿರ್ದೇಶಕರಾದ ಹಂಸಲೇಖ, ಅರ್ಜುನ್ ಜನ್ಯ, ಗುರುಕಿರಣ್, ಸಾಧು ಕೋಕಿಲ, ಖ್ಯಾತ ಗಾಯಕರಾದ ರಾಜೇಶ್ ಕೃಷ್ಣನ್, ಚಂದನ್ ಶೆಟ್ಟಿ, ಹೇಮಂತ್, ಗಾಯಕಿಯರಾದ ಶಮಿತಾ ಮಲ್ನಾಡ್, ನಂದಿತ, ಅನುರಾಧ ಭಟ್ ಮುಂತಾದವರ ಕಾರ್ಯಕ್ರಮಗಳನ್ನು ಇವರು ಯಶಸ್ವಿಯಾಗಿ ಸಂಘಟಿಸಿದ್ದಾರೆ. 2000ರಲ್ಲಿಆರಂಭವಾದ 'ಗಂಧರ್ವ ಇವೆಂಟ್ಸ್' ವಾದ್ಯಗೋಷ್ಠಿ ಸಂಸ್ಥೆ ಈಗ ಬೆಳ್ಳಿಹಬ್ಬದ ಸಂಭ್ರಮದಲ್ಲಿದೆ. ಇತ್ತೀಚೆಗೆ ಮಾಲ್ದೀವ್ಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ, ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿಗೆ ಗಂಧರ್ವಮಂಜು ಅವರು ಭಾಜನರಾಗಿದ್ದಾರೆ ಮತ್ತು ಈ ಸಂದರ್ಭದಲ್ಲಿ ಅವರಿಗೆ ಅಭಿನಂದನೆ ಹೇಳೋಣ.

ಗುರುಗಳ ಆಶೀರ್ವಾದ

ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಮಹಾಗುರುಗಳ ಮಾರ್ಗದರ್ಶನ ಇವರ ಬದುಕಿನ ದಿಕ್ಕನ್ನೇ ಬದಲಿಸಿತು. ಇವರ ಅಭಿರುಚಿ ಮತ್ತು ಸಂಗೀತ ಕ್ಷೇತ್ರದಲ್ಲಿನ ಆಸಕ್ತಿಯನ್ನು ಕಂಡು, ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಮಹಾಗುರುಗಳು, 'ಅದೇ ಕ್ಷೇತ್ರದಲ್ಲಿ ಮುಂದುವರಿ, ನಿನಗೆ ಯಶಸ್ಸು ದೊರಕುತ್ತದೆ' ಎಂದು ಹುರಿದುಂಬಿಸಿ, ಆಶೀರ್ವದಿಸಿದರು; ಈ ಆಶೀರ್ವಚನ ಅಮೂಲ್ಯ ಎನಿಸಿದೆ. ಭೋವಿಮಠದ ಕಾರ್ಯಕ್ರಮಗಳ ಜೊತೆಗೆ ಕುಂಚಿಟಿಗರ ಮಠದ ಜಗದ್ಗುರುಗಳಾದ ಶ್ರೀ ಶಾಂತವೀರ ಸ್ವಾಮಿಗಳು ಹಾಗೂ ತರಳಬಾಳು ಶಾಖಾ ಮಠದ ಸಾಣೇಹಳ್ಳಿಯ ರಂಗ ಜಂಗಮ ಶ್ರೀ ಪಂಡಿತಾರಾಧ್ಯ ಸ್ವಾಮಿಗಳ ಹಲವಾರು ಭಕ್ತಿ ಕಾರ್ಯಕ್ರಮಗಳನ್ನು ನಡೆಸಿಕೊಡುವ ಸುವರ್ಣ ಅವಕಾಶ ದೊರಕಿತು.

ಅಣ್ಣ ನೀಡಿದ ಬೆಂಬಲ ಸಹಕಾರ

ಜನಿಸಿದ್ದು ಬಡಕುಟುಂಬದಲ್ಲಿ. ತಂದೆ ಬೀಸಪ್ಪ ಹಾಗೂ ಈರಮ್ಮನವರ ಮೂರನೇ ಪುತ್ರನಾಗಿ 1976. ಫೆಬ್ರವರಿ 1 ರಂದು ಮಾದನಾಯಕನಹಳ್ಳಿಯಲ್ಲಿ ಜನನ. ಚಿಕ್ಕ ವಯಸ್ಸಿನಲ್ಲೇ ತಾಯಿ ತಂದೆ ಇಬ್ಬರನ್ನೂ ಕಳೆದುಕೊಂಡಾಗ ಅಣ್ಣ ಜಯರಾಮ್ ನಮ್ಮನ್ನು ಸಾಕುವ ಜವಾಬ್ದಾರಿ ಹೊತ್ತರು. ಇಟ್ಟಿಗೆ ಗೂಡಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಅಣ್ಣನಿಗೆ ಅಂದು ದಿನಕ್ಕೆ ಸಿಗುತ್ತಿದ್ದ ಕೂಲಿ ಕೇವಲ 7 ರೂಪಾಯಿ; ಆದರೂ ಇವರ ಪೋಷಣೆಯನ್ನು ಮಾಡಿದರು. ಶಾಲೆಯಲ್ಲಿ ಪದ್ಯಗಳನ್ನು ರಾಗವಾಗಿ ಹಾಡುತ್ತಿದ್ದುದನ್ನು ಗಮನಿಸಿದ ಶಿಕ್ಷಕಿ ರಾಜಲಕ್ಷ್ಮಿ ಯವರು ಪ್ರತಿ ಶನಿವಾರ ಪದ್ಯಗಳನ್ನು ಹಾಡಿಸುತ್ತಿದ್ದರು. ಹೀಗೆ ಹಾಡುವ ಅಭಿರುಚಿ ಬೆಳೆಯಿತು.

ಬೆಳ್ಳಿ ಹಬ್ಬದ ಸಂಭ್ರಮ

ಸುಮಾರು 25 ವರ್ಷಗಳ ಹಿಂದೆ ಇವರು ಆರಂಭಿಸಿದ ಗಂಧರ್ವ ಇವೆಂಟ್ಸ್ ನಡೆದು ಬಂದ ಹಾದಿಯನ್ನು ಗಮನಿಸಿದರೆ, ಅದೊಂದು ಯಶೋಗಾಥೆ. ಆರಂಭದಲ್ಲಿ ಸಣ್ಣ ಮತ್ತು ಮಧ್ಯಮ ಗಾತ್ರದ ಸಮಾರಂಭಗಳಿಗೆ ಹಾಡುಗಳನ್ನು, ಮನರಂಜನೆಯನ್ನು ನೀಡುತ್ತಿದ್ದ 'ಗಂಧರ್ವ ಇವೆಂಟ್ಸ್' ನಂತರದ ವರ್ಷಗಳಲ್ಲಿ ರಾಜಕೀಯ ನಾಯಕರನ್ನೊಳಗೊಂಡ ಬೃಹತ್ ಕಾರ್ಯಕ್ರಮಗಳಲ್ಲಿ ಯಶಸ್ವಿಯಾಗಿ ಇವೆಂಟ್ಸ್ ನಡೆಸಿಕೊಡಲು ಆರಂಭಿಸಿತು. ಉತ್ತಮ ಸಂಗೀತ ಕಾರ್ಯಕ್ರಮವನ್ನು ನಡೆಸುವಲ್ಲಿ ಹೆಸರು ಮಾಡಿರುವ 'ಗಂಧರ್ವ ಇವೆಂಟ್ಸ್' ಈಗ ಬೆಳ್ಳಿ ಹಬ್ಬವನ್ನು ಆಚರಿಸಲು ಸಿದ್ಧತೆ ನಡೆಸಿದೆ.

ಸ್ವಂತ ವಾದ್ಯಗೋಷ್ಠಿ

ಮಾದನಾಯಕನ ಹಳ್ಳಿಯಲ್ಲಿ ಅಣ್ಣಮ್ಮ ದೇವಿ ಉತ್ಸವದಲ್ಲಿ ಹೆಚ್. ಮೂರ್ತಿಯವರ ಸಹಾಕಾರದೊಂದಿಗೆ ಪ್ರಥಮ ವಾದ್ಯಗೋಷ್ಠಿ ಕಾರ್ಯಕ್ರಮ ನೀಡುವ ಅವಕಾಶ ದೊರೆಯಿತು. ಮಾದನಾಯಕನ ಹಳ್ಳಿಯ ಗೆಳೆಯರೆಲ್ಲ ಸೇರಿ ಸ್ನೇಹ ಶಕ್ತಿ ಗೆಳೆಯರ ಬಳಗದ ವತಿಯಿಂದ ಆಯೋಜಿಸಿದ ಗಣೇಶೋತ್ಸವದಲ್ಲಿ ವಾದ್ಯಗೋಷ್ಠಿ ಕಾರ್ಯಕ್ರಮವನ್ನು ನೀಡಿದೆ. ಅಲ್ಲಿ ಕನ್ನಡ ಸೇನೆ ಸಂಘಟನೆಯ ಅಧ್ಯಕ್ಷರಾದ ಕೆ ಆರ್ ಕುಮಾರ್ ರವರ ಪರಿಚಯವಾಗಿ, ವಾದ್ಯಗೋಷ್ಠಿಯ ಜತೆಯಲ್ಲೇ, ಕನ್ನಡ ಪರ ಹೋರಾಟಗಳಲ್ಲಿ ಭಾಗವಹಿಸುತ್ತಾ ಇಡೀ ರಾಜ್ಯವನ್ನು ಸುತ್ತುವ ಅವಕಾಶ.

ರವಿರಾಜ್ ಅವರ ಪ್ರೋತ್ಸಾಹ

ಸಣ್ಣ ಪುಟ್ಟ ಕೆಲಸಗಳನ್ನು ಮಾಡುತ್ತಾ ದಿನಗಳನ್ನು ದೂಡುತ್ತಿದ್ದಾಗ ಗಣೇಶೋತ್ಸವಕ್ಕೆ ದೊಡ್ಡಬಳ್ಳಾಪುರದ ರವಿರಾಜ್ ಮ್ಯೂಸಿಕ್ ಆರ್ಕೆಸ್ಟ್ರಾವನ್ನು ಕರೆಸಲಾಗಿತ್ತು. ಸ್ನೇಹಿತರ ಒತ್ತಾಯದಿಂದ, ಅಲ್ಲಿ ಹಾಡಿದೆ. ಅಂದು ಪ್ರಪ್ರಥಮ ಬಾರಿಗೆ ವೇದಿಕೆಯಲ್ಲಿ ಹಾಡಿದೆ. ನನ್ನ ಗಾಯನವನ್ನು ಕಂಡ ರವಿರಾಜ್ ರವರು 'ಚೆನ್ನಾಗಿ ಹಾಡುತ್ತೀಯ' ಎಂದು ತಮ್ಮ ದೂರವಾಣಿ ಸಂಖ್ಯೆ ಕೊಟ್ಟು ಹೋದರು. ಅವರ ಆ ಸ್ಫೂರ್ತಿಯ ಮಾತು ನನ್ನ ಭವಿಷ್ಯವನ್ನೇ ಬದಲಾಯಿಸಿತು. ರವಿರಾಜ್ ರವರನ್ನು ಭೇಟಿಯಾದ ನಾನು ಅವರ ವಾದ್ಯಗೋಷ್ಠಿ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿದೆ. ಮಾದನಾಯಕನ ಹಳ್ಳಿಯಿಂದ ದೊಡ್ಡಬಳ್ಳಾಪುರಕ್ಕೆ ಓಡಾಡಲು ಸ್ನೇಹಿತರಾದ, ಜಿ ಜೆ ಗ್ರೂಪ್ಸ್‌ನ ನಾಗರಾಜ್ ಆರ್ಥಿಕ ಸಹಾಯವನ್ನು ಮಾಡಿ, ತಮ್ಮ ಬೈಕನ್ನು ನೀಡಿ ಪೆಟ್ರೋಲ್ ಕೂಡ ಹಾಕಿಸಿ ಕೊಟ್ಟು, ಪ್ರೋತ್ಸಾಹಿಸಿದರು.

ಹಿರಿಯರ ಮಾರ್ಗದರ್ಶನ

ಗಂಧರ್ವ ಮಂಜು ಅವರಿಗೆ ಬೆಂಬಲ ನೀಡಿದವರು ಹಲವರು. ಮಾಜಿ ಶಾಸಕರು ಹಾಗೂ ಮಾಜಿ ಮಂತ್ರಿಗಳಾಗಿರುವ ಗೂಳಿಹಟ್ಟಿ ಶೇಖರ್ ಅವರು ಹೊಸದುರ್ಗದಲ್ಲಿ ವಾದ್ಯಗೋಷ್ಠಿ ಕಾರ್ಯಕ್ರಮವನ್ನು ನಡೆಸಿಕೊಡುವ ಅವಕಾಶ ಮಾಡಿಕೊಟ್ಟರು. ಜಗಳೂರು ಕ್ಷೇತ್ರದ ಮಾಜಿ ಶಾಸಕರಾದ ಎಸ್. ವಿ. ರಾಮಚಂದ್ರ ರವರ ಪರಿಚಯವಾಗಿ ಅವರ ಕಾರ್ಯಕ್ರಮಗಳನ್ನು ಕೂಡ ಮಾಡುವ ಅವಕಾಶ ದೊರೆಯಿತು. ಎಸ್. ವಿ. ರಾಮಚಂದ್ರರವರ ಕುಟುಂಬ, ಅವರ ಶ್ರೀಮತಿಯವರಾದ ಇಂದಿರಮ್ಮನವರು ಬಹಳ ಪ್ರೋತ್ಸಾಹ ನೀಡಿದರು.

ಒಂದು ಕಾರ್ಯಕ್ರಮಕ್ಕೆ ಆಹ್ವಾನಿಸಲು ಪಿ.ಬಿ.ಶ್ರೀನಿವಾಸ್ ರವರನ್ನು ಭೇಟಿಯಾಗಲು ಚೆನ್ನೈಗೆ ಹೊರಟಿದ್ದೆ. ವಿಮಾನ ಒಂದು ಗಂಟೆ ತಡವಾಗಿ ಆಗಮಿಸಿತು. ಆ ಮಹಾನ್ ಗಾಯಕ ನನ್ನ ಭೇಟಿಗಾಗಿ ಚೆನ್ನೈನ ಒಂದು ಹೋಟೆಲ್‌ನಲ್ಲಿ ಕಾಯುತ್ತಿದ್ದರು. ವಿಳಂಬಕ್ಕಾಗಿ ಕ್ಷಮೆ ಕೇಳಿದೆ. ಆಗ ಪಿ.ಬಿ. ಶ್ರೀನಿವಾಸ್‌ರವರು, 'ಇಂದು ಸಮಯಕ್ಕೆ ಬೆಲೆ ನೀಡಿದರೆ ಮುಂದೊಂದು ದಿನ ಸಮಯ ನಿನಗೆ ಬೆಲೆಯನ್ನು ತಂದುಕೊಡುತ್ತದೆ' ಎಂದರು. ಇದು ನನ್ನ ಮನ ನಾಟಿತು. ಸಮಯಕ್ಕೆ ನೀಡಿದ ಮೌಲ್ಯವು ಇಂದು ನನಗೆ ಸಮಾಜದಲ್ಲಿ ಒಂದು ಬೆಲೆಯನ್ನು ತಂದು ಕೊಟ್ಟಿದೆ.

-ಗಂಧರ್ವ ಮಂಜು

ನಿರಂತರ ನೃತ್ಯ ಸಂಭ್ರಮ

• ಪಿ.ಎಸ್.ಗುರುರಾಜ್

ನಿರಂತರ ಕಲ್ಚರಲ್ ಮತ್ತು ಚಾರಿಟಬಲ್ ಟ್ರಸ್ಟ್ ಬೆಂಗಳೂರು, ಸೋಮಶೇಖರ ಚೂಡಾನಾಥ್ ಮತ್ತು ಸೌಮ್ಯಾ ಸೋಮಶೇಖರ ಅವರ ಮಾರ್ಗದರ್ಶನದೊಂದಿಗೆ ಮಲ್ಲೇಶ್ವರದ ಸೇವಾ ಸದನದಲ್ಲಿ 'ನಿರಂತರ ನೃತ್ಯ ಸಂಭ್ರಮ'ವನ್ನು ಇತ್ತೀಚಿಗೆ ಆಯೋಜಿಸಿತ್ತು. ಅಮೇರಿಕಾದಿಂದ ಬಂದ ಪ್ರಿಯಾ ನಾರಾಯಣ ಅವರ ಏಕವ್ಯಕ್ತಿ ಪ್ರದರ್ಶನದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಅವರು ಕಾರ್ಯಕ್ರಮವನ್ನು ಗಣಪತಿಯ ನಮಸ್ಕಾರದಿಂದ ಪ್ರಾರಂಭಿಸಿ, ನಂತರ ಶಿವನಿಗೆ ಮೀಸಲಾಗಿರುವ ಮಂತ್ರಮುಗ್ಧಗೊಳಿಸುವ ಪದವನ್ನು ಪ್ರಸ್ತುತಪಡಿಸಿದರು. ಮುಂದುವರಿದ ಭಾಗದಲ್ಲಿ ಪುತ್ತೂರಿನ ಮೂಕಾಂಬಿಕಾ ಕಲ್ಚರಲ್ ಅಕಾಡಮಿಯ ಶಿಷ್ಯರು ಭರತನಾಟ್ಯ ಪ್ರದರ್ಶನ ನೀಡಿದರು. ದೀಪಕ್ ಕುಮಾರ್ ಮತ್ತು ಪ್ರೀತಿಕಲಾ ಅವರ ಕೊರಿಯೋಗ್ರಾಫಿಯಲ್ಲಿ ರಚನೆಯಾದ ಈ ಪ್ರದರ್ಶನವು ಭರತನಾಟ್ಯದ ಮೂಲಕ ಪುರುಷ ಮತ್ತು ಸ್ತ್ರೀ ಶಕ್ತಿಗಳ ದೈವಿಕ ಸಮತೋಲನವನ್ನು ಸುಂದರವಾಗಿ ಪ್ರತಿಬಿಂಬಿಸಿತು. ಮೂರನೇ ಭಾಗದಲ್ಲಿ ಬೆಂಗಳೂರು ಕಲ್ಪನಾ ನೃತ್ಯ ಶಾಲೆಯ ಗುರು ಭಾರತಿ ವಿಠಲ್ ಮತ್ತು ಅವರ ಶಿಷ್ಯರು ತಮ್ಮ ಕಥಕ್ ನೃತ್ಯ ಪ್ರದರ್ಶನ ನೀಡಿದರು. ಅಂತಿಮ ಪ್ರದರ್ಶನವನ್ನು ಬೆಂಗಳೂರಿನ ಲಲಿತಾ ಕಲಾನಿಕೇತನದ ವಿದುಷಿ ರೇಖಾ ಜಗದೀಶ ಅವರ ಶಿಷ್ಯರು ಮಂಡಿಸಿದರು. ಈ ಯುವ ನೃತ್ಯಗುಂಪು ಭರತನಾಟ್ಯದಲ್ಲಿ ತಮ್ಮ ಅಪಾರ ಉತ್ಸಾಹ ಮತ್ತು ನೈಪುಣ್ಯವನ್ನು ತೋರಿಸಿ, ಪ್ರೇಕ್ಷಕರನ್ನು ತಮ್ಮ ಕೌಶಲ್ಯ ಮತ್ತು ಸಮರ್ಪಣೆಯಿಂದ ಮಂತ್ರಮುಗ್ಧಗೊಳಿಸಿತು.

ಭಾವ ಪ್ರಪಂಚದಲ್ಲಿ ನಾವು

ಜೀವನದಲ್ಲಿ ಸಂತೋಷದ ಸೂತ್ರ ಹೀಗಿರುತ್ತದೆ: ಸಾಧನೆಗಳನ್ನು ನಿರೀಕ್ಷೆಗಳಿಂದ ಭಾಗಿಸಿದಾಗ ಸಿಗುವುದೇ ಸಂತೋಷದ ಭಾಗಲಬ್ಧ.

• ಡಾ. ಎನ್ ಜಯರಾಮ ಶೆಟ್ಟಿ

ವ್ಯಕ್ತಿಯ ಸಾಮರ್ಥ್ಯದ – ದೈಹಿಕ ಮತ್ತು ಮಾನಸಿಕ– ಮೂಲ ಮಾಪನವಿರುವುದು ಆತನ ನಂಬಿಕೆ ಮತ್ತು ಭಾವುಕತೆಯ ನೆಲೆಯಲ್ಲಿ. ನಮ್ಮ ದೈಹಿಕ, ಮಾನಸಿಕ ಕ್ರಿಯೆಗಳನ್ನು ಉದ್ದೀಪನಗೊಳಿಸುವ, ಅವುಗಳ ವೇಗೋತ್ಕರ್ಷ ವೃದ್ಧಿಸುವ ಸಾಧನಗಳು, ಅನುಕೂಲತೆಗಳು ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಸಾಧ್ಯವಾಗಿದ್ದರೂ ಮಾನವ ಸಹಜ ಭಾವುಕತೆ ಮತ್ತು ಭಾವನಾ ಲಹರಿಯನ್ನು ಅರಿಯುವ ಸಾಧನ ಇನ್ನೂ ಲಭ್ಯವಾಗಿಲ್ಲ. ಏನನ್ನಾದರೂ ಮಾಡಬೇಕು 'ಅನ್ನಿಸದೆ' ನಾವದನ್ನು ಮಾಡೆವು. ಈ ಅನ್ನಿಸಿಕೆ ನಮ್ಮೆಲ್ಲ ಕ್ರಿಯೆಗಳ ಹಿಂದೆಯಿದೆ. ನಮ್ಮ ಬೇಕುಗಳನ್ನು ಸಂತೋಷ, ಸಮಾಧಾನ, ಸಮನ್ವಯತೆ, ಪ್ರೀತಿಸೂಕ್ಷ್ಮವಾಗಿ ಗಮನಿಸಿದರೆ ಅವುಗಳು ಭಾವನೆಯ ಒಂದು ಮಟ್ಟವೆಂದು ಹೇಳಬಹುದೇನೊ. ಮೂಲ ಇತ್ಯಾತ್ಮಕ ಭಾವನೆ, ಭಾವುಕತೆ, ರೂಪಾಂತರಗೊಂಡು ನಮ್ಮಲ್ಲಿ ನಕಾರಾತ್ಮಕ ಭಾವನೆಗಳು ಉಂಟಾಗಲು ಕಾರಣವೇನು? ಅತೃಪ್ತತೆ, ಸಿಡುಕುತನ,

ಸಿನಿಕತನ, ಕೆಟ್ಟಕೋಪ, ಅವ್ಯಕ್ತ ಭಯ, ಆತಂಕ ಇತ್ಯಾದಿ ಹಾನಿಕಾರಕ ಮನೋಭಾವಗಳು ನಮ್ಮನ್ನು ಆಶ್ರಯಿಸಬೇಕಾದರೆ ಪರಿಹಾರಾತ್ಮಕವಾಗಿ ನಾವೇನು ಮಾಡಬೇಕು?

ವ್ಯಕ್ತಿ ತನ್ನದೇ ಆದ ಭಾವುಕತೆಯ ರೂಪಗಳನ್ನು ಗುರುತಿಸಿಕೊಳ್ಳಲು ಸಾಧ್ಯ. ಪ್ರತಿ ಮಾತು, ಕೃತಿಯ ಹಿಂದಿನ ಭಾವನೆಗಳು ಅನೇಕಾನೇಕ ಸಲ ಅಲೆಗಳಂತೆ ಬಂದು ಹೋಗುವ ಅನುಭವ ಕೆಲವರಿಗಾದರೂ ಇರಲು ಸಾಧ್ಯ. ಅಂತಹವರು ಆ ಅಲೆಗಳನ್ನು ಗಮನಿಸುತ್ತಾರೆ. ಕೇವಲ ಗಮನದಿಂದಲೇ ಭಾವುಕತೆಯ ತೀವ್ರತೆ ಕಡಿಮೆಯಾಗಬಹುದೆಂದು ಮನೋವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಗಮನದ ಜೊತೆ ಕೆಲವು 'ನಿಲುವು' ಗಳನ್ನು ತೆಗೆದುಕೊಂಡಾಗ ನಮ್ಮ ಭಾವನಾ ನಿರ್ವಹಣೆ ಸುಗಮವಾಗುತ್ತದೆ. ಹಿಂದೆ ಸರಿದು ಜೀವನವನ್ನು ಅರಿಯಬಹುದು ಆದರೆ ಮುಂದೆ ಸಾಗುವ ಅನಿವಾರ್ಯತೆ ನಮಗಿದೆ.

ಮನಸ್ಸಿಗೆ ಪಿಡುಗು

ನಕಾರಾತ್ಮಕ ಭಾವಗಳ ವ್ಯಾಪಕತೆ ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಪಿಡುಗು ಇದ್ದ ಹಾಗೆ. ಇತರರನ್ನು ವಿನಾಕಾರಣ ದೂರುವ, ದೂಷಿಸುವ, ದ್ವೇಷಿಸುವ ಮನೋಭಾವದವರು ಆ ವಲಯಗಳಲ್ಲೇ ಇರಬೇಕಾಗಿರುತ್ತೆ ನೋಡಿ. ಇನ್ನೊಬ್ಬರನ್ನು ನೀರಿನಲ್ಲಿ ಮುಳುಗಿಸಿ ಹಿಡಿಯುವವರೂ ಮುಳುಗಿರಬೇಕಲ್ಲವೆ? ನಕಾರಾತ್ಮಕ ಭಾವನೆ, ನಡೆನುಡಿಯಿಂದ ಚಡಪಡಿಸುವ ವ್ಯಕ್ತಿ ತೆರಬೇಕಾದ ಬೆಲೆ ಯಾವುದು? ಎದೆಗೂಡಿನಲ್ಲಿ ಕಲ್ಲನ್ನು ಹೊತ್ತ ಅನುಭವ, ತಲೆಯಲ್ಲಿ ಒತ್ತಡ, ಹೊಟ್ಟೆಯಲ್ಲಿ ಪತಂಗ ಓಡಾಡಿದ ಹಾಗೆ, ಚರ್ಮದ ಮೇಲೆ ಬರೆ, ಅಲರ್ಜಿ, ಸಾಮಾನ್ಯ ಶೀತ, ಉಸಿರಾಟದಲ್ಲಿ ತೊಂದರೆ, ರಕ್ತದ ಒತ್ತಡ, ಅಪಘಾತ ಬಯಕೆ, ಸಂಸಾರ ಜೀವನದಲ್ಲಿ ನಿರಾಸಕ್ತಿ ಇತ್ಯಾದಿಇತ್ಯಾದಿ.

ಭಾವುಕತೆ ನಿರ್ವಹಣೆ: ಪಂಚ ಸೂತ್ರಗಳು

ನಾವು ಭಾವನೆಗಳ ದಿಕ್ಕನ್ನು ಬದಲಿಸಬಹುದು! ಯಾವಾಗಲೂ ಗತಕಾಲದ ಘಟನೆಗಳನ್ನು ಕುರಿತು ಚಿಂತಿಸುವ ವ್ಯಕ್ತಿ ಎರಡು ಮುಖ್ಯ ನಕಾರಾತ್ಮಕ ಭಾವನೆಗಳಿಂದ ಬಳಲುತ್ತಾನೆ : ಒಂದು ಪಶ್ಚಾತ್ತಾಪ, ಇನ್ನೊಂದು ತಪ್ಪು ಪ್ರಜ್ಞೆ. ಅದೇ ಭವಿಷ್ಯ ಕಾಲದ ಕುರಿತು ಚಿಂತಿಸುವ ವ್ಯಕ್ತಿಯನ್ನು ಗಮನಿಸಿ. ಆತ ಎದುರಿಸುವ ಎರಡು ಮುಖ್ಯ ಭಾವಗಳು, ಒಂದು ಆತಂಕ ಮತ್ತು ಇನ್ನೊಂದು ಭಯ. ಭಾವನೆಗಳ ದಿಕ್ಕನ್ನು ಬದಲಿಸಿಕೊಂಡಾಗ, ಹೆಚ್ಚೆಚ್ಚು ವಾಸ್ತವಕ್ಕೆ ಹತ್ತಿರವಾದಾಗ ಭಾವ ನಿರ್ವಹಣೆ ಸುಗಮವಾಗುತ್ತದೆ,

ಘಟನೆಗಳನ್ನು ನಾವು ತಡೆಯಲಾರೆವು ಆದರೆ ಆ ಘಟನೆಗಳನ್ನು ಸ್ವೀಕರಿಸುವ ರೀತಿಯಲ್ಲಿ ವೈಯಕ್ತಿಕ ಬದಲಾವಣೆಗಳನ್ನು ಮಾಡಿಕೊಳ್ಳಲು ಸಾಧ್ಯ, ನಮ್ಮ ಎಣಿಕೆಗೆ ಸರಿಯಾಗಿ ವಸ್ತು, ಸ್ಥಿತಿಯಿರಬೇಕೆನ್ನುವ ಬಯಕೆ ಸರಿಯಲ್ಲ. ಗಾಳಿ ಬೀಸಿದ ಹಾಗೆ ಕೊಡೆ ಹಿಡಿಯುವರನ್ನು ನೋಡಿ, ಅವರು ಸಮಯ ಸಾಧಕರಲ್ಲ, ಬದುಕಲು ಕಲಿತವರು.

ವಿಚಾರ ಹೀನ ಯೋಚನೆ ಮತ್ತು ನಂಬಿಕೆಗಳನ್ನು ವಾಸ್ತವಕ್ಕೆ ಪರಿವರ್ತಿಸಿಕೊಳ್ಳುವ ಕಲೆಯನ್ನು ನಾವು ಮೈಗೂಡಿಸಿಕೊಳ್ಳಬೇಕು. ಉದಾ: 'ಎಲ್ಲರೂ ನನ್ನನ್ನು ಮೆಚ್ಚಿಕೊಳ್ಳಬೇಕು' ಎನ್ನುವ ಭಾವ ಪ್ರಾಯೋಗಿಕವಲ್ಲ; 'ಎಲ್ಲರೂ ನನ್ನನ್ನು ಮೆಚ್ಚಿಕೊಳ್ಳಬೇಕಾಗಿಲ್ಲ, ಕೆಲವರು ಅವರದ್ದೇ ಕಾರಣಗಳಿಗಾಗಿ ನನ್ನನ್ನು ಟೀಕಿಸುವುದರಲ್ಲಿ ಏನೂ ತೊಂದರೆಯಿಲ್ಲ, ಅದು ಸಹಜ ಪರಿಸ್ಥಿತಿ' ಈ ನಿಲುವು ಸಾಧುವಾದದ್ದು.

ನಾವು ಎಲ್ಲಿಯವರೆಗೆ ನೆಟ್ಟಗಿರುತ್ತೇವೆ ಅಲ್ಲಿಯ ತನಕ ನಮ್ಮ ಸೊಟ್ಟ ನೆರಳಿಗೆ ಹೆದರಬೇಕಾಗಿಲ್ಲ. ನಮ್ಮ ಅನೇಕ ಅಂಜಿಕೆಯ ಭಾವಗಳನ್ನು ಗಮನಿಸಿದರೆ ಅವು ಪರಾವಲಂಬನದ ತುಡಿತ ದಲ್ಲಿರುವುವು. ಪರಾವಲಂಬನದ ತೀವ್ರತೆ ವ್ಯಕ್ತಿಯನ್ನು ಏಕಕಾಲದಲ್ಲಿ ಹೇಡಿ ಮತ್ತು ಕ್ರೂರಿಯನ್ನಾಗಿ ಮಾಡುತ್ತದೆ ಯೆಂದು ಮನೋವಿಜ್ಞಾನ ಸಾರುತ್ತದೆ.

ಜೀವನದಲ್ಲಿ ಸಂತೋಷದ ಸೂತ್ರ ಹೀಗಿರುತ್ತದೆ: ಸಾಧನೆಗಳನ್ನು ನಿರೀಕ್ಷೆಗಳಿಂದ ಭಾಗಿಸಿದಾಗ ಸಿಗುವುದೇ ಸಂತೋಷದ ಭಾಗಲಬ್ಧ. ಸಾಧನೆಗಳನ್ನು ವರ್ಧಿಸಿದಷ್ಟೂ ನಮ್ಮ ಸಂತೋಷ (ಸಂಪತ್ತು) ಹೆಚ್ಚಬಹುದು. ಸಂತೋಷಕ್ಕೆ ಇನ್ನೊಂದು ಸುಲಭ ಮಾರ್ಗವನ್ನು ಗಮನಿಸಿ, ನಿರೀಕ್ಷೆ ಮಟ್ಟವನ್ನು ಕಡಿಮೆ ಮಾಡಿದಾಗಲೂ ಅದೇ ಭಾಗಲಬ್ಧ ಉಳಿಯುವ ಸಾಧ್ಯತೆ ಇದೆ.

ಸುಂಟರಗಾಳಿ

ಮತ್ತೆ ಬಂದಿದೆ ಸಮುದ್ರದಲ್ಲಿ ಬಿರುಗಾಳಿ
ಆಗಸದ ತುಂಬಾ ಮೋಡಗಳ ಹಾವಳಿ
ಮಳೆ ಸುರಿದಿದೆ ಎಲ್ಲೆಡೆ ಧಳಿ ಧಳಿ
ಕೃಷಿಕನ ಬದುಕು ಕೊಚ್ಚಿಹೋಗಿದೆ ನೀರಲಿ

• ಕಿರಣ್ ಕೊರ್ಕರ್ಣಿ

ದಿನ ದರ್ಶಿಕೆ

ಮಾರ್ಗಶಿರ ಮಾಸ, ಶುಕ್ಲ ಪಕ್ಷ, ಪಂಚಮಿ ತಿಥಿ, ಶ್ರವಣ ನಕ್ಷತ್ರ, ಧ್ರುವ ಯೋಗ, ಬಾಲವ ಕರಣ, ಮಕರ ಲಗ್ನ, ವೃಶ್ಚಿಕ ರಾಶಿ, ಹೇಮಂತ ಋತು, 1946 ಕ್ರೋಧಿನಾಮ ಸಂವತ್ಸರ

ಮನೆಮದ್ದು

1 ಚ. ತುಳಸಿ, 1 ಚ. ಅಜಮೋದ, 1 ಚ. ಬೆಳ್ಳುಳ್ಳಿ ರಸ, 1 ಚ. ಅಜ್ವಾನ, 1/2 ಚ. ಜೀರಿಗೆಯನ್ನು ಒಟ್ಟುಗೂಡಿಸಿ. ಚಹಾದೊಂದಿಗೆ ಕುಡಿಯಿರಿ. ಗಂಟೆಗೆ 2 ಬಾರಿ ಸೇವಿಸಿ. ಇದು ಉರಿತ ಶಮನಗೊಳಿಸಿ, ಜ್ವರವನ್ನು ಕಡಿಮೆ ಮಾಡುತ್ತದೆ. ಕಫ ಮತ್ತು ಶೀತವನ್ನು ನಶಿಸಲು ಸಹಾಯಕವಾಗಿದೆ. ಹಗುರವಾದ ಶ್ವಾಸಕೋಶ ಮತ್ತು ಕೊಳ್ಳದಗುಣಗಳು ಅನೇಕ ಡಾಕ್ಟರ್‌ಗಳು ಸೂಚಿಸಿದ್ದಾರೆ.

ಸೌಂದರ್ಯ ಸೂತ್ರ

2 ಚ. ತೆಂಗಿನ ಹಾಲು, 1 ಚ. ನಿಂಬೆ ಹಣ್ಣಿನ ರಸವನ್ನು ಚೆನ್ನಾಗಿ ಮಿಶ್ರಣ ಮಾಡಿ. ಮುಖ ಮತ್ತು ಕೈಗೆ ಹಚ್ಚಿ, 10-15 ನಿಮಿಷಗಳವರೆಗೆ ಬಿಡಿ. ತಣ್ಣಿಯಾದ ನೀರಿನಿಂದ ಮುಖವನ್ನು ತೊಳೆಯಿರಿ. ಇದು ನಿಮ್ಮ ಚರ್ಮವನ್ನು ಹೈಡ್ರೇಟ್ ಮಾಡುತ್ತದೆ ಮತ್ತು ನಿಂಬೆ ಹಣ್ಣಿನ ರಸ ನಿಮ್ಮ ಚರ್ಮದ ಸಮಸ್ಯೆಗಳನ್ನು ಕಡಿಮೆ ಮಾಡುತ್ತದೆ.

ದಿನ ಭವಿಷ್ಯ

ಮೇಷ: ಹೊಸ ಯೋಜನೆಗಳಿಗೆ ಅವಕಾಶ. ಆರ್ಥಿಕ ಸ್ಥಿರತೆ ಉತ್ತಮವಾಗುವುದು. ಸ್ನೇಹಿತರೊಂದಿಗೆ ಉತ್ತಮ ಸಂದರ್ಭ.

ವೃಷಭ: ಪ್ರಯತ್ನಗಳು ಫಲ ನೀಡಲಿವೆ. ಕುಟುಂಬದಲ್ಲಿ ಆನಂದದ ಘಳಿಗೆ. ಯೋಚನೆಗಳು ಯಶಸ್ವಿಯಾಗಲಿವೆ.

ಮಿಥುನ: ಪ್ರಮುಖ ಕೆಲಸ ಯಶಸ್ವಿ. ಸಹಕಾರ ಲಭ್ಯ. ಹೊಸ ಪರಿಚಯದಿಂದ ಲಾಭ.

ಕಟಕ: ಕಾರ್ಯಗಳಲ್ಲಿ ಶ್ರದ್ಧೆ ಇರಲಿ. ಸಂಬಂಧಗಳಲ್ಲಿ ಸಹನೆ. ಪ್ರಯಾಣದಿಂದ ಲಾಭ ಸಾಧ್ಯತೆ.

ಸಿಂಹ: ಉತ್ಸಾಹ ಹೆಚ್ಚುವುದು. ಉದ್ಯೋಗದಲ್ಲಿ ಪ್ರಗತಿ. ಆತ್ಮವಿಶ್ವಾಸ ಉಂಟಾಗುವುದು.

ಕನ್ಯಾ: ಸಕಾರಾತ್ಮಕ ದಿನ. ಆರ್ಥಿಕ ಪ್ರಗತಿ. ಹೊಸ ಅವಕಾಶಗಳು ಲಭ್ಯವಾಗಲಿವೆ.

ತುಲಾ: ವ್ಯಾಪಾರದಲ್ಲಿ ಲಾಭ. ಹೊಸ ಸಂಪರ್ಕಗಳಿಂದ ಸಹಾಯ. ಶ್ರೇಷ್ಠ ಸಮಯ.

ವೃಶ್ಚಿಕ: ಶ್ರದ್ಧೆಯಿಂದ ಕೆಲಸ ಮಾಡಿದರೆ ಯಶಸ್ಸು. ಕುಟುಂಬದಲ್ಲಿ ಶಾಂತಿ. ಆರ್ಥಿಕ ಬೆಳವಣಿಗೆ.

ಧನು: ಪ್ರಗತಿಪರ ದಿನ. ಜೀವನಶೈಲಿ ಸುಧಾರಣೆ. ಹೊಸ ಯೋಜನೆಗಳಲ್ಲಿ ಯಶಸ್ಸು.

ಮಕರ: ಹಳೆಯ ಕಷ್ಟಗಳು ಪರಿಹಾರವಾಗುತ್ತವೆ. ಶ್ರದ್ಧೆಯಿಂದ ಕಾರ್ಯ ನಿರ್ವಹಿಸಿ.

ಕುಂಭ: ಹೊಸ ಕೆಲಸದಲ್ಲಿ ಯಶಸ್ಸು. ಸ್ನೇಹಿತರ ಸಹಕಾರ ಲಭ್ಯ. ಆರೋಗ್ಯದಲ್ಲಿ ಸುಧಾರಣೆ.

ಮೀನ: ಧೈರ್ಯದಿಂದ ನಿರ್ಧಾರ ಕೈಗೊಳ್ಳಿ. ಪರಿಚಯಗಳು ಉತ್ತಮ ಫಲ ನೀಡಲಿವೆ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1956: ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪರಿನಿರ್ವಾಣವಾಯಿತು.
- 1992: ರಾಮ ಮಂದಿರದ ಮೇಲೆ ಅಕ್ರಮವಾಗಿ ಕಟ್ಟಿಸಿದ್ದ ಬಾಬ್ರಿ ಮಸೀದಿಯನ್ನು ಕರ ಸೇವಕರು ನೆಲಸಮ ಮಾಡಿದರು.
- 1993: ಭಾರತ ತಂಡದ ಖ್ಯಾತ ಬೌಲರ್ ಜಸ್ಪ್ರಿತ್ ಬೂಮ್ರಾ ಹುಟ್ಟುಹಬ್ಬ.
- 1988: ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ರವೀಂದ್ರ ಜಡೇಜ ಜನಿಸಿದರು.
- 1907: ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಚಿಂಗ್ರಿಪೊಟಾ ರೈಲ್ವೇ ನಿಲ್ದಾಣದಲ್ಲಿ ಡಕಾಯಿತಿಯಾಯಿತು.

ಚಿತ್ರಸ್ಫೂರ್ತಿ

'ಮಗ, ಸೈಕಲ್ ಹೊಡೀ ಬೇಕಾದರೆ, ನಡೀಬೇಕದಾಗ ಬಿದ್ದರೆ, ಯಾರಿಗೂ ಗೊತ್ತಾಗದಹಾಗೇ ಎದ್ದೇಳು, ಆದರೆ, ಜೀವನದಲ್ಲಿ ಏನಾದರೂ ಬಿದ್ದರೆ, ಎಲ್ಲರೂ ನೋಡೋ ರೀತಿಯಲ್ಲಿ ಏಳು' ಅಂತ ಯಾರೂ ಹೆಸರಾಂತ ಶಾಸಕರು ಹೇಳುತ್ತಿರುತ್ತಾರೆ. ಇವನಿಗೂ ಅದೇ ಮಾತು ಅನ್ವಯ!

▸▸ ಚಿತ್ರ: ಅಲ್ಲಿ ಫೆಬ್ರಿ ಸುಜಿಟಾ

ಪ್ರತಿ ಸಮಸ್ಯೆಗೂ ಪರಿಹಾರ ಇರಲೇ ಬೇಕಿಲ್ಲ

ಒಬ್ಬ ರಾಜ ತನ್ನ ಮುಂದಿನ ವಾರಸುದಾರನ ಆಯ್ಕೆಗಾಗಿ ಒಂದು ಪರೀಕ್ಷೆ ಇಟ್ಟನು. ಅದು ಅರಮನೆಯ ಮುಖ್ಯ ದ್ವಾರದ ಮೇಲೆ ಒಂದು ಗಣಿತವನ್ನು ಬರೆಸಿದನು. 'ಈ ಲೆಕ್ಕಕ್ಕೆ ಉತ್ತರ ಕಂಡು ಹಿಡಿದು ಬಾಗಿಲು ಯಾರು ಬಾಗಿಲು ತೆಗೆಯುತ್ತಾರೋ, ಅವರಿಗೆ ರಾಜ್ಯ ಪದವಿ' ಎಂದಾಗಿತ್ತು. ರಾಜ್ಯದ ಮೂಲೆ ಮೂಲೆಗಳಿಂದ ಅಲ್ಲದೆ ಬೇರೆ ಬೇರೆ ರಾಜ್ಯಗಳಿಂದ, ಬುದ್ಧಿವಂತರಾದ ರಾಜನೀತಿಜ್ಞರು, ಗಣಿತ, ಜ್ಯೋತಿಷ್ಯ, ಹಾಗೂ ವಿಜ್ಞಾನಿಗಳು ಸೇರಿದಂತೆ, ಅನೇಕ ಪಂಡಿತೋತ್ತಮರು ಬಂದರು. ಆದರೆ ಅವರೆಷ್ಟೇ ಪ್ರಯತ್ನಿಸಿದರೂ ಆ ಲೆಕ್ಕವನ್ನು ಬಿಡಿಸಲು ಸಾಧ್ಯವಾಗಲಿಲ್ಲ ಇದರಿಂದ ಅರಮನೆ ಮುಖ್ಯ ದ್ವಾರ ತೆರೆಯಲಿಲ್ಲ. ಬಂದವರು ಯಾರು ಆಯ್ಕೆಯಾಗಲಿಲ್ಲ ಇನ್ನೇನು ಎನ್ನುವಾಗಲೇ ಇಬ್ಬರು ಮಾತ್ರ ಉಳಿದರು.

ಅವರಲ್ಲಿ ಒಬ್ಬ ಪುಸ್ತಕ ತೆಗೆದುಕೊಂಡು ಅಲ್ಲಿದ್ದ ಲೆಕ್ಕ ನೋಡಿ, ಕೂಡಿ- ಕಳೆದು- ಭಾಗಿಸಿ- ಗುಣಾಕಾರ ಹಾಕಿ ಸಮಸ್ಯೆ ಬಿಡಿಸಲು ನೋಡಿದ. ಆದರೆ ಅವನಿಂದ ಸಾಧ್ಯವಾಗಲಿಲ್ಲ. ಉಳಿದ ಕೊನೆ ಹುಡುಗ ಅಂದುಕೊಂಡ. ಈ ಲೆಕ್ಕ ಬಿಡಿಸಲು, ಎಂತೆಂಥ ಮಹಾನ್ ಮೇಧಾವಿಗಳ ಕೈಯ್ಯಲ್ಲೂ ಆಗಲಿಲ್ಲ. ನನಗೆ ಬುದ್ಧಿ ತೋರಿದ ಹಾಗೆ ಲೆಕ್ಕ ಬಿಡಿಸಿ ನಂತರ ಈ ದ್ವಾರವನ್ನು ಮೊದಲು ತೆರೆಯಬೇಕು. ಈ ದ್ವಾರ ತೆಗೆಯಲು ಒಂದು ಸುಲಭವಾದ ಸೂತ್ರ ಇರಲೇಬೇಕು. ಅದು ಕಂಡುಹಿಡಿಯಲು ಆಗುತ್ತಿಲ್ಲ. ಅದು ಯಾವುದಿರಬಹುದು ಎಂದು ಎಲ್ಲವನ್ನು ಮರೆತು ಕಣ್ಣು ಮುಚ್ಚಿ ಕೆಲ ಕಾಲ ಯೋಚಿಸಿದ ಅವನ ಮನಸ್ಸು ಹೇಳಿತು. ಮೊದಲು ನಿನಗೆ ತೋಚಿದ ಹಾಗೆ ಲೆಕ್ಕ ಬಿಡಿಸು ನಂತರ ಬಾಗಿಲನ್ನ ಜೋರಾಗಿ ತಟ್ಟಿ ನೋಡು ಎಂದು. ಆತ ಮನಸ್ಸಿನ ಮಾತು ಕೇಳಿದ, ನನಗೆ ಗೊತ್ತಿದ್ದ ಹಾಗೆ ಲೆಕ್ಕ ಬಿಡಿಸಿ ಬಾಗಿಲು ತಟ್ಟಿದ ಕೂಡಲೇ ಅರಮನೆಯ ಮುಖ್ಯದ್ವಾರ ತೆಗೆಯಿತು. ಅವನನ್ನೆ ರಾಜ್ಯದ ಮುಂದಿನ ರಾಜ ಎಂದು ರಾಜ ಘೋಷಿಸಿದ. ಎಲ್ಲೆಡೆ ಹರ್ಷೋದ್ಗಾರವಾಯಿತು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಇದರ ಸೂತ್ರ ಸರಳ. ನಾವು ಸಹ ಕೆಲವೊಮ್ಮೆ ಉಗುರಲ್ಲಿ ಆಗುವ ಕೆಲಸಕ್ಕೆ ಕೊಡಲಿ ತೆಗೆದುಕೊಂಡರು ಎಂಬಂತೆ ಮಾಡಿಕೊಳ್ಳುತ್ತೇವೆ. ನಮ್ಮ ಜೀವನದಲ್ಲೂ ದೊಡ್ಡ ದೊಡ್ಡ ಸಮಸ್ಯೆಗಳು ಬಂದಿರುತ್ತವೆ. ಪ್ರತಿಯೊಂದು ಬೀಗಕ್ಕೂ ಕೀಲಿ ಕೈ ಇರುವಂತೆ, ಎಲ್ಲಾ ಸಮಸ್ಯೆಗೂ ಒಂದೊಂದು ಪರಿಹಾರ ನಮ್ಮ ಮುಂದೆಯೇ ಇರುತ್ತದೆ. ಆದರೆ ನಮ್ಮಲ್ಲಿ ಯೋಚಿಸುವ ತಾಳ್ಮೆ, ಸೂಕ್ಷ್ಮತೆ, ದೃಷ್ಟಿಕೋನ, ಎಲ್ಲಕ್ಕಿಂತ ಮುಖ್ಯವಾಗಿ ಮಾರ್ಗ ಹುಡುಕುವ ವ್ಯವಧಾನ ಇರುವುದಿಲ್ಲ. ಹೀಗಾಗಿ ಬಲೆಯಲ್ಲಿ ಸಿಕ್ಕ ಮೀನಿನಂತೆ ಒದ್ದಾಡುತ್ತೇವೆ. ಕೆಲವೊಮ್ಮೆ ನಮ್ಮ ಮುಂದಿರುವ ಸಮಸ್ಯೆಗೆ ಪರಿಹಾರಗಳೇ ಇರುವುದಿಲ್ಲ. ಆಗ ನಾವು ಆ ಸಮಸ್ಯೆಯನ್ನು ಬಿಟ್ಟು ಜೀವನದಲ್ಲಿ ಬೇರೆ ಕಡೆಗೆ ಗಮನಹರಿಸಬೇಕಾಗುತ್ತದೆ. ಈಗಲೂ ಕೂಡ ಆ ಹುಡುಗನಿಗೆ ಗಣಿತದ ಸಮಸ್ಯೆಗೆ ಪರಿಹಾರ ಸಿಗಲಿಲ್ಲ. ಆದರೆ ಅವನು ಅದರಿಂದ ಧೃತಿಗೆಡಲಿಲ್ಲ. ಬದಲಾಗಿ ತಾನು ರಾಜನ ಉತ್ತರಾಧಿಕಾರಿಯಾಗುವ ಇಚ್ಛೆಯಿಂದ ಬಾಗಿಲನ್ನು ತೆರೆಯುವ ಕಡೆ ಯೋಚಿಸಿದ. ಅಂತೆಯೇ ಜೀವನದಲ್ಲಿ ನಮಗೆ ಕೆಲವೊಮ್ಮೆ ಕಣ್ಣಿಗೆ ಕಾಣುವ ಸಮಸ್ಯೆಗೆ ಪರಿಹಾರ ಸಿಗದೇ ಹೋಗಬಹುದು.

ಆದರೆ ಅದನ್ನು ಹುಡುಕುವ ಪ್ರಯತ್ನದಲ್ಲಿ ಮತ್ತಾವುದೋ ಒಂದು ಹಳೆಯ ಸಮಸ್ಯೆಗೆ ಪರಿಹಾರ ಸಿಕ್ಕಿರುತ್ತದೆ. ಮತ್ತೊಂದು ವಿಷಯ ನಮ್ಮ ಜೀವನದಲ್ಲಿ ಇರುವ ಎಲ್ಲ ಸಮಸ್ಯೆಗಳಿಗೂ ಪರಿಹಾರ ಸಿಗಲೇಬೇಕು ಎಂದೇನೂ ಇಲ್ಲ. ಕೆಲವೊಮ್ಮೆ ಪರಿಹಾರ ಇಲ್ಲದಿರುವುದು ಕೂಡ ಆ ಸಮಸ್ಯೆಯ ಗುಣ ಎಂದು ಅರಿತು ಅದನ್ನು ಅಲ್ಲಿಗೆ ಬಿಟ್ಟು ಮುಂದಿನ ಜೀವನದ ಕಡೆ ಗಮನ ಹರಿಸಬೇಕು. ಇಲ್ಲದಿದ್ದರೆ ಅನಗತ್ಯವಾಗಿ ಸಮಯ ಹಾಳು ಮಾಡಿಕೊಳ್ಳುತ್ತೇವೆ. ಎಲ್ಲಕ್ಕಿಂತ ಮುಖ್ಯವಾಗಿ ಸರಳ ಸುಂದರವಾಗಿ ಬದುಕಲು ಜೀವನಕ್ಕೆ ಏನು ಬೇಕು ಅದು ಅಂದಂಧಿಗೆ ಒದಗಿ ಬರುತ್ತಿದ್ದರೆ, ಹೆಚ್ಚು ತಲೆ ಕೆಡಿಸಿಕೊಳ್ಳಬಾರದು. ಒಂದೊಂದೇ ದಿನವನ್ನು ಚಂದವಾಗಿಸಿಕೊಳ್ಳಿ ಮುಂದೆ ಹಿಂತಿರುಗಿ ನೋಡಿದಾಗ ನಡೆದ ದಾರಿಯೆಲ್ಲ ಚಂದವಾಗಿರುತ್ತದೆ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಕೆಳಗಿನವರಲ್ಲಿ 'ಆನಂದ ಮಠ' ಕೃತಿಯ ಲೇಖಕರು ಯಾರು?

- ಎ. ರಾಜಾ ರಾಮ್ ಮೋಹನ್ ರಾಯ್.
- ಬಿ. ಬಾಲಗಂಗಾಧರ ತಿಲಕ್.
- ಸಿ. ಭಗತ್ ಸಿಂಗ್.
- ಡಿ. ಬಂಕಿಮ್ ಚಂದ್ರ ಚಟರ್ಜಿ.

ಉತ್ತರ: ಡಿ. ಬಂಕಿಮ್ ಚಂದ್ರ ಚಟರ್ಜಿ.



ಮಾಹಿತಿ

ಆನಂದಮಠವು ಬಂಕಿಮ್ ಚಂದ್ರ ಚಟರ್ಜಿಯವರು ರಚಿಸಿದ ಕಾದಂಬರಿಯಾಗಿದೆ. ಇದು 1882 ರಲ್ಲಿ ಪ್ರಕಟವಾಯಿತು. ಭಾರತದ ರಾಷ್ಟ್ರೀಯ ಗೀತೆ, ವಂದೇ ಮಾತರಂ ಮೂಲತಃ ಈ ಕಾದಂಬರಿಯಲ್ಲಿದೆ. 1700 ರ ದಶಕದ ಉತ್ತರಾರ್ಧದ ಸನ್ಯಾಸಿ ದಂಗೆಯನ್ನು ಈ ಕಾದಂಬರಿ ಆಧರಿಸಿದೆ. ಈ ಕಾದಂಬರಿಯನ್ನು ಆಧರಿಸಿ,1952 ರಲ್ಲಿ 'ಆನಂದ್ ಮಠ್' ಎಂಬ ಹಿಂದಿ ದೇಶಭಕ್ತಿಯ ಚಲನಚಿತ್ರವನ್ನು ಹೇಮೆನ್ ಗುಪ್ತಾ ನಿರ್ದೇಶಿಸಿ ಹೊರತಂದರು.

ಮದಿರೆಯ ನಶೆಯವರಿಗೆ ಬಾಧಿಸದು ಸೊಳ್ಳೆ!

ವಾಣಿ ಹುಗ್ಗಿ

ಭೂಮಿ ಮೇಲೆ ಹಳೆಯ ಜೀವಿ ಆರು ಕಾಲು, ಎರಡು ರೆಕ್ಕೆ, ಒಂದು ರಕ್ತ ಹೀರುವ ಕೊಳವೆಯನ್ನು ಹೊಂದಿರುವ ಈ ಕೀಟ ಜಗತ್ತಿನಲ್ಲಿ ಎಲ್ಲೆಂದರಲ್ಲಿ ಹಾರಾಡಲು ಸ್ವತಂತ್ರವಾಗಿದೆ. ಸೊಳ್ಳೆ, ಗುಂಗಾಡು, ದಾಮಿ ಗುಂಯ್ಯ ಎಂದು ಇಂಪಾದ ರಾಗ ತೆಗೆದು ಸ್ವೇಚ್ಛೆಯಾಗಿ ಹಾರಾಡುತ್ತದೆ. ಮನಸೋ ಇಚ್ಛೆ ರಕ್ತ ಕುಡಿದು ಜೀವನ ಸಾಗಿಸುತ್ತದೆ. ನಿಂತ ನೀರಿನಲ್ಲಿ ಬೀಡು ಬಿಟ್ಟು ಸಂತಾನೋತ್ಪತ್ತಿ ನಡೆಸುತ್ತವೆ. ಒಬ್ಬರಿಂದ ಒಬ್ಬರಿಗೆ ಕಡಿದು ನಾನಾ ರೀತಿಯ ಸಾಂಕ್ರಾಮಿಕ ರೋಗಗಳು ಹರಡುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಮನುಷ್ಯರ ಪಾಲಿಗೆ ಯಮ ಸ್ವರೂಪಿಯಾಗಿ ಗೋಚರಿಸುತ್ತವೆ. ರಕ್ತ ಹೀರಿ ಹೊಟ್ಟೆ ತುಂಬಿಸಿಕೊಂಡು ಹಾರಲು ಏದುಸಿರು ಬಿಡುವ ಈ ಕೀಟವನ್ನು ನೋಡಿದರೆ ವಿಪರೀತ ಸಿಟ್ಟು ಬರುತ್ತದೆ. ಪಾರದರ್ಶಕವಾಗಿರುವ ಹೊಟ್ಟೆಯಲ್ಲಿ ನಮ್ಮ ರಕ್ತವನ್ನೆ ನೋಡಿದರೆ ಅಯ್ಯೋ ನನ್ನ ರಕುತವೇ ಎನಿಸಿತ್ತದೆ. ಕಡಿದಲ್ಲೆಲ್ಲಾ ಗಾದರಿ, ಕೆರೆತವನ್ನು ಉಚಿತವಾಗಿ ಕೊಡುತ್ತವೆ.

ಕೆರೆದು ಕೆರೆದು ಮೈಯೆಲ್ಲ ಹಣ್ಣಾಗುತ್ತದೆ. ನಿದಿರೆಯಂತೂ ಮಾರು ದೂರ ಹೋಗಿರುತ್ತದೆ. ಮದಿರೆಯ ನಶೆಯಲ್ಲಿರುವವರೆ ಪುಣ್ಯವಂತರು ಅವರಿಗೆ ಏನೂ ಬಾಧಿಸದು. ಶರೀರದ ವಾಸನೆಯನ್ನಾಧರಿಸಿ ಇವು ಕಡಿಯುತ್ತವೆ. ಹಗಲು ರಾತ್ರಿಯ ವ್ಯತ್ಯಾಸವಿಲ್ಲದೆ ಕಡಿಯಲು ಸಜ್ಜಾಗಿರುತ್ತವೆ.

ಮಲೇರಿಯಾ ರೋಗವು ಕೆಲ ದಶಕಗಳ ಹಿಂದೆ ಮನುಕುಲವನ್ನು ಬಾಧಿಸಿತ್ತು. ಕಾಡುಗಳಲ್ಲಿ, ಕಾಡಂಚಿನ ಊರುಗಳಲ್ಲಿ ಇರೋರಿಗೆ ಮಲೇರಿಯಾ ಮಾಮೂಲಾಗಿತ್ತು. ಕುವೆಂಪು, ಶಿವರಾಮ ಕಾರಂತ, ಎಸ್.ಎಲ್ .ಭೈರಪ್ಪನವರ ಕೃತಿಗಳಲ್ಲಿ ಮಲೆ ರೋಗ, ಮಲೆ ಜ್ವರವು ಪ್ರಮುಖ ಸನ್ನಿವೇಶವಾಗಿತ್ತು. ಚಳಿಯಿಂದ ನಡುಗುವ ದೇಹ ಕಂಬಳಿ ಹೊತ್ತು ಮಲಗಬೇಕು. ಮೆಣಸಿನ ಕಷಾಯ ಹಾಗೂ ಕ್ವಿನೀನು ಗುಳಿಗೆಯ ಉಪಚಾರವಿದೆ. ತೋಟದ ಕೆಲಸಕ್ಕೆ ಕೂಲಿಯಾಳುಗಳು ಸಿಗದೆ ಪರದಾಡುವ ಮಾಲೀಕ ಒಂದು ಕಡೆಯಾದರೆ, ಜ್ವರಕ್ಕೆ ಹೆದರಿ ಊರಿಗೆ ಕಾಲಿಡದ, ಗುಳೆ ಹೋಗುವ ವಲಸಿಗರ, ಜ್ವರದಿಂದ ನರಳುವ ರೋಗಿಗಳ ಚಿತ್ರಣ ರಂಜನೀಯವಾಗಿ, ಚಿಂತಾಜನಕವಾಗಿ ಕಾದಂಬರಿಗಳಲ್ಲಿ ಉಲ್ಲೇಖವಾಗಿದೆ. ಘಟ್ಟದ ಗೋಳಿನ ಪರಿಸ್ಥಿತಿಯನ್ನು ಬರೆದಿದ್ದಾರೆ. ಮಲೇರಿಯಾಕ್ಕೆ ಬೆದರಿ, ಹೊಂದಿಕೊಂಡ ಜೀವನ ಶೈಲಿಯು ಮೂಡಿ ಬಂದಿದೆ.

ಎರಡು ದಶಕಗಳ ಹಿಂದೆ ಜ್ವರ, ಸುಸ್ತು, ಸಂಧಿಗಳಲ್ಲಿ ನೋವು ಎಂಬ ಹೊಸ ಕಾಯಿಲೆ ಶುರುವಾಗಿತ್ತು. ಅದೇರೀ. ಚಿಕನ್ ಗುನ್ಯಾ! ಇದು ದಾಮಿಯಿಂದ ಹರಡುತ್ತಿರುವ ಸಾಂಕ್ರಾಮಿಕವಾಗಿತ್ತು. ಜನರೆಲ್ಲ ತಲಣ್ಣಗೊಂಡಿದ್ದರು. ಮನೆಯಲ್ಲಿ ಮೂರು ನಾಕು ಮಂದಿ ಹಾಸಿಗೆ ಹಾಸಿರುತ್ತಿದ್ದರು. ಜೀವ ತೆಗೆಯುವಷ್ಟು ಮಾರಕವಲ್ಲದಿದ್ದರೂ ಜನರನ್ನೆಲ್ಲ ಹಣ್ಣುಗಾಯಿ ನೀರುಗಾಯಿ ಮಾಡಿದ್ದಂತೂ ಸತ್ಯ. ಜ್ವರ ಕಮ್ಮಿಯಾದರೂ ಉಳಿದ ಸಂದು ನೋವಿನಿಂದ ಹಲುಮಾನವ ಒದ್ದಾಡಿ ಹೋಗಿದ್ದ. ಈ ಚಿಕನ್ ಗುನ್ಯಾ ತಡೆಯುವ ಔಷಧಿ ಕೊಡುವ ಕಾರ್ಯಕ್ರಮಗಳು ಅಲ್ಲಲ್ಲಿ ಓಣಿಗಳಲ್ಲಿ ಊರುಗಳಲ್ಲಿ ನಡೆಯುವುದು ಸಾಮಾನ್ಯವಾಗಿತ್ತು. ಡೆಂಗ್ಯೂ ಅಂತೂ ಚಿಕ್ಕ-ದೊಡ್ಡವರೆನ್ನದೆ ಪ್ರಾಣ ತೆಗೆಯುವಷ್ಟು ಕ್ರೂರವಾಗಿ ವರ್ತಿಸುತ್ತದೆ. ರೋಗ ನಿರೋಧಕ ಶಕ್ತಿ ಹೆಚ್ಚಿಸಲು ನಾಗರಿಕರು ಹಲವಾರು ಉಪಾಯಗಳನ್ನು ಅನುಸರಿಸುವರು.

ಸೊಳ್ಳೆಗಳ ನಿಯಂತ್ರಣಕ್ಕೆ ಮನುಷ್ಯ ಮಾಡಿದ ಪ್ರಯತ್ನಗಳಿಗೆಲ್ಲ ಫಲ ಸೊನ್ನೆಯಾಗಿದೆ. ಡಿಡಿಟಿ ಸಿಂಪಡಣೆಯನ್ನು ಸರಕಾರವೆ ಮಾಡಿಸುತ್ತದೆ. ಆದರೆ ಗುಂಗಾಡು ಡಿಡಿಟಿಗೆ ಹೊಂದಿಕೊಂಡು ಸಂತಾನಾಭಿವೃದ್ಧಿ ಮಾಡಲು ಕಲಿತುಕೊಂಡಿದೆ. ಸೊಳ್ಳೆ ಪರದೆ, ಸೊಳ್ಳೆ ಬತ್ತಿ, ಸೊಳ್ಳೆ ಓಡಿಸಲು ಸ್ಪ್ರೇ, ಮಾರುಕಟ್ಟೆಯಲ್ಲಿ ವಿವಿಧ ರೀತಿಯ ಸೊಳ್ಳೆ ನಿಯಂತ್ರಕಗಳು ಲಭ್ಯವಿವೆ. ಸೊಳ್ಳೆ ಬ್ಯಾಟ್ ಸಾಮಾನ್ಯರಿಗೂ ಬ್ಯಾಡ್ಮಿಂಟನ್ ಆಡಲು ಕಲಿಸಿದೆ. ಈ ಮರಕ (ಮಶಕ) ಮರುಕ ತೋರಿಸಿದರೆ ಅದರ ಹೊಟ್ಟೆ ಪಾಡೇನು? ಸೊಳ್ಳೆ ನರಹಂತಕ ಬಿರುದನ್ನು ಪಡೆಯಲು ಅರ್ಹವಾಗಿದೆ.

|ಪ|ದ|ಬಂ|ಧ|

1			■	2		3		4
	■	■	5		■		■	
6		7		■	8		9	■
	■		■	10		■	11	
■	12		13	■	14	15		■
16		■	17		■		■	18
■	19	20		■	■	21		
22	■		■	23		■	■	
24					■	25		

ಎಡದಿಂದಬಲಕ್ಕೆ

1. ಆಕೆ ಹಾರಿಸಿದ ಬಾವುಟ (3)
2. ಅತಿಯಾದ ತಿನ್ನುವ ಬಯಕೆ (5)
5. ಜೀವ, ಅಸು (2)
6. ದ್ರೌಪದಿಯನ್ನು ಕೀಟಲೆ ಮಾಡಿ ಅವಮಾನಿಸಿದ್ದಕ್ಕಾಗಿ ಭೀಮನಿಂದ ಹತನಾದವನು (3)
8. ಚಕಚಕನೆ ನೂಲುವ ರಾಟೆಯಿದು (3)
10. ಬಲಭಾಗವಲ್ಲ, ಎಡಭಾಗ (2)
11. ಹಗಲು ಮಿಂಚುವ ಭಾಸ್ಕರ (2)
12. ಅಣ್ಣ ಮಾಡಿದ ಅಪಹಾಸ್ಯ (3)
14. ಖರೀದಿಸಿದ ವಸ್ತುವಿಗೆ ಸಿಕ್ಕಿದ ಪಾವತಿಪತ್ರ (3)
16. ಗೆದ್ದಲು ಕಟ್ಟಿದ ವಾಸಸ್ಥಾನ (2)
17. ಕಾವ್ಯ, ಕಾದಂಬರಿಗಳ ವಿಷಯ (2)
19. ಹಿಂದಿಯ ತಾಯಿಯೊಂದಿಗೆ ಬಂದಿರುವ ಮುಂಡಾಸು (3)
21. ಮಗನಿಗೆ ಮತ್ತೊಂದು ಹೆಸರು (3)
23. ಅರಳೆಗೆ ಮತ್ತೊಂದು ಹೆಸರು (2)
24. ಗುಂಪುಗಳನ್ನು ವಿಂಗಡಿಸುವ ಕ್ರಮ (5)
25. ಪಕ್ಷವೊಂದರ ಪರವಾಗಿ ಅಧಿಕೃತವಾಗಿ ಮಾತನಾಡುವವನು (3)

ಮೇಲಿನಿಂದಕೆಳಕ್ಕೆ:

1. ನಮ್ಮವನಲ್ಲ, ಹೊರಗಿನವನು (4)
2. ವೇಗವಾಗಿ ಹೋಯಿತು ಶರ (2)
3. ಚರ್ಮದ ಕೆಲಸ ಮಾಡುವವನು (3)
4. ನಾಚಿಕೆಗೆ ಮತ್ತೊಂದು ಹೆಸರು (2)
7. ಸುಲಭವಾಗಿ ತುಕ್ಕು ಹಿಡಿಯುವ ಒಂದು ಲೋಹ (3)
8. ಉದ್ದ ಕೂದಲಿನ ಒಂದು ಮೃಗ (3)
9. ಬಟ್ಟೆಗಳಿಗೆ ಮಾಡುವ ಹೆಣಿಗೆಯ ಅಲಂಕಾರ (3)
12. ಹೂವುಗಳನ್ನು ಭಟ್ಟಿಯಿಳಿಸಿ ತೆಗೆದ ಸುಗಂಧದ್ರವ್ಯ (3)
13. ಮರದ ಟಿಸಿಲು (3)
15. ಚೊಚ್ಚಲು ಬಸುರಿಗೆ ಮಾಡುವ ಶಾಸ್ತ್ರ (3)
18. ಮೊದಲು ಆಡನ್ನು ಕಟ್ಟಿಕೊಂಡಿರುವ ಹೆಬ್ಬಾವು (4)
20. ಕೆಡುಕನ್ನು ಉಂಟುಮಾಡುವುದು ಎಂದರ್ಥ (3)
22. ಮಗಳನ್ನು ಧಾರೆಯೆರೆದು ಕೊಟ್ಟವರು (2)
23. ಮತ್ತೊಂದು ಧನ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಚಾರಿತ್ರಿಕ 4. ಆಗಮನ 6. ಮುಂಜಾನೆ 7. ಅಂಜು 8. ತಯಾರಿ 10. ಲಕುಮಿ 12. ನಜರು 14. ತಕಲಿ 16. ಪಟಲ 18. ಸನಿಕೆ 19. ಮಾವು 20. ಸಂತಾಪ 21. ನವನೀತ 22. ಟಿವಚಪಂ

ಮೇಲಿನಿಂದ ಕೆಳಕ್ಕೆ: 2. ರಿವಾಜು 3. ಕಮಂಡಲ 4. ಆನೆ 5. ನಗಾರಿ 7. ಅಂಜನ 9. ಯಾಚಕ 11. ಕುಕ್ಕುಟ 13. ಜನನಿ 15. ಲಿಲಾವು 17. ಲಟಾಪಟಿ 18. ಸಜ್ಜನ 19. ಮಾರೀಚ 20. ಸಂತ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಈ ಕಂದಕದ ಆಳ ಗೊತ್ತಾ?



ನಾವು ನೋಡಿರುವ ಅತಿ ಆಳವಾದ ಸ್ಥಳಗಳೆಂದರೆ, ಚಾರ್ಮಾಡಿ ಘಾಟ್ ಹಾಗೇ ಇನ್ನೂ ಪ್ರಪಂಚದ ಅತಿ ದೊಡ್ಡ ಘಾಟ್‌ಗಳ ಹೆಸರನ್ನೂ ತೆಗೆದುಕೊಳ್ಳಬಹುದು. ಒಂದಕ್ಕೊಂದು ಹೋಲಿಸಿದರೆ, ಯಾವುದೋ ಇನ್ನೊಂದು ಮತ್ತಷ್ಟು ಆಳವೆನಿಸಿದರೂ, ಭಾಮಿಯಲ್ಲೇ ಅತಿ ಆಳವಾದ ಸ್ಥಳ ಯಾವುದು ಗೊತ್ತಾ? ಮರಿಯಾನಾ ಟ್ರೆಂಚ್, ಪೆಸಿಫಿಕ್ ಸಾಗರವೇ ಅತೀ ದೊಡ್ಡ ಮತ್ತು ಆಳವಾದ ಸಾಗರ ಅದರಲ್ಲಿ ಈ ಮರಿಯಾನ ಟ್ರೆಂಚ್ ಅತೀ ಆಳವಾದದ್ದು. ಇದನ್ನು ಚಾಲೆಂಜರ್ ಡೀಪ್ ಎಂದೂ ಕರೆಯುತ್ತಾರೆ. ಈ ಸ್ಥಳವನ್ನು ತಲುಪಲು 36,070 ಫೀಟ್‌ಗಳನ್ನು ಒಳಗೆಹೋಗಬೇಕು. ಮೀಟರ್ ಗಳಲ್ಲೆಂದರೆ, 10,994 ಮೀಟರ್, ಹೆಚ್ಚೂ ಕಮ್ಮಿ 11 ಕಿಮಿ. ಮತ್ತೊಂದು ರೀತಿಯಲ್ಲಿ ಹೇಳಬೇಕೆಂದರೆ, ಈ ಕಂದಕದಲ್ಲಿ ವಿಶ್ವದ ಅತಿದೊಡ್ಡ ಪರ್ವತ ಮೌಂಟ್ ಎವೆಸ್ಟ್ ಅನ್ನು ಇಟ್ಟರೆ, ಅದು ಪೂರ್ತಿ ಮುಳುಗಿ ಮೇಲೆ ಇನ್ನೂ 1 ಮೈಲ್ ನಷ್ಟು ನೀರುತುಂಬಿರುತ್ತದೆ ಅಂದರೆ ಯೋಚಿಸಿ. ಈ ಕಂದಕದಲ್ಲಿ ಸೂರ್ಯನಬೆಳಕು ಮುಟ್ಟದಿದ್ದರೂ ಜೈವಿಕ ಪ್ರಕಾಶ ಮತ್ತು ಹಲವು ಬೇರೆ ರಾಸಾಯನಿಕಗಳ ಮುಖಾಂತರ ಬೆಳಕಂತೂ ಇರುತ್ತದೆ. ಯಾರಾದರೂ ಹೋಗುವುದಿದ್ದರೆ, ಟಾರ್ಚ್‌ನ ಅಷ್ಟೊಂದು ಅಗತ್ಯ ಬೀಳುವುದಿಲ್ಲ.

ಪುಸ್ತಕ ಲೋಕ

ಬಿಟ್ಟು ಹೋದ ಮನುಷ್ಯ



ಈ ಕೃತಿಯಲ್ಲಿ ಕಾವ್ಯಾತ್ಮಕ ಶೈಲಿಯ ವಿಶಿಷ್ಟ ಕಾದಂಬರಿ ಬಿಟ್ಟು ಹೋದ ಮನುಷ್ಯ ನಾಗರೀಕತೆ ಹಾಗೂ ಮನುಷ್ಯ ಸಂಬಂಧಗಳಲ್ಲಿನ ಜಟಿಲತೆ ಇದರ ಕೇಂದ್ರ ವಸ್ತು, ಲೇಖಕರೆ ಹೇಳುವಂತೆ 'ಗುರಿಯಿಲ್ಲದೆ, ಆದರೆ ಗುರಿ ಇದೆ ಎಂದು ಹುಡುಕಾಡುತ್ತ ಗುರಿತಪ್ಪಿ ಕಳೆದು ಹೋಗುವ ಪಾತ್ರಗಳನ್ನು' ಈ ಕಥನ ಒಳಗೊಂಡಿದೆ. ಹಾಗೆಯೇ ಇಲ್ಲಿ ಮಾನವ ಸಂದರ್ಭಗಳ ಸರಣಿಯಂತೆ ಒಂದಕ್ಕೊಂದು ಬೆಸೆದುಕೊಂಡಿವೆ. ಸಾಂಸಾರಿಕ ಜಂಜಾಟದಿಂದ ಆರಂಭವಾಗುವ ಈ ಕಥನ ವಿಶ್ವಾತ್ಮಕವಾಗಿ ಬೆಳೆದು ಸಂಬಂಧಗಳನ್ನು ಆದ್ರವಾಗಿ ತಡಕಾಡುತ್ತವೆ. ಕಾದಂಬರಿಯ ಮುಖ್ಯ ಪಾತ್ರಗಳಾದ ಭೌತವಿಜ್ಞಾನಿ ತಂದೆ, ಅವನ ಹೆಂಡತಿ, ಮಗ, ಮೂವರು ಹೆಣ್ಣುಮಕ್ಕಳು ತಮ್ಮದೇ ಹಾದಿಯ ಹುಡುಕಾಟ ಸಂಘರ್ಷಗಳಲ್ಲಿರುವವರು. ಇಲ್ಲಿ ಬರುವ ಯಾವ ಪಾತ್ರಗಳಿಗೂ ಹೆಸರಿಲ್ಲ, ಬದಲಿಗೆ ತಮ್ಮ ಕಾರ್ಯಕ್ಷೇತ್ರ ಸಂಬಂಧಗಳ ಮುಖಾಂತರ ಗುರುತಿಸಲ್ಪಡುತ್ತಾರೆ. ಈ ಕಥನ ಮನುಷ್ಯ ಸಂಬಂಧಗಳ, ನಾನಾ ಭಾವಗಳ ಸಂಕೀರ್ಣ ಚಿತ್ರಶಾಲೆಯಂತಿದೆ. ಮನುಷ್ಯರ ಅನಿವಾರ್ಯ ವಿದಾಯದ ಸಂಕೀರ್ಣ ಪಯಣವನ್ನು ಒಂದು ಸ್ವಪ್ನದಂತೆ ನಿರೂಪಿಸುತ್ತದೆ.

ನಾಯಿಗೆ ಹೆಚ್ಚು ಅರ್ಥವಾಗುವ ಸಂಕೀರ್ಣ ಭಾಷೆ!

● ಎಲ್.ಪಿ.ಕುಲಕರ್ಣಿ

ಭೂಮಂಡಲದಲ್ಲಿರುವ ಇತರ ಜೀವಿಗಳಲ್ಲಿ ಮನುಷ್ಯನೇ ಅತೀ ಬುದ್ಧಿವಂತ ಜೀವಿ ಎಂದು ನಾವೆಲ್ಲ ತಿಳಿದುಕೊಂಡಿದ್ದೇವೆ. ತಜ್ಞರು ಕೊಟ್ಟ, ನಾವು ತಿಳಿದುಕೊಂಡ ಈ ವ್ಯಾಖ್ಯಾನ ಸುಳ್ಳಾಗುವ ನಿಟ್ಟಿನಲ್ಲಿದೆ ಎಂದರೆ ನಂಬಲೆ ಬೇಕು!. ಇತ್ತೀಚೆಗೆ ಹಂಗೇರಿಯ Eötvös Loránd (ಇಟವೊಸ್ ಲೊರೆಂಡ್) ವಿಶ್ವವಿದ್ಯಾಲಯದಲ್ಲಿ ನಡೆದ ಒಂದು ಅಧ್ಯಯನವು ಮಾನವ ಶಿಶುಗಳಂತೆ ನಾಯಿಗಳೂ ಸಹ ಧ್ವನಿಯ ಉಚ್ಚಾರಾಂಶಗಳ ಗುಂಪುಗಳನ್ನು ಪದಗಳಾಗಿ ಗುರುತಿಸ ಬಲ್ಲವು ಮತ್ತು ಯಾದೃಚ್ಛಿಕ ಶಬ್ದಗಳಲ್ಲಿರುವ ಪ್ರತ್ಯೇಕತರಯನ್ನು ಗುರುತಿಸಬಲ್ಲವು ಎಂಬ ಮಹತ್ವದ ಅಂಶವನ್ನು ಹೊರಹಾಕಿದೆ.

ಈ ಹೊಸ ಅಧ್ಯಯನವು ಮೊದಲ ಬಾರಿಗೆ ಮಾನವರಲ್ಲದ ಸಸ್ತನಿಗಳು(ಸ್ತನಿಗಳು) ಅಂತಹ ಸಂಕೀರ್ಣ ಲೆಕ್ಕಾಚಾರಗಳನ್ನು ಹೊರಡುವ ಧ್ವನಿ ಸಂಯೋಜಿತ ಭಾಷಣವನ್ನು ವಿಭಾಗಿಸಲು ಬಳಸುವುದನ್ನು ತೋರಿಸಿದೆ. ಈ ಅಧ್ಯಯನದ ಪ್ರಮುಖ ಸಂಶೋಧಕರಲ್ಲಿ ಒಬ್ಬರಾದ ಮರಿಯಾನಾ ಬೋರೋಸ್ ವಿವರಿಸುವಂತೆ, ಶಿಶುಗಳು (ನಾಯಿಗಳು) ಭಾಷಣವನ್ನು(ಹೊರಡಿಸುವ ಧ್ವನಿ) ವಿಭಜಿಸಲು ಮಾಡುತ್ತಿರುವ ನಿಖರವಾದ ಲೆಕ್ಕಾಚಾರಗಳನ್ನು ಅನ್ವಯಿಸಬಹುದು.

ನಾಯಿಗಳ ತಮ್ಮ ಮಿದುಳಿನಲ್ಲಿ ಭಾಷೆಯನ್ನು ಹೇಗೆ ಪ್ರಕ್ರಿಯೆಗೊಳಿಸುತ್ತವೆ ಎಂಬುದನ್ನು ಬಹಿರಂಗಪಡಿಸಲು, ಸಂಶೋಧಕರು ಎಲೆಕ್ಟ್ರೋಎನ್ಸೆಫಾಲೋಗ್ರಫಿ (ಇಇಜಿ) ಮತ್ತು ಮ್ಯಾಗ್ನೆಟಿಕ್ ರೆಸೋನೆನ್ಸ್ ಇಮೇಜಿಂಗ್ (ಎಮ್‌ಆರ್‌ಐ) ಸೇರಿದಂತೆ ಸುಧಾರಿತ ತಂತ್ರಜ್ಞಾನವನ್ನು ಬಳಸಿದ್ದಾರೆ. ಇಇಜಿ ಪ್ರಯೋಗಗಳಲ್ಲಿ, ನಾಯಿಗಳು ತಮ್ಮ ಮೆದುಳಿನ ಚಟುವಟಿಕೆಯನ್ನು ಮೇಲ್ವಿಚಾರಣೆ ಮಾಡುವಾಗ ಕೃತಕ ಪದಗಳು ಮತ್ತು ಯಾದೃಚ್ಛಿಕ ಉಚ್ಚಾರಾಂಶಗಳ ಹರಿವನ್ನು ಆಲಿಸಿದವು. ಈ ಪರೀಕ್ಷಣದಿಂದಾದ ಫಲಿತಾಂಶಗಳು ನಾಯಿಗಳು ಆಗಾಗ್ಗೆ ಪುನರಾವರ್ತಿತ ಪದಗಳನ್ನು ಉಚ್ಚಾರಾಂಶಗಳಿಂದ ಪ್ರತ್ಯೇಕಿಸಬಲ್ಲವು ಎಂದು ತೋರಿಸಿದೆ, ಜೊತೆಗೆ ಸಂಪೂರ್ಣ ಪದಗಳನ್ನು ಮತ್ತು ಪದದ ತುಣುಕುಗಳನ್ನು ಗುರುತಿಸುತ್ತವೆ- ಇದು ಗಮನಾರ್ಹವಾದ ಶ್ರವಣೇಂದ್ರಿಯ ಪ್ರಕ್ರಿಯೆಯ ಕೌಶಲ್ಯಗಳನ್ನು ಸೂಚಿಸುವ ಗ್ರಹಿಕೆಯ ಮಟ್ಟ.

ಎಮ್‌ಆರ್‌ಐ ಸ್ಕ್ಯಾನ್‌ಗಳು ಈ ಸಾಹಸಗಳಿಗೆ ಯಾವ ಮೆದುಳಿನ ಪ್ರದೇಶಗಳು ಕಾರಣವಾಗಿವೆ ಎಂಬುದರ ಕುರಿತು ಹೆಚ್ಚಿನ ಒಳನೋಟವನ್ನು ನೀಡಿವೆ. ಪ್ರಯೋಗಗಳ ಸಮಯದಲ್ಲಿ ಮೆದುಳಿನ ಎರಡು ಪ್ರದೇಶಗಳು ಹೆಚ್ಚು ಗೋಚರವಾದವು: ಮೆದುಳಿನ ಸಾಮಾನ್ಯ ಪ್ರದೇಶವಾದ ಗ್ಯಾಂಗ್ಲಿಯಾವು ಯಾದೃಚ್ಛಿಕ ಉಚ್ಚಾರಾಂಶಗಳಿಗೆ ಪ್ರತಿಕ್ರಿಯಿಸುತ್ತದೆ. ಆದರೆ, ಶ್ರವಣೇಂದ್ರಿಯ ಕಾರ್ಟೆಕ್ಸ್, ಹೆಚ್ಚು ವಿಶೇಷವಾದ ಪ್ರದೇಶ, ರಚನಾತ್ಮಕ ಪದ ಮಾದರಿಗಳನ್ನು ಸಂಸ್ಕರಿಸುತ್ತದೆ. ಈ ಸಂಶೋಧನೆಗಳು ಮಾನವರ ಮಿದುಳುಗಳು ಮಾತನಾಡುವ ಹಾಗೂ ಅರ್ಥ ಬದ್ಧವಾಗಿ ಅಲ್ಲಿ ಉಚ್ಚಾರವಾದ ಧ್ವನಿಯನ್ನು ಹೇಗೆ ನಿರ್ವಹಿಸುತ್ತವೆ ಎಂಬುದನ್ನು ತೋರಿಸುತ್ತವೆ. ನಾಯಿಗಳು ಈ ಸಾಮರ್ಥ್ಯಗಳನ್ನು ಹೇಗೆ ವಿಕಸನಗೊಳಿಸಿಕೊಂಡವು ಮತ್ತು ಅವುಗಳ ಭವಿಷ್ಯದ ಭಾಷೆಯ ಅಭಿವೃದ್ಧಿ ಹೇಗಿರಬಹುದು ಎಂಬಂತಹ ಅನೇಕ ಪ್ರಶ್ನೆಗಳು ಇನ್ನೂ ಉಳಿದಿವೆ - ಈ ಸಂಶೋಧನೆಯು ತುಪ್ಪಳಿನಂತಿರುವ ಈ ನಮ್ಮ ಸ್ನೇಹಿತರು(ನಾಯಿಗಳು) ನಿಜವಾಗಿಯೂ ಎಷ್ಟು ಅತ್ಯಾಧುನಿಕವಾಗಿ ಅಪ್ಡೇಟ್ ಆಗುತ್ತಿವೆ ಎಂಬುದನ್ನು ಎತ್ತಿ ತೋರಿಸುತ್ತದೆ.

ಏಕದಿನ ಸರಣಿಯ ಮೊದಲನೇ ಪಂದ್ಯದಲ್ಲಿ ಆಸಿಸ್‌ಗೆ ಸುಲಭದ ಜಯ | 100 ರನ್‌ಗಳಿಗೆ ಆಲೌಟ್ ಆದ ಭಾರತ ತಂಡ

ಮತ್ತೊಮ್ಮೆ ವನಿತೆಯರ ಕಳಪೆ ಆಟ!

ಬ್ರಿಸ್ಬೇನ್: ಭಾರತ ಮಹಿಳಾ ತಂಡದ ಬ್ಯಾಟರ್‌ಗಳು ಮತ್ತೊಮ್ಮೆ ಕಳಪೆ ಆಟವಾಡಿದರು. ಇದರಿಂದಾಗಿ ಆತಿಥೇಯ ಆಸ್ಟ್ರೇಲಿಯಾ ತಂಡ ಗುರುವಾರ ನಡೆದ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡದ ಮೇಲೆ ಐದು ವಿಕೆಟ್‌ಗಳ ಸುಲಭ ಜಯ ಗಳಿಸಿದರು.

ಎರಡನೇ ಏಕದಿನ ಪಂದ್ಯ ಭಾನುವಾರ ಇಲ್ಲಿನ ಆ್ಯಲನ್ ಬಾರ್ಡರ್ ಫೀಲ್ಡ್‌ನಲ್ಲಿ ನಡೆಯಲಿದೆ.

ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ 43.2 ಓವರುಗಳಲ್ಲಿ 100 ರನ್‌ಗಳಿಗೆ ಕುಸಿಯಿತು. ಬಲಗೈ ವೇಗಿ ಮೇಘನ್ ಶುಟ್ ಒಂದು ಮೇಡನ್ ಇದ್ದ 6.2 ಓವರುಗಳಲ್ಲಿ 19 ರನ್ನಿತ್ತು 5 ವಿಕೆಟ್ ಪಡೆದು ಭಾರತಕ್ಕೆ ಹೊಡೆತ ನೀಡಿದರು.

ಈ ಅಲ್ಪ ಬೆನ್ನತ್ತುವ ಹಾದಿಯಲ್ಲಿ ಆಸ್ಟ್ರೇಲಿಯಾ ಮಧ್ಯಮ ಕ್ರಮಾಂಕ ಎಡವಿದರೂ, ಅಂತಿಮವಾಗಿ 17ನೇ ಓವರ್‌ನಲ್ಲಿ ಗುರಿತಲುಪಿತು. ಪದಾರ್ಪಣೆ ಮಾಡಿದ ಆರಂಭ ಆಟಗಾರ್ತಿ ಜಾರ್ಜಿಯಾ ವೋಲ್ (ಅಜೇಯ 46, 42ಎ) ಅವರು ತಂಡವನ್ನು ಆಧರಿಸಿದರು. ರೇಣುಕಾ ಬೌಲಿಂಗ್‌ನಲ್ಲಿ ಅವರು ಸಿಕ್ಸರ್ ಎತ್ತಿದರು. ಮೊದಲ ವಿಕೆಟ್‌ಗೆ ಫೋಬಿ ಲಿಚ್‌ಫೀಲ್ಡ್ (35, 29ಎ) ಜೊತೆ ಜಾರ್ಜಿಯಾ 48 ರನ್ ಸೇರಿಸಿ ಉತ್ತಮ ಆರಂಭ ನೀಡಿದ್ದರು. ರೇಣುಕಾ ಸಿಂಗ್ ಮೂರು ವಿಕೆಟ್ ಪಡೆದು ಆತಿಥೇಯರ ಮಧ್ಯಮ ಕ್ರಮಾಂಕ ಕುಸಿತಕ್ಕೆ ಕಾರಣರಾದರು.

ಇದಕ್ಕೆ ಮೊದಲು ಐದನೇ ಕ್ರಮಾಂಕದಲ್ಲಿ ಆಡಿದ ಜೆಮಿಮಾ ರಾಡ್ರಿಗಸ್ (23, 42ಎ) ಭಾರತದ ಕಡೆ ಅತಿ ಹೆಚ್ಚು ರನ್ ಗಳಿಸಿದ್ದರು. ಉಳಿದವರು 20ರ ಗಡಿ ದಾಟಲಿಲ್ಲ. ನಾಯಕಿ ಹರ್ಮನ್‌ಪ್ರೀತ್ ಕೌರ್ 31ಎಸೆತಗಳಲ್ಲಿ 17 ರನ್ ಗಳಿಸಿದರು. ಒಂದು ಹಂತದಲ್ಲಿ 3 ವಿಕೆಟ್‌ಗೆ 62 ರನ್ ಗಳಿಸಿದ್ದ ಭಾರತ ನಂತರ ಹಠಾತ್ ಕುಸಿಯಿತು.

ಸಂಕ್ಷಿಪ್ತ ಸ್ಕೋರು

ಭಾರತ ಮಹಿಳಾ ತಂಡ: 34.2 ಓವರುಗಳಲ್ಲಿ 1100 (ಜೆಮಿಮಾ ರೋಡ್ರಿಗಸ್ 23; ಮೇಘನ್ ಶುಟ್ 19ಕ್ಕೆ5); ಆಸ್ಟ್ರೇಲಿಯಾ ಮಹಿಳಾ ತಂಡ: 16.2 ಓವರುಗಳಲ್ಲಿ 5 ವಿಕೆಟ್ಗೆ 102 (ಫೋಬಿ ಲಿಚ್‌ಫೀಲ್ಡ್ 35, ಜಾರ್ಜಿಯಾ ವೋಲ್ ಔಟಾಗದೇ 46, ರೇಣುಕಾ ಠಾಕೂರ್ 45ಕ್ಕೆ3, ಪ್ರಿಯಾ ಮಿಶ್ರಾ 11ಕ್ಕೆ2). ಪಂದ್ಯದ ಆಟಗಾರ: ಮೇಘನ್ ಶುಟ್.

ವಿಶ್ವ ಚೆಸ್ ಚಾಂಪಿಯನ್‌ಶಿಪ್ | ಭಾರತದ ಗುಕೇಶ್, ಚೀನಾದ ಡಿಂಗ್ ಲಿರೆನ್ ನಡುವಿನ ಪಂದ್ಯ ಡ್ರಾ

9ರಲ್ಲಿ 7 ಪಂದ್ಯ ಡ್ರಾ

ಸಿಂಗಪುರ: ವಿಶ್ವ ಚೆಸ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ ಡ್ರಾ ಪವರ್ ಮುಂದುವರಿದಿದೆ. ಭಾರತದ ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್ ಮತ್ತು ಹಾಲಿ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ ಅವರು ಮತ್ತೊಂದು– ಸತತ ಆರನೇ– ಪಂದ್ಯವನ್ನು ಗುರುವಾರ ಡ್ರಾ ಮಾಡಿಕೊಂಡರು.

ಇದು 14 ಪಂದ್ಯಗಳ ಫೈನಲ್‌ನ ಒಂಬತ್ತನೇ ಪಂದ್ಯವಾಗಿದ್ದು ಒಟ್ಟಾರೆ ಏಳು ಪಂದ್ಯಗಳು ಡ್ರಾ ಆಗಿವೆ. ಇಬ್ಬರ ಖಾತೆಯಲ್ಲೂ ನಾಲ್ಕೂವರೆ ಅಂಕಗಳು ಇವೆ. ಮೊದಲು ಏಳೂವರೆ ಪಾಯಿಂಟ್ಸ್ ತಲುಪುವ ಆಟಗಾರನ ಮುಡಿಗೆ ವಿಶ್ವ ಚಾಂಪಿಯನ್ ಕಿರೀಟ ಏರಲಿದೆ.

ಒಂಬತ್ತನೇ ಪಂದ್ಯದಲ್ಲಿ 54 ನಡೆಗಳ ನಂತರ ಇಬ್ಬರೂ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದರು. ಆಗ ಬೋರ್ಡ್‌ನಲ್ಲಿ ಉಭಯ ರಾಜರಷ್ಟೇ ಉಳಿದಿದ್ದರು. ಗುಕೇಶ್ ಈ ಪಂದ್ಯದಲ್ಲಿ ಬಿಳಿ ಕಾಯಿಗಳಲ್ಲಿ ಆಡಿದ್ದರು.

ಶುಕ್ರವಾರ ಚಾಂಪಿಯನ್‌ಶಿಪ್‌ಗೆ ಮೂರನೇ ವಿಶ್ರಾಂತಿಯ ದಿನವಾಗಿದೆ. ಶನಿವಾರ ಹತ್ತನೇ ಪಂದ್ಯದೊಡನೆ ಹಣಾಹಣಿ ಮುಂದುವರಿಯಲಿದೆ. ಇನ್ನು ಐದು ಸುತ್ತಿನ ಪಂದ್ಯಗಳಷ್ಟೇ ಉಳಿದಿವೆ. 14 ಸುತ್ತುಗಳ ಬಳಿಕವೂ ಸ್ಕೋರ್ 7–7 ಸಮನಾದಲ್ಲಿ ಚಾಂಪಿಯನ್ ಆಟಗಾರನನ್ನು ನಿರ್ಧರಿಸಲು ಅಲ್ಪಾವಧಿಯ ಟೈಬ್ರೇಕ್ ಪಂದ್ಯಗಳನ್ನು ಆಡಿಸಲಾಗುತ್ತದೆ.

32 ವರ್ಷದ ಲಿರೆನ್ ಮೊದಲ ಪಂದ್ಯ ಜಯಿಸಿದ್ದರೆ, 18 ವರ್ಷ ವಯಸ್ಸಿನ ಗುಕೇಶ್ ಮೂರನೇ ಗೇಮ್ ಗೆದ್ದಿದ್ದರು. ಉಳಿದೆಲ್ಲ ಪಂದ್ಯಗಳು ಡ್ರಾ ಆಗಿವೆ. ಗುಕೇಶ್ ಕೆಟಲಾನ್ ಓಪನಿಂಗ್ ಅನುಸರಿಸಿ, ಲಿರೆನ್ ಅವರ ಸಿದ್ಧತೆಯನ್ನು ಪರೀಕ್ಷಿಸಲು ಮುಂದಾದಂತೆ ಕಂಡಿತು. ಆದರೆ ಮೊದಲ ಕೆಲವು ನಡೆಗಳಿಗೆ ಸಾಕಷ್ಟು ಸಮಯ ತೆಗೆದುಕೊಂಡ ಚೀನಾದ ಆಟಗಾರ ಚೆನ್ನೈ ಆಟಗಾರನ ಪಡೆಗಳು ದಾಳಿ ಮಾಡದಂತೆ ವ್ಯೂಹ ರಚಿಸಿಕೊಂಡರು. ಗುಕೇಶ್ ಮೊದಲ 14 ನಡೆಗಳಿಗೆ ಕೇವಲ 15 ನಿಮಿಷ ಬಳಸಿಕೊಂಡರೆ, ಅನುಭವಿ ಲಿರೆನ್ ಅಷ್ಟೇ ನಡೆಗಳಿಗೆ 50 ನಿಮಿಷ ತೆಗೆದುಕೊಂಡರು.

ಕೋರನ ಒಪ್ಪಿಕೊಂಡ ಚೆಲುವೆ

ರಿಯಾಲಿಟಿ ಶೋ ಖ್ಯಾತಿಯ ಸುನಾಮಿ ಕಿಟ್ಟಿ ನಾಯಕನಾಗಿ ನಟಿಸಿರುವ ಕೋರ ಚಿತ್ರದ ಹಾಡು ಬಿಡುಗಡೆಯಾಗಿದೆ. ಒಪ್ಪಿಕೊಂಡಳೊ.. ಎಂಬ ಪ್ರೇಮಗೀತೆ ಇದಾಗಿದ್ದು ಕೇಳಲು ಮಧುರವಾಗಿದೆ. ರೇವಣ್ಣ ನಾಯಕ ಸಾಹಿತ್ಯದ ಈ ಹಾಡಿಗೆ ಬಿ.ಆರ್.ಹೇಮಂತ್‌ಕುಮಾರ್ ಸಂಗೀತ ಸಂಯೋಜಿಸಿದ್ದಾರೆ. ರಾಜೇಶ್ ಕೃಷ್ಣನ್ ಹಾಗೂ ವಿ.ಎಸ್.ಶ್ರುತಿ ದನಿಯಲ್ಲಿ ಹಾಡು ಇಂಪಾಗಿ ಮೂಡಿಬಂದಿದೆ. ಮಲೆನಾಡಿನ ಸುಂದರ ತಾಣದಲ್ಲಿ ಹಾಡಿನ ಚಿತ್ರೀಕರಣ ನಡೆಸಲಾಗಿದೆ. ಒರಟಶ್ರೀ ಕಥೆ ಬರೆದು ನಿರ್ದೇಶನ ಮಾಡಿರುವ ಕೋರ ಚಿತ್ರವನ್ನು ರತ್ನಮ್ಮ ಮೂವೀಸ್ ಬ್ಯಾನರ್‌ನಲ್ಲಿ ಪಿ.ಮೂರ್ತಿ ನಿರ್ಮಾಣ ಮಾಡಿದ್ದಾರೆ.

ಕೋರ ಕಾಡಿನ ಮಕ್ಕಳ ಸುತ್ತಾ ಸಾಗುವ ಸ್ಟೋರಿಯಾಗಿದ್ದು, ದಟ್ಟಾರಣ್ಯದಲ್ಲಿ ನಡೆಯುವ ಥ್ರಿಲ್ಲರ್ ಕಥನವನ್ನು ಒಳಗೊಂಡಿದೆ. ಆ್ಯಕ್ಷನ್, ಸೆಂಟಿಮೆಂಟ್ ಜತೆಗೆ ನವಿರಾದ ಲವ್ ಸ್ಟೋರಿಯೂ ಕಥೆಯಲ್ಲಿ ಬೆರೆತಿದೆ.

ನಮ್ಮ ಚಿತ್ರದ ಒಪ್ಪಿಕೊಂಡಳು.. ಹಾಡು ಎಲ್ಲರಿಗೂ ಮೆಚ್ಚುಗೆಯಾಗಿದೆ. ಈಗಾಗಲೇ ಈ ಹಾಡು ಮಿಲಿಯನ್ ಗಟ್ಟಲೇ ವೀಕ್ಷಣೆ ಕಂಡಿದೆ. ಈ ಮಟ್ಟಕ್ಕೆ ನಮ್ಮ ಸಿನಿಮಾಗೆ ಸ್ಪಂದನೆ ವ್ಯಕ್ತವಾಗಿರುವುದು ಖುಷಿ ಕೊಟ್ಟಿದೆ ಎಂದು ನಟಿ ಚರಿಷ್ಮಾ ಸಂಸತ ವ್ಯಕ್ತಪಡಿಸಿದರು.

ಇದು ನನ್ನ ಮೊದಲ ಸಿನಿಮಾ ಚೊಚ್ಚಲ ಚಿತ್ರದಲ್ಲಿ ನನಗೆ ಮೆಚ್ಚುಗೆಯಾಗುವ ಪಾತ್ರವೇ ಸಿಕ್ಕಿದೆ. ರೋಮಾಂಚಕ ಸಾಹಸ ದೃಶ್ಯಗಳು ಎಲ್ಲರ ಮನಗೆಲ್ಲಲಿವೆ, ಚಿತ್ರದ ಕಥೆ ಎಲ್ಲರಿಗೂ ಕನೆಕ್ಟ್ ಆಗಲಿದೆ ಎಂದು ಸುನಾಮಿ ಕಿಟ್ಟಿ ತಿಳಿಸಿದರು. ಸೌಜನ್ಯಾ, ಯತೀಶ್, ಗಣೇಶ್ ರಾವ್ ಮುಂತಾದವರು ತಾರಾಗಣದಲ್ಲಿದ್ದಾರೆ.

> ಇದು ನಮ್ಮ ಮಣ್ಣಿನ ಕಥೆ, ಕಾಡಿನ ಮಕ್ಕಳ ಕಥೆ ಎನ್ನಬಹುದು. ಕಥೆ ಬರೆಯುವಾಗಲೇ ಈ ಕಥೆಗೆ ಸುನಾಮಿ ಕಿಟ್ಟಿ ಸೂಕ್ತ ಎನಿಸಿತು. ಇಲ್ಲಿ ನಾಯಕ ಪಾತ್ರದಂತೆ ಖಳನಾಯಕನ ಪಾತ್ರಕ್ಕೂ ಒತ್ತು ನೀಡಲಾಗಿದೆ. ಪಿ.ಮೂರ್ತಿ ಅವರು ವಿಲನ್ ಪಾತ್ರದಲ್ಲಿ ಅಕ್ಷರಶಃ ಅಬ್ಬರಿಸಿದ್ದಾರೆ. ಕೋರ ಯೂನಿವರ್ಸಲ್ ಕಥೆಯಾಗಿದ್ದು, ನಿರ್ಮಾಪಕ ಒತ್ತಾಸೆಯಂತೆ ಪ್ಯಾನ್ ಇಂಡಿಯಾ ಸಿನಿಮಾವಾಗಿ ಬಿಡುಗಡೆಯಾಗುತ್ತಿದೆ.
> –ಒರಟಶ್ರೀ ನಿರ್ದೇಶಕ



> ಚಿತ್ರರಂಗದಲ್ಲಿ ಹಲವು ಬಾರಿ ಸೋಲು ಕಂಡಿದ್ದೇನೆ. ಆದರೂ ಗೆದ್ದೇ ಗೆಲ್ಲುತ್ತೇನೆ ಎಂಬ ಹಠದಿಂದ ಈ ಚಿತ್ರವನ್ನು ನಿರ್ಮಾಣ ಮಾಡಿದ್ದೇನೆ. ಜತೆಗೆ ಖಳನಾಯಕನಾಗಿಯೂ ನಟಿಸಿದ್ದೇನೆ. ನಾನು ನಿರ್ಮಾಪಕನಾದರೂ ಕ್ಯಾಮೆರಾ, ಲೈಟ್ ಬಾಯ್ ಆಗಿಯೂ ಕೆಲಸ ಮಾಡಿದ್ದೇನೆ. ಸಿನಿಮಾದ ಮೇಲಿನ ಪ್ರೀತಿಯಿಂದ ಎಲ್ಲ ಕೆಲಸವನ್ನು ನಿರ್ವಹಿಸಿದ್ದೇನೆ, ಎಲ್ಲರ ಶ್ರಮದಿಂದ ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ.
> –ಪಿ.ಮೂರ್ತಿ ನಿರ್ಮಾಪಕ

ಭಾರತ ಪಾಕಿಸ್ತಾನದ ನಡುವಿನ ಗೊಂದಲ ನಿವಾರಿಸಲು ಡಿ.7ರಂದು ನಡೆಯಲಿರುವ ಸಭೆ

ಚಾಂಪಿಯನ್ಸ್ ಟ್ರೋಫಿ ಐಸಿಸಿ ಸಭೆ ಮುಂದಕ್ಕೆ

ದೆಹಲಿ: ಐಸಿಸಿ ಚಾಂಪಿಯನ್ಸ್ ಟ್ರೋಫಿಗೆ ಸಂಬಂಧಿಸಿದಂತೆ ಭಾರತ ಮತ್ತು ಪಾಕಿಸ್ತಾನ ನಡುವಿನ ಗೊಂದಲಗಳನ್ನು ನಿವಾರಿಸುವ ಸಲುವಾಗಿ ಐಸಿಸಿ ಗುರುವಾರ ನಿಗದಿ ಪಡಿಸಿದ್ದ ಸಭೆಯನ್ನು ಡಿ. 7ಕ್ಕೆ ಮುಂದೂಡಿದೆ. ಈ ಸಭೆಯಲ್ಲಿ ಪಿಸಿಬಿ ಹೈಬ್ರಿಡ್ ಮಾದರಿಯನ್ನು ಒಪ್ಪಿಕೊಳ್ಳಲು ಐಸಿಸಿ ಮತ್ತೊಮ್ಮೆ ಸೂಚನೆ ನೀಡಿದೆ.

ಗುರುವಾರ ನಡೆದಿದ್ದ ಅಲ್ಪಾವಧಿ ಸಭೆಯಲ್ಲಿ ನೂತನ ಐಸಿಸಿ ಅಧ್ಯಕ್ಷ ಜಯ ಶಾ ಹಾಗೂ ಪಿಬಿಸಿ ಮತ್ತು ಇತರ 10 ಸದಸ್ಯ ರಾಷ್ಟ್ರಗಳು ಭಾಗವಹಿಸಿದ್ದವು ಎಂದು ತಿಳಿದು ಬಂದಿದೆ. ಈ ಮೊದಲು, ಪಿಸಿಬಿ ಹೈಬ್ರಿಡ್ ಮಾದರಿಯನ್ನು ಒಪ್ಪಿಕೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕಿತ್ತು, ಆದರೆ ನಂತರ ಪಾಕಿಸ್ತಾನವು ಕೆಲವು ಷರತ್ತುಗಳೊಂದಿಗೆ ಒಪ್ಪಿಗೆ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

2031ರ ವರಗೆ ಭಾರತದಲ್ಲಿ ಆತಿಥ್ಯದಲ್ಲಿ ನಡೆಯುವ ಐಸಿಸಿ ಟೂರ್ನಿಗಳನ್ನು ಕೂಡ ಹೈಬ್ರಿಡ್ ಮಾದರಿಯಲ್ಲಿ ನಡೆಸಬೇಕೆಂಬ ಷರತ್ತನ್ನು ಪಿಸಿಬಿ ಬಿಸಿಸಿಐಗೆ ವಿಧಿಸಿದೆ ಎಂದು ಈ ಹಿಂದೆ ವರದಿಯಾಗಿತ್ತು. ಆ ಮೂಲಕ ಪಾಕಿಸ್ತಾನ ತಂಡ ಭಾರತಕ್ಕೆ ಪ್ರಯಾಣಿಸುವುದಿಲ್ಲ ಎಂದು ಖಡಕ್ ಆಗಿ ತಿಳಿಸಿದೆ. ಅಂದ ಹಾಗೆ ನವೆಂಬರ್ 29 ರಂದು 12 ರಾಷ್ಟ್ರಗಳ ಐಸಿಸಿ ಸಭೆಯಲ್ಲಿ ಭಾಗವಹಿಸಿದ್ದವು. ಇದೀಗ ಈ ಸಭೆಯನ್ನು ಡಿ. 7ಕ್ಕೆ ಮುಂದೂಡಲಾಗಿದೆ.

ಸಯ್ಯದ್ ಮುಷ್ತಾಕ್ ಅಲಿ ಟೂರ್ನಿ | ಸಿಕ್ಕಿಂ ವಿರುದ್ಧದ ಪಂದ್ಯದಲ್ಲಿ ವಿಶ್ವ ದಾಖಲೆ ಬರೆದ ಬರೋಡಾ ತಂಡ

20 ಓವರ್‌ನಲ್ಲಿ 349 ರನ್, ದಾಖಲೆ!

ಇಂದೋರ್: ಟಿ20 ಕ್ರಿಕೆಟ್‌ನಲ್ಲಿ ಬರೋಡಾ ತಂಡ ವಿಶ್ವ ದಾಖಲೆಯೊಂದನ್ನು ನಿರ್ಮಿಸಿದೆ. ಸಯ್ಯದ್ ಮುಷ್ತಾಕ್ ಅಲಿ ಟೂರ್ನಿಯ ಸಿಕ್ಕಿಂ ವಿರುದ್ಧದ ಪಂದ್ಯದಲ್ಲಿ ಬರೋಬ್ಬರಿ 349 ರನ್ ಕಲೆಹಾಕುವ ಮೂಲಕ ಟಿ20 ಕ್ರಿಕೆಟ್‌ನಲ್ಲಿ ಗರಿಷ್ಠ ಮೊತ್ತವನ್ನು ಪೇರಿಸಿದ ದಾಖಲೆ ಬರೆದಿದೆ.

ಇದುವರೆಗೂ ಟಿ20 ಕ್ರಿಕೆಟ್‌ನಲ್ಲಿ ಗರಿಷ್ಠ ಮೊತ್ತ ಪೇರಿಸಿದ ದಾಖಲೆ ಜಿಂಬಾಬ್ವೆ ತಂಡದ ಹೆಸರಿನಲ್ಲಿತ್ತು. ಜಿಂಬಾಬ್ವೆ ತಂಡ ಗ್ಯಾಂಬಿಯಾ ವಿರುದ್ಧದ ಪಂದ್ಯದಲ್ಲಿ 4 ವಿಕೆಟ್‌ಗೆ 344 ರನ್ ಬಾರಿಸಿತ್ತು. ಟಿ20 ಕ್ರಿಕೆಟ್‌ನಲ್ಲಿ ಬರೋಡಾ ಈ ದಾಖಲೆ ಹಿಂದಿಕ್ಕಿದ್ದರೂ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಈ ದಾಖಲೆ ಸದ್ಯ ಜಿಂಬಾಬ್ವೆ ಹೆಸರಿನಲ್ಲಿದೆ.

ಮೊದಲು ಬ್ಯಾಟಿಂಗ್ ನಡೆಸಿದ ಬರೋಡಾ ತಂಡ ಆರಂಭದಿಂದಲೇ ಆಕ್ರಮಣಕಾರಿ ಬ್ಯಾಟಿಂಗ್ ನಡೆಸಿತು. ಭಾನು ಪನಿಯಾ ಆಕರ್ಷಕ ಶತಕ ಸಿಡಿಸಿದರೆ, ಶಿವಾಲಿಕ್ ಶರ್ಮಾ(55), ಅಭಿಮನ್ಯು ಸಿಂಗ್(55) ಮತ್ತು ವಿಷ್ಣು ಸೋಲಂಕಿ(50) ಅರ್ಧಶತಕ ಬಾರಿಸಿದರು. ನಿಗದಿತ 20 ಓವರ್ ಆಡಿದ ಬರೋಡಾ 5 ವಿಕೆಟ್‌ಗೆ 349 ರನ್ ಬಾರಿಸಿತು. ಬೃಹತ್ ಮೊತ್ತದ ಗುರಿ ಬೆನ್ನಟ್ಟಿದ ಸಿಕ್ಕಿಂ 7 ವಿಕೆಟ್‌ಗೆ 86 ರನ್ ಗಳಿಸಲಷ್ಟೇ ಶಕ್ತವಾಗಿ 263 ರನ್ ಸೋಲು ಕಂಡಿತು.

ಭಾನು ಪನಿಯಾ 51 ಎಸೆತಗಳಿಂದ ಅಜೇಯ 134 ರನ್ ಬಾರಿಸಿದರು. ಅವರ ಈ ಬ್ಯಾಟಿಂಗ್ ಅರ್ಭಟದ ವೇಳೆ ಬರೋಬ್ಬರಿ 15 ಸಿಕ್ಸರ್ ಮತ್ತು 5 ಬೌಂಡರಿ ಸಿಡಿಯಿತು. ಬರೋಡ ಪರ ಬೌಲಿಂಗ್‌ನಲ್ಲಿ ನಿನಾದ್ ಅಶ್ವಿನ್ ಕುಮಾರ್ ರತ್ವ ಮತ್ತು ಮಹೇಶ್ ಪಿಥಿಯಾ ತಲಾ 2 ವಿಕೆಟ್ ಕಿತ್ತರು.

ಗರಿಷ್ಠ ಮೊತ್ತ ಗಳಿಸಿದ ತಂಡ

1. ಬರೋಡಾ–5 ವಿಕೆಟ್‌ಗೆ 349
2. ಜಿಂಬಾಬ್ವೆ–4 ವಿಕೆಟ್‌ಗೆ 344
3. ನೇಪಾಳ–3 ವಿಕೆಟ್‌ಗೆ 314 ರನ್
4. ಭಾರತ– 6 ವಿಕೆಟ್‌ಗೆ 297
5. ಸನ್‌ರೈಸರ್ಸ್ ಹೈದರಾಬಾದ್– 3 ವಿಕೆಟ್‌ಗೆ 287

ವಿಟಾಕೀಸ್

ಅನ್ನದಾತರ ಪರ ನಿಂತ ಧೀರ ಭಗತ್‌ರಾಯ್

ಭೂ ಸುಧಾರಣ ಕಾಯ್ದೆ ಜಾರಿಯಾದ ಬಳಿಕ ಅದೆಷ್ಟೋ ಬಡವರ ಬದುಕು ಹಸನಾಯಿತು. ಉಳುವವನೇ ಭೂಮಿಯ ಒಡೆಯ ಕಾನೂನು ಬಂದ ಮೇಲೆ ಅದರ ಪ್ರಕಾರ ಭೂಮಿ ಪಡೆಯಲು ಬಡವರು ಯಾವೆಲ್ಲಾ ಸವಾಲುಗಳನ್ನು ಎದುರಿಸಿದರು ಎಂಬುದನ್ನು ಧೀರ ಭಗತ್ ರಾಯ್ ಚಿತ್ರದಲ್ಲಿ ಹೇಳಲಾಗಿದೆ. ತಮ್ಮ ಚಿತ್ರದ ಕುರಿತಂತೆ ನಿರ್ದೇಶಕ ಎ.ಎಸ್.ಕರ್ಣನ್, ವಿ.ಸಿನಿಮಾಸ್ ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್ : ಇದು ಭೂಸುಧಾರಣ ಕಾಯ್ದೆ ಸುತ್ತ ಹೆಣೆದ ಕಥೆಯೆ?

ಕರ್ಣನ್ : ಹೌದು, ಎಪ್ಪತ್ತರ ದಶಕದಲ್ಲಿ ಜಾರಿಯಾದ ಭೂ ಸುಧಾರಣ ಕಾಯ್ದೆಯ ಕುರಿತಂತೆ ಚಿತ್ರದ ಕಥೆ ಸಾಗುತ್ತದೆ. ಈ ಕಾಯ್ದೆ ಜಾರಿಯಾದ ಬಳಿಕ ಉಳುವವನಿಗೆ ಭೂಮಿ ಸಿಕ್ಕಿದೆಯೆ, ಅದನ್ನು ಪಡೆಯಲು ಬಡವರು ಹೇಗೆಲ್ಲಾ ಹೋರಾಡಿದರು, ಸಂಕಷ್ಟಗಳನ್ನು ಅನುಭವಿಸಿದರು ಎಂಬುದನ್ನು ನೈಜತೆಗೆ ಹತ್ತಿರವಾಗುವಂತೆ ಕಟ್ಟಿಕೊಡಲಾಗಿದೆ. ಭೂ ಸುಧಾರಣಾ ಕಾಯ್ದೆಯಿಂದ ಯಾರಿಗೆ ಲಾಭವಾಯಿತು, ನಷ್ಟವಾಯಿತು. ನಿಜವಾಗಿಯೂ ಬಡವರಿಗೆ ಭೂಮಿ ಸಿಕ್ಕಿದೆಯೆ ಎಂಬುದನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ.

ವಿ.ಸಿ : ಕಾಟೇರ, ತಮಿಳಿನ ಜೈ ಭೀಮ್ ಛಾಯೆ ಇದೆಯಲ್ಲ ?

ಕರ್ಣನ್ : ಇಲ್ಲ, ಇದು ಯಾವುದೇ ಚಿತ್ರದ ಕಥೆ ಬಳಸಿಕೊಂಡಿಲ್ಲ, ಯಾವುದೇ ಕಾಯ್ದೆ ಜಾರಿಗೆ ಬರುವಾಗ ಅದರ ಹಿನ್ನೆಲೆ ಅದನ್ನು ಜಾರಿಗೊಳಿಸಲು ಎದುರಾಗುವ ಸವಾಲು ಅಧಿಕಾರ ವರ್ಗದವರಿಗೂ ಈ ಕಾಯ್ದೆ ಜಾರಿಗೊಳಿಸುವುದು ಎಷ್ಟು ಸವಾಲಿರುತ್ತವೆ ಎಂಬುದನ್ನು ತೋರಿಸಲಾಗಿದೆ. ರೈತರ ಪರವಾಗಿ ಹೋರಾಡುವ ವಕೀಲನೇ ಧೀರ ಭಗತ್ ರಾಯ್. ಅದನ್ನು ಕಮರ್ಷಿಯಲ್ ಆಯಾಮದಲ್ಲಿ ತೆರೆಯಲ್ಲಿ ಕಟ್ಟಿಕೊಡಲಾಗಿದೆ.

ವಿ.ಸಿ : ಇದು ನೈಜ ಘಟನೆಯಾಧಾರಿತ ಕಥೆಯೆ?

ಕರ್ಣನ್ : ಹೌದು, ನಮ್ಮ ರಾಜ್ಯದಲ್ಲಿಯೇ ನಡೆದ ಘಟನೆಗಳನ್ನು ಆಧರಿಸಿ ಚಿತ್ರದ ಕಥೆ ಹೆಣೆಯಲಾಗಿದೆ. ಐವತ್ತು ಹಳ್ಳಿಗಳಿಗೆ ಭೇಟಿ ನೀಡಿ,

ಭೂ ಸುಧಾರಣಾ ಕಾಯ್ದೆ ಜಾರಿಗೆ ಬಂದ ಬಳಿಕ ಬಡವರಿಗೆ ಎದುರಾದ ಸವಾಲುಗಳನ್ನು ಹಿರಿಯರಿಂದ ಕೇಳಿ ತಿಳಿದು ಕಥೆ ಬರೆದು ನಿರ್ದೇಶನ ಮಾಡಿದ್ದೇನೆ. ಈ ಕಥೆಗೆ ವಕೀಲ ಹರಿರಾಮ್ ಕೂಡ ಕೈ ಜೋಡಿಸಿದ್ದಾರೆ. ಎಲ್ಲಿಯವರೆಗೆ ದಮನಿತರಿಗೆ ಸಮಾನತೆ ಸಿಗುವುದಿಲ್ಲವೋ ಅಂದಿನವರೆಗೂ ಈ ಕಥೆ ಜೀವಂತವಾಗಿರುತ್ತದೆ.

ವಿ.ಸಿ : ತಾರಾಗಣದ ಬಗ್ಗೆ ಹೇಳುವುದಾದರೆ ?

ಕರ್ಣನ್ : ರಾಕೇಶ್ ದಳವಾಯಿ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಶರತ್ ಲೋಹಿತಾಶ್ವ, ಸುಚಿತ್ರಾ, ಪ್ರವೀಣ್, ಮಠ ಕೊಪ್ಪಳ, ಸುಧೀರ್ ಕುಮಾರ್, ತ್ರಿವಿಕ್ರಮ್, ಶಶಿಕುಮಾರ್, ಹರಿರಾಮ್ ಮುಂತಾದವರು ನಮ್ಮ ಚಿತ್ರದ ತಾರಾಗಣದಲ್ಲಿದ್ದಾರೆ.